ಶನಿವಾರ, ಡಿಸೆಂಬರ್ 17, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಜಪಾನ್ ಬೆಡಗಿ
ನವದೆಹಲಿಯಲ್ಲಿ ಶುಕ್ರವಾರ ಆಯೋಜಿಸಿದ್ದ ನಿಸಾನ್ 'ಕೊನ್ನಿಚಿವ (ಶುಭದಿನ) ಜಪಾನ್' ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಕಲಾವಿದೆ

सत्यमेव जयते

ರಾಜಸ್ಥಾನ ಸರ್ಕಾರ

4 ವರ್ಷ

ಜನಸೇವೆ, ಸರ್ವರ ಸಮ್ಮಾನ ಅಭಿವೃದ್ಧಿಪರ ರಾಜಸ್ಥಾನ

ಸೇವೆಯೇ ಕಾಯಕ, ಸೇವೆಯೇ ಧರ್ಮ

"ನಮ್ಮ ಸರ್ಕಾರ ತನ್ನ ಸ್ಪಂದನಾಶೀಲತೆಯಿಂದ, ಪಾರದರ್ಶಕವಾಗಿ ಮತ್ತು ಜವಾಬ್ದಾರಿಯುತವಾಗಿ 4 ವರ್ಷಗಳನ್ನು ಪೂರೈಸಿದ ಈ ಸಂದರ್ಭದಲ್ಲಿ, ಪ್ರತಿಯೊಬ್ಬರಿಗೂ ನನ್ನ ಹೃದಯಪೂರ್ವಕ ಅಭಿನಂದನೆಗಳು. ರಾಜಸ್ಥಾನದ ಸಮಸ್ತ ನಾಗರಿಕರಿಗೆ ಆರೋಗ್ಯವಂತ, ಸಮೃದ್ಧಿಭರಿತ ಹಾಗೂ ಪ್ರಗತಿಶೀಲ ಜೀವನ ಲಭಿಸಲಿ ಎಂದು ಹಾರೈಸುತ್ತೇನೆ. ಬನ್ನಿ, ರಾಜಸ್ಥಾನದ ಸಮಗ್ರ ಅಭಿವೃದ್ಧಿಗಾಗಿ ನಾವು ನಮ್ಮ ಸಮರ್ಪಣೆ ಹಾಗೂ ಬದ್ಧತೆಯನ್ನು ಪುನರುಚ್ಚರಿಸೋಣ ಮತ್ತು ಅವಿಶ್ರಾಂತರಾಗಿ ಶ್ರಮಿಸೋಣ."

ಅಶೋಕ್ ಗೆಹ್ಲೋತ್
ಮುಖ್ಯ ಮಂತ್ರಿಗಳು, ರಾಜಸ್ಥಾನ

ಮಾದರಿ ರಾಜ್ಯ ರಾಜಸ್ಥಾನ

ಮುಖ್ಯ ಮಂತ್ರಿ ಚಿರಂಜೀವಿ ಸ್ವಾಸ್ಥ್ಯ ಬೀಮಾ ಯೋಜನೆ
ರೂ.10 ಲಕ್ಷ ಮೌಲ್ಯದ ನಗದುರಹಿತ ಆರೋಗ್ಯ ವಿಮೆ ಮತ್ತು ರೂ. 5 ಲಕ್ಷ ಮೌಲ್ಯದ ಅಪಘಾತ ವಿಮೆ. ಇಲ್ಲಿಯವರೆಗೆ 27.60 ಲಕ್ಷ ರೋಗಿಗಳಿಗೆ ರೂ.3,195 ಕೋಟಿ ಮೌಲ್ಯದ ಚಿಕಿತ್ಸೆ ನೀಡಲಾಗಿದೆ.

ಹಳೆಯ ಪಿಂಚಣಿ ಯೋಜನೆ
1ನೇ ಜನವರಿ 2004ರಿಂದ ನೇಮಕಾತಿ ಆಗಿರುವ ಎಲ್ಲಾ ಸರ್ಕಾರಿ ಉದ್ಯೋಗಿಗಳಿಗೆ ಒಪಿಎಸ್ ಅನುಷ್ಠಾನಗೊಳಿಸಲಾಗಿದೆ.

ಸರ್ಕಾರಿ ಉದ್ಯೋಗಗಳು
1.36 ಲಕ್ಷ ಸರ್ಕಾರಿ ಉದ್ಯೋಗಗಳನ್ನು ನೀಡಲಾಗಿದೆ. 1.21 ಲಕ್ಷ ಸರ್ಕಾರಿ ನೇಮಕಾತಿಗಳು ಪ್ರಕ್ರಿಯೆ ಹಂತದಲ್ಲಿವೆ. ಹೆಚ್ಚುವರಿ 1 ಲಕ್ಷ ಹುದ್ದೆಗಳ ನೇಮಕಾತಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ಇಂದಿರಾ ಗಾಂಧಿ ಶಹರಿ ರೋಜಗಾರ್ ಖಾತರಿ ಯೋಜನೆ
ನಗರ ಪ್ರದೇಶಗಳಲ್ಲಿ 100 ದಿನಗಳ ಉದ್ಯೋಗ ಖಚಿತತೆ. ಇಲ್ಲಿಯವರೆಗೆ, 3.5 ಲಕ್ಷಕ್ಕೂ ಅಧಿಕ ಜಾಬ್ ಕಾರ್ಡ್‌ಗಳನ್ನು ವಿತರಿಸಲಾಗಿದೆ.

ರಾಜೀವ್ ಗಾಂಧಿ ರೂರಲ್ ಒಲಂಪಿಕ್ ಗೇಮ್ಸ್
ವಿಶ್ವದ ಅತಿದೊಡ್ಡ ಕ್ರೀಡಾ ಕಾರ್ಯಕ್ರಮ. ಅಂದಾಜು 30 ಲಕ್ಷಕ್ಕೂ ಅಧಿಕ ಜನ ಪಾಲ್ಗೊಂಡಿದ್ದರು. 26 ಜನವರಿ 2023 ರಿಂದ ಅರ್ಬನ್ ಒಲಂಪಿಕ್ ಗೇಮ್ಸ್. ಈ ಕ್ರೀಡೆಗಳನ್ನು ಪ್ರತಿ ವರ್ಷ ಆಯೋಜಿಸಲಾಗುತ್ತದೆ.

ಪಳನಾರ್ ಯೋಜನೆ
ಅರ್ಹತೆಗೆ ಅನುಗುಣವಾಗಿ ನಿರಾಶ್ರಿತ ಮತ್ತು ಇನ್ನಿತರ ಮಕ್ಕಳಿಗೆ ಮಾಸಿಕ ರೂ.500 ರಿಂದ ರೂ.2500 ಆರ್ಥಿಕ ನೆರವು ನೀಡಲಾಗಿದೆ. ಇಲ್ಲಿಯವರೆಗೆ 6.64 ಲಕ್ಷ ಮಕ್ಕಳು ಇದರ ಫಲಾನುಭವಿ ಆಗಿದ್ದಾರೆ.

ಶೈಕ್ಷಣಿಕ ಸಾಧನೆಗಾಗಿ ರಾಜೀವ್ ಗಾಂಧಿ ಶಿಷ್ಯವೇತನ
ಪ್ರತಿ ವರ್ಷ 200 ವಿದ್ಯಾರ್ಥಿಗಳ ವಿದೇಶಿ ಶಿಕ್ಷಣಕ್ಕಾಗಿ ವಿದೇಶಿ ಶಿಕ್ಷಣ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸುತ್ತದೆ.

ಮಹಾತ್ಮ ಗಾಂಧಿ ಆಂಗ್ಲ ಮಾಧ್ಯಮ ಶಾಲೆ
ರಾಜ್ಯದ 1670 ಆಂಗ್ಲ ಮಾಧ್ಯಮ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ

ವಿದ್ಯಾರ್ಥಿನಿಯರಿಗೆ ಸ್ಕೂಟಿ ವಿತರಣೆ
ಶಾಲೆ ಮತ್ತು ಕಾಲೇಜುಗಳಿಗೆ ಹೋಗುತ್ತಿರುವ ವಿದ್ಯಾರ್ಥಿನಿಯರಿಗೆ ಪ್ರತಿ ವರ್ಷ 20,000 ಸ್ಕೂಟಿ ವಿತರಣೆ.

ಮುಖ್ಯಮಂತ್ರಿ ನಿಶ್ಶುಲ್ಕ ಸಮವಸ್ತ್ರ ವಿತರಣಾ ಯೋಜನೆ
ಸರ್ಕಾರಿ ಶಾಲೆಗಳಲ್ಲಿ 1 ರಿಂದ 8ನೇ ತರಗತಿವರೆಗೆ ಓದುತ್ತಿರುವ ವಿದ್ಯಾರ್ಥಿಗಳಿಗೆ ಉಚಿತವಾಗಿ ಎರಡು ಜೊತೆ ಸಮವಸ್ತ್ರ ನೀಡಲಾಗುತ್ತದೆ.

ಮುಖ್ಯಮಂತ್ರಿ ಬಾಲ ಗೋಪಾಲ ಯೋಜನೆ
ಪ್ರತಿ ಗುರುವಾರ ಮತ್ತು ಶುಕ್ರವಾರ ಸರ್ಕಾರಿ ಶಾಲೆಗಳಲ್ಲಿನ 1 ರಿಂದ 8ನೇ ತರಗತಿಯ ಮಕ್ಕಳಿಗೆ ಹಾಲು ವಿತರಣೆ.

ತಂತ್ರಜ್ಞಾನದ ಮೂಲಕ ಅಭಿವೃದ್ಧಿ
ವಿಶಿಷ್ಟ ಐಟಿ ಸಂಸ್ಥೆ – ರಾಜೀವ್ ಗಾಂಧಿ ಫಿನ್‌ಟೆಕ್ ಡಿಜಿಟಲ್ ಇನ್‌ಸ್ಟಿಟ್ಯೂಟ್, ಜೋಧಪುರ.
ರಾಜಸ್ಥಾನ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್‌ಡ್ ಲರ್ನಿಂಗ್ ಫಾರ್ ರಿಸರ್ಚ್ ಟೆಕ್ನಿಕ್ಸ್ ಇನ್ ಮೆಡಿ–ಟೆಕ್, ಕ್ಲೈಮೆಟ್–ಟೆಕ್, ಅಗ್ರಿ–ಟೆಕ್ ಇತ್ಯಾದಿ.
ಜೈಪುರ, ಜೋಧಪುರ ಮತ್ತು ಕೋಟ ನಗರಗಳಲ್ಲಿನ ರಾಜೀವ್ ಗಾಂಧಿ ನಾಲೇಜ್ ಇನ್ನೊವೇಶನ್ ಹಬ್‌ಗಳಲ್ಲಿ ಸ್ಟಾರ್ಟಪ್‌ಗಳಿಗೆ ಪ್ಲಗ್ ಅಂಡ್ ಪ್ಲೇ ಸೌಲಭ್ಯ.
ಫಿನಿಶಿಂಗ್ ಸ್ಕೂಲ್–ಆರ್–ಸಿಎಟಿ

ಸಾಮಾಜಿಕ ಸುರಕ್ಷತಾ ಪಿಂಚಣಿ
ಹಿರಿಯರು, ವಿಶೇಷಚೇತನರು, ವಿಧವೆಯರು ಮತ್ತು ಏಕಮಾತ್ರ ಮಹಿಳೆ ಸೇರಿದಂತೆ ಅಂದಾಜು 1 ಕೋಟಿ ಜನರಿಗೆ ಪಿಂಚಣಿ.

ಕುಟುಂಬಗಳಿಗೆ ಕೈಗೆಟಕುವ ಬೆಲೆಯಲ್ಲಿ ವಿದ್ಯುತ್
38.18 ಕುಟುಂಬಗಳಿಗೆ ಶೂನ್ಯ ವಿದ್ಯುತ್ ಬಿಲ್.

ಕೃಷಿಕರಿಗೆ ಕೈಗೆಟಕುವ ಬೆಲೆಯಲ್ಲಿ ವಿದ್ಯುತ್
ಕೃಷಿ ವಿದ್ಯುತ್ ದರದಲ್ಲಿ ಹೆಚ್ಚಳವಿಲ್ಲ. ಇದಕ್ಕಾಗಿ ವಾರ್ಷಿಕ ಸುಮಾರು ರೂ.16,000 ಕೋಟಿ ರಿಯಾಯಿತಿ.

ಮುಖ್ಯ ಮಂತ್ರಿ ಕಿಸಾನ್ ಮಿತ್ರ ಊರ್ಜಾ ಯೋಜನೆ
ಕೃಷಿ ವಿದ್ಯುತ್ ಸಂಪರ್ಕಗಳನ್ನು ಹೊಂದಿರುವ ಕೃಷಿಕರಿಗೆ ಮಾಸಿಕ ರೂ.1000 ಹೆಚ್ಚುವರಿ ರಿಯಾಯಿತಿ. 8 ಲಕ್ಷ ಕೃಷಿಕರಿಗೆ ಶೂನ್ಯ ವಿದ್ಯುತ್ ಬಿಲ್.

ಉಡಾನ್ ಯೋಜನೆ
ಯುವತಿಯರು ಮತ್ತು ಮಹಿಳೆಯರಿಗೆ ಮಾಸಿಕ 12 ಸ್ಯಾನಿಟರಿ ನ್ಯಾಪ್‌ಕಿನ್‌ಗಳ ಉಚಿತ ವಿತರಣೆ. ಅಂದಾಜು 1.45 ಕೋಟಿ ಯುವತಿಯರು ಮತ್ತು ಮಹಿಳೆಯರು ಇದರ ಫಲಾನುಭವಿಗಳಾಗಿದ್ದಾರೆ.

ಇಂದಿರಾ ರಸೋಯಿ
ಕೇವಲ ರೂ. 8 ಮಾತ್ರಕ್ಕೆ ಪೌಷ್ಟಿಕಾಂಶಭರಿತ ಹಾಗೂ ಗುಣಮಟ್ಟದ ಭೋಜನ. ಪ್ರಸ್ತುತ ರಾಜ್ಯದಲ್ಲಿ 951 ಇಂದಿರಾ ರಸೋಯಿಗಳು ಕಾರ್ಯೋನ್ಮುಖವಾಗಿವೆ. ಪ್ರತಿ ತಟ್ಟೆಗೆ ರೂ.17 ರಿಯಾಯಿತಿಯನ್ನು ರಾಜ್ಯ ಸರ್ಕಾರ ಭರಿಸುತ್ತದೆ.

ಮುಖ್ಯ ಮಂತ್ರಿ ಹಾಲು ಉತ್ಪಾದಕ ಸಂಘ ಯೋಜನೆ
ಹಾಲು ಉತ್ಪಾದಕರಿಗೆ ಪ್ರತಿ ಲೀಟರ್ ಮೇಲೆ ರೂ.5 ರಿಯಾಯಿತಿ. ಇಲ್ಲಿಯವರೆಗೆ ರೂ.718 ಕೋಟಿ ವಿನಾಯಿತಿ ನೀಡಲಾಗಿದೆ.

ಮಾಹಿತಿ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ರಾಜಸ್ಥಾನ

ಬೆಂಗಳೂರು–ಚೆನ್ನೈ ಹೈ ಸ್ಪೀಡ್ ರೈಲಿಗೆ ಡಿಪಿಆರ್

ನವದೆಹಲಿ: ಚೆನ್ನೈ–ಬೆಂಗಳೂರು–ಮೈಸೂರು ಹಾಗೂ ದೇಶದ ಇತರ ಆರು ಮಾರ್ಗಗಳಲ್ಲಿ ಹೈ ಸ್ಪೀಡ್ ರೈಲು ಯೋಜನೆ ಆರಂಭಿಸಲು ಸರ್ವೆ ಹಾಗೂ ವಿಸ್ತೃತ ಯೋಜನಾ ವರದಿ (ಡಿಪಿಆರ್) ತಯಾರಿಸುವ ಕಾರ್ಯಕ್ಕೆ ಚಾಲನೆ ನೀಡಲಾಗಿದೆ ಎಂದು ಕೇಂದ್ರ ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಶುಕ್ರವಾರ ಲಿಖಿತ ಉತ್ತರ ನೀಡಿರುವ ಅವರು, 'ಮುಂಬೈ–ಅಹಮದಾಬಾದ್ ಹೈ ಸ್ಪೀಡ್ ರೈಲು ಯೋಜನೆಗೆ ಈಗಾಗಲೇ ಅನುಮೋದನೆ ನೀಡಲಾಗಿದೆ. ಈ ಯೋಜನೆಯನ್ನು ಜಪಾನ್ ಸರ್ಕಾರದ ಹಣಕಾಸಿನ ನೆರವಿನಿಂದ ಅನುಷ್ಠಾನಗೊಳಿಸಲಾಗುತ್ತದೆ' ಎಂದು ವಿವರ ನೀಡಿದ್ದಾರೆ.

ಮೆಮು ರೈಲು ಇಲ್ಲ: ಚಿಕ್ಕಬಾಣಾವರ–ಹಾಸನ, ಹಾಸನ–ಸುಬ್ರಹ್ಮಣ್ಯ ರಸ್ತೆ, ಸುಬ್ರಹ್ಮಣ್ಯ ರಸ್ತೆ– ಮಂಗಳೂರು ಮಾರ್ಗದಲ್ಲಿ ಮೆಮು ರೈಲು ಯೋಜನೆ ಆರಂಭಿಸುವ ಪ್ರಸ್ತಾವ ಇಲ್ಲ ಎಂದು ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಸದಸ್ಯ ನಾರಾಯಣ ಕೊರಗಪ್ಪ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಅವರು, 'ಈ ಮಾರ್ಗದಲ್ಲಿ ವಿದ್ಯುದೀಕರಣ ಇನ್ನೂ ಪೂರ್ಣಗೊಂಡಿಲ್ಲ. ಹಾಗಾಗಿ, ಮೆಮು ರೈಲು ಯೋಜನೆ ಕಾರ್ಯಸಾಧುವಲ್ಲ' ಎಂದು ಸ್ಪಷ್ಟಪಡಿಸಿದ್ದಾರೆ.

'ಚಿಕ್ಕಬಾಣಾವರ–ಸೋಲೂರು (33 ಕಿ.ಮೀ) ಮಾರ್ಗದಲ್ಲಿ ವಿದ್ಯುದೀಕರಣ ಪೂರ್ಣಗೊಂಡಿದೆ. ಸೋಲೂರು–ಹಾಸನ (133 ಕಿ.ಮೀ), ಹಾಸನ– ಸುಬ್ರಹ್ಮಣ್ಯ (87 ಕಿ.ಮೀ), ಸುಬ್ರಹ್ಮಣ್ಯ–ಮಂಗಳೂರು ಜಂಕ್ಷನ್ (96 ಕಿ.ಮೀ) ಮಾರ್ಗದಲ್ಲಿ ವಿದ್ಯುದೀಕರಣ ಕಾಮಗಾರಿ ನಡೆಯುತ್ತಿದೆ' ಎಂದಿದ್ದಾರೆ.

ತಾಂತ್ರಿಕ ಬಿಡ್ ತೆರೆಯದ ಬಿಬಿಎಂಪಿ • ಯೋಜನೆ ವೆಚ್ಚ ₹75 ಕೋಟಿ ಹೆಚ್ಚಳ

ಈಜಿಪುರ ಮೇಲ್ಸೇತುವೆ ಟೆಂಡರ್‌ಗೆ ತಡೆ

• ಆರ್. ಮಂಜುನಾಥ್

ಪ್ರಜಾವಾಣಿ ವಿಶೇಷ

ಬೆಂಗಳೂರು: ಕೋರಮಂಗಲ ಹೊರ ವರ್ತುಲ ರಸ್ತೆಯಲ್ಲಿ ಎಲಿವೇಟೆಡ್ ಕಾರಿಡಾರ್ ಯೋಜನೆಗೆ (ಈಜಿಪುರ ಮೇಲ್ಸೇತುವೆ) ಮತ್ತೆ ಗ್ರಹಣ ಹಿಡಿದಿದೆ. ಹೈಕೋರ್ಟ್ ಸೂಚನೆಯಂತೆ ಕರೆದಿರುವ ಟೆಂಡರ್‌ಗೂ ಬಿಬಿಎಂಪಿ ಹಿರಿಯ ಅಧಿಕಾರಿಗಳು ತಡೆ ಹಾಕಿದ್ದಾರೆ.

ಹೈಕೋರ್ಟ್ ಸೂಚನೆ ಮೇರೆಗೆ ಎರಡನೇ ಬಾರಿಗೆ ಅ.13ರಂದು ಕರೆಯಲಾಗಿರುವ ಟೆಂಡರ್‌ನ ತಾಂತ್ರಿಕ ಬಿಡ್ ಅನ್ನೂ ತೆರೆಯದೆ ಬಿಬಿಎಂಪಿ ವಿಳಂಬ ಮಾಡುತ್ತಿದೆ. ಸರ್ಕಾರ ರಚಿಸಿರುವ 'ಟೆಂಡರ್ ಪೂರ್ವ ಪರಿಶೀಲನಾ ಸಮಿತಿ'ಯಲ್ಲಿ ಸಮ್ಮತಿ ಪಡೆಯಬೇಕು ಎಂಬ ಸಬೂಬು ನೀಡಿ ಟೆಂಡರ್‌ಗೆ ತಡೆ ನೀಡಿದೆ.

ಬಿಬಿಎಂಪಿಯ ಈ ವಿಳಂಬ ಧೋರಣೆಯಿಂದ ಯೋಜನೆಯ ವೆಚ್ಚ ಹಲವು ಕೋಟಿಗಳಷ್ಟು ಹೆಚ್ಚಾಗಲಿದೆ. ಜೊತೆಗೆ ಸ್ಥಳೀಯ ನಾಗರಿಕರಿಗೆ ಯೋಜನೆಯ ಪ್ರಯೋಜನವೂ ಸಿಗದೆ ಇನ್ನಷ್ಟು ವರ್ಷ ಸಂಚಾರ ದಟ್ಟಣೆಯಿಂದ ಸಂಕಷ್ಟ ಅನುಭವಿಸಬೇಕಾಗಿದೆ.

ಹೈಕೋರ್ಟ್ ಆದೇಶದ ನಂತರ ಬಿಬಿಎಂಪಿ ಉಳಿದಿರುವ ಕಾಮಗಾರಿಗೆ ಆ.12 ಟೆಂಡರ್ ಕರೆದು, ಅರ್ಹತೆ ಇಲ್ಲ ಎಂದು ಅದನ್ನು ರದ್ದುಪಡಿಸಿತ್ತು. ಮತ್ತೆ ಅ.13ರಂದು ಕಾಮಗಾರಿಗೆ ಟೆಂಡರ್ ಕರೆದಿತ್ತು. ಇದರ ಯೋಜನೆ ವೆಚ್ಚ ₹228 ಕೋಟಿ. 2017ರಲ್ಲಿ ₹157 ಕೋಟಿಯಷ್ಟಿತ್ತು. ಇನ್ನು ವಿಳಂಬವಾದರೆ ಇನ್ನೂ ₹25 ಕೋಟಿಯಷ್ಟು ಹೆಚ್ಚಾಗುವ ಸಾಧ್ಯತೆ ಇದೆ.

ಈಜಿಪುರ ಮೇಲ್ಸೇತುವೆ 2.5 ಕಿ.ಮೀ. ಉದ್ದದ ಕಾರಿಡಾರ್ ಆಗಿದ್ದು, 2014ರಲ್ಲಿ ಇದರ ಯೋಜನೆ ರೂಪಿಸಲಾಗಿತ್ತು. 2017ರಲ್ಲಿ ₹157.66 ಕೋಟಿಗೆ ಸಿಂಪ್ಲೆಕ್ಸ್ ಇನ್‌ಫ್ರಾಸ್ಟ್ರಕ್ಚರ್ ಸಂಸ್ಥೆಗೆ ಗುತ್ತಿಗೆ ನೀಡಲಾಗಿತ್ತು. 2019ರೊಳಗೆ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ, ಗುತ್ತಿಗೆದಾರರು ವಿಳಂಬ ಮಾಡಿದರು. ನಾಲ್ಕು ವರ್ಷ ಏಳು ತಿಂಗಳಾದರೂ ಶೇ 42ರಷ್ಟು ಮಾತ್ರ ಕಾಮಗಾರಿ ಮುಗಿದಿತ್ತು. ₹75.11 ಕೋಟಿ ಹಣವನ್ನೂ ಅವರಿಗೆ ಪಾವತಿ ಮಾಡಲಾಗಿತ್ತು.

ಮೇಲ್ಸೇತುವೆ ಕಾಮಗಾರಿ ವಿಳಂಬವಾದ್ದರಿಂದ ಹೈಕೋರ್ಟ್‌ಗೆ ಆದಿನಾರಾಯಣ ಶೆಟ್ಟಿ ರಿಟ್ ಸಲ್ಲಿದ್ದರು. 2022ರ ಫೆ.17ರಂದು ತೀರ್ಪು ನೀಡಿದ್ದ ಹೈಕೋರ್ಟ್, ಟೆಂಡರ್ ರದ್ದು ಮಾಡಿ ಹೊಸದಾಗಿ ಟೆಂಡರ್ ಕರೆದು, ಕಾಮಗಾರಿಯನ್ನು ಬೇಗ ಪೂರ್ಣಗೊಳಿಸಲು ಸೂಚಿಸಿತ್ತು.

ಈಜಿಪುರ ಮೇಲ್ಸೇತುವೆ ಕಾಮಗಾರಿ ಅರ್ಧಕ್ಕೆ ನಿಂತಿದ್ದು, ಕಟ್ಟಡ ನಿರ್ಮಾಣದ ಅಳಿದುಳಿದ ಸಾಮಗ್ರಿ ತುಂಬಲಾಗಿದ್ದು, ಗಿಡಗಳು ಮರಗಳಾಗುತ್ತಿವೆ

ಸಮಿತಿಗೆ ಹೋಗುವ ಅಗತ್ಯ ಇಲ್ಲ: ಶಾಸಕ ರಾಮಲಿಂಗಾರೆಡ್ಡಿ

'ಈಜಿಪುರ ಮೇಲ್ಸೇತುವೆಯ ಟೆಂಡರ್ 'ಟೆಂಡರ್ ಪೂರ್ವ ಪರಿಶೀಲನಾ ಸಮಿತಿ'ಗೆ ಹೋಗುವ ಅಗತ್ಯ ಇಲ್ಲ. ಇದು 2017ರಲ್ಲಿ ಆರಂಭವಾಗಿರುವ ಯೋಜನೆ. ಸಮಿತಿ ಪ್ರಾರಂಭವಾಗುವ ಮುನ್ನವೇ ಯೋಜನೆ ಜಾರಿಯಾಗಿದೆ. ಹೈಕೋರ್ಟ್ ಸೂಚನೆ ಮೇರೆಗೆ ಎರಡನೇ ಬಾರಿಗೆ ಟೆಂಡರ್ ಕರೆಯಲಾಗಿದೆ ಅಷ್ಟೆ. ಕೆಲವು ಪಟ್ಟಭದ್ರ ಹಿತಾಸಕ್ತಿಗಳಿಂದ ಈ ಟೆಂಡರ್‌ಗೆ ತಡೆ ನೀಡಲಾಗಿದೆ. ಸ್ಥಳೀಯ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ' ಎಂದು ಬಿಟಿಎಂ ಲೇಔಟ್ ಶಾಸಕ ರಾಮಲಿಂಗಾರೆಡ್ಡಿ ಹೇಳಿದರು.

'2017ರಿಂದ ಈಜಿಪುರ ಮೇಲ್ಸೇತುವೆ ಕಾಮಗಾರಿ ನಡೆಯುತ್ತಿದೆ. ಕೋರಮಂಗಲದ ಸುತ್ತಮುತ್ತ ಪ್ರದೇಶಗಳಲ್ಲಿ ಇದರಿಂದ ವಾಹನ ಸವಾರರಿಗೆ ಸಾಕಷ್ಟು ತೊಂದರೆಯಾಗುತ್ತಿದೆ. ಪೂರ್ವ ಹಾಗೂ ದಕ್ಷಿಣ ಭಾಗವನ್ನು ಸಂಪರ್ಕಿಸುವ ಲಿಂಕ್ ರಸ್ತೆ ಇದಾಗಿರುವುದರಿಂದ ಯೋಜನೆಯನ್ನು ಬೇಗ ಪೂರ್ಣಗೊಳಿಸಬೇಕು' ಎಂದು ಆಗ್ರಹಿಸಿದರು. ಈ ಬಗ್ಗೆ ಮುಖ್ಯಮಂತ್ರಿ, ಸರ್ಕಾರದ ಮುಖ್ಯ ಕಾರ್ಯದರ್ಶಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತರಿಗೂ ಪತ್ರ ಬರೆಯಲಾಗಿದೆ. ಕ್ರಮ ಕೈಗೊಳ್ಳದಿದ್ದರೆ ಹೋರಾಟ ಮಾಡಲಾಗುತ್ತದೆ' ಎಂದರು.

'ಸಮಿತಿಯಿಂದ ಶೀಘ್ರ ಇತ್ಯರ್ಥ'

'ಈಜಿಪುರ ಮೇಲ್ಸೇತುವೆ ಯೋಜನೆಯ ಎರಡನೇ ಬಾರಿ ಟೆಂಡರ್ ಅನ್ನು 'ಟೆಂಡರ್ ಪೂರ್ವ ಪರಿಶೀಲನಾ ಸಮಿತಿ' ಮುಂದೆ ತರಲು ಹಿರಿಯ ಅಧಿಕಾರಿಗಳು ಸೂಚಿಸಿದ್ದಾರೆ. ಹೀಗಾಗಿ ತಾಂತ್ರಿಕ ಬಿಡ್ ತೆರೆಯಲಾಗಿಲ್ಲ. ಟೆಂಡರ್ ಕರೆಯುವ ಮುನ್ನ ಸಮಿತಿ ಮುಂದೆ ಈ ಪ್ರಸ್ತಾವ ಇರಿಸಬೇಕಾಗಿತ್ತು. ಹಿಂದಿನವರು ಮಾಡಿಲ್ಲ. ಹೀಗಾಗಿ ಸಮಿತಿ ಮುಂದಿರಿಸಿ ಶೀಘ್ರ ಇತ್ಯರ್ಥಪಡಿಸಲಾಗುತ್ತದೆ' ಎಂದು ಬಿಬಿಎಂಪಿ ಯೋಜನೆ ವಿಭಾಗದ ಮುಖ್ಯ ಎಂಜಿನಿಯರ್ ವಿನಾಯಕ ಎಸ್. ಸುಗೂರ ಹೇಳಿದರು.

ಸುದ್ದಿ 2 ನಿಮಿಷ

ಇಂದಿರಾ ಕ್ಯಾಂಟೀನ್ ಮುಚ್ಚಿಲ್ಲ: ಬಿಬಿಎಂಪಿ

ಬೆಂಗಳೂರು: 'ಬಿಬಿಎಂಪಿ ವ್ಯಾಪ್ತಿಯ ಇಂದಿರಾ ಕ್ಯಾಂಟೀನ್‌ಗಳನ್ನು ಮುಚ್ಚಿಲ್ಲ. ಆದರೆ, ಗ್ರಾಹಕರಿಲ್ಲದ 'ಇಂದಿರಾ ಮೊಬೈಲ್ ಕ್ಯಾಂಟೀನ್‌ಗಳನ್ನು' ಸ್ಥಗಿತಗೊಳಿಸಲಾಗಿದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'18 ಇಂದಿರಾ ಮೊಬೈಲ್ ಕ್ಯಾಂಟೀನ್‌ಗಳು ಕಾರ್ಯನಿರ್ವಹಿಸುತ್ತಿದ್ದವು. ಹಲವು ತಿಂಗಳಿಂದ ಈ ಕ್ಯಾಂಟೀನ್‌ಗಳಿಗೆ ಗ್ರಾಹಕರೇ ಇರಲಿಲ್ಲ. ನಡೆಸುವುದು ತೀರಾ ಕಷ್ಟ ಎಂದು ಹೇಳುತ್ತಿದ್ದರು. ಪರಿಶೀಲಿಸಿ ಕ್ರಮಕ್ಕೆ ಸೂಚಿಸಲಾಗಿತ್ತು. ಒಂದೊಂದನ್ನೇ ನಿಲ್ಲಿಸಲಾಗಿತ್ತು. ಗ್ರಾಹಕರೇ ಇಲ್ಲದ ಮೇಲೆ ಅದನ್ನು ಉಳಿಸಿಕೊಳ್ಳುವುದು ಬೇಡವೆಂದು ಎಲ್ಲವನ್ನೂ ಸ್ಥಗಿತಗೊಳಿಸಲು ನಿರ್ಧರಿಸಲಾಗಿದೆ' ಎಂದು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

ಇನ್ನು ಬಿಬಿಎಂಪಿ ವಾರ್ಡ್ ವ್ಯಾಪ್ತಿಯಲ್ಲಿರುವ ಇಂದಿರಾ ಕ್ಯಾಂಟೀನ್‌ಗಳಲ್ಲಿ ಕೆಲವು ಕಾರ್ಯನಿರ್ವಹಿಸುತ್ತಿಲ್ಲ. ಅದಮ್ಯ ಚೇತನ ಸಂಸ್ಥೆಗೆ ಗುತ್ತಿಗೆ ಅವಧಿ ಮುಗಿದಿದ್ದು, ಅದನ್ನು ನವೀಕರಿಸುವ ಪ್ರಕ್ರಿಯೆ ಸರ್ಕಾರದ ಹಂತದಲ್ಲಿದೆ ಎಂದು ಹೇಳಿದರು.

'ಬಿಬಿಎಂಪಿಯ ಮಾರ್ಷಲ್‌ಗಳು ಹೇಳುವ ಸಂಖ್ಯೆಯಲ್ಲಿ ಇಂದಿರಾ ಕ್ಯಾಂಟೀನ್‌ಗಳಿಗೆ ಊಟ, ತಿಂಡಿಯ ಹಣ ಬಿಡುಗಡೆ ಮಾಡಲು ನಿರ್ಧರಿಸಲಾಗಿದೆ. ಆದರೆ, ಗುತ್ತಿಗೆದಾರರು ಅದನ್ನು ಒಪ್ಪುತ್ತಿಲ್ಲ. ಆರೋಗ್ಯ ನಿರೀಕ್ಷಕರು ನೀಡಿರುವ ಸಂಖ್ಯೆಯಲ್ಲಿ ಹಣ ನೀಡಲು ಒತ್ತಾಯಿಸಿ, ಕೆಲವೆಡೆ ವ್ಯತ್ಯಯ ಮಾಡುತ್ತಿದ್ದಾರೆ. ಮಾರ್ಷಲ್ ಅಥವಾ ಆರೋಗ್ಯ ನಿರೀಕ್ಷಕರಲ್ಲಿ ಯಾರು ಕಡಿಮೆ ಸಂಖ್ಯೆಯನ್ನು ನಮೂದಿಸಿದ್ದಾರೋ ಅದರಂತೆ ಮಾತ್ರ ಬಿಬಿಎಂಪಿ ಹಣ ಬಿಡುಗಡೆ ಮಾಡಲಿದೆ. ಯಾವುದೇ ಇಂದಿರಾ ಕ್ಯಾಂಟೀನ್ ಮುಚ್ಚುವ ಪ್ರಸ್ತಾವ ಇಲ್ಲ' ಎಂದು ತುಷಾರ್ ಗಿರಿನಾಥ್ ಸ್ಪಷ್ಟಪಡಿಸಿದರು.

ನಾಳೆಯಿಂದ 'ನಿರ್ಮಾಣ್' ವಿಚಾರ ಸಂಕಿರಣ

ಬೆಂಗಳೂರು: ನಗರದ ಬಿಎಂಎಸ್ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗವು ಇದೇ ಸೋಮವಾರ ಹಾಗೂ ಮಂಗಳವಾರ 'ನಿರ್ಮಾಣ್' ಶೀರ್ಷಿಕೆಯಡಿ ಅಂತರರಾಷ್ಟ್ರೀಯ ವಿಚಾರಸಂಕಿರಣ ಹಮ್ಮಿಕೊಂಡಿದೆ.

ಕಾಲೇಜಿನಲ್ಲಿ ನಡೆಯುವ ಈ ವಿಚಾರ ಸಂಕಿರಣವು ವಿದ್ಯಾರ್ಥಿಗಳು ಹಾಗೂ ಉದ್ಯಮಿಗಳ ಜತೆಗೆ ನೇರ ಮಾತುಕತೆಗೆ ವೇದಿಕೆ ಕಲ್ಪಿಸುತ್ತದೆ. ವಿದ್ಯಾರ್ಥಿಗಳ ಕೌಶಲ ಅನಾವರಣಕ್ಕೂ ಈ ವೇದಿಕೆ ಸಹಕಾರಿಯಾಗಲಿದೆ. ಸಿವಿಲ್ ಎಂಜಿನಿಯರಿಂಗ್ ಕ್ಷೇತ್ರದಲ್ಲಿನ ಅವಕಾಶ ಹಾಗೂ ಅನುಕೂಲಗಳ ಬಗ್ಗೆ ತಿಳಿಸಿಕೊಡಲಿದೆ. ಈ ವಿಚಾರ ಸಂಕಿರಣಕ್ಕೆ ಸಾರ್ಕ್ ದೇಶಗಳಿಗೂ ಆಹ್ವಾನ ನೀಡಲಾಗಿದ್ದು, ಆ ರಾಷ್ಟ್ರಗಳ ವಿದ್ಯಾರ್ಥಿಗಳು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ರಸ್ತೆ ನಿಯಮ ಉಲ್ಲಂಘನೆ: ವಿಶ್ವಕ್ಕೇ ನಗರ ಪ್ರಥಮ

ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ವಾಹನ–ಕ್ರಿಮಿನಲ್ ಮೊಕದ್ದಮೆ: ಎಂ.ಎ. ಸಲೀಂ ಹೇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಸ್ತೆ ನಿಯಮ ಉಲ್ಲಂಘಿಸುವ ಪ್ರಕರಣಗಳನ್ನು ದಾಖಲಿಸುವಲ್ಲಿ ಬೆಂಗಳೂರು ವಿಶ್ವದಲ್ಲೇ ಪ್ರಥಮ ಸ್ಥಾನದಲ್ಲಿದೆ. 2022ರ ಜನವರಿಯಿಂದ 96 ಲಕ್ಷ ಪ್ರಕರಣ ದಾಖಲಿಸಿದ್ದು, ₹174 ಕೋಟಿ ದಂಡ ವಸೂಲಿ ಮಾಡಲಾಗಿದೆ' ಎಂದು ನಗರ ಸಂಚಾರ ಪೊಲೀಸ್ ವಿಶೇಷ ಆಯುಕ್ತ ಎಂ.ಎ. ಸಲೀಂ ಹೇಳಿದರು.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ ಶುಕ್ರವಾರ ಏರ್ಪಡಿಸಿದ್ದ 'ಬೆಂಗಳೂರು ಸಂಚಾರ ದಟ್ಟಣೆಗೆ ಪರಿಹಾರ' ಕುರಿತ ಚರ್ಚೆಯಲ್ಲಿ ಅವರು ಮಾಹಿತಿ ನೀಡಿದರು.

'ಪಾದಚಾರಿ ಮಾರ್ಗದಲ್ಲಿ ದ್ವಿಚಕ್ರ ಚಲಾಯಿಸುವ ಸವಾರರ ಮೇಲೆ ಪ್ರಾಣಕ್ಕೆ ಸಂಚಕಾರ ತರುವ ಪ್ರಯತ್ನದ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಲಾಗುತ್ತದೆ' ಎಂದು ಸಲೀಂ ಹೇಳಿದರು.

'ಕೃತಕ ಬುದ್ಧಿಮತ್ತೆ ವ್ಯವಸ್ಥೆ ಮೂಲಕ ಕಾರಿಡಾರ್ ವ್ಯವಸ್ಥೆಯಲ್ಲಿ ಸಿಗ್ನಲ್‌ಗಳನ್ನು ಅಳವಡಿಸಲಾಗುತ್ತಿದೆ. 7ರಿಂದ 10 ಸಿಗ್ನಲ್‌ಗಳು ಸಂಯೋಜನೆಯಲ್ಲಿ ಕಾರ್ಯನಿರ್ವಹಿಸಲಿವೆ. ಅತ್ಯಂತ ದಟ್ಟಣೆ ಸಂದರ್ಭದಲ್ಲೂ ಮೂರನೇ ಗ್ರೀನ್ ಸಿಗ್ನಲ್‌ನಲ್ಲಾದರೂ ವಾಹನ ಜಂಕ್ಷನ್ ದಾಟಬೇಕು ಎಂಬ ಉದ್ದೇಶವಿದೆ. ರಾಷ್ಟ್ರೀಯ ಹೆದ್ದಾರಿಗಳಲ್ಲಿ ನಿಧಾನ ಗತಿಯಲ್ಲಿ ಚಲಿಸುವ ವಾಹನಗಳು ಬಲಭಾಗದಲ್ಲೇ ಇರುತ್ತವೆ. ಅದನ್ನು ತಡೆಯುವ ಉದ್ದೇಶದಿಂದ ಬಲ ಭಾಗದಲ್ಲಿ ಭಾರಿ ವಾಹನಗಳು ಚಲಿಸದಂತೆ ತಡೆಯುವ ಪೋಲ್‌ಗಳನ್ನು ಅಳವಡಿಸಬೇಕು ಎಂದು ರಾಷ್ಟ್ರೀಯ ಹೆದ್ದಾರಿಗಳ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ' ಎಂದರು.

ನಿತ್ಯದ ಸಂಗ್ರಹಣೆ ಮೇರೆಗೆ ಬಸ್ ಚಾಲಕ ಹಾಗೂ ನಿರ್ವಾಹಕರಿಗೆ ಬಿಎಂಟಿಸಿಯವರು ಭತ್ಯೆ ನೀಡುತ್ತಾರೆ. ಇದರಿಂದ ಅವರು ಎಲ್ಲೆಂದರಲ್ಲಿ ಬಸ್ ನಿಲ್ಲಿಸಿ, ಪ್ರಯಾಣಿಕರನ್ನು ಹತ್ತಿಸಿಕೊಳ್ಳುತ್ತಾರೆ. ಈ ಭತ್ಯೆಯನ್ನು ನಿಲ್ಲಿಸಬೇಕು, ನಿಲ್ದಾಣದಲ್ಲಿ ಮಾತ್ರ ಬಸ್ ನಿಲ್ಲಿಸಲು ಸೂಚನೆ ನೀಡಿ ಎಂದು ಬಿಎಂಟಿಸಿಗೆ ಮನವಿ ಮಾಡಲಾಗಿದೆ ಎಂದರು.

'ಪೊಲೀಸರ ಮೇಲೆ ನಾಗರಿಕರಿಗೆ ನಂಬಿಕೆ ಬರುವಂತೆ ಕೆಲಸ ಮಾಡಲಾಗುತ್ತಿದೆ' ಎಂದು ಹೇಳಿದರು.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್‌ನ ಗೌರವ ನಿರ್ದೇಶಕ ವಿ. ರವಿಚಂದರ್ ಅವರು ಚರ್ಚೆಯನ್ನು ನಡೆಸಿಕೊಟ್ಟರು.

ಬೆಂಗಳೂರು ಇಂಟರ್‌ನ್ಯಾಷನಲ್ ಸೆಂಟರ್ ಶುಕ್ರವಾರ ಏರ್ಪಡಿಸಿದ್ದ 'ಬೆಂಗಳೂರು ಸಂಚಾರ ದಟ್ಟಣೆಗೆ ಪರಿಹಾರ' ಕುರಿತ ಚರ್ಚೆಯಲ್ಲಿ ನಗರ ಸಂಚಾರ ಪೊಲೀಸ್ ವಿಶೇಷ ಆಯುಕ್ತ ಎಂ.ಎ. ಸಲೀಂ ಮಾತನಾಡಿದರು. ಸೆಂಟರ್‌ನ ಗೌರವ ನಿರ್ದೇಶಕ ವಿ. ರವಿಚಂದರ್ ಇದ್ದರು

ಒಂದೇ ರಸ್ತೆಯಲ್ಲಿ ಸಾವಿರಾರು ಗುಂಡಿ...

'ನಗರದಲ್ಲಿ 1,137 ರಸ್ತೆ ಗುಂಡಿಗಳಿವೆ ಎಂದು ಬಿಬಿಎಂಪಿ ಎಂಜಿನಿಯರ್‌ಗಳು ಹೇಳುತ್ತಿದ್ದಾರೆ. ಆದರೆ, ಅಬ್ಬಿಗೆರೆಯ ಒಂದೇ ರಸ್ತೆಯಲ್ಲಿ ಸಾವಿರಾರು ಗುಂಡಿಗಳನ್ನು ನಾನೇ ನೋಡಿದ್ದೇನೆ' ಎಂದು ಎಂ.ಎ. ಸಲೀಂ ಹೇಳಿದರು.

'ನಗರದಲ್ಲಿ ರಸ್ತೆ ಗುಂಡಿಯಿಂದ ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿದೆ. ಜಂಕ್ಷನ್‌ಗಳಲ್ಲಿ ಕನಿಷ್ಠ ನೂರು ಮೀಟರ್ ಸುತ್ತಳತೆಯಲ್ಲಿ ಯಾವುದೇ ರೀತಿಯ ರಸ್ತೆ ಗುಂಡಿ ಇಲ್ಲದಂತೆ ಮಾಡಲು ಬಿಬಿಎಂಪಿಗೆ ಮನವಿ ಮಾಡಲಾಗಿದೆ. ಜೊತೆಗೆ, ಈ ಸುತ್ತಳತೆಯಲ್ಲಿರುವ ಬಿಎಂಟಿಸಿ ಬಸ್‌ಗಳ ನಿಲ್ದಾಣವನ್ನೂ ಬದಲಾಯಿಸಲಾಗುತ್ತಿದೆ ಎಂದರು.

ರಸ್ತೆಗಳಲ್ಲಿರುವ ಅಡೆತಡೆಗಳ ಸರ್ವೆ ನಡೆಸಿ, ಬಿಬಿಎಂಪಿ, ಬಿಡಿಎ, ಬಿಡಬ್ಲ್ಯುಎಸ್‌ಎಸ್‌ಬಿ, ಬೆಸ್ಕಾಂ, ಬಿಎಂಟಿಸಿ ಸೇರಿದಂತೆ ಎಲ್ಲ ಸಂಸ್ಥೆಗಳಿಗೆ ಮಾಹಿತಿ ನೀಡಿ ಅವುಗಳನ್ನು ನಿವಾರಿಸಲು ಸೂಚಿಸಲಾಗಿದೆ. ಅವೈಜ್ಞಾನಿಕ ರಸ್ತೆ ಉಬ್ಬುಗಳನ್ನೂ ತೆರವು ಮಾಡಲಾಗುತ್ತಿದೆ. ಇದೆಲ್ಲ ಸರಿಹೋದರೆ ಸಂಚಾರ ಸುಗಮವಾಗಬಹುದು ಎಂದು ಅಭಿಪ್ರಾಯಪಟ್ಟರು.

'ಕೆಜಿಎಫ್: ಚಿನ್ನ ತೆಗೆಯಲು ಬಿಡ್ ಆಹ್ವಾನ'

ನವದೆಹಲಿ (ರಾಯಿಟರ್ಸ್): ಕೋಲಾರದ ಚಿನ್ನದ ಗಣಿಗಳ ಸಮೂಹದಲ್ಲಿರುವ 50 ದಶಲಕ್ಷ ಟನ್ ಸಂಸ್ಕರಿಸಿದ ಅದಿರಿನಿಂದ ಚಿನ್ನವನ್ನು ಹೊರತೆಗೆಯಲು ಭಾರತವು ಬಿಡ್‌ಗಳನ್ನು ಆಹ್ವಾನಿಸಲು ಯೋಜಿಸಿದೆ ಎಂದು ಹಿರಿಯ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ.

ಕೆಜಿಎಫ್ ದೇಶದ ಅತ್ಯಂತ ಹಳೆಯ ಚಿನ್ನದ ಗಣಿ. ವಸಾಹತುಶಾಹಿ ಆಡಳಿತದ ಕಾಲದಿಂದ ಇಲ್ಲಿ ನಡೆದುಕೊಂಡು ಬಂದಿದ್ದ ಗಣಿಗಾರಿಕೆಯನ್ನು 20 ವರ್ಷಗಳ ಹಿಂದೆ ನಿಲ್ಲಿಸಲಾಗಿದೆ.

ಸುಮಾರು 18 ಸಾವಿರ ಕೋಟಿ ಡಾಲರ್ ಮೌಲ್ಯದ ಚಿನ್ನದ ನಿಕ್ಷೇಪಗಳನ್ನು ಇದು ಒಳಗೊಂಡಿದೆ. ಇಲ್ಲಿ ಹಿಂದೆ ಸಂಸ್ಕರಿಸಿದ ಅದಿರಿನ ಉಳಿದ ಭಾಗಗಳಿಂದಲೂ ಚಿನ್ನವನ್ನು ಹೊರತೆಗೆಯಲು ಲಭ್ಯವಿರುವ ಹೊಸ ತಂತ್ರಜ್ಞಾನದ ಲಾಭವನ್ನು ಪಡೆದುಕೊಳ್ಳಲು ಭಾರತ ಉತ್ಸುಕವಾಗಿದೆ ಎಂದು ಅವರು ಹೇಳಿದ್ದಾರೆ.

ಈ ಸಂಬಂಧ ರಾಯಿಟರ್ಸ್ ಸುದ್ದಿ ಸಂಸ್ಥೆ ಕಳಿಸಿದ ಇ–ಮೇಲ್‌ಗೆ ಕೇಂದ್ರ ಗಣಿಗಾರಿಕಾ ಸಚಿವಾಲಯ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಹಾರೈಕೆ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರಿಗೆ ಶಾಸಕ ಟಿ.ಎ. ಶರವಣ ಅವರು ಜನ್ಮದಿನದ ಶುಭಾಶಯ ಕೋರಿದರು

ಬಿಜೆಪಿ ಸೋಲಿಸಲು ಕಾಂಗ್ರೆಸ್‌ನಿಂದ ಮಾತ್ರ ಸಾಧ್ಯ: ರಾಹುಲ್ ಗಾಂಧಿ

ಜೈಪುರ (ಪಿಟಿಐ): 'ಕಾಂಗ್ರೆಸ್ ಸೈದ್ಧಾಂತಿಕ ನಿಲುವು ಹೊಂದಿರುವ ಪಕ್ಷ. ಮತಾಂಧತೆಯ ಮನಸ್ಥಿತಿಯುಳ್ಳ ಬಿಜೆಪಿಯನ್ನು ಅಧಿಕಾರದಿಂದ ಕೆಳಗಿಳಿಸಬಲ್ಲ ಸಾಮರ್ಥ್ಯ ಇರುವುದು ಕಾಂಗ್ರೆಸ್‌ಗೆ ಮಾತ್ರ. ಬೇಕಿದ್ದರೆ ಇದನ್ನು ಬರೆದಿಟ್ಟುಕೊಳ್ಳಿ' ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿದ್ದಾರೆ.

ಭಾರತ್ ಜೋಡೊ ಯಾತ್ರೆ 100 ದಿನ ಪೂರೈಸಿರುವ ಹಿನ್ನೆಲೆಯಲ್ಲಿ ಶುಕ್ರವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಕಥೆ ಮುಗಿಯಿತು ಎಂಬ ಭಾವನೆ ಬಹುತೇಕರಲ್ಲಿದೆ. ಕಾಂಗ್ರೆಸ್ ಖಂಡಿತವಾಗಿಯೂ ಅಳಿಯುವುದಿಲ್ಲ. ಪಕ್ಷದ ಬಗ್ಗೆ ಅಸಡ್ಡೆ ಬೇಡ. ಕೋಟ್ಯಂತರ ಮಂದಿ ಕಾರ್ಯಕರ್ತರ ಬಲ ಪಕ್ಷಕ್ಕಿದೆ. ಅವರನ್ನು ಸರಿಯಾದ ದಿಸೆಯಲ್ಲಿ ಬಳಸಿಕೊಂಡಿದ್ದೇ ಆದರೆ ರಾಜಸ್ಥಾನ ಸೇರಿದಂತೆ ಮುಂಬರುವ ಎಲ್ಲಾ ಚುನಾವಣೆಗಳಲ್ಲೂ ಪಕ್ಷಕ್ಕೆ ಅಮೋಘ ಗೆಲುವು ಒಲಿಯಲಿದೆ' ಎಂದರು.

'ಯಾರಿಗಾದರೂ ಪಕ್ಷ ಬಿಡಬೇಕು ಎಂದು ಅನಿಸಿದರೆ ಧಾರಾಳವಾಗಿ ಹೊರಹೋಗಬಹುದು. ಬಿಜೆಪಿ ವಿರುದ್ಧ ಹೋರಾಡುವ ಧೈರ್ಯ ಇಲ್ಲದವರು ಪಕ್ಷದಲ್ಲಿದ್ದರೂ ಪ್ರಯೋಜನವಿಲ್ಲ' ಎಂದು ಹೇಳಿದರು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೊ ಯಾತ್ರೆಯು 100ನೇ ದಿನಕ್ಕೆ ಕಾಲಿರಿಸಿದ್ದು, ರಾಜಸ್ಥಾನದ ದೌಸಾಕ್ಕೆ ಶುಕ್ರವಾರ ತಲುಪಿದಾಗ ಮಕ್ಕಳು ರಾಹುಲ್ ಜೊತೆ ಹೆಜ್ಜೆ ಹಾಕಿದರು —ಪಿಟಿಐ ಚಿತ್ರ

ಈ ವರ್ಷ ₹ 33 ಕೋಟಿ ವೆಚ್ಚಕ್ಕೆ ಸಿದ್ಧ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್

'ರಸ್ತೆಯಲ್ಲಿ ಗುಂಡಿ ಬೀಳುವುದು ನಿರಂತರ; ದುರಸ್ತಿ ಮಾಡಲೇಬೇಕು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ ರಸ್ತೆಯಲ್ಲಿ ಗುಂಡಿ ಬೀಳುವುದು ನಿರಂತರವಾಗಿದೆ. ಅದನ್ನು ದುರಸ್ತಿ ಮಾಡಲೇಬೇಕು. ಈ ಹಿಂದೆ ಪ್ರತಿ ವರ್ಷ ₹40 ಕೋಟಿಯಿಂದ ₹50 ಕೋಟಿ ವೆಚ್ಚ ಮಾಡಲಾಗುತ್ತಿತ್ತು. ಈ ವರ್ಷ ₹33 ಕೋಟಿ ವೆಚ್ಚ ಮಾಡಲಾಗುತ್ತದೆ' ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

'ರಸ್ತೆಯಲ್ಲಿ ಒಂದು ಬಾರಿ ಗುಂಡಿ ಬಿದ್ದರೆ ಅದೇ ಸ್ಥಳದಲ್ಲಿ ಪದೇ ಪದೇ ಗುಂಡಿ ಆಗುತ್ತಲೇ ಇರುತ್ತದೆ. ಯಾವುದೇ ಪ್ಯಾಚ್ ವರ್ಕ್ ಸರಿಯಾಗುವುದಿಲ್ಲ. ಆದರೂ ವೈಜ್ಞಾನಿಕವಾಗಿ ಈ ಬಾರಿ ಗುಂಡಿಗಳನ್ನು ಮುಚ್ಚುತ್ತಿರುವುದರಿಂದ ಕಳೆದ ಬಾರಿಗಿಂತ ಕಡಿಮೆ ವೆಚ್ಚ ಮಾಡಲಾಗಿದೆ' ಎಂದು ಸುದ್ದಿಗಾರರಿಗೆ ಶುಕ್ರವಾರ ತಿಳಿಸಿದರು.

'ರಸ್ತೆ ಗುಂಡಿ ಇಲ್ಲದ ಯಾವುದಾದರೂ ಒಂದು ನಗರವನ್ನು ತೋರಿಸಿ, ನೋಡೋಣ. ರಸ್ತೆಗಳಲ್ಲಿ ವಾಹನಗಳ ದಟ್ಟಣೆ ಹೆಚ್ಚಾಗುವುದರಿಂದ ಗುಂಡಿ ಬೀಳುವುದು ಸಹಜ. ಇದನ್ನು ಮುಚ್ಚಲು ಕ್ರಮ ಕೈಗೊಳ್ಳಲಾಗುತ್ತದೆ. 'ಗುಂಡಿಮುಕ್ತ ರಸ್ತೆ' ಎಂದು ಹೇಳುವುದು ಕಷ್ಟ. ದಕ್ಷಿಣ ವಲಯದಲ್ಲೂ ರಸ್ತೆಗಳ ಗುಂಡಿ ಬಗ್ಗೆ ದೂರುಗಳು ಬರುತ್ತಿವೆ. ಎಲ್ಲವನ್ನೂ ಮುಚ್ಚುತ್ತಿದ್ದೇವೆ. ಹೊಸದಾಗಿ ಗುಂಡಿಗಳಾದಾಗ ಮುಚ್ಚುತ್ತಲೇ ಇರಬೇಕಾಗುತ್ತದೆ. ಇದು ನಿತ್ಯವೂ ಆಗಬೇಕಾದ ಕೆಲಸ' ಎಂದು ಹೇಳಿದರು.

'ನಮ್ಮ ಕೆಲಸವೇ ನಿತ್ಯ ಇರುವಂತಹದ್ದು. ರಸ್ತೆ ಮಾಡಬೇಕು, ಗುಂಡಿ ಮುಚ್ಚಬೇಕು. ಹಾಗೆಂದು ಗುಂಡಿ ಬಿದ್ದ ಕಡೆಯಲ್ಲಿ ಮತ್ತೆ ಹೊಸ ರಸ್ತೆ ಮಾಡಲು ಸಾಧ್ಯವಿಲ್ಲ. ಈ ವರ್ಷ ನಾವು ವೈಜ್ಞಾನಿಕವಾಗಿ ರಸ್ತೆ ಗುಂಡಿ ಮುಚ್ಚುತ್ತಿದ್ದೇವೆ. ಜಿಐಎಸ್ ಆಧಾರದಲ್ಲಿ ಅಗತ್ಯ ಗುಂಡಿಗಳನ್ನು ಮಾತ್ರ ಮುಚ್ಚುತ್ತಿದ್ದೇವೆ. ಹೀಗಾಗಿ ಕಳೆದ ವರ್ಷಗಳಿಗಿಂತ ವೆಚ್ಚ ಕಡಿಮೆ ಆಗಿದೆ. ಹೈಕೋರ್ಟ್ ಆದೇಶದಂತೆ, ಗುಂಡಿಯಿಂದ ಅಪಘಾತವಾದರೆ ಎಫ್‌ಐಆರ್ ದಾಖಲಿಸಲು ಯಾವುದೇ ಆಕ್ಷೇಪಣೆ ಇಲ್ಲ. ನಾವು ಹೈಕೋರ್ಟ್‌ಗೆ ಎಲ್ಲ ಮಾಹಿತಿಯ ಪುಸ್ತಕವನ್ನೇ ನೀಡಿದ್ದೇವೆ. ಯಾವುದೇ ಕ್ರಮಕ್ಕೂ ಸಿದ್ಧ' ಎಂದರು.

ಮಠಗಳು ಶಾಸನಾತೀತವೇ?: ಹೈಕೋರ್ಟ್

ಮುರುಘಾ ಮಠ: ಆಡಳಿತಾಧಿಕಾರಿ ನೇಮಕ ಪ್ರಶ್ನಿಸಿದ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚಿತ್ರದುರ್ಗ ಮುರುಘಾಮಠದ ಪೀಠಾಧಿಪತಿ ಶಿವಮೂರ್ತಿ ಮುರುಘಾ ಶರಣರು, ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಗಂಭೀರ ಆರೋಪದಡಿ ಪೋಕ್ಸೊ ಪ್ರಕರಣದಲ್ಲಿ ಜೈಲು ಸೇರಿದ್ದಾರೆ. ಇಂತಹ ಸಂದರ್ಭದಲ್ಲಿ ಅವರು ಜೈಲಿನಿಂದಲೇ ತಮ್ಮ ಆಣತಿಯ ಅನುಸಾರ ಮಠ ಮತ್ತು ವಿದ್ಯಾಸಂಸ್ಥೆಗಳ ಆಡಳಿತ ನಡೆಸುವುದಾದರೆ ಸಾವಿರಾರು ಕೋಟಿ ರೂಪಾಯಿ ಮೌಲ್ಯದ ಚರ ಮತ್ತು ಸ್ಥಿರಾಸ್ತಿಗೆ ಭಾರಿ ಹಾನಿಯುಂಟಾಗುತ್ತದೆ' ಎಂದು ರಾಜ್ಯ ಸರ್ಕಾರದ ಪರ ಅಡ್ವೊಕೇಟ್ ಜನರಲ್ ಹೈಕೋರ್ಟ್‌ಗೆ ಸ್ಪಷ್ಟಪಡಿಸಿದರು.

ನಿವೃತ್ತ ಐಎಎಸ್ ಅಧಿಕಾರಿ ಪಿ.ಎಸ್.ವಸ್ತ್ರದ ಅವರನ್ನು ಶ್ರೀ ಜಗದ್ಗುರು ಮುರುಘರಾಜೇಂದ್ರ ಬೃಹನ್ಮಠಕ್ಕೆ ಆಡಳಿತಾಧಿಕಾರಿಯನ್ನಾಗಿ ನೇಮಕ ಮಾಡಿ ರಾಜ್ಯ ಸರ್ಕಾರ ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಡಿ.ಎಸ್.ಮಲ್ಲಿಕಾರ್ಜುನ ಸೇರಿದಂತೆ ಮೂವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶುಕ್ರವಾರ ಸುದೀರ್ಘ ವಿಚಾರಣೆ ಆಲಿಸಿ ಆದೇಶ ಕಾಯ್ದಿರಿಸಿತು.

'ಶರಣರು ಮಠ ಮತ್ತು ವಿದ್ಯಾಪೀಠಕ್ಕೆ ಏಕೈಕ (ಸೋಲ್) ಟ್ರಸ್ಟೀ ಮತ್ತು ಅಧ್ಯಕ್ಷರಾಗಿತಕ್ಕದ್ದು ಎಂದು 2010ರ ನವೆಂಬರ್ 26ರಂದು ಟ್ರಸ್ಟ್ ಡೀಡ್ ನಿಗದಿಪಡಿಸಲಾಗಿದೆ. ಇದರ ಅನುಸಾರ ಶರಣರು ಮಠ ಮತ್ತು ವಿದ್ಯಾಪೀಠಗಳ ಆಡಳಿತದ ಸಂಪೂರ್ಣ ಅಧಿಕಾರ ಹೊಂದಿದ್ದಾರೆ. ವಿದ್ಯಾಪೀಠದ ಅಡಿಯಲ್ಲಿ ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ 106 ವಿದ್ಯಾಸಂಸ್ಥೆಗಳು ಕಾರ್ಯ ನಿರ್ವಹಿಸುತ್ತಿವೆ. ಇಲ್ಲಿ ಸಾವಿರಾರು ನೌಕರರು ದುಡಿಯುತ್ತಿದ್ದಾರೆ. ಈ ಟ್ರಸ್ಟ್ ಸಾರ್ವಜನಿಕ ಟ್ರಸ್ಟ್. ಹೀಗಾಗಿ ಶರಣರು ಜೈಲು ಸೇರಿರುವ ಕಾರಣ ಈ ಸಾರ್ವಜನಿಕ ಟ್ರಸ್ಟ್ ಅನ್ನು ಸರ್ಕಾರ ರಕ್ಷಣೆ ಮಾಡಬೇಕಿದ್ದು ಅದಕ್ಕಾಗಿಯೇ ಆಡಳಿತಾಧಿಕಾರಿ ನೇಮಕ ಮಾಡಿದೆ' ಎಂದು ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ವಿವರಿಸಿದರು.

ಅರ್ಜಿದಾರರ ಪರ ವಕೀಲ ಜಯಕುಮಾರ್ ಎಸ್. ಪಾಟೀಲ್, 'ಸರ್ಕಾರ ಸಂವಿಧಾನದ 162ನೇ ವಿಧಿಯಡಿ ಆಡಳಿತಾಧಿಕಾರಿ ನೇಮಕ ಮಾಡಿರುವುದು ಕಾನೂನು ಬಾಹಿರ. ಮಠಗಳ ಮೇಲೆ ನಿಯಂತ್ರಣ ಹೊಂದಲು ಕಾನೂನಿನಲ್ಲಿ ಅವಕಾಶವಿಲ್ಲ. ಸಿವಿಲ್ ಪ್ರೊಸೀಜರ್ ಕೋಡ್ ಅನುಸಾರ ಕಲಂ 92ರ ಅಡಿಯಲ್ಲಿ ನಿಯಂತ್ರಣ ಹೊಂದಬಹುದು. ಆದ್ದರಿಂದ, ಈ ಪ್ರಕರಣದಲ್ಲಿ ಸರ್ಕಾರ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಬೇಕು' ಎಂದು ಕೋರಿದರು.

'ಪ್ರತಿಯೊಂದು ಧಾರ್ಮಿಕ ಪಂಗಡಗಳಿಗೆ (ರಿಲಿಜಿಯಸ್ ಡಿನಾಮಿನೇಷನ್–ಮಠ) ಸಂವಿಧಾನದತ್ತವಾದ ಕೆಲವೊಂದು ಮೂಲಭೂತ ಹಕ್ಕುಗಳನ್ನು ಅನುಭವಿಸಲು ಅವಕಾಶವಿರುತ್ತದೆ. ಇದನ್ನು ಸುಪ್ರೀಂ ಕೋರ್ಟ್ ಶಿರೂರು ಮಠ ಪ್ರಕರಣದಲ್ಲಿ ಈ ಹಿಂದೆಯೇ ಸ್ಪಷ್ಟಪಡಿಸಿದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿ ಅರ್ಜಿಯನ್ನು ಪರಿಶೀಲಿಸಿದ ನ್ಯಾಯಪೀಠ, 'ನಿಮ್ಮ ಅರ್ಜಿಯಲ್ಲಿ ಕೇವಲ ಲಿಂಗಾಯತ ಮಠ ಎಂದಷ್ಟೇ ಕಾಣಿಸಿದ್ದೀರಿ, ರಿಲಿಜಿಯಸ್ ಡಿನಾಮಿನೇಷನ್ ಅನ್ನು ಪುಷ್ಟೀಕರಿಸುವ ಯಾವುದೇ ಅಂಶಗಳಿಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿ, 'ಕೇವಲ, ನಾನು ಇಂಗ್ಲೆಂಡಿನ ರಾಜ ಎಂದರೆ ಆಗುವುದಿಲ್ಲ. ಅದನ್ನು ಸಾಬೀತುಪಡಿಸುವ ದಾಖಲೆ, ಪುರಾವೆಗಳನ್ನು ನ್ಯಾಯಪೀಠಕ್ಕೆ ಒದಗಿಸಬೇಕಲ್ಲವೇ' ಎಂದು ಪಾಟೀಲರನ್ನು ಪ್ರಶ್ನಿಸಿತು.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಪನೋರಮ ಚಲನಚಿತ್ರೋತ್ಸವ: ಆಯೋಜನೆ: ಫಿಲ್ಮಾಹಾಲಿಕ ಫೌಂಡೇಷನ್, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್‌ನ ಕೊಂಡಜ್ಜಿ ಬಸಪ್ಪ ಸಭಾಂಗಣ, ಅರಮನೆ ರಸ್ತೆ, ಬೆಳಿಗ್ಗೆ 9

ಡಿಎಸ್‌ಸಿಇ ಹಳೆ ವಿದ್ಯಾರ್ಥಿಗಳ ಸಮ್ಮೇಳನ: ಅತಿಥಿಗಳು: ವಿಷ್ಣು ವಿಜಯಕುಮಾರ್, ಜಿ.ಎನ್. ಮೂರ್ತಿ, ಮಧುಸೂದನ್ ಎನ್., ಅಧ್ಯಕ್ಷತೆ: ಡಿ. ಹೇಮಚಂದ್ರ ಸಾಗರ್, ಡಿ. ಪ್ರೇಮಚಂದ್ರ ಸಾಗರ್, ಗಾಳಿಸ್ವಾಮಿ, ಆಯೋಜನೆ ಮತ್ತು ಸ್ಥಳ: ದಯಾನಂದ ಸಾಗರ್ ಕಾಲೇಜ್ ಆಫ್ ಎಂಜಿನಿಯರಿಂಗ್, ಡಾ. ಡಿ. ಪ್ರೇಮಚಂದ್ರ ಸಾಗರ್ ಸಭಾಂಗಣ, ಕುಮಾರಸ್ವಾಮಿ ಲೇಔಟ್, ಬೆಳಿಗ್ಗೆ 10

'ಮೈಸೂರು ಆಸ್ಥಾನ ಮಹಾವಿದ್ವಾನ್ ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ' ಕೃತಿ ಬಿಡುಗಡೆ: ಶಾಂತಿನಾಥ ದಿಬ್ಬದ, ಅಧ್ಯಕ್ಷತೆ: ವಿ. ಗಿರೀಶ್‌ಚಂದ್ರ, ಪುಸ್ತಕ ವಿಮರ್ಶೆ: ವೀರನಾರಾಯಣ ಪಾಂಡುರಂಗಿ, ಅತಿಥಿಗಳು: ಜಿತೇಂದ್ರಕುಮಾರ್, ಆಯೋಜನೆ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ, ಸ್ಥಳ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಸಭಾಂಗಣ, ಚಾಮರಾಜಪೇಟೆ, ಬೆಳಿಗ್ಗೆ 10.30

ಸಾಮಾಜಿಕ ಸುಧಾರಣೆಯ ಕೈಪಿಡಿ ಸಂವಿಧಾನ: ಮುಂದಿರುವ ಸವಾಲುಗಳು: ಭಾಷಣಕಾರರು: ಎಸ್. ಮುರಳೀಧರ್, ಅತಿಥಿಗಳು: ದು. ಸರಸ್ವತಿ, ಆಯೋಜನೆ: ಅಲ್ಟರ್‌ನೇಟಿವ್ ಲಾ ಫೋರಂ, ಸ್ಥಳ: ಸೇಂಟ್ ಜೋಸೆಫ್ ಕಾನೂನು ಕಾಲೇಜಿನ ಸಭಾಂಗಣ, ರೆಸಿಡೆನ್ಸಿ ರಸ್ತೆ, ಬೆಳಿಗ್ಗೆ 10.30

ಪ್ರತಿಭಾನ್ವೇಷಣೆ ಕಾರ್ಯಕ್ರಮ: ಉದ್ಘಾಟನೆ: ರಿಜ್ವಾನ್ ಅರ್ಷದ್, ಅತಿಥಿಗಳು: ಪ್ರದೀಪ್ ಪಿ., ಅಶ್ವಿನ್. ಡಿ. ಗೌಡ, ಭವಾನಿ ಹೆಗ್ಡೆ, ಅಧ್ಯಕ್ಷತೆ: ಚಂದ್ರಶೇಖರ ಬಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ರೇಸ್ ಕೋರ್ಸ್ ರಸ್ತೆ, ಬೆಳಿಗ್ಗೆ 10.30



ವಾಸು ದೀಕ್ಷಿತ್

'ಪ್ರಜಾವಾಣಿ' ಭೂಮಿಕಾ ಕ್ಲಬ್: ಸಂಗೀತ ಕಾರ್ಯಕ್ರಮ: ವಾಸು ದೀಕ್ಷಿತ್, ಸಂವಾದ: ಬೈಕರ್ ರಾಜಲಕ್ಷ್ಮೀ, ಟ್ರಾವೆಲ್ ವ್ಲಾಗರ್ ಗ್ಲೋರಿಯಾ ಖಮ್ರುಯಿ, ಖುಷ್ಬೂ ಶೆಟ್ಟಿ, ರುಚಿಕಾ ಚೌಧರಿ, ಆಯೋಜನೆ: ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್, ಸ್ಥಳ: ಇಂದಿರಾನಗರದ ಕ್ಲಬ್, ಮಧ್ಯಾಹ್ನ 2.30

ಮಧುಮೇಹ ತಜ್ಞರ ರಾಜ್ಯಮಟ್ಟದ ಸಮ್ಮೇಳನ: ಅತಿಥಿಗಳು: ಡಾ.ಕೆ. ಸುಧಾಕರ್, ಡಾ.ಸುದರ್ಶನ ಬಲ್ಲಾಳ, ಆಯೋಜನೆ: ಕೆಆರ್‌ಎಸ್‌ಎಸ್‌ಡಿಐ, ಸ್ಥಳ: ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ, ಬೆಳಿಗ್ಗೆ 11

ಸಂಕಲ್ಪ ಹೊಸ ಆವರಣದ ಉದ್ಘಾಟನೆ: ಅತಿಥಿಗಳು: ಜಾಕಿ ಶ್ರಾಫ್, ಆಯೋಜನೆ: ಸಂಕಲ್ಪ ಇಂಡಿಯಾ ಫೌಂಡೇಷನ್, ಸ್ಥಳ: ಡಾ.ಬಿ.ಆರ್. ಅಂಬೇಡ್ಕರ್ ಭವನ, ಮಿಲ್ಲರ್ಸ್ ರಸ್ತೆ, ಭಗವಾನ್ ಮಹಾವೀರ್ ಜೈನ್ ಆಸ್ಪತ್ರೆ, ಕಾವೇರಪ್ಪ ಲೇಔಟ್, ವಸಂತನಗರ, ಬೆಳಿಗ್ಗೆ 11.30

'ಒನಕೆ ಓಬವ್ವ' ಪುಸ್ತಕ ಬಿಡುಗಡೆ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ: ಸಾನ್ನಿಧ್ಯ: ಬಸವನಾಗಿ ದೇವರು, ಪುಸ್ತಕ ಬಿಡುಗಡೆ: ಬಿ.ಟಿ. ಲಲಿತಾ ನಾಯಕ್, ಅತಿಥಿಗಳು: ಕೃಷ್ಣಮೂರ್ತಿ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಪ್ರಶಸ್ತಿ ಪುರಸ್ಕೃತರು: ಎಂ. ಸುಮಿತ್ರ, ಎಂ.ವಿ. ಸೌಮ್ಯ, ಪೂರ್ಣಿಮಾ ಮಧುಕರ್, ಸವಿತಾ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ಹೋಟೆಲ್ ಕಾನಿಷ್ಕ ಸಭಾಂಗಣ, ಗಾಂಧಿನಗರ, ಮಧ್ಯಾಹ್ನ 12.30

ಅಯ್ಯಪ್ಪಸ್ವಾಮಿಯ 52ನೇ ವಾರ್ಷಿಕ ಹಾಗೂ ಅಲಂಕೃತ ರಥದ ಮೆರವಣಿಗೆ: ಅನ್ನದಾನ ಮಧ್ಯಾಹ್ನ 1, ಅಲಂಕೃತ ರಥದ ಚಾಲನೆ ಮತ್ತು ಮೆರವಣಿಗೆ ಸಂಜೆ 5, ಚೆಂಡೆ ವಾದ್ಯ ರಾತ್ರಿ 9, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ಸೇವಾ ಸಮಿತಿ, 7ನೇ ಬ್ಲಾಕ್ ಜಯನಗರ

ಅದಿತಿ ಬಿ. ಶೇಶ್

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅದಿತಿ ಬಿ. ಶೇಶ್, ಅತಿಥಿಗಳು: ಅಶಿಶ್ ಮೋಹನ್ ಖೋಕರ್, ಲಕ್ಷ್ಮೀ ಗೋಪಾಲಸ್ವಾಮಿ, ಆಯೋಜನೆ: ಖೇಚರ ಅಕಾಡೆಮಿ, ಸ್ಥಳ: ಜೆಎಸ್‌ಎಸ್ ಸಭಾಂಗಣ, ಸಂಜೆ 6.15

ಉಚಿತ ಮಕ್ಕಳ ರಂಗ ಕಾರ್ಯಾಗಾರ: **ಆಯೋಜನೆ:** ರಂಗಕಹಳೆ, ಸ್ಥಳ: ರಂಗಕಹಳೆ ಮಕ್ಕಳ ಮನೆ, ಉತ್ತರಹಳ್ಳಿ, ಮಧ್ಯಾಹ್ನ 1



ಶ್ರೇಯಾ ಕೆ.

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಶ್ರೇಯಾ ಕೆ., ಅತಿಥಿಗಳು: ವೈ.ಕೆ. ಸಂಧ್ಯಾ ಶರ್ಮ, ಲಕ್ಷ್ಮಿ ಎನ್. ಮೂರ್ತಿ, ಗೀತಾ ಶ್ರೀನಾಥ್, ಸರಳಾ ರವಿ, ಎಂ ಭಾಗ್ಯಲಕ್ಷ್ಮಿ ಮದನಗೋಪಾಲ್, ಶಿರೀಷಾ. ಎಸ್. ಕುಮಾರ್, ಸ್ಥಳ: ಶ್ರೀಕೃಷ್ಣ ದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ಸಂಜೆ 4

ವಿಜಯಲಕ್ಷ್ಮಿ ಸತ್ಯಮೂರ್ತಿ ಅವರ 'ಪಾರಿಜಾತದ ನೆರಳು' ಕಥಾಸಂಕಲನ ಬಿಡುಗಡೆ: ಟಿ.ಎಸ್. ನಾಗಾಭರಣ, ಅತಿಥಿಗಳು: ನಳಿನಾ ಪ್ರಸಾದ್, ಉಪಸ್ಥಿತಿ: ವಿಜಯಲಕ್ಷ್ಮಿ ಸತ್ಯಮೂರ್ತಿ, ಆಯೋಜನೆ: ಋತುಗಾನ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಸಂಜೆ 4

ಟಿ. ಶ್ರೀನಿವಾಸ ಸ್ಮರಣಾರ್ಥ ಪಿ.ಕೆ. ನಾರಾಯಣ ಸಾಹಿತ್ಯ ದತ್ತಿ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಬಿ.ಆರ್. ಜಯರಾಮರಾಜೇ ಅರಸು, ದತ್ತಿ ಪ್ರಶಸ್ತಿ ಪ್ರದಾನ: ಎಂ.ಎಸ್. ಆಶಾದೇವಿ, ಪ್ರಶಸ್ತಿ ಪುರಸ್ಕೃತರು: ಅಕ್ಕಯ್ ಪದ್ಮಶಾಲಿ, ಡಿ. ಮನೋಹರಚಂದ್ರ ಪ್ರಸಾದ್, ಕೋಡೂರ್ ವೆಂಕಟೇಶ್, ವೀರೇಶ್ ಬೆಳ್ಳೂರು, ಸುರೇಶ ಪಾಟೀಲ, ಉಪಸ್ಥಿತಿ: ರೀಟಾರೀನಿ, ಜೆ.ಎಂ. ರಾಜಶೇಖರ, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು, ಸ್ಥಳ: ಕೃಷ್ಣರಾಜ ಪರಿಷತ್ತಿನ ಮಂದಿರ, ಚಾಮರಾಜಪೇಟೆ, ಸಂಜೆ 4.30

ಸಾಂಸ್ಕೃತಿಕ ವೈಭವ: ಉದ್ಘಾಟನೆ: ಗಂಡಸಿ ಸದಾನಂದಸ್ವಾಮಿ, ಅತಿಥಿಗಳು: ಆರ್. ಚಂದ್ರಶೇಖರ್, ಉಷಾ ರಾವ್, ವಿ.ಎನ್. ಅಶ್ವತ್ಥ್, ಸಂಗೀತ ಅಶ್ವಥ್, ಅಧ್ಯಕ್ಷತೆ: ನಾಗೇಂದ್ರ ಪ್ರಸಾದ್, ಆಯೋಜನೆ: ರಂಗ ಶಿಖರ, ಸ್ಥಳ: ಡಾ.ಸಿ. ಅಶ್ವಥ್ ಕಲಾಭವನ, ನರಸಿಂಹರಾಜ ಕಾಲೊನಿ, ಸಂಜೆ 5

ವಾರ್ಷಿಕೋತ್ಸವ ಸಮಾರಂಭ: ಉದ್ಘಾಟನೆ: ಪದ್ಮಶ್ರೀ, ಅಧ್ಯಕ್ಷತೆ: ಬಿ.ಎಸ್. ಗುಂಡೂರಾವ್, ಅತಿಥಿಗಳು: ಎಲ್.ಎ. ರವಿಸುಬ್ರಮಣ್ಯ, ರಾಮ ವೇಂಕಟೇಶ್, ಆಯೋಜನೆ: ಸ್ವರಾಲಯ ಟ್ರಸ್ಟ್, ಸ್ಥಳ: ಉದಯಭಾನು ಕಲಾಸಂಘ, ಗವಿಪುರ ಬಡಾವಣೆ, ಸಂಜೆ 5.30

ವಿಶ್ವದಾಖಲೆ ನಿರ್ಮಿಸಲು ಐಗಿರಿ **ನಂದಿನಿ ಪ್ರದರ್ಶನ:** ಆಯೋಜನೆ: ಅಂತರರಾಷ್ಟ್ರೀಯ ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು ಮತ್ತು ನೃತ್ಯಗಾರರ ಅಸೋಸಿಯೇಷನ್, ಸ್ಥಳ: ಗಾಯತ್ರಿ ದೇವಿ ದೇವಸ್ಥಾನ, ಯಶವಂತಪುರ, ಸಂಜೆ 6

ಎಸ್.ಜಿ. ಸಿದ್ದರಾಮಯ್ಯ ಅವರ 'ಬಿಜ್ಜಳ ನ್ಯಾಯ' ನಾಟಕ ಪ್ರದರ್ಶನ: ನಿರ್ದೇಶನ: ನವೀನ್ ಮಂಡ್ಯ, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 6.30

ಗಜೇಂದ್ರ ವರ್ಮಾ ಅವರ ಲೈವ್ ಸಂಗೀತ: ಆಯೋಜನೆ ಮತ್ತು ಸ್ಥಳ: ನೆಕ್ಸಸ್ ಶಾಂತಿನಿಕೇತನ ಮಾಲ್, ವೈಟ್‌ಫೀಲ್ಡ್, ಸಂಜೆ 7

'ಸೀತೂ ಮದುವೆ' ನಾಟಕ ಪ್ರದರ್ಶನ: ನಿರ್ದೇಶನ: ಶೈಲೇಶ್ ಕುಮಾರ್ ಎಂ.ಎಂ., ಆಯೋಜನೆ: ಸೈಡ್‌ವಿಂಗ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7.30

ಶನಿವಾರ, ಡಿಸೆಂಬರ್ 17, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 347 | ಪುಟ 24

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

Scan to watch the video
Manipal Hospital Millers Road

ಪ್ರಜಾವಾಣಿ@75 ಕನ್ನಡ ಸಾಹಿತ್ಯದ ಅಮೃತವಾಹಿನಿ 9

'ಖಜಾನೆ ಲೂಟಿಯೇ ಬಿಜೆಪಿಯ ಸಾಧನೆ ಕಾರ್ಡ್' 7

'ಉಗ್ರರಿಗೆ ಬೆಂಬಲ: ಕೈ ಮುಖಂಡರಿಗೆ ಜೈಲೇ ಗತಿ' 7

ಇಂದು ಭೂಮಿಕಾ 4

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,338 ▼	18,269 ▼	₹55,620 (ಬೆಂಗಳೂರು) ▼	₹68,300 (ಬೆಂಗಳೂರು) ▼	82.75 ▲

ಮೇ 7ಕ್ಕೆ ನೀಟ್; ಮೇ 21ರಿಂದ ಸಿಯುಇಟಿ

ನವದೆಹಲಿ (ಪಿಟಿಐ): ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ ದೇಶದಾದ್ಯಂತ ನಡೆಯುವ 'ನೀಟ್- ಯುಜಿ' ಪರೀಕ್ಷೆಯು 2023ರ ಮೇ 7ರಂದು ನಿಗದಿಯಾಗಿದೆ.

ಕೇಂದ್ರೀಯ ವಿಶ್ವವಿದ್ಯಾಲಯಗಳಲ್ಲಿನ ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆ 'ಸಿಯುಇಟಿ-ಯುಜಿ' ಮೇ 21ರಿಂದ 31ರವರೆಗೆ ಜರುಗಲಿದೆ ಎಂದು ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಪ್ರಕಟಿಸಿದೆ.

ಪದವಿ ಕೋರ್ಸ್‌ಗಳ ಪ್ರವೇಶ ಪ್ರಕ್ರಿಯೆ 2023ರ ಜುಲೈ ವೇಳೆಗೆ ಪೂರ್ಣಗೊಳ್ಳಲಿದ್ದು, ಆಗಸ್ಟ್ 1ರಿಂದ ಹೊಸ ಶೈಕ್ಷಣಿಕ ವರ್ಷ ಆರಂಭವಾಗಲಿದೆ. ಸಿಯುಇಟಿ- ಪಿಜಿ ಪರೀಕ್ಷೆಗಳ ದಿನಾಂಕ ಮುಂದಿನ ವಾರ ಪ್ರಕಟವಾಗುವ ಸಾಧ್ಯತೆ ಇದೆ.

ಜೆಇಇ- ಮೇನ್ ಪರೀಕ್ಷೆಯು ಜನವರಿ 24ರಿಂದ 31ರವರೆಗೆ (ಗಣರಾಜ್ಯೋತ್ಸವ ದಿನ ಬಿಟ್ಟು) ನಡೆಯಲಿದೆ ಎಂದು ಎನ್‌ಟಿಎ ಗುರುವಾರವಷ್ಟೆ ಪ್ರಕಟಿಸಿದೆ. ಇದರ ಎರಡನೇ ಅವಧಿಯ ಪರೀಕ್ಷೆಯು ಏಪ್ರಿಲ್‌ನಲ್ಲಿ ಜರುಗಲಿದೆ.

ಆರ್‌ಟಿಒ: ಕಾರ್ಯನಿರ್ವಹಣಾ ವ್ಯವಸ್ಥೆ ಹೆಸರಲ್ಲಿ ನಿಯಮ ಉಲ್ಲಂಘನೆ

ನಿಯೋಜನೆ 'ವ್ಯವಹಾರ' ಶುರು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಸಾರ್ವತ್ರಿಕ ವರ್ಗಾವಣೆಯ ಮಾರ್ಗಸೂಚಿ ಇಲ್ಲದಿದ್ದರೂ, ಕಾರ್ಯನಿರ್ವಹಣಾ ವ್ಯವಸ್ಥೆಯ ಹೆಸರಿನಲ್ಲಿ ಪ್ರಾದೇಶಿಕ ಸಾರಿಗೆ ಅಧಿಕಾರಿ (ಆರ್‌ಟಿಒ) ಕಚೇರಿಗಳ ಸಿಬ್ಬಂದಿಯನ್ನು ಬೇರೆ ಕಡೆಗಳಿಗೆ ನಿಯೋಜಿಸುವ 'ವ್ಯವಹಾರ' ಮತ್ತೆ ಶುರುವಾಗಿದೆ.

ಸರ್ಕಾರದ ವರ್ಗಾವಣೆ ನೀತಿ ಅನ್ವಯ ಯಾವುದೇ ಇಲಾಖೆಯ ಅಧಿಕಾರೇತರ ಸಿಬ್ಬಂದಿ 3 ರಿಂದ 5ವರ್ಷ ಸೇವಾವಧಿ ಪೂರೈಸಿದ್ದರೆ ಮಾತ್ರ ವರ್ಗಾವಣೆ ಮಾಡಲು ಅವಕಾಶ ವಿದೆ. ಸಾರಿಗೆ ಇಲಾಖೆಯು ಕಾರ್ಯನಿರ್ವಹಣಾ ವ್ಯವಸ್ಥೆ ಹೆಸರಲ್ಲಿ ನಿಗದಿತ ಅವಧಿ ಪೂರೈಸದ ಕಚೇರಿ ಅಧೀಕ್ಷಕರು, ಪ್ರಥಮದರ್ಜೆ ಸಹಾಯಕರು, ದ್ವಿತೀಯ ದರ್ಜೆ ಸಹಾಯಕರನ್ನು ಒಂದು ಕಚೇರಿಯಿಂದ ಮತ್ತೊಂದು ಕಚೇರಿಗೆ, ಒಂದು ಜಿಲ್ಲೆಯಿಂದ ಬೇರೊಂದು ಜಿಲ್ಲೆಗೆ ನಿಯೋಜನೆ ಮಾಡುವ ಪರಿಪಾಟವನ್ನು ಮತ್ತೆ ಆರಂಭಿಸಿದೆ.

6ನೇ ಪುಟ ನೋಡಿ

ಪ್ರಜಾವಾಣಿ ವಿಶೇಷ

'4ಜಿ ಹೆಡ್' ಕೊಟ್ಟ ಪಟ್ಟಿಗಷ್ಟೇ ಅನುಮೋದನೆ!

'ಹಣ ನೀಡಿದವರಿಗೆ ನಿಯೋಜನೆ ಹೆಸರಲ್ಲಿ ಆಯಕಟ್ಟಿನ ಜಾಗ ನೀಡಲಾಗುತ್ತಿದೆ. ಹಣ ಕೊಡದವರಿಗೆ ದೂರದ ಪ್ರದೇಶಗಳಿಗೆ ನಿಯೋಜನೆ ಮಾಡಲಾಗಿದೆ. '4ಜಿ' ಹೆಸರಲ್ಲಿ ಇಲಾಖೆಯ ಅಧಿಕಾರಿಯೊಬ್ಬರು ಹಣ ಸಂಗ್ರಹಿಸುತ್ತಿದ್ದಾರೆ' ಎನ್ನುತ್ತಾರೆ ಹೆಸರು ಬಹಿರಂಗಪಡಿಸಲು ಬಯಸದ ನೌಕರರೊಬ್ಬರು.

'ಸಾಕ್ಷ್ಯ ಸಮೇತ ಮೇಲಧಿಕಾರಿಗಳಿಗೆ ದೂರು ನೀಡಿದ್ದೆವು. ಹಾಗಾಗಿ, ನಿಯೋಜನೆ ಸ್ಥಗಿತವಾಗಿತ್ತು. ಈಗ ಮತ್ತೆ ಆರಂಭಿಸಿದ್ದಾರೆ. ಹಿಂದೆ ಪ್ರಧಾನ ಕಾರ್ಯದರ್ಶಿಗೆ ದೂರು ನೀಡಿದ್ದ ಸಿಬ್ಬಂದಿಯನ್ನು ಉತ್ತರ ಕರ್ನಾಟಕ ಜಿಲ್ಲೆಗಳ ಕಚೇರಿಗಳಿಗೆ ಹಾಕಿದ್ದಾರೆ' ಎಂದು ಅವರು ಹೇಳಿದರು.

'ಮೋಟಾರು ವಾಹನ ನಿರೀಕ್ಷಕರು ಸೇರಿದಂತೆ ಮೇಲಿನ ಅಧಿಕಾರಿಗಳು ಸಿಂಡಿಕೇಟ್ ಮಾಡಿಕೊಂಡಿದ್ದು, ವರ್ಗಾವಣೆ ಅವಧಿಯಲ್ಲಿ ಅನುಕೂಲಕರ ಸ್ಥಳಗಳಿಗೆ ತೆರಳುತ್ತಾರೆ. ಈ ಸಿಂಡಿಕೇಟ್‌ಗೆ '4ಜಿ' ಎಂದು, ಅದರ ಮುಖ್ಯಸ್ಥನನ್ನು '4ಜಿ ಹೆಡ್' ಎಂದು ಕರೆಯಲಾಗುತ್ತದೆ. '4ಜಿ' ನೀಡಿದ ಪಟ್ಟಿಗೆ ಸಚಿವರು, ಆಯುಕ್ತರು ಅನುಮೋದನೆ ನೀಡುತ್ತಾರೆ. ಆದರೆ, ಆರ್‌ಟಿಒ ಕಚೇರಿಯ ಇತರೆ ಸಿಬ್ಬಂದಿಯನ್ನು ವರ್ಷ, ಎರಡು ವರ್ಷಕ್ಕೆ ವರ್ಗಾವಣೆ ಮಾಡಲು ಅವಕಾಶ ಇಲ್ಲ. ಹಾಗಾಗಿ, ಹಣದ ವ್ಯವಹಾರಕ್ಕಾಗಿಯೇ ನಿಯೋಜನೆ ಮಾರ್ಗ ಕಂಡುಕೊಂಡಿದ್ದಾರೆ' ಎಂದು ಹೆಸರು ಹೇಳಲು ಇಚ್ಛಿಸದ ಆರ್‌ಟಿಒ ಅಧೀಕ್ಷಕರೊಬ್ಬರು ವಿವರಿಸಿದರು. ಹಣ ನೀಡದ ಸಿಬ್ಬಂದಿಯನ್ನು ಇತರೆ ಆದಾಯವಿಲ್ಲದ ರಸ್ತೆ ಸುರಕ್ಷತಾ ಪ್ರಾಧಿಕಾರ, ಕರ್ನಾಟಕ ಸಾರಿಗೆ ನ್ಯಾಯಾಧೀಕರಣ, ಮೇಲ್ಮನವಿ ಪ್ರಾಧಿಕಾರ, ಆಟೊರಿಕ್ಷಾ ಪರವಾನಗಿ ವಿತರಣಾ ಕೇಂದ್ರಗಳಿಗೆ ನಿಯೋಜಿಸಲಾಗುತ್ತಿದೆ ಎಂದರು.

ಸಚಿವರ ಒಪ್ಪಿಗೆ ಮೇರೆಗೆ ಆದೇಶ: ಸಿದ್ದರಾಮಪ್ಪ

ಮಾರ್ಚ್‌ನಲ್ಲಿ ಸರ್ಕಾರ ನಿಯೋಜನೆ ಸ್ಥಗಿತಕ್ಕೆ ಸೂಚಿಸಿತ್ತು. ಈಗ ಸಚಿವರ ಅನುಮತಿ ಪಡೆದು ಆದೇಶ ಮಾಡಲಾಗಿದೆ ಎಂದು ಇಲಾಖೆ ಆಯುಕ್ತ ಎಸ್.ಎನ್. ಸಿದ್ದರಾಮಪ್ಪ ಹೇಳಿದರು.

ನಿಯೋಜನೆ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಇಲಾಖೆಯಲ್ಲಿ ಶೇ 50ಕ್ಕೂ ಹೆಚ್ಚು ಸಿಬ್ಬಂದಿ ಕೊರತೆ ಇದೆ. ಹಾಗಾಗಿ, ಹುದ್ದೆ ಭರ್ತಿಯಾಗದ ಕೆಲವು ಕಚೇರಿಗಳಲ್ಲಿ ಸಿಬ್ಬಂದಿ ತುರ್ತು ಅಗತ್ಯ ಇರುತ್ತದೆ. ಅಂತಹ ಸ್ಥಳಗಳಿಗೆ ನಿಯೋಜನೆ ಮಾಡುವುದು ಅನಿವಾರ್ಯವಾಗಿದೆ' ಎಂದು ಪ್ರತಿಪಾದಿಸಿದರು.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಶಾಸಕ ಎ.ಎಚ್.ವಿಶ್ವನಾಥ್ ವಿರುದ್ಧ ಸಂಸದ ಶ್ರೀನಿವಾಸ ಪ್ರಸಾದ್ ಆರೋಪ

₹15 ಕೋಟಿಯಲ್ಲಿ 10 ಕೋಟಿ ಜೇಬಿಗಿಳಿಸಿದ

ಪ್ರಜಾವಾಣಿ ವಾರ್ತೆ

ಮೈಸೂರು: 'ಹುಣಸೂರು ಕ್ಷೇತ್ರದ ಉಪ ಚುನಾವಣೆಗೆಂದು ಬಿಜೆಪಿಯವರು ಕೊಟ್ಟಿದ್ದ ₹ 15 ಕೋಟಿಯಲ್ಲಿ ₹ 10 ಕೋಟಿಯನ್ನು ಜೇಬಿಗಿಳಿಸಿಕೊಂಡ ಎ.ಎಚ್. ವಿಶ್ವನಾಥನಿಂದ ನಾನು ಕಲಿಯಬೇಕಿಲ್ಲ. ನನ್ನನ್ನು ಟೀಕಿಸುವ ನೈತಿಕತೆ ಆತನಿಗಿಲ್ಲ' ಎಂದು ಬಿಜೆಪಿಯ ಸಂಸದ ವಿ.ಶ್ರೀನಿವಾಸ ಪ್ರಸಾದ್ ತಿರುಗೇಟು ನೀಡಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿದ ಅವರು, 'ಬಿಜೆಪಿಗೆ ಬರುವಂತೆ ನಾನೇನೂ ಆತನನ್ನು ಕರೆದಿರಲಿಲ್ಲ. ಅವನೇ ನನ್ನ ಮನೆಗೆ ಬಂದಿದ್ದ. ಜೆಡಿಎಸ್‌ನಲ್ಲಿ ಇರುವುದಕ್ಕೆ ಆಗುತ್ತಿಲ್ಲ ಎಂದು ಅಳಲು ತೋಡಿಕೊಂಡಿದ್ದ. ಬಿ.ಎಸ್.ಯಡಿಯೂರಪ್ಪ ಜೊತೆ ಚರ್ಚಿಸುವಂತೆ ತಿಳಿಸಿದ್ದೆ' ಎಂದರು.

'ಜೆಡಿಎಸ್- ಕಾಂಗ್ರೆಸ್ ಶಾಸಕರನ್ನೆಲ್ಲಾ ಮುಂಬೈಗೆ ಕರೆದುಕೊಂಡು ಹೋದವನೇ ಆತ. ಉಪ ಚುನಾವಣೆಯಲ್ಲಿ ಸೋತರೂ ವಿಧಾನಪರಿಷತ್ ಸದಸ್ಯರನ್ನಾಗಿ ಮಾಡಿದ ಪಕ್ಷದ ಬಗ್ಗೆ ಕೃತಜ್ಞತೆ ಇಲ್ಲದೇ ಮಾತನಾಡುತ್ತಿದ್ದಾನೆ. ಕೀಟಲೆ ಮಾಡುವುದೇ ಅವನ ಪ್ರವೃತ್ತಿ. ಬೊಗಳುವ ಹಾಗೂ ಕಚ್ಚುವ ನಾಯಿ' ಎಂದು ವಾಗ್ದಾಳಿ ನಡೆಸಿದರು. 'ನನ್ನನ್ನು ಅಲೆಮಾರಿಗಳ ರಾಜ ಎಂದೆಲ್ಲಾ ಟೀಕಿಸಿದ್ದಾನೆ. ನಾನು ಮುತ್ಸದ್ದಿ. ಸ್ವಾಭಿಮಾನದ ಚಕ್ರವರ್ತಿ. ಆ ಕಾರಣದಿಂದಲೇ ಜನರು ನನ್ನನ್ನು ಗೌರವಿಸುತ್ತಾರೆ. ವಿಶ್ವನಾಥ್ ದೂರಿರುವಂತೆ, ಕುಟುಂಬ ರಾಜಕಾರಣದ ಅಗತ್ಯ ನನಗಿಲ್ಲ' ಎಂದು ಗುಡುಗಿದರು.

'ಮಗನ ರಾಜಕೀಯ ಭವಿಷ್ಯಕ್ಕಾಗಿ ವಿಶ್ವನಾಥ್ ಈಗ ಕಾಂಗ್ರೆಸ್ ಬಾಗಿಲು ತಟ್ಟುತ್ತಿದ್ದಾನೆ' ಎಂದು ಟೀಕಿಸಿದರು.

'ಕಾಂಗ್ರೆಸ್‌ನಲ್ಲಿದ್ದಾಗ, ಸೋತರೆ ಪಾಠ ಮಾಡಿಕೊಂಡಿರುತ್ತೇನೆ ಎಂದು ಹೇಳಿ ಸಿದ್ದರಾಮಯ್ಯ ಬಳಿ ಟಿಕೆಟ್ ಪಡೆದಿದ್ದರು. ಆದರೆ, ಪಾಠ ಮಾಡಲು ಹೋಗಲಿಲ್ಲ; ಕೀಟಲೆ ಮಾಡುತ್ತಿದ್ದಾರೆ. ಸೋತ ನಂತರವೂ ಸಿದ್ದರಾಮಯ್ಯ ಬಳಿ ಹಣಕ್ಕೆ ಬೇಡಿಕೆ ಇಡಲಿಲ್ಲವಾ? ಅಧಿಕಾರ ಕೇಳಲಿಲ್ಲವಾ? ಕಾಂಗ್ರೆಸ್‌ನಲ್ಲಿ ಅವರಿಗೆ ಏನು ಅನ್ಯಾಯವಾಗಿತ್ತು' ಎಂದು ಕೇಳಿದರು.

'ಟಿಕೆಟ್ ಕೊಡಿಸಿ, ಮಂತ್ರಿ ಮಾಡಿದವ ನಾನು. ಅದು ನೆನಪಿಲ್ಲವೇ ವಿಶ್ವನಾಥ್' ಎಂದು ಪ್ರಶ್ನಿಸಿದರು.

'ಆತ, ವೇಷ ಬದಲಿಸಿಕೊಂಡು ಶಿಕಾರಿಗೆ ಹೋಗುತ್ತಿದ್ದಾನೆ. ಆದರೆ, ಎಲ್ಲ ಕಡೆಯಿಂದಲೂ ಗೂಳಿಗಳು ಅಟ್ಟಿಸಿಕೊಂಡು ಬರುತ್ತಿವೆ' ಎಂದು ಕುಟುಕಿದರು.

ಶ್ರೀನಿವಾಸ ಪ್ರಸಾದ್ ಅವರು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಪ್ರತಿಕ್ರಿಯೆಗೆ ವಿಶ್ವನಾಥ್ ಲಭ್ಯರಾಗಲಿಲ್ಲ.

ಮತದಾರರ ಪಟ್ಟಿ ಪರಿಶೀಲನೆ: ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾಹಿತಿ

ವೆಬ್‌ಸೈಟ್‌ನಲ್ಲಿ ಮತಗಟ್ಟೆ ಅಧಿಕಾರಿಗಳ ವಿವರ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿ ಪರಿಷ್ಕರಣೆ ನಡೆಯುತ್ತಿದ್ದು, ಮತಗಟ್ಟೆ ಅಧಿಕಾರಿಗಳನ್ನು ನೇಮಿಸಲಾಗಿದೆ. ಅವರ ವಿವರಗಳನ್ನು ವೆಬ್ ಸೈಟ್‌ನಲ್ಲಿ ಪ್ರಕಟಿಸಲಾಗಿದೆ ಎಂದು ಚುನಾವಣೆ ಜಿಲ್ಲಾಧಿಕಾರಿ ಹಾಗೂ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳಿದರು.

ಮತಗಟ್ಟೆ ಅಧಿಕಾರಿಗಳ ವಿವರ ಲಭ್ಯವಿಲ್ಲ ಎಂದು ರಾಜಕೀಯ ಪಕ್ಷಗಳು ಹೇಳುತ್ತಿದ್ದವು. ಹೀಗಾಗಿ, ಪ್ರತಿಯೊಂದು ಮತಗಟ್ಟೆಗೆ ನೇಮಕವಾಗಿರುವ ಅಧಿಕಾರಿಯ ಮೊಬೈಲ್ ಸೇರಿ ಚಿತ್ರ ಸಹಿತ ವಿವರ ಪ್ರಕಟಿಸಲಾಗಿದೆ. ಕಾಲಕಾಲಕ್ಕೆ ಮತದಾರರ ಪಟ್ಟಿಯ ಬಗ್ಗೆ ಮಾಹಿತಿ ಪಡೆಯಬಹುದು ಎಂದು ಪತ್ರಿಕಾಗೋಷ್ಠಿಯಲ್ಲಿ ಶುಕ್ರವಾರ ತಿಳಿಸಿದರು.

'ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಏಜೆಂಟರೊಂದಿಗೆ ಜಿಲ್ಲಾ ಚುನಾವಣೆ ಅಧಿಕಾರಿಯಾಗಿ ಸಭೆ ನಡೆಸಿದ್ದೇವೆ. ರಾಜಕೀಯ ಪಕ್ಷಗಳು ಇನ್ನೂ ಮತಗಟ್ಟೆ ಏಜೆಂಟ್‌ಗಳನ್ನು ನೇಮಿಸಿಲ್ಲ. ಅವರನ್ನು ಬೇಗ ನೇಮಿಸಿದರೆ ಮತಗಟ್ಟೆ ಅಧಿಕಾರಿಯೊಂದಿಗೆ ನೇರ ಸಂಪರ್ಕ ಸಾಧಿಸಿ, ಆಕ್ಷೇಪಣೆಗಳಿದ್ದರೆ ಸಲ್ಲಿಸಬಹುದು. ಈಗಲೇ ಈ ಕಾರ್ಯವನ್ನು ಮಾಡಿ ಪರಿಶೀಲನೆ ನಡೆಸಿಕೊಳ್ಳಬೇಕು. ನಂತರ ಸುಮ್ಮನೆ ಆರೋಪ ಮಾಡಬಾರದು' ಎಂದರು.

ಶೇ 100ರಷ್ಟು ಪರಿಶೀಲನೆ: 'ರಾಜರಾಜೇಶ್ವರಿ ನಗರ ವಿಧಾನಸಭೆ ಕ್ಷೇತ್ರದಲ್ಲಿ ಮತದಾರರ ಪಟ್ಟಿಯ ಬಗ್ಗೆ ಆಕ್ಷೇಪ ಕೇಳಿ ಬಂದಿತ್ತು. ಕೇಂದ್ರ ಚುನಾವಣೆ ಆಯೋಗದಿಂದ ಯಾವುದೇ ಆದೇಶ ಬಾರದಿದ್ದರೂ ನಾವೇ ಆ ಕ್ಷೇತ್ರದ ಮತದಾರರ ಪಟ್ಟಿಯನ್ನು ಶೇ 100ರಷ್ಟು ಪರಿಶೀಲನೆ ನಡೆಸುತ್ತಿದ್ದೇವೆ. ಯಾವುದೇ ಆಕ್ಷೇಪಣೆಗಳಿದ್ದರೆ ಸಲ್ಲಿಸಿ, ಎಲ್ಲ ಮತದಾರರನ್ನು ಪಟ್ಟಿಗೆ ಸೇರಿಸಬಹುದು' ಎಂದು ತುಷಾರ್ ಗಿರಿನಾಥ್ ಹೇಳಿದರು.

'ಚುನಾವಣೆ ಆಯೋಗದ ಸೂಚನೆಯಂತೆ ಮಹದೇವಪುರ, ಶಿವಾಜಿನಗರ, ಚಿಕ್ಕಪೇಟೆ ವಿಧಾನ ಸಭೆ ಕ್ಷೇತ್ರಗಳಲ್ಲಿ ಶೇ 100ರಷ್ಟು ಮತದಾರರ ಪಟ್ಟಿ ಪರಿಶೀಲನೆ ನಡೆಯುತ್ತಿದೆ. ಡಿ.24ರವರೆಗೆ ಪರಿಶೀಲನೆ ನಡೆಯಲಿದೆ. ಆನಂತರ ಸಂಪೂರ್ಣ ಮಾಹಿತಿ ನೀಡಲಾಗುತ್ತದೆ' ಎಂದರು.

ಚುನಾವಣೆ ತಯಾರಿ ಬೆಂಗಳೂರು ನಗರ ಜಿಲ್ಲೆಯ ಮುಂಬರುವ ವಿಧಾನಸಭಾ ಕ್ಷೇತ್ರಗಳ ಚುನಾವಣೆಗಾಗಿ ಹೈದರಾಬಾದ್‌ನಿಂದ ಮೊದಲ ಕಂತಿನಲ್ಲಿ ತರಿಸಲಾದ 7,465 ಬ್ಯಾಲೆಟ್ ಯುನಿಟ್ ಹಾಗೂ 5,558 ಕಂಟ್ರೋಲ್ ಯುನಿಟ್‌ಗಳನ್ನು ಶುಕ್ರವಾರ ಕಂದಾಯ ಭವನದ ಗೋದಾಮಿನಲ್ಲಿ ಪೊಲೀಸ್ ಬಂದೋಬಸ್ತ್‌ನಲ್ಲಿ ಇರಿಸಲಾಯಿತು.

ಬೆಂಗಳೂರಿನಲ್ಲಿ ಗುರುವಾರ ರಾಜ್ಯ ಸರ್ಕಾರಿ ನೌಕರರ ಸಂಘ ಆಯೋಜಿಸಿದ್ದ ಕ್ರೀಡಾಕೂಟದಲ್ಲಿ ಕ್ರೀಡಾಪಟುಗಳು ಪಥಸಂಚಲನ ನಡೆಸಿದರು– ಪ್ರಜಾವಾಣಿ ಚಿತ್ರ

ಎನ್‌ಪಿಎಸ್ ವಿರುದ್ಧ ನಿರ್ಣಾಯಕ ಹೋರಾಟ: ಷಡಾಕ್ಷರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೊಸ ಪಿಂಚಣಿ ವ್ಯವಸ್ಥೆ (ಎನ್‌ಪಿಎಸ್) ರದ್ದುಗೊಳಿಸಲು ಆಗ್ರಹಿಸಿ ಏಪ್ರಿಲ್‌ನಿಂದ ನಿರ್ಣಾಯಕ ಹೋರಾಟ ರೂಪಿಸಲಾಗುವುದು ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ಜಿಲ್ಲಾಡಳಿತ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಸರ್ಕಾರಿ ನೌಕರರ ಸಂಘದ ಸಹಯೋಗದಲ್ಲಿ ಇತ್ತೀಚೆಗೆ ಆಯೋಜಿಸಿದ್ದ ಬೆಂಗಳೂರು ನಗರ ಜಿಲ್ಲಾಮಟ್ಟದ ಕ್ರೀಡಾ ಕೂಟ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಸರ್ಕಾರಿ ನೌಕರರ ವೇತನ, ಭತ್ಯೆಗಳ ಪರಿಷ್ಕರಣೆಗಾಗಿ ರಚಿಸಲಾಗಿರುವ 7ನೇ ವೇತನ ಆಯೋಗದ ಸವಲತ್ತುಗಳನ್ನು ಗರಿಷ್ಠ ಮಟ್ಟದಲ್ಲಿ ಪಡೆಯಲು ಸಂಘ ಆದ್ಯತೆ ನೀಡಿದೆ. ಬರುವ ಮಾರ್ಚ್ ಅಂತ್ಯದ ಒಳಗೆ ವರದಿ ಅನುಷ್ಠಾನಕ್ಕೆ ಮನವಿ ಮಾಡಲಾಗಿದೆ. ಶೇ 40ರಷ್ಟು ವೇತನ ಹೆಚ್ಚಳವಾಗುವ ನಿರೀಕ್ಷೆ ಇದೆ ಎಂದರು.

ಒತ್ತಡದ ಮಧ್ಯೆ ಕೆಲಸ ನಿರ್ವಹಿಸುವ ನೌಕರರ ಕ್ರೀಡಾ ಕೂಟಗಳು ಸುಗಮವಾಗಿ ನಡೆಯಲು ಅನುಕೂಲವಾಗುವಂತೆ ಅವಕಾಶ ಕಲ್ಪಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಸರ್ಕಾರದ ಅನುದಾನವನ್ನು ₹ 3 ಕೋಟಿಗೆ ಹೆಚ್ಚಿಸಿದ್ದಾರೆ. ಜನವರಿ ತಿಂಗಳಲ್ಲಿ (2023) ತುಮಕೂರಿನಲ್ಲಿ ರಾಜ್ಯಮಟ್ಟದ ಕ್ರೀಡಾಕೂಟ ಆಯೋಜಿಸಲಾಗುವುದು. ಈಗಾಗಲೇ ಪೂರ್ವಸಿದ್ಧತೆಗಳು ಆರಂಭವಾಗಿವೆ. ಜ.17ರಿಂದ ಸಂಕ್ರಾಂತಿ ಸುಗ್ಗಿ ಕಾರ್ಯಕ್ರಮ ನಡೆಯಲಿವೆ ಎಂದು ಮಾಹಿತಿ ನೀಡಿದರು.

ಈ ಸಮಯದಲ್ಲಿ ಸರ್ಕಾರಿ ನೌಕರರಿಗೆ ವಿತರಿಸಲು 40 ಸಾವಿರ ಕ್ಯಾಲೆಂಡರ್ ಬಿಡುಗಡೆ ಮಾಡಲಾಯಿತು. ಸಂಘದ ಕಾರ್ಯದರ್ಶಿ ಡಾ.ನೆಲ್ಕುದ್ರಿ ಸದಾನಂದಪ್ಪ ಕ್ರೀಡಾಪಟುಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು.

ಕ್ರೀಡಾಕೂಟದಲ್ಲಿ 3 ಸಾವಿರಕ್ಕೂ ಹೆಚ್ಚು ನೌಕರರು ಭಾಗವಹಿಸಿದ್ದರು. 100ಕ್ಕೂ ಹೆಚ್ಚು ವಿವಿಧ ಸಾಂಸ್ಕೃತಿಕ ಸ್ಪರ್ಧೆಗಳನ್ನು ಆಯೋಜಿಸಲಾಗಿತ್ತು.

ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕ ಭಾಸ್ಕರ್ ನಾಯಕ್, ಸಂಘದ ಮುಖಂಡರಾದ ಮಲ್ಲಿಕಾರ್ಜುನ ಬಿ. ಬಳ್ಳಾರಿ, ಬಿ.ಎಚ್.ವೆಂಕಟೇಶಯ್ಯ, ಎಂ.ವಿ.ರುದ್ರಪ್ಪ, ಬಸವರಾಜು, ಆರ್.ಶ್ರೀನಿವಾಸ್, ಶಿವಮೊಗ್ಗ ಮೋಹನ್‌ಕುಮಾರ್ ಉಪಸ್ಥಿತರಿದ್ದರು.

ಮಕ್ಕಳಲ್ಲಿ ತಲೆದೋರುವ 'ನಡವಳಿಕೆ ಸಮಸ್ಯೆ'ಗಳನ್ನು ಪೋಷಕರು ಗಂಭೀರವಾಗಿ ಪರಿಗಣಿಸಬೇಕು, ತಕ್ಷಣ ಸ್ಪಂದಿಸಿ ಪರಿಹರಿಸಬೇಕು. ಸ್ವಲ್ಪ ನಿರ್ಲಕ್ಷ್ಯಿಸಿದರೂ ತೀವ್ರ ಪರಿಣಾಮ ಎದುರಿಸಬೇಕಾಗಬಹುದು.

ಮಕ್ಕಳ 'ನಡವಳಿಕೆ' ಗಮನಿಸಲು ಅರಿಕೆ

ಡಾ. ಕೆ.ಬಿ. ರಂಗಸ್ವಾಮಿ

'ಡಾಕ್ಟರ್, ಇವಳಿಗೆ ಆರು ವರ್ಷ. ಇನ್ನೂ ಹಾಸಿಗೇಲಿ ಉಚ್ಚೆ ಮಾಡ್ಕೋತಾಳೆ. ಯಾರಾದರೂ ಮನೇಲಿ ಉಳ್ಕೊಂಡಾಗ ಮುಜುಗರ ಆಗುತ್ತೆ'.

'ಸರ್, ಇವನಿಗೀಗ ನಾಲ್ಕು ವರ್ಷ. ಇನ್ನೂ ಚಡ್ಡೀಲೇ ಕಕ್ಕ ಮಾಡ್ಕೋತಾನೆ'

-ಇವು ಪ್ರತಿಯೊಬ್ಬ ವೈದ್ಯರೂ ತನ್ನ ವೃತ್ತಿ ಬದುಕಿನಲ್ಲಿ ಒಂದಲ್ಲ ಒಂದು ಬಾರಿ ಮಕ್ಕಳ ಪಾಲಕರಿಂದ ಕೇಳುವ ಮಾತುಗಳು. ಇವೆಲ್ಲ ಮಕ್ಕಳ ನಡವಳಿಕೆಯ ಸಮಸ್ಯೆಗಳ ಸ್ಯಾಂಪಲ್‌ಗಳು. ಮಕ್ಕಳಲ್ಲಿ ಇಂಥ ಸಮಸ್ಯೆಗಳು ಸೃಷ್ಟಿಯಾಗಲು ಕಾರಣವೇನು? ಈ ಬಗ್ಗೆ ಒಂದು ಸ್ಥೂಲ ನೋಟ ಹರಿಸೋಣ.

ಅನೊರೆಕ್ಸಿಯಾ ನರ್ವೋಸಾ

ಇದು ಹದಿವಯಸ್ಸಿನ ಹೆಣ್ಣು ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ತಮ್ಮ ವಯಸ್ಸಿಗಿಂತಲೂ ಗಣನೀಯವಾಗಿ ಕಡಿಮೆ ತೂಕವುಳ್ಳವರಾಗಿರುವ ಇಂಥ ಮಕ್ಕಳು ತಾವೆಲ್ಲಿ ದಪ್ಪವಾಗಿಬಿಡುವೆವೋ ಎಂಬ ಅನಗತ್ಯ ಭಯದಿಂದ ಊಟವನ್ನು ತ್ಯಜಿಸಿಬಿಡುತ್ತಾರೆ. ತೂಕ ಕಳೆದುಕೊಳ್ಳಲು ಕೆಲವರು ಅತಿ ವ್ಯಾಯಾಮದಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಇನ್ನೂ ಕೆಲವರು ತಿಂದದ್ದನ್ನೆಲ್ಲಾ ಬಲವಂತವಾಗಿ ವಾಂತಿ ಮಾಡಿಕೊಳ್ಳುತ್ತಾರೆ. ಕೆಲವು ಮಕ್ಕಳು ಭೇದಿ ಔಷಧಗಳನ್ನು ಬಳಸುವುದುಂಟು. ಇಂಥ ಮಕ್ಕಳಲ್ಲಿ ಚಡಪಡಿಕೆ, ಖಿನ್ನತೆ, ಗೀಳು ಮುಂತಾದ ಮಾನಸಿಕ ಕಾಯಿಲೆಗಳು ಸರ್ವೇಸಾಮಾನ್ಯ. ಪೋಷಕಾಂಶಗಳ ಕೊರತೆಯಿಂದ ರಕ್ತದೊತ್ತಡದಲ್ಲಿ ಏರುಪೇರು, ಕಾಲುಗಳಲ್ಲಿ ಊತ ಮುಂತಾದ ಹಲವಾರು ದೈಹಿಕ ಸಮಸ್ಯೆಗಳೂ ಕಾಣಿಸಿಕೊಳ್ಳುತ್ತವೆ. ಮನಶಾಸ್ತ್ರಜ್ಞರು ಮತ್ತು ಮನೋವೈದ್ಯರ ಸಲಹೆ ಪಡೆದು ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ.

ಬುಲಿಮಿಯಾ ನರ್ವೋಸಾ

ಇದೂ ಕೂಡಾ ಹದಿಹರೆಯದ ಹೆಣ್ಣು ಮಕ್ಕಳಲ್ಲಿ ಕಾಣಿಸಿಕೊಳ್ಳುವ ಒಂದು ನಡವಳಿಕೆಯ ಸಮಸ್ಯೆ. ಈ ಸಮಸ್ಯೆಯಿಂದ ಬಳಲುತ್ತಿರುವ ಮಕ್ಕಳು ಒಂದು ನಿಗದಿತ ಅವಧಿಯವರೆಗೆ ಅತಿಯಾಗಿ ಊಟ ಮಾಡುತ್ತಾರೆ. ಇದರಿಂದ ತಮ್ಮ ತೂಕದಲ್ಲಿ ಎಲ್ಲಿ ಹೆಚ್ಚಳವಾಗುವುದೋ ಎಂಬ ಭಯದಿಂದ ತಿಂದದ್ದನ್ನೆಲ್ಲಾ ಬಲವಂತವಾಗಿ ವಾಂತಿ ಮಾಡಿಕೊಳ್ಳುತ್ತಾರೆ. ಕೆಲವರು ಅತಿಯಾದ ವ್ಯಾಯಾಮದಲ್ಲಿ ತಮ್ಮನ್ನು ತೊಡಗಿಸಿಕೊಳ್ಳುತ್ತಾರೆ. ತೂಕ ಇಳಿಸಿಕೊಳ್ಳಲು ಭೇದಿ ಔಷಧ ಮತ್ತು ಎನಿಮಾಗಳ ಮೊರೆ ಹೋಗುವುದೂ ಉಂಟು. ಈ ನಡವಳಿಕೆ ಸಾಮಾನ್ಯವಾಗಿ ಒಂದು ವಾರದಲ್ಲಿ ಎರಡು ಬಾರಿಯಂತೆ ಮೂರು ತಿಂಗಳುಗಳವರೆಗೆ ನಿರಂತರವಾಗಿರುತ್ತದೆ. ಈ ಸಮಸ್ಯೆಯಿಂದ ಬಳಲುವ ಮಕ್ಕಳಲ್ಲಿಯೂ ಹಲವು ದೈಹಿಕ ಮತ್ತು ಮಾನಸಿಕ ಸಮಸ್ಯೆಗಳಿರುತ್ತವೆ.

ಪೈಕಾ

ಇದು ಐದು ವರ್ಷದ ಒಳಗಿನ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುವ ಒಂದು ಸಮಸ್ಯೆ. ಈ ಸಮಸ್ಯೆಯಿಂದ ಬಳಲುವ ಮಕ್ಕಳು ಮಣ್ಣು, ಪೇಂಟ್, ಸೀಮೆ ಸುಣ್ಣ, ಇದ್ದಿಲು, ಪೆನ್ಸಿಲ್ ಮುಂತಾದ ಆಹಾರವಲ್ಲದ ಪದಾರ್ಥಗಳನ್ನು ಸೇವಿಸಲು ಹಾತೊರೆಯುತ್ತಾರೆ. ನಿರ್ಲಕ್ಷಿತರು, ದೌರ್ಜನ್ಯಕ್ಕೊಳಗಾದವರು, ಪ್ರೀತಿ ವಂಚಿತರು, ಮಾನಸಿಕ ಒತ್ತಡಕ್ಕೊಳಗಾದವರು ಮುಂತಾದ ಮಕ್ಕಳಲ್ಲಿ ಈ ಸಮಸ್ಯೆ ಹೆಚ್ಚು. ಇಂಥ ಮಕ್ಕಳು ಕಬ್ಬಿಣಾಂಶ ಕೊರತೆಯ ರಕ್ತಹೀನತೆ, ಜಂತು ಹುಳುಗಳ ಬಾಧೆ, ಸೀಸದ ಅಂಶದ ಹೆಚ್ಚಳ ಮುಂತಾದ ಆರೋಗ್ಯ ಸಮಸ್ಯೆಗಳಿಂದ ಬಳಲುವ ಸಂಭವ ಹೆಚ್ಚು. ಇವುಗಳನ್ನು ಗುರುತಿಸಿ ಸೂಕ್ತ ಚಿಕಿತ್ಸೆ ನೀಡಬೇಕು. ಅಗತ್ಯವೆನಿಸಿದರೆ ಮನೋಚಿಕಿತ್ಸಕರ ಸಲಹೆ ಪಡೆಯಬೇಕು.

ಅತಿ ಕೋಪ

ಈ ಸಮಸ್ಯೆ ಸಾಮಾನ್ಯವಾಗಿ ಮೂರು ವರ್ಷದ ಒಳಗಿನ ಮಕ್ಕಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ ಮತ್ತು ಆರು ವರ್ಷಗಳು ತುಂಬುವಷ್ಟರಲ್ಲಿ ತಹಬದಿಗೆ ಬರುತ್ತದೆ. ಹೆತ್ತವರ ಗಮನ ಸೆಳೆಯಲು ಕೆಲವು ಮಕ್ಕಳು ಅತಿಯಾಗಿ ಕಿರಿಚುವುದು, ಕಚ್ಚುವುದು, ವಸ್ತುಗಳನ್ನು ಎಸೆಯುವುದು, ಒದೆಯುವುದು, ತಳ್ಳುವುದು, ಗೋಡೆಗೆ ಹಣೆ ಚಚ್ಚಿಕೊಳ್ಳುವುದು ಮುಂತಾದ ಕ್ರಿಯೆಗಳಲ್ಲಿ ತೊಡಗಿಕೊಳ್ಳುತ್ತಾರೆ. ಯಾವ ಸಂದರ್ಭಗಳಲ್ಲಿ ಮಗು ಈ ಬಗೆಯ ನಡವಳಿಕೆಯಲ್ಲಿ ತೊಡಗಿಕೊಳ್ಳುತ್ತದೆ ಎಂಬುದನ್ನು ಪಾಲಕರು ಗುರುತಿಸಬೇಕು ಮತ್ತು ಕೋಪ ಪ್ರದರ್ಶನದ ಸಂದರ್ಭದಲ್ಲಿ ಅತಿಯಾಗಿ ಸ್ಪಂದಿಸದೆ ಸಮಾಧಾನಚಿತ್ತರಾಗಿ ವರ್ತಿಸಬೇಕು. ಕೆಲ ಸಮಯದ ನಂತರ ಮಗು ಅತಿ ಕೋಪ ಪ್ರದರ್ಶನವನ್ನು ತಾನೇ ನಿಲ್ಲಿಸುತ್ತದೆ. ಅಂಥ ಸಂದರ್ಭಗಳಲ್ಲಿ ಮಗು ತನ್ನ ದೇಹಕ್ಕೆ ಗಾಯ ಮಾಡಿಕೊಳ್ಳದಂತೆ ನಿಗಾ ವಹಿಸಬೇಕು.

ಉಸಿರುಗಟ್ಟುವಿಕೆ

ಕೆಲವು ಮಕ್ಕಳು ಅತ್ತು ಅತ್ತು ಉಸಿರುಗಟ್ಟಿಬಿಡುತ್ತವೆ. ಆಗ ಕೆಲವು ಮಕ್ಕಳು ಬಿಳಿಚಿಕೊಂಡರೆ ಇನ್ನೂ ಕೆಲವು ಮಕ್ಕಳಲ್ಲಿ ದೇಹ ನೀಲಿಗಟ್ಟಬಹುದು. ಕೆಲವು ಮಕ್ಕಳು ಪ್ರಜ್ಞೆ ತಪ್ಪಿದರೆ ಇನ್ನೂ ಕೆಲವು ಮಕ್ಕಳಲ್ಲಿ ಫಿಟ್ಸ್ ಕಾಣಿಸಿ ಕೊಳ್ಳಬಹುದು. ಎರಡು ವರ್ಷ ವಯಸ್ಸಿನೊಳಗಿನ ಮಕ್ಕಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಈ ಸಮಸ್ಯೆ ದಿನಗಳೆದಂತೆ ಕಡಿಮೆಯಾಗುತ್ತದೆ.

ಹೆತ್ತವರು ಹೆಚ್ಚು ಗಾಬರಿಯಾಗುವ ಅಗತ್ಯವಿಲ್ಲ. ಆ ಸಂದರ್ಭದಲ್ಲಿ ಮಗುವನ್ನು ಒಂದು ಪಕ್ಕಕ್ಕೆ ಹೊರಳಿಸಿ, ಬಾಯಿಯಲ್ಲಿರುವ ಸ್ರವಿಕೆಗಳನ್ನು ಸ್ವಚ್ಛಗೊಳಿಸಬೇಕು. ಈ ಸಮಸ್ಯೆಯಿಂದ ಬಳಲುವ ಮಕ್ಕಳಲ್ಲಿ ಕಬ್ಬಿಣಾಂಶ ಕೊರತೆಯ ರಕ್ತಹೀನತೆ ಇರುವ ಸಾಧ್ಯತೆಯಿರುವುದರಿಂದ ಗುರುತಿಸಿ ಸೂಕ್ತ ಚಿಕಿತ್ಸೆ ನೀಡಬೇಕು.

ಮಲಮೂತ್ರ ವಿಸರ್ಜನೆಯ ಸಮಸ್ಯೆಗಳು

ಎರಡು ವರ್ಷಗಳು ತುಂಬುವಷ್ಟರಲ್ಲಿ ಮಗು ಹಗಲಿನ ವೇಳೆಯ ಮೂತ್ರ ವಿಸರ್ಜನೆಯ ಮೇಲೆ ನಿಯಂತ್ರಣ ಸಾಧಿಸುತ್ತದೆ. ಆರು ವರ್ಷಗಳು ತುಂಬುವವರೆಗೂ ಕೆಲ ಮಕ್ಕಳು ರಾತ್ರಿಯ ವೇಳೆ ಹಾಸಿಗೆ ಒದ್ದೆ ಮಾಡಿಕೊಳ್ಳಬಹುದು.

ಇದು ಆರು ವರ್ಷಗಳ ನಂತರವೂ ಮುಂದುವರಿದರೆ ಚಿಕಿತ್ಸೆಯ ಅಗತ್ಯವಿರುತ್ತದೆ. ಸಂಜೆ ಐದರ ನಂತರ ನೀರು ಮತ್ತಿತರ ದ್ರವ ಪದಾರ್ಥಗಳ ಸೇವನೆಯ ನಿಯಂತ್ರಣ, ಚಹಾ, ಕಾಫಿಯಂಥ ಪಾನೀಯಗಳನ್ನು ವರ್ಜಿಸುವುದು, ಹಾಸಿಗೆಯಡಿಯಲ್ಲಿ ಅಲರಾಂ ಅಳವಡಿಕೆ, ಮಲಗುವ ಮುನ್ನ ಕಡ್ಡಾಯ ಮೂತ್ರ ವಿಸರ್ಜನೆ, ತನ್ನ ಹಾಸಿಗೆಯನ್ನು ತಾನೇ ಸ್ವಚ್ಛಗೊಳಿಸುವಂಥ ಜವಾಬ್ದಾರಿ ನೀಡುವಿಕೆ, ಮೂತ್ರ ವಿಸರ್ಜನೆ ಮಾಡಿಕೊಳ್ಳದಿರುವ (ಒಣ) ರಾತ್ರಿಗಳ ಸಂಖ್ಯೆಯನ್ನು ಡೈರಿಯಲ್ಲಿ ಗುರುತು ಹಾಕಿಕೊಳ್ಳುವುದು ಮತ್ತು ಅದಕ್ಕನುಗುಣವಾಗಿ ಪ್ರೋತ್ಸಾಹದಾಯಕ ಚಿಕ್ಕಪುಟ್ಟ ಗಿಫ್ಟ್ ಗಳನ್ನು ನೀಡುವುದು ಮುಂತಾದ ಸುಲಭೋಪಾಯಗಳಿಂದ ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು.

ಮಕ್ಕಳ ವರ್ತನೆಯಲ್ಲಿ ಇಂಥ ವ್ಯತ್ಯಾಸಗಳು ಕಂಡಾಗ ಪೋಷಕರು ಕೋಪಿಸಿಕೊಳ್ಳುವುದಾಗಲಿ ಮತ್ತು ಮಗುವಿಗೆ ಶಿಕ್ಷೆ ನೀಡುವುದಾಗಲಿ ಮಾಡಬಾರದು. ಇದರಿಂದ ಏನೂ ಪ್ರಯೋಜನವಾಗದು. ಪರೀಕ್ಷೆ, ಹೋಂ ವರ್ಕ್ ಮುಂತಾದ ಆತಂಕ, ಒತ್ತಡ ತರುವ ಸಂದರ್ಭಗಳಲ್ಲಿ ಸಮಸ್ಯೆ ಇನ್ನಷ್ಟು ಬಿಗಡಾಯಿಸಬಹುದು. ಆಗ ಪೋಷಕರು ತಾಳ್ಮೆಗೆಡಬಾರದು.

ಮಲ ವಿಸರ್ಜನೆಯ ಮೇಲಿನ ನಿಯಂತ್ರಣ ಮೂತ್ರ ವಿಸರ್ಜನೆಯ ನಿಯಂತ್ರಣಕ್ಕಿಂತಲೂ ಕೊಂಚ ಮುಂಚಿತವಾಗಿ ಆಗುತ್ತದೆ. ಮಗುವಿಗೆ ಎರಡು ವರ್ಷಗಳು ತುಂಬಿದ ಮೇಲಷ್ಟೆ ಶೌಚಾಲಯ ಬಳಕೆಯನ್ನು ರೂಢಿ ಮಾಡಿಸಬೇಕು. ತುಂಬಾ ಮುಂಚಿತವಾಗಿಯೇ ರೂಢಿ ಮಾಡಿಸಲು ಪ್ರಯತ್ನಿಸಿದರೆ ಮಗು ಸ್ಪಂದಿಸಲಾರದು. ಮಗು ಹೀಗೆ ಬಲವಂತವಾಗಿ ಮಲವನ್ನು ತಡೆಹಿಡಿಯುವುದರಿಂದ ಮಲಬದ್ಧತೆಯ ಸಮಸ್ಯೆ ತಲೆದೋರುತ್ತದೆ.

ಕೆಲವು ಮಕ್ಕಳು ಹಿಕ್ಕೆಯಂತೆ ಸ್ವಲ್ಪ ಸ್ವಲ್ಪವೇ ಮಲವನ್ನು ವಿಸರ್ಜಿಸಿದರೆ, ಕೆಲವು ಮಕ್ಕಳು ಚಡ್ಡಿಯಲ್ಲೇ ಮಲ ವಿಸರ್ಜಿಸುತ್ತಾರೆ. ತಜ್ಞರ ಸಲಹೆ ಪಡೆದು ಸೂಕ್ತ ಚಿಕಿತ್ಸೆ ನೀಡಬೇಕಾಗುತ್ತದೆ.

ಜೊತೆಗೆ ಮಕ್ಕಳ ವಯಸ್ಸಿಗನುಗುಣವಾದ ಶೌಚಾಲಯಗಳನ್ನಷ್ಟೇ ಬಳಸಬೇಕು ಮತ್ತು ಮಗುವಿನ ಖಾಸಗಿತನಕ್ಕೆ ಒತ್ತು ನೀಡಬೇಕು. ಒಟ್ಟಿನಲ್ಲಿ ಆಯಾ ನಡವಳಿಕೆಯ ಸಮಸ್ಯೆಯನ್ನು ಮಕ್ಕಳ ವೈದ್ಯರು, ಮನೋವೈದ್ಯರು ಮತ್ತು ಮನಶಾಸ್ತ್ರಜ್ಞರ ಸಲಹೆ ಸೂಚನೆಗಳನ್ನು ಪಾಲಿಸಿ, ಸೂಕ್ತವಾಗಿ ನಿಭಾಯಿಸಬಹುದು.

(ಲೇಖಕರು: ಪ್ರಾಧ್ಯಾಪಕರು,ಮಕ್ಕಳ ವಿಭಾಗ, ಶ್ರೀ ಸಿದ್ಧಾರ್ಥ ವೈದ್ಯಕೀಯ ಮಹಾವಿದ್ಯಾಲಯ ತುಮಕೂರು)

ಸ್ಪೆಷಲ್ ಫ್ರೂಟ್ಸ್ ಕೇಕ್

ನಳಪಾಕ

ಕ್ರಿಸ್‌ಮಸ್– ಹೊಸ ವರ್ಷಾಚರಣೆ ಸಂಭ್ರಮಕ್ಕೆ ಜೊತೆಯಾಗುವ ತಿನಿಸೆಂದರೆ ಅದು ಕೇಕ್. ಈಗ ತರಹೇವಾರಿ ಕೇಕ್‌ಗಳ ತಯಾರಿಗೆ ಸಿದ್ಧತೆ ನಡೆಯುತ್ತಿರುತ್ತದೆ. ಕೆಲವರಂತೂ ಪ್ರತಿ ವರ್ಷ ಹೊಸ ನಮೂನೆಯ ಕೇಕ್‌ಗಳನ್ನು ತಯಾರಿಸಲು ರೆಸಿಪಿಗಳಿಗಾಗಿ ಹುಡುಕಾಡುತ್ತಾರೆ. ಅಂಥ ಕೇಕ್ ಪ್ರಿಯರಿಗಾಗಿ ವಿವಿಧ ರೀತಿಯ ಫ್ರೂಟ್ ಕೇಕ್‌ಗಳ ರೆಸಿಪಿಗಳನ್ನು ಪರಿಚಯಿಸಿದ್ದಾರೆ

ಕೆ.ವಿ.ರಾಜಲಕ್ಷ್ಮಿ.

ಡ್ರೈಫ್ರೂಟ್ಸ್ ಕೇಕ್

ಬೇಕಾಗುವ ಸಾಮಗ್ರಿ

ಸಣ್ಣ ರವೆ 1ಕಪ್, ಬೆಲ್ಲ 1 ಕಪ್, ಹಾಲು ಅರ್ಧ ಕಪ್, ಮೊಸರು ಕಾಲು ಕಪ್, ಅರ್ಧ ಕಪ್ ಅಡುಗೆ ಎಣ್ಣೆ, ಅಡುಗೆ ಸೋಡಾ ಒಂದು ಚಮಚ, ಸಣ್ಣಗೆ ಕತ್ತರಿಸಿದ ಒಣ ಹಣ್ಣುಗಳು (ದ್ರಾಕ್ಷಿ, ಗೋಡಂಬಿ, ಬಾದಾಮಿ, ಪಿಸ್ತಾ ಇತ್ಯಾದಿ) ಕಾಲು ಕಪ್.

ಮಾಡುವ ವಿಧಾನ

ರವೆ, ಬೆಲ್ಲ, ಹಾಲು, ಮೊಸರು, ಅಡುಗೆ ಎಣ್ಣೆ, ಅಡುಗೆ ಸೋಡ ಎಲ್ಲವನ್ನೂ ಮಿಕ್ಸಿಯಲ್ಲಿ ರುಬ್ಬಿಕೊಂಡು, ಆ ಮಿಶ್ರಣವನ್ನು ಪಾತ್ರೆಗೆ ವರ್ಗಾಯಿಸಿ. ಒಣಹಣ್ಣುಗಳಲ್ಲಿ ಅರ್ಧದಷ್ಟನ್ನು ಈ ಮಿಶ್ರಣಕ್ಕೆ ಸೇರಿಸಿ, ತಟ್ಟೆ ಮುಚ್ಚಿಡಿ. ಒಲೆಯ ಮೇಲೆ ದಪ್ಪ ಕಡಾಯಿ ಇಟ್ಟು ಕೇಕ್ ಸ್ಟಾಂಡ್ ಅಥವಾ ಕುಕಿಂಗ್ ಪಾಟ್ ಸ್ಟಾಂಡ್ ಇಟ್ಟು ಕಡಾಯಿ ಮುಚ್ಚಿ. ಸಣ್ಣ ಉರಿಯಲ್ಲಿ ಪ್ರೀ ಹೀಟ್ ಮಾಡಿ. ನಂತರ ಕೇಕ್ ಪ್ಯಾನ್ ಒಳಗೆ ಎಣ್ಣೆ ಸವರಿ

ಬಟರ್ ಪೇಪರ್ ಇಟ್ಟು ಸ್ವಲ್ಪ ಜಿಡ್ಡು ಕಾಣಿಸಿ. ನಂತರ ಕೇಕ್ ಮಿಶ್ರಣವನ್ನು ಸುರಿದು, ಸಮವಾಗಿ ಹರಡಿಸಿ ಕಡಾಯಿಯಲ್ಲಿಟ್ಟು ಸಣ್ಣ ಉರಿಯಲ್ಲೇ ಬೇಯಲು ಬಿಡಿ. 20 ರಿಂದ 25 ನಿಮಿಷಗಳ ನಂತರ ಉಳಿದ ಒಣ ಹಣ್ಣುಗಳನ್ನು ಕೇಕ್ ಮೇಲೆ ಹರಡಿ. 15 ರಿಂದ 20 ನಿಮಿಷ ಅದೇ ಉರಿಯಲ್ಲಿ ಬೇಯಿಸಿ. ಫ್ರೂಟ್ ಪಿಕ್‌ನಲ್ಲಿ ಕೇಕಿನೊಳಗೆ ಚುಚ್ಚಿ ತೆಗೆದರೆ ಮಿಶ್ರಣ ಅಂಟುವುದಿಲ್ಲ ಎಂದರೆ ಕೇಕ್ ಸಿದ್ಧವಾಗಿದೆ ಎಂದು ಅರ್ಥ. ಸ್ಟವ್ ಆರಿಸಿ. ಕೇಕ್ ಪಾನ್ ಕೆಳಗಿರಿಸಿ. ತಣ್ಣಗಾದ ನಂತರ ಕತ್ತರಿಸಿ ಸವಿಯಬಹುದು.

ಡೇಟ್ಸ್ ಫಡ್ಜ್

ಬೇಕಾಗುವ ಸಾಮಗ್ರಿ: ಗೋಧಿ ಹಿಟ್ಟು ಕಾಲು ಕಪ್, ಚಿರೋಟಿರವೆ ಕಾಲು ಕಪ್, ಬೆಲ್ಲ ಅರ್ಧ ಕಪ್, ಶುಂಠಿ ಪುಡಿ ಅರ್ಧ ಚಮಚ, ಬೀಜರಹಿತ ಮೃದುವಾದ ಖರ್ಜೂರ 8 ರಿಂದ 10, ಚಿಟಿಕಿ ಉಪ್ಪು.

ಮಾಡುವ ವಿಧಾನ: ಗೋಧಿ ಹಿಟ್ಟು ಮತ್ತು ಚಿರೋಟಿರವೆಯನ್ನು ಸ್ವಲ್ಪ ತುಪ್ಪದೊಂದಿಗೆ ಬಿಡಿಬಿಡಿಯಾಗಿ ಹುರಿದುಕೊಳ್ಳಿ. ನಂತರ ಬೆಲ್ಲಕ್ಕೆ ಸ್ವಲ್ಪ ನೀರು ಹಾಕಿ. ಅದು ಕರಗುವಾಗ ಹುರಿದ ಗೋಧಿ ಹಿಟ್ಟು ರವೆ, ಉಪ್ಪು, ಶುಂಠಿ ಪುಡಿಯನ್ನು ಹಾಕಿ ಐದು ನಿಮಿಷ ಮಗುಚಿ. ಲೇಹ್ಯದ ಹದ ಬಂದಾಗ ಮಿಕ್ಸಿಂಗ್ ಬೌಲ್ ಗೆ ಹಾಕಿಕೊಳ್ಳಿ. ಇದಕ್ಕೆ ರುಬ್ಬಿಕೊಂಡ ಖರ್ಜೂರದ ಪೇಸ್ಟ್ ಸೇರಿಸಿ ಚೆನ್ನಾಗಿ ನಾದಿ, ಬೇಕಾದ ಆಕಾರಕ್ಕೆ ಕತ್ತರಿಸಿ. ಈಗ ಟೇಟ್ಸ್ ಫಡ್ಜ್ ರೆಡಿಯಾಯ್ತು.

ಚಾಕೊ ಫ್ರೂಟೀಸ್

ಬೇಕಾಗುವ ಸಾಮಗ್ರಿ

ಹುರಿಗಡಲೆ 1 ಕಪ್, ಮಿಲ್ಕ್ ಪೌಡರ್ ಅರ್ಧ ಕಪ್, ಬೆಲ್ಲ ಒಂದೂವರೆ ಕಪ್,ಗಸಗಸೆ ೧ ಚಮಚ, ಸಣ್ಣಗೆ ಕತ್ತರಿಸಿದ ದ್ರಾಕ್ಷಿ,ಗೋಡಂಬಿ,ಬಾದಾಮಿ,ಪಿಸ್ತಾ,ಖರ್ಜೂರ ಕಾಲು ಕಪ್, ಚಾಕೋಲೇಟ್ ಪೌಡರ್ 1 ಚಮಚ, ತುಪ್ಪ ಕಾಲು ಕಪ್.

ಮಾಡುವ ವಿಧಾನ

ಗಸಗಸೆಯನ್ನು ಜಿಡ್ಡು ಸೋಕಿಸದೆ ಹುರಿದು, ಹುರಿಗಡಲೆ, ಮಿಲ್ಕ್ ಪೌಡರ್ ನೊಂದಿಗೆ ಪುಡಿಮಾಡಿಕೊಳ್ಳಿ.ಹಿಂದೆಯೇ ಒಣ ಹಣ್ಣುಗಳನ್ನು ಮಿಕ್ಸಿಯಲ್ಲಿ ತರಿತರಿಯಾಗಿ ಅರೆದುಕೊಳ್ಳಿ. ಬಾಣಲಿಯಲ್ಲಿ ಸ್ವಲ್ಪ ತುಪ್ಪ ಬಿಸಿಮಾಡಿ ಬೆಲ್ಲವನ್ನು ಕರಗಿ ನೊರೆನೊರೆಯಾಗುವಾಗ, ಚಾಕೊಲೇಟ್ ಪೌಡರ್, ಮತ್ತು ಅರೆದಿಟ್ಟು ಕೊಂಡ ಪುಡಿಗಳನ್ನು ಸೇರಿಸಿ ಚೆನ್ನಾಗಿ ಮಗುಚಿ, ಮಿಶ್ರಣ ಮೃದುವಾಗಿ ಬಾಣಲಿ ಬಿಡುವಾಗ ಒಂದು ತಟ್ಟೆಗೆ ವರ್ಗಾಯಿಸಿ. ಸಣ್ಣ ಸಣ್ಣ ಉಂಡೆಗಳನ್ನಾಗಿ ಮಾಡಿ ಬೇಕಾದ ಆಕಾರಕ್ಕೆ ಮೌಲ್ಡ್ ಗಳಿಗೆ ತುಂಬಿ ತೆಗೆದಿರಿಸಿ.

ವ್ಯಸನಕ್ಕೆ ಸೆಳೆಯುತ್ತಿರುವುದು ಏನು?

ಏನಾದ್ರೂ ಕೇಳ್ಬೋದು

ನಡಹಳ್ಳಿ ವಸಂತ್

● **ನನಗೆ ವಿಪರೀತ ಕುಡಿತದ ಚಟವಿದೆ. ಮನುಷ್ಯನಾಗಿ ಒಳ್ಳೆಯವನೇ ಎಂದುಕೊಳ್ಳುವೆ. ಆದರೆ, ಈ ಚಟ ನನ್ನ ಬಗ್ಗೆ ಕೀಳರಿಮೆ ಮೂಡಿಸಿದೆ. ಜತೆಗೆ ಆಗಾಗ್ಗೆ ಎದುರು ಸಿಕ್ಕ ಹೆಣ್ಣಿನ ದೇಹದ ಅಂಗಾಂಗಗಳನ್ನ ನೋಡುವ ಚಟವಿದೆ. ಇದಕ್ಕೆ ಪರಿಹಾರವೇನು?**

ಹೆಸರು, ಊರು ತಿಳಿಸಿಲ್ಲ

ನಿಮ್ಮ ವಯಸ್ಸು ವೃತ್ತಿ ಮುಂತಾದ ವೈಯುಕ್ತಿಕ ವಿವರಗಳಿದ್ದರೆ ಉತ್ತರಿಸುವುದು ಸುಲಭವಾಗುತ್ತಿತ್ತು. ನಿಮಗೆ ಮದ್ಯಪಾನ ಮಾಡಿದಾಗ ಎಂತಹ ಅನುಭವವಾಗುತ್ತದೆ ಎನ್ನುವುದನ್ನು ಗಮನಿಸಿದ್ದೀರಾ? ಒಂದು ರೀತಿಯ ಸ್ವಾತಂತ್ರ್ಯ ಪಡೆದ ಅಥವಾ ಬಿಡುಗಡೆ ಹೊಂದಿದ ಅನುಭವ? ಯಾವುದೋ ಒತ್ತಡವನ್ನು ಕಳೆದುಕೊಂಡಂತಹ ಅಥವಾ ಮರೆಯಲು ಸಾಧ್ಯವಾದಂತಹ ಅನುಭವ? ನೋವು ಅವಮಾನ ಹಿಂಜರಿಕೆ ಮುಂತಾದವುಗಳನ್ನು ತಾತ್ಕಾಲಿಕವಾಗಿ ಮರೆಯಲು ಸಾಧ್ಯವಾಗುವ ಅನುಭವ? ಹೀಗೆ ಮದ್ಯಪಾನ ನಿಮ್ಮ ಅಂತರಂಗದ ಸಮಾಧಾನಕ್ಕೆ ಕೆಲವು ರೀತಿಯಲ್ಲಿ ಸಹಾಯ ಮಾಡುತ್ತಿದೆ. ಅದೇನೆಂದು ಗುರುತಿಸಿದ ಮೇಲೆ ನಿಮಗೆ ಅಂತಹ ಒತ್ತಡಗಳು, ನೋವು, ಸ್ವಾತಂತ್ರ್ಯದ ಕೊರತೆ ಎಲ್ಲಿಂದ ಬರುತ್ತಿದೆ ಎಂದು ಯೋಚಿಸಿ. ಹೊರಗಿನ ಪರಿಸ್ಥಿತಿಗಳು ಅಥವಾ ವ್ಯಕ್ತಿಗಳಿಂದ ನಿಮಗೆ ಆಗುತ್ತಿರುವ ಒತ್ತಡ ನೋವು ಅವಮಾನಗಳನ್ನು ಮರೆಯಲು ಅವುಗಳಿಂದ ದೂರ ಓಡಲು ನೀವು ಮದ್ಯವನ್ನು ಬಿಡುಗಡೆಯ ಮಾರ್ಗವಾಗಿ ಬಳಸಿರುತ್ತೀರಿ. ನಿಧಾನವಾಗಿ ಅದು ನಶೆಯಾಗಿ ಅಂಟಿಕೊಂಡಿರುತ್ತದೆ. ಈಗ ಅದರಿಂದ ಹೊರಬರಲು ಕಷ್ಟವಾಗುತ್ತಿರುತ್ತದೆ. ಹೊರಗಿನ ಯಾವ ಸಂದರ್ಭ ಅಥವಾ ವ್ಯಕ್ತಿಗಳ ಮೇಲೆ ನಮಗೆ ಹಿಡಿತವೇ ಇಲ್ಲದಿರುವಾಗ ನಮ್ಮೊಳಗಿನ ನೋವು ಒತ್ತಡಗಳನ್ನು ನಾವೇ ನಿಭಾಯಿಸುವುದನ್ನು ಕಲಿಯಬೇಕು. ಇದಕ್ಕೆ ಮನೋಚಕಿತ್ಸಕರ ಸಹಾಯದ ಅಗತ್ಯವಿರುತ್ತದೆ. ನೀವೇ ಹೇಳುವಂತೆ ವ್ಯಕ್ತಿಯಾಗಿ ನೀವು ಕೆಟ್ಟವರು ಖಂಡಿತವಾಗಿ ಅಲ್ಲ. ಆದರೆ ಕುಡಿತದ ವ್ಯಸನ ನಿಮ್ಮನ್ನು ಎಲ್ಲರಿಂದ ಮಾನಸಿಕವಾಗಿ ದೂರತಳ್ಳಿ ನಿಮ್ಮ ಬಗೆಗೆ ನಿಮ್ಮೊಳಗೇ ಕೆಟ್ಟ ಅಭಿಪ್ರಾಯಗಳನ್ನು ಮೂಡಿಸುತ್ತಿದೆ. ಇದನ್ನೇ ನೀವು ಕೀಳರಿಮೆ ಎನ್ನುತ್ತಿದ್ದೀರಿ. ಕುಡಿತದ ವ್ಯಸನದಿಂದ ಬಿಡುಗಡೆ ಹೊಂದಲು ಅಗತ್ಯವಿದ್ದರೆ ಹತ್ತಿರದ ಡೀಅಡಿಕ್ಷನ್ ಕೇಂದ್ರಗಳನ್ನು ಸಂಪರ್ಕಿಸಿ. ಮಹಿಳೆಯರ ದೇಹವನ್ನು ಗಮನಿಸುವುದು ಚಟವಲ್ಲ. ನಿಮಗೆ ಲೈಂಗಿಕ ಆಸಕ್ತಿ ಹೆಚ್ಚಾಗುತ್ತಿರುವುದರ ಸೂಚನೆ ಮಾತ್ರ. ಇದು ಪ್ರಕೃತಿ ಸಹಜ. ಆದರೆ ಸಾರ್ವಜನಿಕವಾಗಿ ಮಹಿಳೆಯರ ಅಂಗಾಂಗಗಳನ್ನು ತದೇಕ ಚಿತ್ತದಿಂದ ನೋಡುವುದು ಅವರಿಗೆ ಮತ್ತು ನಿಮಗೆ ಮುಜುಗರ ಉಂಟುಮಾಡುತ್ತದೆ. ಹಾಗಾಗಿ ನಿಮ್ಮ ಜೀವನವನ್ನು ವ್ಯವಸ್ಥಿತವಾಗಿ ರೂಪಿಸಿಕೊಂಡು ಗೌರವದಿಂದ ಲೈಂಗಿಕ ಸುಖವನ್ನು ಪಡೆದುಕೊಳ್ಳುವ ದಾರಿಗಳನ್ನು ಹುಡುಕಿ. ಹತ್ತಿರದಲ್ಲಿ ಆಪ್ತಸಮಾಲೋಚಕರ ಸಹಾಯ ಸಿಗುತ್ತಿದ್ದರೆ ಪಡೆಯಿರಿ.

● **ನನಗೆ 17 ವರ್ಷ. ಲೈಂಗಿಕತೆಯ ಮೇಲೆ ತುಂಬಾ ಆಸಕ್ತಿ ಹೆಚ್ಚುತ್ತಿದೆ. ಯಾವ ಕೆಲಸದಮೇಲೂ ಆಸಕ್ತಿಯೇ ಬರುವುದಿಲ್ಲ. ನಾನೂ ಚೆನ್ನಾಗಿ ಓದಿ ಒಳ್ಳೆಯ ಉದ್ಯೋಗ ಪಡೆಯಬೇಕೆಂಬ ಆಸೆ ಇದೆ. ಯಾವಾಗಲೂ ಫೋನಿನಲ್ಲಿ ಪೋರ್ನ್ ವಿಡಿಯೋಗಳನ್ನೇ ನೋಡಬೇಕೆಂಬ ಬಯಕೆ ಹೆಚ್ಚುತ್ತಿದೆ. ಇದನ್ನು ನಿಯಂತ್ರಿಸುವ ಕ್ರಮವನ್ನು ತಿಳಿಸುತ್ತೀರಾ?**

ಹೆಸರು, ಊರು ತಿಳಿಸಿಲ್ಲ

ಲೈಂಗಿಕ ಆಸಕ್ತಿ ವಯೋಸಹಜ. ಆದರೆ ಸುಲಭವಾಗಿ ಸಿಗುವ ಪೋರ್ನ್ ವಿಡಿಯೋಗಳನ್ನು ನಿಮ್ಮೊಳಗಿರುವ ಹಿಂಜರಿಕೆ ಕೀಳರಿಮೆ ಆತಂಕ ಮುಂತಾದವುಗಳನ್ನು ಮರೆಯಲು ಬಳಸುತ್ತಿದ್ದೀರಲ್ಲವೇ? ತಕ್ಷಣ ಎಲ್ಲವನ್ನೂ ಮರೆಸುವ ಲೈಂಗಿಕ ಆಕರ್ಷಣೆ ನಶೆಯ ರೀತಿಯಲ್ಲಿ ಅಂಟಿಕೊಳ್ಳುತ್ತದೆ. ಹಾಗಾಗಿ ಮೊದಲು ನಿಮ್ಮ ಆತಂಕ ಕೀಳರಿಮೆ ಮುಂತಾದವುಗಳಿಗೆ ಪರಿಹಾರ ಕಂಡುಕೊಳ್ಳಬೇಕು. ಹತ್ತಿರದಲ್ಲಿ ಮನೋಚಿಕಿತ್ಸಕರ ಸಹಾಯ ಸಿಗಬಹುದೇ ನೋಡಿ. ಇಲ್ಲದಿದ್ದರೆ ನಿಮಗೆ ನಂಬಿಕೆ ಗೌರವವಿರುವ ಒಬ್ಬ ಸ್ನೇಹಿತ ಅಥವಾ ಉಪಾಧ್ಯಾಯರೊಡನೆ ಎಲ್ಲವನ್ನೂ ಹಂಚಿಕೊಳ್ಳಿ. ಪೋರ್ನ್‌ಗಳತ್ತ ಮನಸ್ಸು ತಿರುಗಿದೊಡನೆ ದೀರ್ಘವಾಗಿ ಉಸಿರಾಡುತ್ತಾ ದೇಹವನ್ನು ಸಡಿಲಬಿಟ್ಟು ಇದು ನನ್ನ ಯಾವ ತೊಂದರೆಗೂ ಪರಿಹಾರವಲ್ಲ ಎಂದು ನೆನಪಿಸಿಕೊಳ್ಳಿ. ಆಗಾಗ ನಿಮ್ಮ ಮನಸ್ಸು ದೇಹಗಳತ್ತ ಗಮನ ಹರಿಸಿ ಬೇಸರ ಆತಂಕಗಳು ತುಂಬಿಕೊಳ್ಳುತ್ತಿರುವುದನ್ನು ಗಮನಿಸಿ. ಭವಿಷ್ಯದ ಅನಿಶ್ಚಿತತೆಯನ್ನು ನಿಧಾನವಾಗಿ ನಿಭಾಯಿಸಲು ಚೆನ್ನಾಗಿ ಓದಿ ಒಳ್ಳೆಯ ಉದ್ಯೋಗ ಪಡೆಯಬೇಕು ಎನ್ನುವುದನ್ನು ಸ್ಪಷ್ಟ ಗುರಿಗಳಾಗಿ ಬದಲಾಯಿಸಿ. ನನ್ನ ಆಸಕ್ತಿಗಳೇನು? ಅವುಗಳಿಗೆ ಎಲ್ಲಿ ಅವಕಾಶವಿದೆ? ಅವುಗಳನ್ನು ಹುಡುಕುವುದು ಹೇಗೆ? ಅದಕ್ಕೆ ಯಾರ ಸಹಾಯ ಪಡೆಯಬೇಕು? ಹೀಗೆ ಎಲ್ಲಾ ವಿಚಾರಗಳ ಕುರಿತು ಹೆಚ್ಚು ಸ್ಪಷ್ಟತೆ ಮೂಡಿಸಿಕೊಳ್ಳಿ. ತಕ್ಷಣದ ಬದಲಾವಣೆ ನಿರೀಕ್ಷಿಸದೆ ನಿಧಾನವಾಗಿ ಪ್ರಯತ್ನಿಸುತ್ತಲೇ ಹೋಗಿ.

ಏನಾದ್ರೂ ಕೇಳ್ಬೋದು

ಹದಿಹರೆಯದ ಮತ್ತು ದಾಂಪತ್ಯದ ಲೈಂಗಿಕ ಸಮಸ್ಯೆ, ಮಾನಸಿಕ ಸಮಸ್ಯೆ ಕುರಿತು ಪ್ರಶ್ನೆಗಳನ್ನು ನಮಗೆ ಕಳುಹಿಸಿ. ನಿಮ್ಮ ಪ್ರಶ್ನೆಗಳಿಗೆ ಮನೋಚಿಕಿತ್ಸಕ ನಡಹಳ್ಳಿ ವಸಂತ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomika@prajavani.co.inಗೆ ಕಳುಹಿಸಬಹುದು.

ರ‍್ಯಾಂಪ್ ವಾಕ್‌ನಲ್ಲಿ ಪರಿಸರಸ್ನೇಹಿ ಹೆಜ್ಜೆ

ಫ್ಯಾಷನ್

ರೂಪಾ ಕೆ.ಎಂ.



ವಸ್ತ್ರವಿನ್ಯಾಸಕಿ ವಿನೊ ಸುಪ್ರಜ

ಪುರ್ಸೈ ಕಲೆಕ್ಷನ್ಸ್

ಒಮ್ಮೆ ಧರಿಸಿ ಬಿಟ್ಟರೆ ಅದು ಹಳತು ಎನ್ನುತ್ತೆ ಫ್ಯಾಷನ್ ಉದ್ಯಮ. ಆದರೆ, 'ಧರಿಸಿದ್ದನ್ನೇ ಧರಿಸುವುದಕ್ಕೆ ಯಾವುದೇ ಹಿಂಜರಿಕೆ ಬೇಡ. ಅದಕ್ಕೆ ಹೆಮ್ಮೆಪಡಿ. ಅಗತ್ಯವಿದ್ದರಷ್ಟೆ ಖರೀದಿಸಿ, ಧರಿಸಿ' ಎನ್ನುವ ಫ್ಯಾಷನ್ ಮಂತ್ರದೊಂದಿಗೆ ವಸ್ತ್ರವಿನ್ಯಾಸಕಿ ವಿನೊ ಸುಪ್ರಜ ಗಮನ ಸೆಳೆಯುತ್ತಾರೆ. ಖರೀದಿಯ ಭರಾಟೆಯ ನಡುವೆ 'ಪರಿಸರಸ್ನೇಹಿ ಫ್ಯಾಷನ್' ಎನ್ನುವ ತತ್ವವನ್ನು ಅವರು ಸದ್ದಿಲ್ಲದೇ ಧ್ವನಿಸುತ್ತಿದ್ದಾರೆ. ಚೆನ್ನೈನ ಶಾಂಫೈನಲ್ಲಿರುವ ಫ್ರೆಂಚ್ ಫ್ಯಾಷನ್ ಸ್ಕೂಲ್ ಐಎಫ್‌ಎ ನಲ್ಲಿ ಸ್ನಾತಕೋತ್ತರ ಪದವಿ ಪಡೆದಿರುವ ಅವರು, ಅಂತರರಾಷ್ಟ್ರೀಯ ಮಟ್ಟದಲ್ಲಿ ಮನ್ನಣೆ ಗಳಿಸಿರುವ ವಸ್ತ್ರವಿನ್ಯಾಸಕಿಯೂ ಹೌದು. ಅಂತರರಾಷ್ಟ್ರೀಯ ಮಟ್ಟದ ಝಗಮಗ ಬೆಳಕಿನ ರ‍್ಯಾಂಪ್ ವಾಕ್ ಎಂಬ ಹೆದ್ದಾರಿಯ ನಡುವೆ 'ಪರಿಸರಸ್ನೇಹಿ ಫ್ಯಾಷನ್' ಎಂಬ ಬಳಸು ದಾರಿಯಲ್ಲಿಯೂ ತಮ್ಮದೇ ಹೆಜ್ಜೆ ಮೂಡಿಸಲು ಪ್ರಯತ್ನಿಸುತ್ತಿದ್ದಾರೆ. ಈಚೆಗೆ 'ಸಸ್ಟೈನಬಲ್ ಫ್ಯಾಷನ್' ಎಂಬ ಪುಸ್ತಕವನ್ನು ಹೊರತಂದಿದ್ದಾರೆ. ಈ ಬಗ್ಗೆ 'ಭೂಮಿಕಾ'ಜತೆ ಆಡಿದ ಮಾತುಗಳು ಇಲ್ಲಿದೆ...

● **ಮೊದಲಿಗೆ ಪರಿಸರಸ್ನೇಹಿ ಫ್ಯಾಷನ್ ಅಂದರೆ?**

ಪ್ರತಿಯೊಬ್ಬರು ಪರಿಸರಕ್ಕೆ ಒಂದಲ್ಲ ಒಂದು ರೀತಿಯಲ್ಲಿ ಇಂಗಾಲದ ಡೈ ಆಕ್ಸೈಡ್ ಅನ್ನು ನೀಡುತ್ತಲೇ ಇದ್ದೇವೆ. ಫ್ಯಾಷನ್ ಉದ್ಯಮವೂ ಇದಕ್ಕೆ ಹೊರತಲ್ಲ. ಖರೀದಿಯ ವ್ಯಾಮೋಹ ಎಷ್ಟಿದೆಯೆಂದರೆ ಅಗತ್ಯವಿರಲಿ, ಬಿಡಲಿ ಬಟ್ಟೆಯನ್ನು ಖರೀದಿ ಮಾಡುತ್ತಲೇ ಇದ್ದೇವೆ. ನಮ್ಮ ಉದ್ದೇಶ ಪರಿಸರಕ್ಕೆ ಬಟ್ಟೆಗಳಿಂದಾಗುವ ತ್ಯಾಜ್ಯದ ಹೊರೆಯನ್ನು ಕಡಿಮೆಗೊಳಿಸುವುದು.

ಹಾಗಾಗಿ ಪ್ರತಿ ವಸ್ತ್ರ ವಿನ್ಯಾಸ ಮಾಡಿದ ಮೇಲೆ ಉಳಿಯುವ ಬಟ್ಟೆಯನ್ನು ಬಿಸಾಡದೇ, ಕೈಚೀಲ, ಬ್ಯಾಗ್ ಮುಂತಾದವುಗಳನ್ನು ತಯಾರಿಸುತ್ತೇವೆ. ಸಾವಯವ ಹತ್ತಿ ಹಾಗೂ ಮರುಬಳಕೆ ಮಾಡಬಹುದಾದ ಪಾಲಿಸ್ಟರ್ (RPET)) ಅನ್ನು ಮಾತ್ರ ಬಳಸಿ ವಸ್ತ್ರ ತಯಾರಿಸುತ್ತಾ ಪರಿಸ್ನೇಹಿ ಫ್ಯಾಷನ್ ಉದ್ಯಮವಾಗಿ ರೂಪಿಸಲು ಹೆಜ್ಜೆ ಇಡುತ್ತಿದ್ದೇವೆ.

● **ನಿಮ್ಮ ' ಪುರ್ಸೈ' ಹೊಸ ವಸ್ತ್ರಸಂಗ್ರಹದ ಬಗ್ಗೆ ಹೇಳುವುದಾದರೆ,**

ನಾನು ಮೂಲತಃ ತಮಿಳುನಾಡಿನ ವಂಡವಾಸಿ ಗ್ರಾಮದವಳು. ಪುರ್ಸೈಗೆ ಕೆಲವೇ ಕಿ.ಮೀ ಹತ್ತಿರ ಈ ಗ್ರಾಮವಿದೆ. ಪುರ್ಸೈ ತಮಿಳುನಾಡಿನ ಜನಪ್ರಿಯ ಜನಪದ ಕಲೆ ಥೇರುಕುಟ್ಟುವಿನ ತವರು. ನನ್ನ ಬಾಲ್ಯದ ಮೇಲೆ ಥೇರುಕುಟ್ಟುವಿನ ಪ್ರಭಾವ ದೊಡ್ಡದಿದೆ. ಧರಿಸುವ ವಸ್ತ್ರ ಈ ನೆಲದ ಕಲೆ, ಸಾಹಿತ್ಯ, ಸಂಗೀತವನ್ನು ಪ್ರತಿನಿಧಿಸುವ ಹಾಗೇ ಇರಬೇಕು ಎಂದು ನಂಬಿದವಳು ನಾನು. ಹಾಗಾಗಿ ಬಾಲ್ಯದಲ್ಲಿ ನೋಡಿ ಬೆಳೆದ ಥೇರುಕುಟ್ಟು ಕಲೆಯ ಪಾತ್ರಗಳನ್ನು ಪ್ರಧಾನವಾಗಿರಿಸಿಕೊಂಡು ಈ ವಸ್ತ್ರಗಳನ್ನು ರೂಪಿಸಿದ್ದೇನೆ. ಈ ಸಂಗ್ರಹದಲ್ಲಿ ಮಹಿಳೆಯರ ಡ್ರೆಸ್, ಪ್ಯಾಂಟ್, ಶರ್ಟ್, ಕ್ಯಾಷುವಲ್ ವೇರ್‌ಗಳಿವೆ.

● **ಸಾವಯವ ಬಟ್ಟೆ ವಿನ್ಯಾಸದ ಹಾದಿಯಲ್ಲಿ ಎದುರಾಗಿರುವ ತೊಡಕುಗಳೇನು?**

ನಾವಿಲ್ಲಿ ಕೇವಲ ಬಟ್ಟೆ ಮಾರುತ್ತಿಲ್ಲ. ಬದಲಿಗೆ ಒಂದು ತತ್ವವನ್ನು ಪಾಲಿಸಿರಿ ಎಂದು ಹೇಳುತ್ತಿದ್ದೇವೆ. ಇದು ಅಷ್ಟು ಸುಲಭವಲ್ಲ ಎಂಬುದರ ಅರಿವಿದೆ. ಜನರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಹೆಜ್ಜೆ ಇಟ್ಟದ್ದಿವಿ. ಒಂದು ಪಾಲಿಸ್ಟರ್ ಶರ್ಟ್ ಮಣ್ಣಿನಲ್ಲಿ ಕರಗಲು ಕನಿಷ್ಠ 200 ವರ್ಷಗಳೇ ಬೇಕು. ಇದೊಂದು ಕಲಿಕಾ ಪ್ರಯಾಣ. ಸದ್ಯಕ್ಕೆ ನಾವು ಶೇ 20ರಷ್ಟು ಪ್ರಮಾಣದಲ್ಲಿ ಮಾತ್ರ ಮರುಬಳಕೆ ಮಾಡಬಹುದಾದ ಪಾಲಿಸ್ಟರ್ ಅನ್ನು ಬಳಸುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಪಾಲಿಸ್ಟರ್ ಮುಕ್ತ ವಸ್ತ್ರಗಳನ್ನು ಮಾತ್ರ ಮಾರುಕಟ್ಟೆಗೆ ತರುವ ಯೋಜನೆಯಿದೆ.

● **ಪರಿಸರಸ್ನೇಹಿ ತತ್ವದೆಡೆಗೆ ಸೆಳೆತ ಶುರುವಾಗಿದ್ದು ಹೇಗೆ?**

ವಸ್ತ್ರವಿನ್ಯಾಸಕಿ ಆಗಬೇಕೆಂಬ ತುಡಿತ ಮೊದಲಿನಿಂದಲೂ ಇತ್ತು. ರ‍್ಯಾಂಪ್ ಮೇಲೆ ಹೆಜ್ಜೆ, ರೆಡ್ ಕಾರ್ಪೆಟ್ ಫ್ಯಾಷನ್ ಶೋ ಎಲ್ಲದರ ಬಗ್ಗೆಯೂ ವಿಶೇಷ ಆಕರ್ಷಣೆ ಇತ್ತು. ಫ್ಯಾಷನ್ ಡಿಸೈನಿಂಗ್‌ನಲ್ಲಿ ಸ್ನಾತಕೋತ್ತರ ಪದವಿ ಪಡೆಯುವಾಗ ನನ್ನ ಗುರುಗಳ ಮಾತಿನಿಂದ ಪ್ರೇರೇಪಿತಳಾದೆ. ನಂತರ ಪರಿಸರಸ್ನೇಹಿ ಬಟ್ಟೆಗಳ ತಯಾರಿಕೆಯೇ ನನ್ನ ಆದ್ಯತೆಯಾಗಬೇಕೆಂದು ನಿರ್ಧರಿಸಿದೆ.

● **ಗ್ರಾಹಕರ ಪ್ರತಿಕ್ರಿಯೆ ಹೇಗಿದೆ?**

ಪರವಾಗಿಲ್ಲ. ಜನರಲ್ಲಿ ಈಗೀಗ ಜಾಗೃತಿ ಮೂಡುತ್ತಿದೆ. ಉತ್ತಮ ಗುಣಮಟ್ಟದ ಸೀಮಿತ ಪ್ರಮಾಣದಲ್ಲಿ ಸಾವಯವ ಬಟ್ಟೆಗಳನ್ನು ತಯಾರಿಸುತ್ತಿದ್ದೇವೆ. ನೇಕಾರರಿಗೆ, ಕುಶಲಕರ್ಮಿಗಳಿಗೆ ಉತ್ತಮ ಸಂಭಾವನೆ ನೀಡುತ್ತಿದ್ದೇವೆ. ಹಾಗಾಗಿ ಖರ್ಚು ವೆಚ್ಚ ಎರಡನ್ನೂ ಸರಿದೂಗಿಸುತ್ತಿದ್ದೇವೆ. ಈ ಬಗ್ಗೆ ತೃಪ್ತಿಯೂ ಇದೆ.

ಬಿಜೆಪಿಗೆ ಭದ್ರ ಬುನಾದಿ ಹಾಕಿದ ಜನನಾಯಕ

ಭಾರತವನ್ನು ವಿಶ್ವಗುರುವಾಗಿಸಲು ಪ್ರಧಾನಿ ನರೇಂದ್ರ ಮೋದಿ ಅವರು ಹಗಲಿರುಳು ಶ್ರಮಿಸುತ್ತಿದ್ದಾರೆ. ಅವರ ಬದುಕು ಮತ್ತು ಆಡಳಿತ ವೈಖರಿ ನನಗೆ ಸ್ಫೂರ್ತಿಯಾಗಿದೆ. ಆತ್ಮೀಯರಾದ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಂಘ ಪರಿವಾರದ ಸಹಕಾರದಿಂದ ರಾಜಕೀಯವಾಗಿ ಇಷ್ಟೆಲ್ಲ ಸಾಧನೆ ಮಾಡಲು ಸಾಧ್ಯವಾಗಿದೆ. ವಿವಿಧ ಯೋಜನೆಗಳ ಅಡಿ ಕ್ಷೇತ್ರದಲ್ಲಿ ಅನೇಕ ಅಭಿವೃದ್ಧಿ ಕಾಮಗಾರಿಗಳು ಇಂದು ನಡೆಯುತ್ತಿವೆ. ಎಲ್ಲ ಯೋಜನೆಗಳು ಪೂರ್ಣಗೊಂಡರೆ ಕ್ಷೇತ್ರವನ್ನು ಮಾದರಿಯಾಗಿ ರೂಪಿಸಬೇಕು ಎಂಬ ನನ್ನ ಕನಸು ನನಸಾಗಲಿದೆ. ಅದಕ್ಕಾಗಿ ನನ್ನೆಲ್ಲ ಶಕ್ತಿಯನ್ನು ವಿನಿಯೋಗಿಸುತ್ತಿದ್ದೇನೆ.

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಜಗದೀಶ ಶೆಟ್ಟರ್

ಸರಳ, ಸಜ್ಜನಿಕೆಯ, ಮುತ್ಸದ್ದಿ ರಾಜಕಾರಣಿ ಜಗದೀಶ ಶೆಟ್ಟರ್. ಶಾಸಕರಾಗಿ, ಸಚಿವರಾಗಿ, ವಿರೋಧಪಕ್ಷದ ನಾಯಕರಾಗಿ, ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾಗಿ ಮುಖ್ಯಮಂತ್ರಿಯಾಗಿ ಹಲವು ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿಭಾಯಿಸಿದ್ದು ಅವರ ಹೆಗ್ಗಳಿಕೆ. 1990ರಲ್ಲಿ ಬಿಜೆಪಿ ಹುಬ್ಬಳ್ಳಿ ಗ್ರಾಮಾಂತರ ತಾಲ್ಲೂಕು ಘಟಕದ ಅಧ್ಯಕ್ಷರಾಗಿ ರಾಜಕಾರಣ ಆರಂಭಿಸಿದ ಅವರು, ಆರು ಬಾರಿ ಶಾಸಕರಾಗಿ ಜನಸೇವೆ ಮಾಡಿದ್ದಾರೆ. ಅಲ್ಲದೆ, ಉತ್ತರ ಕರ್ನಾಟಕ ಭಾಗದಲ್ಲಿ ಪಕ್ಷಕ್ಕೆ ಭದ್ರ ಬುನಾದಿ ಹಾಕುವ ಮೂಲಕ ತಾವೂ ಬೆಳೆದು, ಪಕ್ಷದ ಬೆಳವಣಿಗೆಗೂ ಕಾರಣರಾಗಿದ್ದಾರೆ.

ಮುಖ್ಯಮಂತ್ರಿ ಆಗಿ ಮಾಡಿರುವ ಹಲವು ಜನಪರ ಕಾರ್ಯಗಳು ಇಂದಿಗೂ ಜನಮಾನಸದಲ್ಲಿ ಉಳಿದಿವೆ. 23 ಸಾವಿರ ದಿನಗೂಲಿ ನೌಕರರ ಸೇವೆಯನ್ನು ಕಾಯಂಗೊಳಿಸಿರುವುದು, ₹25 ಸಾವಿರದವರೆಗೆ ರೈತರ ಸಾಲ ಮನ್ನಾ, 43 ಹೊಸ ತಾಲ್ಲೂಕುಗಳ ಘೋಷಣೆ ಇವರ ಅವಧಿಯಲ್ಲಿ ಆಗಿರುವ ಮಹತ್ವದ ಕಾರ್ಯಗಳು.

ಮುಖ್ಯಮಂತ್ರಿ ಆಗಿ ಅಧಿಕಾರ ವಹಿಸಿಕೊಂಡ ನಂತರ ಹಲವು ಬಿಕ್ಕಟ್ಟುಗಳು ಎದುರಾದರೂ ತಾಳ್ಮೆಯಿಂದ ಅದನ್ನು ನಿಭಾಯಿಸಿ ಅಧಿಕಾರಾವಧಿ ಪೂರ್ಣಗೊಳಿಸಿ ಪಕ್ಷಕ್ಕೂ ವರ್ಚಸ್ಸು ತಂದುಕೊಟ್ಟಿದ್ದು ಅವರ ಚಾಣಾಕ್ಷತೆಗೆ ಸಾಕ್ಷಿ.

● **ವಿರೋಧ ಪಕ್ಷದದ ನಾಯಕರಾಗಿ ಕಾರ್ಯ:** ವಿಧಾನಸಭೆಯ ವಿರೋಧ ಪಕ್ಷದ ನಾಯಕರಾಗಿ ಎರಡು ಅವಧಿಗೆ ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಿದ್ದು ಅವರ ಹೆಗ್ಗಳಿಕೆ. ಅಲ್ಲದೆ, ಎಂಟೂವರೆ ವರುಷ ಸುದೀರ್ಘ ಅವಧಿಗೆ ಈ ಹೊಣೆ ನಿರ್ವಹಿಸಿದ ದಾಖಲೆಯೂ ಅವರದ್ದು.

ಎಸ್.ಎಂ.ಕೃಷ್ಣ ಅವರು ಮುಖ್ಯ ಮಂತ್ರಿ ಅಗಿದ್ದಾಗ ಮತ್ತು ಸಿದ್ದ ರಾಮಯ್ಯ ಅವರು ಮುಖ್ಯಮಂತ್ರಿ ಆಗಿದ್ದಾಗ ಶೆಟ್ಟರ್ ಅವರು ವಿರೋಧಪಕ್ಷದ ನಾಯಕರಾಗಿ ಕಾರ್ಯನಿರ್ವಹಿಸಿದ್ದಾರೆ.

ಎಸ್.ಎಂ.ಕೃಷ್ಣ ಮುಖ್ಯಮಂತ್ರಿ ಆಗಿದ್ದಾಗ ಸ್ಟಾಂಪ್ ಪೇಪರ್ ಹಗರಣದ ಕುರಿತು ಸದನದಲ್ಲಿ ಗಟ್ಟಿಯಾಗಿ ಧ್ವನಿ ಎತ್ತಿ, ರಾಜ್ಯದಾದ್ಯಂತ ಹೋರಾಟ ನಡೆಸಿದ್ದರಿಂದ ಅಂದಿನ ಸಚಿವ ರೋಶನ್ ಬೇಗ್ ರಾಜೀನಾಮೆ ನೀಡಬೇಕಾಯಿತು. ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದಾಗ ಅರ್ಕಾವತಿ ಹಗರಣವನ್ನು ಬಯಲಿಗೆಳೆದರು. ಡಿವೈಎಸ್‌ಪಿ ಗಣಪತಿ ಅತ್ಮಹತ್ಯೆ ಪ್ರಕರಣದಲ್ಲಿ ಅಂದಿನ ಗೃಹ ಸಚಿವ ಕೆ.ಜೆ.ಜಾರ್ಜ್ ರಾಜೀನಾಮೆ ನೀಡಬೇಕಾಯಿತು.

ಮೊದಲ ಬಾರಿಗೆ ವಿರೋಧಪಕ್ಷದ ನಾಯಕರಾಗಿದ್ದಾಗ 1999–2004 ಅವಧಿಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಬಿಜೆಪಿ ಸಂಘಟನೆಗೆ ಅವಿರತ ಶ್ರಮಿಸಿದ್ದಾರೆ. ಪ್ರತಿ ಜಿಲ್ಲೆ, ತಾಲ್ಲೂಕಿನಲ್ಲಿ ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಪ್ರವಾಸ ಮಾಡಿ ಜನರ ಕಷ್ಟಗಳಿಗೆ ಸ್ಪಂದಿಸಿದರು. ಪ್ರವಾಹದ ಬಂದ ಸಂದರ್ಭದಲ್ಲಿ ಜನರಿಗೆ ನೆರಿನ ಹಸ್ತ ಚಾಚಿದರು.

ಜಿಲ್ಲಾ, ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆ ಸಂದರ್ಭದಲ್ಲಿ ಎಲ್ಲ ಜಿಲ್ಲೆಗಳಲ್ಲಿಯೂ ಪ್ರಚಾರ ಮಾಡಿ, ಪಕ್ಷದ ಅಭ್ಯರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಗೆಲ್ಲುವಂತೆ ಮಾಡಿದ್ದು ಇವರ ಸಂಘಟನಾ ಚತುರತೆಗೆ ಸಾಕ್ಷಿ.

ಸಮಸ್ಯೆ ಆಲಿಸುವ ಜನಮೆಚ್ಚಿದ ನಾಯಕ

ವಿವಿಧ ಸಮಸ್ಯೆಗಳನ್ನು ಹೇಳಿಕೊಂಡು ಪ್ರತಿ ದಿನ ನೂರಾರು ಜನರು, ಪಕ್ಷದ ಕಾರ್ಯಕರ್ತರು ಜಗದೀಶ ಶೆಟ್ಟರ್ ಅವರ ಮನೆಗೆ ಬರುತ್ತಾರೆ. ಎಲ್ಲರನ್ನೂ ಸಮಾಧಾನದಿಂದ ಮಾತನಾಡಿಸಿ, ಅವರ ಸಮಸ್ಯೆಗಳನ್ನು ಆಲಿಸುವುದು ಶೆಟ್ಟರ್ ಅವರ ನಿತ್ಯದ ಕಾಯಕ.

ಕೆಲವರಿಗೆ ಸ್ಥಳದಲ್ಲಿಯೇ ನೆರವು ನೀಡುತ್ತಾರೆ. ಇಲ್ಲದಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ತಕ್ಷಣ ಕರೆ ಮಾಡಿ ಪರಿಹಾರಕ್ಕೆ ಸೂಚಿಸುತ್ತಾರೆ. ಇದರಿಂದಾಗಿ ಶೆಟ್ಟರ್ ಜನಮೆಚ್ಚಿದ ನಾಯಕರಾಗಿದ್ದಾರೆ.

ಅಜಾತ ಶತ್ರು ಶೆಟ್ಟರ್

ಪಕ್ಷ ಹಾಗೂ ಆಡಳಿತದಲ್ಲಿ ಎಲ್ಲ ಸ್ಥಾನಗಳಲ್ಲಿ ಕಾರ್ಯನಿರ್ವಹಿಸಿದ್ದರೂ ಶೆಟ್ಟರ್ ಅವರು ಇಂದಿಗೂ ಅಜಾತ ಶತ್ರು ಎಂದೇ ಹೆಸರಾಗಿದ್ದಾರೆ.

ಯಾರೊಂದಿಗೂ ಅವರು ಎಂದೂ ವಿರೋಧ ಕಟ್ಟಿಕೊಂಡವರಲ್ಲ. ಎಲ್ಲರನ್ನೂ ಪ್ರೀತಿ, ಗೌರವದಿಂದ ಕಾಣುವುದು ಅವರ ಗುಣ.

ಎದುರಾಳಿಗಳನ್ನು ಟೀಕಿಸುವಾಗಲೂ ಸಂಯಮ ಮೀರುವುದಿಲ್ಲ. ಯಾರ ಬಗ್ಗೆಯೂ ವೈಯಕ್ತಿಕವಾಗಿ ಟೀಕೆ ಮಾಡುವುದಿಲ್ಲ. ರಾಜಕೀಯವನ್ನು ಚುನಾವಣೆಗೆ ಸೀಮಿತಗೊಳಿಸಿದ್ದು, ಅಭಿವೃದ್ಧಿ ವಿಷಯ ಬಂದಾಗ ಎಲ್ಲರನ್ನೂ ಸೇರಿಸಿಕೊಂಡು ಕೆಲಸ ಮಾಡುತ್ತಾರೆ. ಎಲ್ಲ ಪಕ್ಷದ ನಾಯಕರೊಂದಿಗೂ ಉತ್ತಮ ಬಾಂಧವ್ಯ ಹೊಂದಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಜೊತೆ ಜಗದೀಶ ಶೆಟ್ಟರ್ ಕುಟುಂಬ

ಬಿ.ಎಸ್‌ಯಡಿಯೂರಪ್ಪ ಅವರ ಜೊತೆ ಜಗದೀಶ ಶೆಟ್ಟರ್

ಬಿಜೆಪಿಯ ತತ್ವ, ಸಿದ್ಧಾಂತವನ್ನು ಒಪ್ಪಿ ಪಕ್ಷಕ್ಕೆ ಬರಲು ಉತ್ಸುಕರಾಗಿದ್ದ ಬೇರೆ ಪಕ್ಷಗಳನ್ನು ಮುಖಂಡರನ್ನು ಪಕ್ಷಕ್ಕೆ ಬರಮಾಡಿಕೊಂಡು ಪಕ್ಷಕ್ಕೆ ಶಕ್ತಿ ತುಂಬುವ ಕೆಲಸ ಮಾಡಿದರು. ರಮೇಶ ಜಿಗಜಿಣಗಿ, ಗೋವಿಂದ ಕಾರಜೋಳ, ಪಿ.ಸಿ.ಗದ್ದಿಗೌಡರ, ಕೆ.ಬಿ.ಶಾಣಪ್ಪ ಸೇರಿದಂತೆ ಇತರ ನಾಯಕರು ಬಿಜೆಪಿ ಸೇರಲು ಕಾರಣ ಶೆಟ್ಟರ್.

‘ದಕ್ಷಿಣ ಕರ್ನಾಟಕ ಭಾಗದಲ್ಲಿ ಬೇರೆ ಪಕ್ಷದ ನಾಯಕರು ಪಕ್ಷಕ್ಕೆ ಬರಲು ಉತ್ಸುಕರಾಗಿದ್ದರೂ ಸಹ ಅವರನ್ನು ಸಂಪರ್ಕಿಸುವ ಕಾರ್ಯ ಆಗುತ್ತಿಲ್ಲ. ಆದರೆ, ದಿವಂಗತ ಅನಂತಕುಮಾರ್ ಅವರು ಪಕ್ಷದ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ಮತ್ತು ಬಿ.ಎಸ್. ಯಡಿಯೂರಪ್ಪ ಅವರು ರಾಜ್ಯ ಘಟಕದ ಅಧ್ಯಕ್ಷರಾಗಿದ್ದಾಗ ನನಗೆ ಸಂಪೂರ್ಣ ಸ್ವಾತಂತ್ರ್ಯ ಕೊಟ್ಟು ಪ್ರೋತ್ಸಾಹ ನೀಡಿದ್ದರಿಂದ ಜನತಾ ಪರಿವಾರದ ಉತ್ತರ ಕರ್ನಾಟಕ ಭಾಗದ ನಾಯಕರನ್ನು ಪಕ್ಷಕ್ಕೆ ಕರೆತರಲು ಸಾಧ್ಯವಾಯಿತು. ಇದರಿಂದ ಈಗ ಪಕ್ಷ ಸದೃಢವಾಗಿ ಬೆಳೆದಿದೆ’ ಎನ್ನುತ್ತಾರೆ ಶೆಟ್ಟರ್.

ಉತ್ತರ ಕರ್ನಾಟಕ ಮಾತ್ರವಲ್ಲದೆ ಕಲ್ಯಾಣ ಕರ್ನಾಟಕ ಭಾಗದಲ್ಲಿಯೂ ಪಕ್ಷ ಸಂಘಟನೆಗೆ ಶ್ರಮ ವಹಿಸಿದ್ದಾರೆ. 2019ರ ಲೋಕಸಭೆ ಚುನಾವಣೆಯಲ್ಲಿ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಪಕ್ಷದ ಅಭ್ಯರ್ಥಿಯನ್ನು ಗೆಲ್ಲಿಸುವ ಹೊಣೆಯನ್ನು ಶೆಟ್ಟರ್ ಅವರ ಹೆಗಲಿಗೆ ನೀಡಲಾಗಿತ್ತು. ಅಭ್ಯರ್ಥಿಯ ಆಯ್ಕೆಯಿಂದ ಹಿಡಿದು ಅವರನ್ನು ಗೆಲ್ಲಿಸಿಕೊಂಡು ಬರುವವರೆಗೆ ಪ್ರಮುಖ ಪಾತ್ರವನ್ನು ಅವರು ವಹಿಸಿದರು. ಹಿಂದಿನ ಲೋಕಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ ವಿ.ಎಸ್.ಉಗ್ರಪ್ಪ ಗೆಲುವು ಸಾಧಿಸಿದ್ದರು. ಅದನ್ನು ಮೀರಿ ಅತಿ ಹೆಚ್ಚು ಅಂತರದಿಂದ ಅಭ್ಯರ್ಥಿಯನ್ನು ಗೆಲ್ಲಿಸಿದ್ದು ಅವರ ಸಾಮರ್ಥ್ಯಕ್ಕೆ ಹಿಡಿದ ಕನ್ನಡಿ.

ಅಥಣಿ, ಕಾಗವಾಡ ಉಪ ಚುನಾವಣೆಯಲ್ಲಿಯೂ ಇವರನ್ನು ಉಸ್ತುವಾರಿಯಾಗಿ ನೇಮಕ ಮಾಡಲಾಗಿತ್ತು. ಎರಡೂ ಉಪಚುನಾವಣೆಯಲ್ಲಿಯೂ ಪಕ್ಷದ ಅಭ್ಯರ್ಥಿಗಳನ್ನು ಗೆಲ್ಲಿಸಿ ಜವಾಬ್ದಾರಿಯನ್ನು ಸಮರ್ಥವಾಗಿ ನಿರ್ವಹಿಸಿದರು.

ಪಕ್ಷದ ಸಂಘಟನೆಯನ್ನು ಸವಾಲಾಗಿ ಸ್ವೀಕರಿಸಿದ ಶೆಟ್ಟರ್ ಅವರು ಉತ್ತರ ಕರ್ನಾಟಕ ಮತ್ತು ಕಲ್ಯಾಣ ಕರ್ನಾಟಕ ಭಾಗದ ಎಲ್ಲ ಜಿಲ್ಲೆಗಳು, ಎಲ್ಲ ತಾಲ್ಲೂಕಿಗಳ ಪ್ರತಿ ಹಳ್ಳಿಗಳಲ್ಲಿಯೂ ಪಕ್ಷಕ್ಕೆ ಗಟ್ಟಿ ನೆಲೆ ಒದಗಿಸಿದ್ದಾರೆ. ಪ್ರತಿ ಕಾರ್ಯಕರ್ತರ ಪರಿಚಯವೂ ಅವರಿಗೆ ಇದೆ.

● **ಬೆಳಗಾವಿ ಉಸ್ತುವಾರಿ ಸಚಿವ:** ಜಗದೀಶ ಶೆಟ್ಟರ್ ಅವರು ಬೆಳಗಾವಿ ಉಸ್ತುವಾರಿ ಸಚಿವರಾಗಿಯೂ ಪಕ್ಷದ ಬಲವರ್ಧನೆಗೆ ಶ್ರಮಿಸಿದ್ದಾರೆ. ಜಿಲ್ಲೆಯಲ್ಲಿ 14 ಸೀಟುಗಳು ಬರಲು ಶೆಟ್ಟರ್ ಅವರ ಶ್ರಮ ಕಾರಣ ಎನ್ನುತ್ತಾರೆ ಪಕ್ಷದ ಮುಖಂಡರು.

● **ಕೈಗಾರಿಕೆಗಳ ಬೆಳವಣಿಗೆಗೆ ಕೊಡುಗೆ:** ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಜಗದೀಶ ಶೆಟ್ಟರ್ ಅವರು ಕೈಗಾರಿಕಾ ಸಚಿವರಾಗಿ ರಾಜ್ಯದಲ್ಲಿ ಕೈಗಾರಿಕೆಗಳ ಬೆಳವಣಿಗೆಗೆ ಮಹತ್ವದ ಕೊಡುಗೆ ನೀಡಿದ್ದಾರೆ.

ಕೈಗಾರಿಕಾ ಸಚಿವರಾಗಿ ಇಲಾಖೆಯಲ್ಲಿ ಹೊಸ ಚೈತನ್ಯ ಮೂಡಿಸಿದರು. ಕೈಗಾರಿಕೆಗಳ ಸ್ಥಾಪನೆಗೆ ಪೂರಕ ವಾತಾವರಣ ನಿರ್ಮಿಸಲು ಮತ್ತು ಸಮೃದ್ಧ ಕರ್ನಾಟಕ ರೂಪಿಸಲು ಹೊಸ ಕೈಗಾರಿಕಾ ನೀತಿಯನ್ನು ಜಾರಿಗೆ ತಂದ ಶ್ರೇಯ ಶೆಟ್ಟರ್ ಅವರಿಗೆ ಸಲ್ಲುತ್ತದೆ.

ಉದ್ಯಮ ಸ್ಥಾಪನೆಗೆ ಉದ್ಯಮಿಗಳು ಇಲಾಖೆಗಳಿಗೆ ಅಲೆದಾಡುವ ಪರಿಸ್ಥಿತಿ ಇತ್ತು. ಅದನ್ನು ತಪ್ಪಿಸಲು ಸಿಂಗಲ್ ವಿಂಡೊ ವ್ಯವಸ್ಥೆ ಜಾರಿಗೆ ತಂದು ನಿಯಮಗಳನ್ನು ಸರಳಗೊಳಿಸಿದರು.

ಬಿಯಾಂಡ್ ಬೆಂಗಳೂರು ಎಂಬ ಪರಿಕಲ್ಪನೆ ಹುಟ್ಟುಹಾಕುವ ಮೂಲಕ ಬೆಂಗಳೂರಿನ ಆಚೆಗೂ ಕೈಗಾರಿಕೆಗಳು ಸ್ಥಾಪನೆಯಾಗಬೇಕು ಮತ್ತು ಆ ಮೂಲಕ ಉದ್ಯೋಗ ಸೃಷ್ಟಿಯಾಗಬೇಕು ಎಂಬ ದೂರದೃಷ್ಟಿಯನ್ನು ಶೆಟ್ಟರ್ ಹೊಂದಿದ್ದರು. ಬಿಯಾಂಡ್ ಬೆಂಗಳೂರು ಯೋಜನೆ ಅಡಿ ಕೈಗಾರಿಕೆಗಳನ್ನು ಸ್ಥಾಪಿಸುವವರಿಗೆ ಪ್ರೋತ್ಸಾಹ, ತೆರಿಗೆ ವಿನಾಯಿತಿ, ಸಹಾಯಧನ ನೀಡಿದ ಪರಿಣಾಮ ಎರಡನೇ ಹಂತದ ನಗರಗಳಲ್ಲಿಯೂ ಇಂದು ಕೈಗಾರಿಕೆಗಳು ಬೆಳವಣಿಗೆಯಾಗಿವೆ.

ಉತ್ತರ ಕರ್ನಾಟಕ ಭಾಗದಲ್ಲಿ ಏಕಸ್, ಯುಫ್ಲೆಕ್ಸ್, ತ್ವರಿತವಾಗಿ ಬಿಕರಿಯಾಗುವ ಗ್ರಾಹಕ ಬಳಕೆ ಉತ್ಪನ್ನಗಳ (ಎಫ್‌ಎಂಸಿಜಿ) ಕ್ಲಸ್ಟರ್ ಸ್ಥಾಪನೆಯಿಂದಾಗಿ ಲಕ್ಷಾಂತರ ಜನರಿಗೆ ಉದ್ಯೋಗ ಸಿಕ್ಕಿದೆ.

ಗೊತ್ತಿರದ ಸಂಗತಿ

1991ರಲ್ಲಿ ಎಲ್.ಕೆ.ಆಡ್ವಾಣಿ ಅವರ ರಥಯಾತ್ರೆಯ ಕಾರ್ಯಕ್ರಮವನ್ನು ಯಶಸ್ವಿಯಾಗಿ ಸಂಘಟಿಸಿದ್ದರು. ಸಂಘಟನೆಯನ್ನು ನೋಡಿದ್ದ ಪಕ್ಷದ ಮುಖಂಡರು, 1991ರಲ್ಲಿ ಎದುರಾದ ಲೋಕಸಭಾ ಚುನಾವಣೆಯಲ್ಲಿ ಯುವ ನಾಯಕರೊಬ್ಬರಿಗೆ ಟಿಕೆಟ್ ನೀಡಬೇಕು ಎಂದು ಶೆಟ್ಟರ್ ಅವರಿಗೆ ಧಾರವಾಡ ಲೋಕಸಭಾ ಕ್ಷೇತ್ರ ಟಿಕೆಟ್ ನೀಡಿದ್ದರು.

ನಾಮಪತ್ರವನ್ನೂ ಸಲ್ಲಿಸಿದ್ದರು. ಆದರೆ, ಜನತಾ ದಳದಿಂದ ಟಿಕೆಟ್ ಸಿಗಲಿಲ್ಲ ಎಂಬ ಕಾರಣಕ್ಕೆ ಕೊನೆ ಗಳಿಗೆಯಲ್ಲಿ ಹಿರಿಯರಾದ ಚಂದ್ರಕಾಂತ ಬೆಲ್ಲದ ಅವರನ್ನು ಪಕ್ಷಕ್ಕೆ ಕರೆ ತರಲಾಯಿತು.

ಟಿಕೆಟ್ ಅನ್ನು ಅವರಿಗೆ ನೀಡುವ ಬಗ್ಗೆ ಕೇಳಿದಾಗ, ‘ನಾನೇನು ಚುನಾವಣೆಗೆ ನಿಲ್ಲಬೇಕು ಎಂದುಕೊಂಡಿರಲಿಲ್ಲ. ಪಕ್ಷ ಸೂಚಿಸಿದ್ದರಿಂದ ನಿಲ್ಲಲು ಮುಂದಾಗಿದ್ದೆ. ಈಗ ಹಿರಿಯರಾದ ಬೆಲ್ಲದ ಅವರಿಗೆ ನೀಡುವುದಾದರೆ ಪಕ್ಷದ ನಿರ್ಧಾರ ಗೌರವಿಸುತ್ತೇನೆ. ಪಕ್ಷದ ತೀರ್ಮಾನಕ್ಕೆ ಬದ್ಧ’ ಎಂದಿದ್ದರು. ಹಾಗಾಗಿ ಅವರಿಗೆ ಬಿಟ್ಟುಕೊಟ್ಟರು.

ರಾಜಕೀಯದಲ್ಲಿರುವವರೆಗೂ ಬಿಜೆಪಿಯಲ್ಲಿಯೇ ಇರಬೇಕು ಎಂದು ಷರತ್ತನ್ನು ಬೆಲ್ಲದವರಿಗೆ ಹಾಕಿದ್ದರು. ಅವರೂ ಕೂಡ ಅದರಂತೆಯೇ ನಡೆದುಕೊಂಡರು ಎಂದು ಶೆಟ್ಟರ್ ಆಗಾಗ ಸ್ಮರಿಸಿಕೊಳ್ಳುತ್ತಿರುತ್ತಾರೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಪ್ರಧಾನಿ ನರೇಂದ್ರ ಮೋದಿ ಅವರೊಂದಿಗೆ ಜಗದೀಶ ಶೆಟ್ಟರ್ ಕುಶಲೋಪರಿ

ಸಿದ್ದರಾಮಯ್ಯ ಸರ್ಕಾರದ ಅವಧಿಯಲ್ಲಿ, ಎಸಿಬಿಯ ದುರ್ಬಳಕೆ ಮಾಡುತ್ತಿದೆ ಎಂದು ಆರೋಪಿಸಿ ವಿಧಾನಸೌಧದಿಂದ ರಾಜಭವನದ ವರೆಗೆ ನಡೆದ ಪಾದಯಾತ್ರೆಯಲ್ಲಿ ಭಾಗವಹಿಸಿದ್ದ ಜಗದೀಶ ಶೆಟ್ಟರ್

‘ಆಧಾರ್ ಜೋಡಿಸದಿದ್ದರೂ ಮತದಾನ’

ನವದೆಹಲಿ (ಪಿಟಿಐ): ಮತದಾರರ ಗುರುತಿನ ಚೀಟಿ ಜೊತೆ ಆಧಾರ್ ಸಂಖ್ಯೆಯನ್ನು ಜೋಡಣೆ ಮಾಡದವರ ಹೆಸರನ್ನು ಮತದಾರರ ಪಟ್ಟಿಯಿಂದ ಕೈಬಿಡುವುದಿಲ್ಲ ಎಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಿದೆ. ಇದು ಸ್ವ-ಇಚ್ಛೆಯಿಂದ ನಡೆಯುವ ಪ್ರಕ್ರಿಯೆ ಎಂದೂ ಹೇಳಿದೆ.

ಮತದಾರರ ಗುರುತಿಗಾಗಿ ಅವರಿಂದ (ಸ್ವ-ಇಚ್ಛೆಯ ನೆಲೆಯಲ್ಲಿ) ಆಧಾರ್ ಸಂಖ್ಯೆ ಪಡೆಯಲು 2021ರ ಚುನಾವಣಾ ಕಾನೂನುಗಳ (ತಿದ್ದುಪಡಿ) ಕಾಯ್ದೆಯು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಅನುಮತಿ ನೀಡಿದೆ ಎಂದು ಕಾನೂನು ಸಚಿವ ಕಿರಣ್ ರಿಜಿಜು ಲೋಕಸಭೆಗೆ ತಿಳಿಸಿದ್ದಾರೆ.

95 ಕೋಟಿ ಮತದಾರರ ಪೈಕಿ 54 ಕೋಟಿಗಿಂತಲೂ ಅಧಿಕ ಮತದಾರರು ತಮ್ಮ ಆಧಾರ್ ಸಂಖ್ಯೆಯನ್ನು ಮತದಾರರ ಗುರುತಿನ ಚೀಟಿಯೊಂದಿಗೆ ಜೋಡಣೆ ಮಾಡಲು ಒಪ್ಪಿದ್ದಾರೆ ಎಂದೂ ಕಿರಣ್ ರಿಜಿಜು ವಿವರಿಸಿದ್ದಾರೆ.

ಹಾವೇರಿಯಲ್ಲಿ ನಡೆಯುವ ಅಕ್ಷರ ಜಾತ್ರೆಗೆ ಆಹ್ವಾನ ನೀಡಿದ ಕನ್ನಡ ಸಾಹಿತ್ಯ ಪರಿಷತ್ತು

ಕನ್ನಡ ರಥದ ಅದ್ದೂರಿ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಹಾವೇರಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನ ಪ್ರಯುಕ್ತ ಜಾಥಾ
- ಇಂದು ರಾಮನಗರ ಜಿಲ್ಲೆಗೆ ತೆರಳಲಿರುವ ರಥ

ಬೆಂಗಳೂರು: ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಹಮ್ಮಿಕೊಂಡಿರುವ ಕನ್ನಡ ರಥದ ಮೆರವಣಿಗೆ ನಗರದಲ್ಲಿ ಅದ್ದೂರಿಯಾಗಿ ನಡೆಯಿತು.

ಕನ್ನಡ ಜ್ಯೋತಿ ಹೊತ್ತ ರಥವನ್ನು ವಿವಿಧ ಜಾನಪದ ಕಲಾ ತಂಡಗಳ ಸಮ್ಮುಖದಲ್ಲಿ ಶುಕ್ರವಾರ ಬರಮಾಡಿಕೊಳ್ಳಲಾಯಿತು. ಕನ್ನಡ ರಥಕ್ಕೆ ಪೂಜೆ ಸಲ್ಲಿಸಿದ ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಅಧ್ಯಕ್ಷ ಮಹೇಶ ಜೋಶಿ, ನಗರದಲ್ಲಿ ಜಾಥಾಕ್ಕೆ ಚಾಲನೆ ನೀಡಿದರು. 2023ರ ಜ.6, 7 ಹಾಗೂ 8ರಂದು ಹಾವೇರಿಯಲ್ಲಿ ಸಾಹಿತ್ಯ ಸಮ್ಮೇಳನ ಹಮ್ಮಿಕೊಳ್ಳಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಆವರಣದಿಂದ ಹೊರಟ ಕನ್ನಡ ರಥದ ಮೆರವಣಿಗೆ, ಪಂಪಮಹಾಕವಿ ರಸ್ತೆಯ ಮೂಲಕ ಚಾಮರಾಜಪೇಟೆ, ಬಸವನಗುಡಿ ಮಾರ್ಗವಾಗಿ ಬನಶಂಕರಿಗೆ ತೆರಳಿತು. ಅಲ್ಲಿ ಬನಶಂಕರಿ ದೇವಸ್ಥಾನದ ಆವರಣದಲ್ಲಿ ಪೂಜೆ ಸ್ವೀಕರಿಸಿ, ಕೋಣನ ಕುಂಟೆ, ಬನ್ನೇರುಘಟ್ಟ, ಜಿಗಣಿ ಮಾರ್ಗವಾಗಿ ಆನೇಕಲ್‌ಗೆ ತೆರಳಿತು. ಬಳಿಕ ಚಂದಾಪುರ ಮಾರ್ಗವಾಗಿ ಮಡಿವಾಳ ಹಾಗೂ ಡೇರಿ ವೃತ್ತ, ಲಾಲ್‌ಬಾಗ್ ಮಾರ್ಗವಾಗಿ ಮತ್ತೆ ಕನ್ನಡ ಸಾಹಿತ್ಯ ಪರಿಷತ್ತಿಗೆ ಮರಳಿತು. ಶನಿವಾರ ಬೆಳಿಗ್ಗೆ ಮೈಸೂರು ರಸ್ತೆಯಿಂದ ತೆರಳಿ, ಗಾಳಿ ಆಂಜನೇಯ ದೇವಸ್ಥಾನದಲ್ಲಿ ಪೂಜೆ ಸ್ವೀಕರಿಸಿ, ಕೆಂಗೇರಿ ಮಾರ್ಗವಾಗಿ ರಾಮನಗರ ಜಿಲ್ಲೆಗೆ ಕನ್ನಡ ರಥ ತೆರಳಲಿದೆ.

‘ಕನ್ನಡ ಜ್ಯೋತಿ ದರ್ಶನ’: ಕನ್ನಡ ರಥಕ್ಕೆ ಪೂಜೆ ಸಲ್ಲಿಸಿದ ಬೇಲಿಮಠದ ಶಿವರುದ್ರ ಸ್ವಾಮೀಜಿ, ‘ಕನ್ನಡ ತಾಯಿ ಭುವನೇಶ್ವರಿಯ ಪೂರ್ಣ ಕೃಪೆ ಸಮಸ್ತ ಕನ್ನಡಿಗರ ಮೇಲಿದೆ. ಈ ಸತ್ವವನ್ನು ಪರಿಷತ್ತು ನಾಡಿನ ಎಲ್ಲ ಮೂಲೆಗಳ ಕನ್ನಡಿಗರಿಗೆ ರಥದಲ್ಲಿ ಕನ್ನಡ ಜ್ಯೋತಿ ದರ್ಶನ ಮಾಡಿಸುವುದರ ಮೂಲಕ ತೋರಿಸಿಕೊಟ್ಟಿದೆ’ ಎಂದು ಹೇಳಿದರು.

ಕನ್ನಡ ರಥವನ್ನು ಕಲಾ ತಂಡಗಳು ಬರಮಾಡಿಕೊಂಡವು

86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ದೊಡ್ಡರಂಗೇಗೌಡ, ‘ಕನ್ನಡ ಸಾಹಿತ್ಯ ಸಮ್ಮೇಳನವು ಕನ್ನಡಿಗರ ಹೆಮ್ಮೆಯ ಪ್ರತೀಕವಾಗಿದೆ. ಎಲ್ಲ ಕನ್ನಡಿಗರು ಹಾವೇರಿಯಲ್ಲಿ ನಡೆಯುವ ಕನ್ನಡದ ಅಕ್ಷರ ಜಾತ್ರೆಯಲ್ಲಿ ಭಾಗವಹಿಸಿ, ಕನ್ನಡಾಭಿಮಾನವನ್ನು ಎತ್ತಿ ತೋರಿಸಬೇಕು’ ಎಂದು ತಿಳಿಸಿದರು.

ಕಸಾಪ ನಿಕಟಪೂರ್ವ ಅಧ್ಯಕ್ಷ ಮನು ಬಳಿಗಾರ, ಇತಿಹಾಸ ತಜ್ಞ ತಲಕಾಡು ಚಿಕ್ಕರಂಗೇಗೌಡ, ಕರ್ನಾಟಕ ನವ ನಿರ್ಮಾಣ ಸೇನೆಯ ಅಧ್ಯಕ್ಷ ಭೀಮಾಶಂಕರ ಪಾಟೀಲ, ಪರಿಷತ್ತಿನ ಗೌರವ ಕಾರ್ಯದರ್ಶಿಗಳಾದ ನೇ.ಭ.ರಾಮಲಿಂಗ ಶೆಟ್ಟಿ, ಕೆ. ಮಹಾಲಿಂಗಯ್ಯ, ಗೌರವ ಕೋಶಾಧ್ಯಕ್ಷ ಬಿ.ಎಂ. ಪಟೇಲ್‌ಪಾಂಡು, ಕನ್ನಡಾಭಿಮಾನಿಗಳು, ಸಾಹಿತಿಗಳು ಹಾಗೂ ಕನ್ನಡ ಪರ ಹೋರಾಟಗಾರರು ಇದ್ದರು.

ಅಮನ ಜೆ. ಕುಮಾರ್ ಅವರ ‘ಲಫ್ಜೋಂನ್ ಕಿ ಮೆಫಿಲ್’ ಹಿಂದಿ ಕವನ ಸಂಕಲನವನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ಶನಿವಾರ ಬಿಡುಗಡೆ ಮಾಡಿದರು.

ಒಂದು ಹುದ್ದೆಗೆ ಇಬ್ಬರ ನೇಮಕ: ಗೊಂದಲ

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರ ಹುದ್ದೆಗೆ ಕಿತ್ತಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ಜಿಲ್ಲೆಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಉಪನಿರ್ದೇಶಕರ ವರ್ಗಾವಣೆ ಗೊಂದಲ ಸೃಷ್ಟಿಸಿದೆ.

ಇಬ್ಬರು ಅಧಿಕಾರಿಗಳ ನಡುವೆ ಈ ಹುದ್ದೆಗೆ ಕಿತ್ತಾಟ ಆರಂಭವಾಗಿದ್ದು, ನ್ಯಾಯಾಲಯದ ಮೊರೆ ಹೋಗಿದ್ದಾರೆ.

ನಗರದ ವಿಶ್ವೇಶ್ವರ ಗೋಪುರದಲ್ಲಿ ಕಚೇರಿ ಹೊಂದಿರುವ ಅಂಗವಿಕಲ ಹಾಗೂ ಹಿರಿಯ ನಾಗರಿಕ ಸಬಲೀಕರಣ ನಿರ್ದೇಶನಾಲಯದ ಉಪನಿರ್ದೇಶಕ ಡಾ.ಎಸ್. ಸಿದ್ದರಾಮಣ್ಣ ಅವರನ್ನು ಬೆಂಗಳೂರು ನಗರ ಜಿಲ್ಲೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕರ ಹುದ್ದೆಗೆ ಡಿ.14ರಂದು ವರ್ಗಾವಣೆ ಮಾಡಲಾಗಿತ್ತು.

ಈ ಹುದ್ದೆಯಲ್ಲಿದ್ದ ಬಿ.ಎಚ್. ನಿಶ್ಚಲ್ ಅವರನ್ನು ಡಾ. ಸಿದ್ದರಾಮಣ್ಣ ಅವರ ಸ್ಥಾನಕ್ಕೆ ವರ್ಗಾವಣೆ ಮಾಡಲಾಗಿತ್ತು. ಆದರೆ, ಬೆಂಗಳೂರು ನಗರ ಜಿಲ್ಲೆಯ ಜಿಲ್ಲಾಧಿಕಾರಿ ಅವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಅವರಿಗೆ ಪತ್ರ ಬರೆದು, ಚುನಾವಣಾ ಕಾರ್ಯದಲ್ಲಿ ತೊಡಗಿರುವ ನಿಶ್ಚಲ್ ಅವರ ವರ್ಗಾವಣೆಗೆ ತಾತ್ಕಾಲಿಕ ತಡೆ ನೀಡುವಂತೆ ಕೋರಿದ್ದಾರೆ.

ಸರ್ಕಾರವೇ ಮಾಡಿರುವ ವರ್ಗಾವಣೆಗೆ ಜಿಲ್ಲಾಧಿಕಾರಿ ಅವರ ಪತ್ರವೂ ಗೊಂದಲ ಸೃಷ್ಟಿಸಿದೆ. ಜತೆಗೆ ಕರ್ತವ್ಯ ನಿರ್ವಹಿಸಲು ಇಬ್ಬರೂ ಬರುತ್ತಿರುವುದರಿಂದ ಕಚೇರಿಯ ವಾತಾವರಣವೂ ಬಿಗಡಾಯಿಸಿದೆ.

ಪತ್ರದಲ್ಲಿ ಏನಿದೆ?: ನಿಶ್ಚಲ್ ಅವರನ್ನು ಬ್ಯಾಟರಾಯನಪುರ ವಿಧಾನಸಭಾ ಕ್ಷೇತ್ರದ ಮತಪಟ್ಟಿ ಪರಿಷ್ಕರಣೆ ಹಾಗೂ ಆಧಾರ್ ಜೋಡಣೆ ಸಂಬಂಧ ಈಗಾಗಲೇ ನೋಡಲ್ ಅಧಿಕಾರಿಯಾಗಿ ನೇಮಿಸಲಾಗಿದೆ. ಈ ಬಗ್ಗೆ ಚುನಾವಣಾ ಆಯೋಗ ನೀಡಿರುವ ನಿರ್ದೇಶನದ ಅನ್ವಯ ವರ್ಗಾವಣೆ ಮಾಡಬಾರದು ಎಂದು ಜಿಲ್ಲಾಧಿಕಾರಿ ಪತ್ರದಲ್ಲಿ ಉಲ್ಲೇಖಿಸಿದ್ದರು.

‘ಮತಪಟ್ಟಿ ಪರಿಷ್ಕರಣೆ ಕಾರ್ಯದಲ್ಲಿ ತೊಡಗಿರುವ ಅಧಿಕಾರಿಗಳನ್ನು ಅಂತಿಮ ಪಟ್ಟಿ ಪ್ರಕಟಿಸಿದ ಬಳಿಕ ಮುಖ್ಯ ಚುನಾವಣಾ ಅಧಿಕಾರಿಗಳ ಜತೆ ಸಮಾಲೋಚನೆ ನಡೆಸಿದ ನಂತರವೇ ವರ್ಗಾವಣೆ ಮಾಡಬೇಕು. ತುರ್ತು ಕಾರಣಗಳಿಗಾಗಿ ವರ್ಗಾವಣೆ ಅಗತ್ಯವಿದ್ದರೆ ಆಯೋಗದ ಅನುಮೋದನೆ ಪಡೆಯಬೇಕು ಎಂದು ಚುನಾವಣಾ ಆಯೋಗ ನಿರ್ದೇಶನ ನೀಡಿದೆ. ಹೀಗಾಗಿ, ಮತಪಟ್ಟಿ ಪರಿಷ್ಕರಣೆ ಸಂಬಂಧ ಕಾರ್ಯನಿರ್ವಹಿಸುತ್ತಿರುವ ಬಿ.ಎಚ್.ನಿಶ್ಚಲ್ ಅವರನ್ನು ಮತಪಟ್ಟಿ ಪರಿಷ್ಕರಣೆ ಕಾರ್ಯ ಮುಗಿದು ಅಂತಿಮ ಪಟ್ಟಿ ಪ್ರಕಟಿಸುವವರೆಗೂ ಈಗಿರುವ ಹುದ್ದೆಯಿಂದ ಬಿಡುಗಡೆ ಮಾಡಲು ಪ್ರಸ್ತುತ ಅವಕಾಶ ಇಲ್ಲ. ಹೀಗಾಗಿ, ವರ್ಗಾವಣೆಯಾಗಿರುವ ಎಸ್. ಸಿದ್ದರಾಮಣ್ಣ ಅವರನ್ನು ಸ್ಥಳ ನಿಯುಕ್ತಿಗಾಗಿ ವಾಪಸ್ ಕಳುಹಿಸಲಾಗಿದೆ’ ಎಂದು ವಿವರಿಸಿದ್ದರು.

ಈ ಸಂಬಂಧ ಜಿಲ್ಲಾಧಿಕಾರಿ ಸಂಗಪ್ಪ ಅವರನ್ನು ಸಂಪರ್ಕಿಸಿ ಪ್ರತಿಕ್ರಿಯೆ ಪಡೆಯಲು ಪ್ರಯತ್ನಿಸಲಾಯಿತಾದರೂ ಅವರು ಕರೆ ಸ್ವೀಕರಿಸಲಿಲ್ಲ. ಈಗ ನಿಶ್ಚಲ್ ಅವರು ಕರ್ನಾಟಕ ಆಡಳಿತಾತ್ಮಕ ನ್ಯಾಯ ಮಂಡಳಿಯಲ್ಲಿ (ಕೆಎಟಿ) ವರ್ಗಾವಣೆಗೆ ತಡೆ ಕೋರಿ ಅರ್ಜಿ ಸಲ್ಲಿಸಿದ್ದಾರೆ. ಜತೆಗೆ, ಸಿದ್ದರಾಮಣ್ಣ ಅವರು ಕೆವಿಯಟ್ ಸಲ್ಲಿಸಿದ್ದಾರೆ. ಈ ಪ್ರಕರಣದ ವಿಚಾರಣೆಯನ್ನು ಕೆಎಟಿ ಡಿ.19ಕ್ಕೆ ಮುಂದೂಡಿದೆ.

‘ಅಭಿವೃದ್ಧಿ ವೇಗ ಹೆಚ್ಚಿಸುವ ಆವಿಷ್ಕಾರ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಆವಿಷ್ಕಾರಗಳಿಗೆ ಆದ್ಯತೆ ನೀಡುವ ಮೂಲಕ ದೇಶದ ಅಭಿವೃದ್ಧಿಯ ವೇಗ ಹೆಚ್ಚಿಸಬಹುದು’ ಎಂದು ರಾಜ್ಯಸಭೆಯ ಮಾಜಿ ಸದಸ್ಯ ಡಾ.ಸುಬ್ರಹ್ಮಣಿಯನ್ ಸ್ವಾಮಿ ಅಭಿಪ್ರಾಯಪಟ್ಟರು.

ರೇವಾ ವಿಶ್ವವಿದ್ಯಾಲಯದಲ್ಲಿ ‘ಆರ್‌ಬಿಎಸ್ ವಿಶೇಷ ಉಪನ್ಯಾಸ ಸರಣಿ’ ಅಂಗವಾಗಿ ಶುಕ್ರವಾರ ಆಯೋಜಿಸಿದ್ದ ಉಪನ್ಯಾಸ ಕಾರ್ಯಕ್ರಮದಲ್ಲಿ ‘ಭವಿಷ್ಯದಲ್ಲಿನ ಉತ್ತಮ ಅವಕಾಶಗಳಿಗಾಗಿ ನಾಯಕರ ಅಗತ್ಯ’ ಕುರಿತು ಮಾತನಾಡಿದ ಅವರು, ‘ಭವಿಷ್ಯದಲ್ಲಿ ನಾಯಕರಾಗುವ ಬಯಕೆ ಇರುವ ವ್ಯಕ್ತಿಗಳು ಆವಿಷ್ಕಾರಗಳತ್ತ ಗಮನಹರಿಸಬೇಕು’ ಎಂದು ಸಲಹೆ ನೀಡಿದರು.

ರೇವಾ ವಿಶ್ವವಿದ್ಯಾಲಯದಲ್ಲಿ ಶುಕ್ರವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಡಾ.ಸುಬ್ರಹ್ಮಣಿಯನ್ ಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಕುಲಾಧಿಪತಿ ಡಾ.ಪಿ.ಶ್ಯಾಮರಾಜು, ಕುಲಪತಿ ಡಾ.ಎಂ. ಧನಂಜಯ, ಸಹ ಕುಲಪತಿ ಡಾ.ಆರ್‌ ಸಿ.ಬಿರಾದಾರ್, ಡೀನ್ ಡಾ.ಎ.ಶುಭಾ ಇದ್ದರು.

‘ವಿಶ್ವದಲ್ಲಿ ಎರಡು ರೀತಿಯ ಜನರಿದ್ದಾರೆ. ಆವಿಷ್ಕಾರಗಳನ್ನು ಕೈಗೊಳ್ಳುವ ಗುಂಪು ಒಂದೆಡೆ ಇದ್ದರೆ, ಇವರಿಗೆ ನೆರವಾಗುವ ಇನ್ನೊಂದು ಗುಂಪು ಇದೆ. ಭವಿಷ್ಯದಲ್ಲಿ ನಾಯಕರಾಗುವವರು ಹೊಸತನ ಮತ್ತು ಹೊಸ ಕಲ್ಪನೆಗಳ ಬಗ್ಗೆ ಚಿಂತನೆ ನಡೆಸಬೇಕು’ ಎಂದು ಸಲಹೆ ನೀಡಿದರು.

‘ವಿಶ್ವವಿದ್ಯಾಲಯಗಳು ವಿದ್ಯಾರ್ಥಿಗಳಲ್ಲಿ ಕುತೂಹಲ ಮೂಡಿಸುವ ಕಾರ್ಯಕ್ರಮಗಳನ್ನು ಆಯೋಜಿಸಬೇಕು. ನಾವೀನ್ಯದ ಮೂಲಕ ಭಾರತ ಅಭಿವೃದ್ಧಿ ಹೊಂದಲು ಸಾಧ್ಯವಿದೆ’ ಎಂದು ಅಭಿಪ್ರಾಯಪಟ್ಟರು.

ರೇವಾ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ.ಪಿ.ಶ್ಯಾಮರಾಜು ಮಾತನಾಡಿ, ‘ವಿದ್ಯಾರ್ಥಿಗಳು ನಾಯಕತ್ವದ ವ್ಯಕ್ತಿತ್ವ ಬೆಳೆಸಿಕೊಳ್ಳಬೇಕು. ಈ ಮೂಲಕ ದೇಶಕ್ಕೆ ಕೊಡುಗೆ ನೀಡಬೇಕು’ ಎಂದು ಸಲಹೆ ನೀಡಿದರು.

ಕುಲಪತಿ ಡಾ.ಎಂ. ಧನಂಜಯ, ಸಹ ಕುಲಪತಿ ಡಾ.ಆರ್‌.ಸಿ. ಬಿರಾದಾರ್, ಡೀನ್ ಡಾ.ಎ. ಶುಭಾ ಇದ್ದರು.

ಆರೋಗ್ಯ ಶೃಂಗ ಇಂದಿನಿಂದ

ಬೆಂಗಳೂರು: ಖಾಸಗಿ ಆಸ್ಪತ್ರೆ ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಇದೇ ಶನಿವಾರ ಹಾಗೂ ಭಾನುವಾರ ಮೂರನೇ ರಾಷ್ಟ್ರೀಯ ಆರೋಗ್ಯ ಶೃಂಗಸಭೆ ಹಮ್ಮಿಕೊಂಡಿದೆ.

ರಾಜಾಜಿನಗರದ ಶೆರಟಾನ್ ಗ್ರ್ಯಾಂಡ್ ಗೇಟ್‌ವೇ ಹೋಟೆಲ್‌ನಲ್ಲಿ ಆರೋಗ್ಯ ಶೃಂಗಸಭೆ ನಡೆಯಲಿದೆ.

‘ಕೋವಿಡ್ ಪಿಡುಗು ವೈದ್ಯಕೀಯ ಕ್ಷೇತ್ರಕ್ಕೆ ಸವಾಲುಗಳ ಸರಮಾಲೆಯನ್ನೇ ತಂದೊಡ್ಡಿತು. ಇದರ ಪರಿಣಾಮ ಸಾರ್ವತ್ರಿಕ ಆರೋಗ್ಯ ಕ್ಷೇತ್ರ ಸಾಕಷ್ಟು ಬದಲಾವಣೆಗಳಿಗೆ ತನ್ನನ್ನು ತೆರೆದುಕೊಂಡಿದೆ. ಕೈಗೆಟಕುವ ದರಗಳಲ್ಲಿ ಗುಣಮಟ್ಟದ ವೈದ್ಯಕೀಯ ಸೇವೆಗಳನ್ನು ಒದಗಿಸುವುದು ನಮ್ಮ ಸಂಘಟನೆಯ ಆದ್ಯತೆಯಾಗಿದೆ. ಶೃಂಗಸಭೆಯಲ್ಲಿ ಈ ಸಂಬಂಧ ವೈದ್ಯಕೀಯ ಕ್ಷೇತ್ರದ ದಿಗ್ಗಜರೊಂದಿಗೆ ಚರ್ಚೆ-ಸಮಾಲೋಚನೆಗಳನ್ನು ಹಮ್ಮಿಕೊಳ್ಳಲಾಗಿದೆ’ ಎಂದು ಫನಾ ಅಧ್ಯಕ್ಷ ಡಾ.ಪ್ರಸನ್ನ ಎಚ್‌.ಎಂ. ತಿಳಿಸಿದ್ದಾರೆ.

ಆದಿ ಬಣಜಿಗರಿಗೆ 2ಎ ಮೀಸಲಾತಿ ನೀಡಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಿ ಬಣಜಿಗ ಸಮಾಜವನ್ನು ಹಿಂದುಳಿದ ವರ್ಗಗಳ ಪ್ರವರ್ಗ -2ಎಗೆ ಸೇರಿಸಬೇಕು ಎಂದು ಅಖಿಲ ಕರ್ನಾಟಕ ವೀರಶೈವ ಆದಿ ಬಣಜಿಗರ ಸಂಘ ಒತ್ತಾಯಿಸಿದೆ.

‘ಎಸ್. ಸಿದ್ದಗಂಗಯ್ಯ ನೇತೃತ್ವದ ಹಿಂದುಳಿದ ವರ್ಗಗಳ ಸಮಿತಿ ಆದಿ ಬಣಜಿಗ ಸಮಾಜವನ್ನು ಹಿಂದುಳಿದ ವರ್ಗಗಳ ಪ್ರವರ್ಗ-2ಎಗೆ ಸೇರಿಸಬೇಕೆಂದು 2005ರಲ್ಲಿ ಸರ್ಕಾರಕ್ಕೆ ವರದಿ ನೀಡಿದೆ. ಆದರೆ, ಇದುವರೆಗೂ ಯಾವುದೇ ಕ್ರಮಕೈಗೊಂಡಿಲ್ಲ. ಡಿ. 30 ರೊಳಗೆ ಸರ್ಕಾರ ಸ್ಪಂದಿಸದಿದ್ದರೆ ಜನವರಿಯಿಂದ ರಾಜ್ಯದಾದ್ಯಂತ ಪ್ರತಿಭಟನೆ ಮಾಡಲಾಗುವುದು’ ಎಂದು ಸಂಘದ ರಾಜ್ಯಾಧ್ಯಕ್ಷ ಆರ್‌.ಬಿ. ಶಂಕರಗೌಡ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಎಚ್ಚರಿಕೆ ನೀಡಿದರು.

‘ಆದಿ ಬಣಜಿಗ ಸಮಾಜ ಆರ್ಥಿಕವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ, ರಾಜಕೀಯವಾಗಿ, ಔದ್ಯೋಗಿಕ ರಂಗಗಳಲ್ಲಿ ಹಿಂದುಳಿದಿರುವ ಅಂಕಿ-ಅಂಶಗಳನ್ನು ಹಿಂದಿನ ಏಳು ಮುಖ್ಯಮಂತ್ರಿಗಳು ಹಾಗೂ ಐದು ಜನ ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷರಿಗೆ ನೀಡಿದ್ದರೂ ಇದುವರೆಗೂ 2ಎ ಮೀಸಲಾತಿ ಸೌಲಭ್ಯ ನೀಡಿಲ್ಲ’ ಎಂದರು.

‘2015ರ ಅ. 28ರಂದು, ಹಿಂದುಳಿದ ಆಯೋಗದ ಅಧ್ಯಕ್ಷರಾಗಿದ್ದ ಕಾಂತರಾಜು ಅವರ ನೇತೃತ್ವದಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಬಣಜಿಗರ ಸಂಘ ನೀಡಿದ ದಾಖಲೆಗಳನ್ನು ಪರಿಶೀಲಿಸಿ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು. ವೀರಶೈವ ಆದಿ ಬಣಜಿಗರಿಗೆ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ 2ಎ ಮೀಸಲಾತಿ ಸೌಲಭ್ಯ ನೀಡಲಾಗಿದೆ. ‘ಬೀದರ್, ಕಲಬುರಗಿ, ವಿಜಯಪುರ, ಹಾವೇರಿ ಸೇರಿ ರಾಜ್ಯದ 13 ಜಿಲ್ಲೆಗಳಲ್ಲಿ ಆದಿ ಬಣಜಿಗರು ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ’ ಎಂದರು.

‘46 ಸಾವಿರ ನೇಕಾರ ಮಕ್ಕಳಿಗೆ ವಿದ್ಯಾನಿಧಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೇಕಾರರ 46 ಸಾವಿರ ಕುಟುಂಬಗಳ ವಿದ್ಯಾರ್ಥಿಗಳಿಗೆ 15 ದಿನಗಳ ಒಳಗೆ ವಿದ್ಯಾನಿಧಿ ಹಣ ಬಿಡುಗಡೆ ಮಾಡಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭರವಸೆ ನೀಡಿದರು.

‘ನೇಕಾರ್ ಸಮ್ಮಾನ್’ ಯೋಜನೆಯಡಿ ಕೈಮಗ್ಗ ನೇಕಾರರಿಗೆ ಸಹಾಯಧನ ವರ್ಗಾವಣೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ನೇಕಾರರ ಕಸುಬನ್ನು ಉನ್ನತೀಕರಿಸಬೇಕಿದೆ. ಹತ್ತಿಯ ಮಧ್ಯೆ ಸಾಕಷ್ಟು ಸಮಯ ಕೆಲಸ ಮಾಡುವುದರಿಂದ ನೇಕಾರರಿಗೆ ಆಸ್ತಮಾ, ಕ್ಷಯದಂತಹ ಸಮಸ್ಯೆಗಳು ಕಾಡುತ್ತವೆ. ಅಂತಹ 46,864 ಫಲಾನುಭವಿಗಳಿಗೆ ತಲಾ ₹ 5 ಸಾವಿರದಂತೆ ₹ 23.43 ಕೋಟಿ ಆರ್ಥಿಕ ನೆರವು ನೀಡಲಾಗಿದೆ. ಅವರ ಬ್ಯಾಂಕ್ ಖಾತೆಗೆ ನೇರವಾಗಿ ಜಮೆ ಮಾಡಲಾಗಿದೆ ಎಂದು ಹೇಳಿದರು.

‘ನೇಕಾರರ ಉಳಿದ ಬೇಡಿಕೆ ಈಡೇರಿಕೆಗೆ ಅಧಿಕಾರಿಗಳು, ಸಚಿವರ ಜತೆ ಡಿ.17ರಂದು ಸಭೆ ನಡೆಸಲಾಗುವುದು. ಪ್ರತಿ ಕುಶಲಕರ್ಮಿಗೂ ₹ 50 ಸಾವಿರ ಧನಸಹಾಯ ನೀಡಲಾಗುವುದು’ ಎಂದು ತಿಳಿಸಿದರು.

ಸಕ್ಕರೆ, ಜವಳಿ ಮತ್ತು ಕೈಮಗ್ಗ ಸಚಿವ ಶಂಕರ ಪಾಟೀಲ್ ಮುನೇನಕೊಪ್ಪ, ಗೃಹ ಸಚಿವ ಆರಗ ಜ್ಞಾನೇಂದ್ರ, ಶಾಸಕಿ ಪೂರ್ಣಿಮಾ ಮತ್ತಿತರರು ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ರಸ್ತೆಗಿಳಿಯಲಿವೆ 921 ಟಾಟಾ ಸ್ಟಾರ್ ಎಲೆಕ್ಟ್ರಿಕ್ ಬಸ್‌ಗಳು

ಬೆಂಗಳೂರು: ನಗರದ ರಸ್ತೆಗಳಲ್ಲಿ ಶೀಘ್ರವೇ ‘ಟಾಟಾ ಸ್ಟಾರ್ ಎಲೆಕ್ಟ್ರಿಕ್ ಬಸ್’ಗಳು ಸಂಚರಿಸಲಿವೆ.

ವಾಣಿಜ್ಯ ವಾಹನಗಳ ತಯಾರಿಕಾ ಸಂಸ್ಥೆ ಟಾಟಾ ಮೋಟರ್ಸ್‌ನ ಅಂಗ ಸಂಸ್ಥೆಯಾದ ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸಲ್ಯೂಶನ್ಸ್ ಹಾಗೂ ಬಿಎಂಟಿಸಿ ಮಧ್ಯೆ ಶುಕ್ರವಾರ ಒಪ್ಪಂದವಾಗಿದೆ.

ಲೋ ಫ್ಲೋರ್, 12 ಮೀಟರ್‌ನ 921 ಬಸ್‌ಗಳನ್ನು ಮುಂದಿನ 12 ವರ್ಷಗಳವರೆಗೆ ಕಂಪನಿ ನಿರ್ವಹಣೆ ಮಾಡಲಿದೆ. ದೀರ್ಘಕಾಲ ಬಾಳಿಕೆಯ, ಆರಾಮದಾಯಕ ಪ್ರಯಾಣಕ್ಕಾಗಿ ಉತ್ಕೃಷ್ಟ ವಿನ್ಯಾಸ, ಸುರಕ್ಷಿತ, ಪ್ರಯಾಣಿಕಸ್ನೇಹಿ ಅಂಶಗಳೊಂದಿಗೆ ಮಾಲಿನ್ಯರಹಿತ, ಪರಿಸರಸ್ನೇಹಿ ಅಭಿವೃದ್ಧಿಪಡಿಸಲಾಗಿದೆ ಎಂದು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕಿ ಜಿ.ಸತ್ಯವತಿ ಮಾಹಿತಿ ನೀಡಿದರು.

ಟಿಎಂಎಲ್ ಸ್ಮಾರ್ಟ್ ಸಿಟಿ ಮೊಬಿಲಿಟಿ ಸಲ್ಯೂಶನ್ಸ್ ಲಿಮಿಟೆಡ್ ಸಿಇಒ ಅಸೀಮ್ ಕುಮಾರ್ ಮುಖೋಪಾಧ್ಯಾಯ, ‘ಬೆಂಗಳೂರು ನಗರದಲ್ಲಿ ಸಾರ್ವಜನಿಕ ಸಾರಿಗೆಯ ಆಧುನೀಕರಣಕ್ಕೆ ಸಂಸ್ಥೆ ಕೈಜೋಡಿಸಿದೆ. ಸ್ಮಾರ್ಟ್, ಹಸಿರು ಹಾಗೂ ಶಕ್ತಿ ಸಾಮರ್ಥ್ಯವಿರುವ ಸಮೂಹ ಸಂಚಾರ ಪರಿಹಾರಗಳನ್ನು ಅಭಿವೃದ್ಧಿಪಡಿಸಲು ಕಂಪನಿ ನಿರಂತರವಾಗಿ ಪ್ರಯತ್ನಿಸುತ್ತಿದೆ. ಭಾರತದ ಹಲವು ನಗರಗಳಲ್ಲಿ ಈಗಾಗಲೇ 730ಕ್ಕಿಂತ ಹೆಚ್ಚಿನ ಎಲೆಕ್ಟ್ರಿಕ್ ಬಸ್‌ಗಳನ್ನು ಸರಬರಾಜು ಮಾಡಿದ್ದೇವೆ. ಇದುವರೆಗೆ 5.5 ಕೋಟಿ ಕಿಲೋ ಮೀಟರ್ ಕ್ರಮಿಸಿವೆ’ ಎಂದು ವಿವರ ನೀಡಿದರು.

ಮತದಾರರ ಮಾಹಿತಿ ಸಂಗ್ರಹ: ಪರಿಶೀಲನೆಗೆ ನಿರ್ದೇಶನ

ಬೆಂಗಳೂರು: ರಾಜ್ಯದಲ್ಲಿ ಖಾಸಗಿಯವರು, ಸಂಸ್ಥೆಗಳು ಸಮೀಕ್ಷೆ ಅಥವಾ ಇತರ ರೂಪದಲ್ಲಿ ಮತದಾರರ ಮಾಹಿತಿ ಸಂಗ್ರಹಿಸುತ್ತಿವೆಯೇ ಎಂದು ಪರಿಶೀಲಿಸುವಂತೆ ಎಲ್ಲ ಜಿಲ್ಲೆಗಳ ಹಾಗೂ ನಗರ ಚುನಾವಣಾಧಿಕಾರಿಗಳಿಗೆ ಕೇಂದ್ರ ಚುನಾವಣಾ ಆಯೋಗ ನಿರ್ದೇಶನ ನೀಡಿದೆ.

‘ಕೆಲವು ಜಿಲ್ಲೆಗಳಲ್ಲಿ ಮನೆ, ಮನೆ ಸಮೀಕ್ಷೆ ಹೆಸರಿನಲ್ಲಿ ಮತದಾರರ ಮಾಹಿತಿ ಸಂಗ್ರಹ ನಡೆಯುತ್ತಿದೆ ಎಂಬಮಾಧ್ಯಮಗಳ ವರದಿ ಆಧರಿಸಿ ಆಯೋಗ ಈ ನಿರ್ದೇಶನ ನೀಡಿದೆ’ ಎಂದು ರಾಜ್ಯದ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ಶುಕ್ರವಾರ ತಿಳಿಸಿದ್ದಾರೆ.

‘ಜನರನ್ನು ದಾರಿ ತಪ್ಪಿಸುವ ರೀತಿಯಲ್ಲಿ ಗುರುತಿನ ಚೀಟಿ ಬಳಸಿಕೊಂಡು ಮತದಾರರ ಮಾಹಿತಿ ಸಂಗ್ರಹಿಸುವಂತಿಲ್ಲ. ಇಂತಹದಕ್ಕೆ ಜಿಲ್ಲಾ ಚುನಾವಣಾಧಿಕಾರಿ ಅಥವಾ ಮತದಾರರ ನೋಂದಣಿ ಅಧಿಕಾರಿಗಳು ಅನುಮತಿ ನೀಡುವುದನ್ನು ನಿಷೇಧಿಸಲಾಗಿದೆ’ ಎಂದು ತಿಳಿಸಿದ್ದಾರೆ.

ಆದಿಲ್ ಶಾಹಿ ಕುರಿತ ಗ್ರಂಥ ಸಂಪುಟ ಬಿಡುಗಡೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಜಯಪುರವನ್ನು ಕೇಂದ್ರ ಸ್ಥಾನ ಮಾಡಿಕೊಂಡು ಆಳ್ವಿಕೆ ನಡೆಸಿದ್ದ ಆದಿಲ್ ಶಾಹಿಗಳ ಕಾಲದ ಪರ್ಷಿಯನ್, ಅರೇಬಿಕ್ ಮತ್ತು ದಖನಿ ಉರ್ದು ಗ್ರಂಥಗಳು ಹಾಗೂ ದಾಖಲೆಗಳ ಕನ್ನಡ ಅನುವಾದದ 19 ಸಂಪುಟಗಳನ್ನು ಭಾನುವಾರ ಬಿಡುಗಡೆ ಮಾಡಲಾಗುವುದು ಎಂದು ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಡಾ. ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರದ ನಿರ್ದೇಶಕ ಕೃಷ್ಣ ಕೊಲ್ಹಾರ ಕುಲಕರ್ಣಿ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಗರದ ಬಸವ ಸಮಿತಿ ಸಭಾಂಗಣದಲ್ಲಿ ಭಾನುವಾರ ಸಂಜೆ 4 ಗಂಟೆಗೆ ನಡೆಯುವ ಸಮಾರಂಭದಲ್ಲಿ ಕಾಂಗ್ರೆಸ್ ನಾಯಕ ಸಲ್ಮಾನ್ ಖುರ್ಷಿದ್ ಕೃತಿಗಳನ್ನು ಬಿಡುಗಡೆ ಮಾಡುವರು. ಲೇಖಕ ಸುಧೀಂದ್ರ ಕುಲಕರ್ಣಿ, ಕಾಂಗ್ರೆಸ್ ನಾಯಕ ಕೆ. ರೆಹಮಾನ್ ಖಾನ್, ಕೆಪಿಸಿಸಿ ಚುನಾವಣಾ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಅತಿಥಿಗಳಾಗಿ ಭಾಗವಹಿಸುವರು’ ಎಂದರು.

ಹಂಪಿ ಕನ್ನಡ ವಿಶ್ವವಿದ್ಯಾಲಯದ ನೇತೃತ್ವದಲ್ಲಿ ಫ.ಗು. ಹಳಕಟ್ಟಿ ಸಂಶೋಧನಾ ಕೇಂದ್ರವು ಆದಿಲ್ ಶಾಹಿಗಳ ಕಾಲದ ಪರ್ಷಿಯನ್, ಅರೇಬಿಕ್ ಮತ್ತು ದಖನಿ ಉರ್ದು ಗ್ರಂಥಗಳು ಹಾಗೂ ದಾಖಲೆಗಳನ್ನು ಕನ್ನಡಕ್ಕೆ ಅನುವಾದಿಸಿದೆ. ನಾಲ್ಕು ವರ್ಷಗಳ ಕಾಲ 20 ಜನರು ಈ ಅನುವಾದ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದರು. 19 ಸಂಪುಟಗಳಲ್ಲಿ 21 ಕೃತಿಗಳನ್ನು ಪ್ರಕಟಿಸಲಾಗಿದೆ ಎಂದು ತಿಳಿಸಿದರು.

ಈ ಯೋಜನೆಗೆ ₹1.10 ಕೋಟಿ ವೆಚ್ಚವಾಗಿದೆ. ₹75 ಲಕ್ಷ ಅನುದಾನವನ್ನು ರಾಜ್ಯ ಸರ್ಕಾರ ಒದಗಿಸಿತ್ತು ಎಂದರು.

ಕಾಂಗ್ರೆಸ್ ಮುಖಂಡ ಮನ್ಸೂರ್ ಅಲಿ ಖಾನ್ ಪತ್ರಿಕಾಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಚಿತ್ರಾವಳಿ

ದಯಾನಂದ್ ಸಾಗರ್ ಅಕಾಡೆಮಿ ಆಫ್ ಎಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಾಲೇಜಿನಲ್ಲಿ ಆಯೋಜಿಸಿರುವ ಅಂತರರಾಷ್ಟ್ರೀಯ ಮಟ್ಟದ ಸುಧಾರಿತ ತಂತ್ರಜ್ಞಾನಗಳಿಂದ ಪರಿಸರ ಉಳಿಸುವ ಕುರಿತು ಕಂಪ್ಯೂಟಿಂಗ್ ಮತ್ತು ಸಂವಹನ ಎಂಜಿನಿಯರಿಂಗ್ ಸಮ್ಮೇಳನವನ್ನು ಗುರುವಾರ ಉದ್ಘಾಟಿಸಲಾಯಿತು. ಇಟಲಿಯ ಬ್ರೆಸಿಯಾ ವಿಶ್ವವಿದ್ಯಾಲಯದ ಡಾ. ರಿನಾಲ್ಡಿ ಸ್ಟೆಫಾನೊ ಮತ್ತು ಡಾ. ಆಶಿಶ್ ಖನ್ನಾ, ದೆಹಲಿಯ ಗುರು ಗೋವಿಂದ್ ಸಿಂಗ್ ಇಂದ್ರಪ್ರಸ್ಥ ವಿಶ್ವವಿದ್ಯಾಲಯದ ಡಾ. ರವಿಶಂಕರ್ ಎಂ, ಸುಮಿತ್ರಾ ದೇವಿ ಕೆ.ಎ., ಇದ್ದರು.

ದಾಸರಹಳ್ಳಿ ಹಾವನೂರು ಬಡಾವಣೆಯ ಬಲಮುರಿ ಮಹಾಗಣಪತಿ ದೇವಸ್ಥಾನದ ಸಭಾಂಗಣದಲ್ಲಿ ಉಜಿರೆಯ ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನದ ರಜತಪರ್ವ ತಾಳಮದ್ದಳೆ ಸರಣಿಯನ್ನು ಉದ್ಘಾಟನೆ ಮಾಡಲಾಯಿತು. ಪ್ರತಿಷ್ಠಾನದ ಅಧ್ಯಕ್ಷ ಎಸ್‌.ಎನ್‌. ಪಂಜಾಜೆ, ಕಲಾ ವಿಮರ್ಶಕ ಬಾಯಾರು ಗಣೇಶ ಭಟ್, ಅಶೋಕ ಭಟ್, ಶಶಾಂಕ ಅರ್ನಾಡಿ ಇದ್ದರು.

ನೈಋತ್ಯ ರೈಲ್ವೆ

ಅರ್ಜಿ ಪ್ರಕಟಣೆ ಸಂ. 565/ಎಸ್‌ಟಿಬಿಎ/12/2022

ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ನೈಋತ್ಯ ರೈಲ್ವೆಯ ಬೆಂಗಳೂರು ವಿಭಾಗದಲ್ಲಿ ಕೆಳಕಂಡ ರೈಲ್ವೆ ನಿಲ್ದಾಣಗಳಲ್ಲಿ ಕಮಿಷನ್ ಆಧಾರದ ಮೇಲೆ ಮೂರು ವರ್ಷಗಳ ಅವಧಿಗಾಗಿ ಕಾಯ್ದಿರಿಸಿಲ್ಲದ / ಸಾಮಾನ್ಯ ಟಿಕೆಟ್‌ಗಳನ್ನು ಕಾಯ್ದಿರಿಸಿಲ್ಲದ ಟಿಕೆಟ್ ವ್ಯವಸ್ಥೆಯ ಮೂಲಕ ನೀಡಲು ಸ್ಟೇಷನ್ ಟಿಕೆಟ್ ಬುಕಿಂಗ್ ಏಜೆಂಟ್‌ಗಳನ್ನು ನೇಮಿಸುವುದಕ್ಕಾಗಿ ಮೊಹರಾದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಕ್ರ.	ನಿಲ್ದಾಣದ ಹೆಸರು	ನಿಲ್ದಾಣದ ಕೋಡ್	ನಿಲ್ದಾಣದ ವರ್ಗ
1	ದೊಡ್ಡಬಳ್ಳಾಪುರ	ಡಿಬಿಯು	ಎನ್‌ಎಸ್‌ಜಿ-5
2	ಶ್ರವಣಬೆಳಗೊಳ	ಎಸ್‌ಬಿಜಿಎ	ಎನ್‌ಎಸ್‌ಜಿ-6

ಅರ್ಜಿಗಳನ್ನು ಸಲ್ಲಿಸುವ ದಿನಾಂಕ ಮತ್ತು ಸಮಯ : 09-01-2023 ರಂದು 10.00 ಗಂಟೆಯಿಂದ 15.00 ಗಂಟೆಯವರೆಗೆ.

ಹೆಚ್ಚಿನ ವಿವರಗಳಿಗೆ www.swr.indianrailways.gov.in ಗೆ ಲಾಗ್‌ಆನ್ ಮಾಡಿ.

ಪಿಯುಬಿ/544/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022-23 ಹಿರಿಯ ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರು, ಬೆಂಗಳೂರು

S.W.Railways sw_rly SWRRLY southwesternrailway SWRRLY

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಯೋಜನೆ (ದಕ್ಷಿಣ) ವಿಭಾಗ, ಜಯನಗರ 2ನೇ ಬ್ಲಾಕ್, ಬೆಂಗಳೂರು-560011.

ಸಂಖ್ಯೆ: ಕಾಪಾ/ಯೋ/ದ/ಟೆಂ.ತಿ.ಪ್ರ./ಪಿ.ಆರ್./18/22-23 ದಿನಾಂಕ:15.12.2022

ಟೆಂಡರ್ ತಿದ್ದುಪಡಿ ಪ್ರಕಟಣೆ

ಉಲ್ಲೇಖ : (1) ಈ ಕಛೇರಿಯ ಟೆಂಡರ್ ಮುಂದೂಡಿಕೆ ಪ್ರಕಟಣೆ ಸಂಖ್ಯೆ: ಕಾಪಾಅ/ಯೋ.ದ/ಇ-ಪ್ರೊ/ಪಿಆರ್/18/22-23, ದಿನಾಂಕ: 03.12.2022

ಮೇಲ್ಕಂಡ ವಿಷಯಕ್ಕೆ ಉಲ್ಲೇಖ (1) ರ ರೀತ್ಯಾ ಟೆಂಡರ್ ಕರೆಯಲಾಗಿದ್ದು, ತಾಂತ್ರಿಕ ಕಾರಣಗಳಿಂದ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲು ಸಾಧ್ಯವಾಗದ ಕಾರಣ ಟೆಂಡರ್ ಪ್ರಕಟಣೆಯ ದಿನಾಂಕಗಳನ್ನು ಈ ಕೆಳಗಿನಂತೆ ಮುಂದೂಡಲಾಗಿರುತ್ತದೆ.

ವಿವರ	ಈ ಹಿಂದೆ ಪ್ರಕಟಿಸಿದಂತೆ ದಿನಾಂಕ	ಮುಂದೂಡಿದ ದಿನಾಂಕ
ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಹಾಗೂ ಸಮಯ:	19.12.2022ರ ಸಂಜೆ 4.00 ಗಂಟೆಯವರೆಗೆ.	27.12.2022ರ ಸಂಜೆ 4.00 ಗಂಟೆಯವರೆಗೆ.
ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ ಹಾಗೂ ಸಮಯ:	21.12.2022ರ ಸಂಜೆ 4.30 ಗಂಟೆಗೆ.	29.12.2022ರ ಸಂಜೆ 4.30 ಗಂಟೆಗೆ.

ಉಳಿದಂತೆ ನಿಯಮ ನಿಬಂಧನೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ.

ಸಹಿ/- ಕಾರ್ಯಪಾಲಕ ಅಭಿಯಂತರರು, ಯೋಜನೆ (ದಕ್ಷಿಣ) ವಿಭಾಗ.

ಇಂಡಿಯನ್ ಓವರ್‌ಸೀಸ್ ಬ್ಯಾಂಕ್
ಪ್ರಾದೇಶಿಕ ಕಛೇರಿ, ಮೈಸೂರು

ನಂ. 2254, ಕೌಸಲ್ಯ ವಾಣಿಜ್ಯ ಸಂಕೀರ್ಣ, ಒಂದನೇ ಮಹಡಿ, ವಿನೋಬಾ ರೋಡ್, ದೇವರಾಜ ಮೊಹಲ್ಲಾ, ಮೈಸೂರು – 570005

ಮಾರಾಟ ಅಥವಾ ಸಾರ್ವಜನಿಕ ಹರಾಜು ಪ್ರಕಟಣೆ (ಚಿನ್ನದ ಆಭರಣಗಳು / ಒಡವೆಗಳು)

ಈ ಕೆಳಗಿನ ವಿವರಿಸಿರುವ ಸಾಲಗಾರರು/ರು ನಮ್ಮ ಬ್ಯಾಂಕ್ ಶಾಖೆಯಲ್ಲಿ ಭದ್ರತಾ ದಾಖಲೆಗಳೊಂದಿಗೆ ಆಭರಣಗಳನ್ನು ಅಡಮಾನಕ್ಕಿರಿಸಿ ಸಾಲವನ್ನು ಪಡೆದುಕೊಂಡಿರುತ್ತಾರೆ ಹಾಗೂ ಸಾಲಗಾರರು ಭದ್ರತಾ ದಾಖಲೆಯಲ್ಲಿರುವ ಷರತ್ತು ಮತ್ತು ನಿಬಂಧನೆಗಳಂತೆ ಸಾಲವನ್ನು ಮರುಪಾವತಿ ಮಾಡುವಲ್ಲಿ ವಿಫಲರಾಗಿರುತ್ತಾರೆ. ಸಾಲಗಾರರಿಗೆ ನೋಂದಾಯಿತ ಅಂಚೆ ಮೂಲಕ ಸಾಲದ ಸಂಪೂರ್ಣ ಅಸಲು, ಬಡ್ಡಿ ಮತ್ತು ಇತರೆ ವೆಚ್ಚಗಳನ್ನು ಮರುಪಾವತಿಸಲು ತಗಾದೆ ಸೂಚನೆಯನ್ನು ನೀಡಲಾಗಿದ್ದು, ಅದಾಗ್ಯೂ ಸಾಲಗಾರರು/ಅಡಮಾನದಾರರು ಸಾಲವನ್ನು ಮರುಪಾವತಿ ಮಾಡದಿದ್ದ ಕಾರಣ ಸಾಲಗಾರರಿಗೆ /ಅಡಮಾನದಾರರಿಗೆ ಮತ್ತು ಸಮಸ್ತ ಸಾರ್ವಜನಿಕರಿಗೆ ಈ ಪ್ರಕಟಣೆಯ ಮೂಲಕ ತಿಳಿಸುವುದೇನೆಂದರೆ **ದಿನಾಂಕ 26.12.2022ರಂದು** ಅಥವಾ ಅದಕ್ಕೂ ಮೊದಲು ಗಿರವಿ ಮಾಡಿದ ಆಭರಣ/ಗಳನ್ನು ಸಾಲ ಮರುಪಾವತಿ ಮಾಡಿ ಬಿಡಿಸಿಕೊಳ್ಳಬೇಕು. ವಿಫಲವಾದಲ್ಲಿ ಸಾಲವನ್ನು ಪಡೆಯಲು ಅಡವಿಟ್ಟ ಚಿನ್ನಾಭರಣಗಳನ್ನು **27.12.2022 ಮಂಗಳವಾರ ಬೆಳಿಗ್ಗೆ 11 ಗಂಟೆಗೆ** ಸಾಲಗಾರರು ಭರಿಸಬೇಕಾದ ವೆಚ್ಚ/ಶುಲ್ಕಗಳೊಂದಿಗೆ ಹರಾಜು ಮಾಡಲಾಗುತ್ತದೆ. ಒಂದು ವೇಳೆ ಹರಾಜು ಮಾರಾಟದ ಆದಾಯವು ಸಾಲದ ಬಾಕಿಯನ್ನು ದಿವಾಳಿ ಮಾಡಲು ಸಾಕಾಗದೇ ಇದ್ದರೆ, ಬಾಕಿ ಉಳಿದಿರುವ ಮೊತ್ತವನ್ನು ಹೆಚ್ಚಿನ ಬಡ್ಡಿಯೊಂದಿಗೆ ಮರುಪಡೆಯಲು ಕಾನೂನು ಕ್ರಮಗಳನ್ನು ಪ್ರಾರಂಭಿಸಲಾಗುವುದು. ಸಾಲಗಾರನು ನಿಧನಹೊಂದಿದ್ದರೆ ಈ ಸೂಚನೆಯು ಮೇಲೆ ಹೇಳಿದಂತೆ ಅವರ ಕಾನೂನುಬದ್ಧ ಉತ್ತರಾಧಿಕಾರಿಗಳಿಗೆ ಅನ್ವಯಿಸುತ್ತದೆ. ಮುಂದಿನ ಸೂಚನೆ ಇಲ್ಲದೆ ಯಾವುದೇ ಸಮಯದಲ್ಲಿ ಹರಾಜನ್ನು ಬಿಡುವ ಅಥವಾ ಮುಂದೂಡುವ ಅಥವಾ ಹರಾಜಿನ ಸ್ಥಳವನ್ನು ಬದಲಾಯಿಸುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸಿಕೊಂಡಿದೆ.

1. "ಎಲ್ಲಿ ಹೇಗಿವೆಯೋ ಹಾಗೇ ಆಧಾರದಲ್ಲಿ" ಸಾಲಗಾರ/ರು ಮತ್ತು ಬಿಡ್ಡರ್/ಗಳ ಜವಾಬ್ದಾರಿಯ ಮೇಲೆ ಆಭರಣ/ಗಳನ್ನು ಹರಾಜುಮಾಡಲಾಗುವುದು. ಹರಾಜಾದ ಆಭರಣಗಳ ಗುಣಮಟ್ಟಕ್ಕೆ ಬ್ಯಾಂಕ್ ಜವಾಬ್ದಾರವಾಗಿರುವುದಿಲ್ಲ.
2. ಸಾಲಗಾರರ ಮತ್ತು ಜಾಮೀನುದಾರರ ಸಾಮರ್ಥ್ಯದ ಆಧಾರದಲ್ಲಿ ಚಿನ್ನಾಭರಣ ಸಾಲ ಮತ್ತು ಇತರ ಸಾಲದ ಬಾಕಿಯನ್ನು ವಸೂಲಾತಿ ಮಾಡಲು ಈ ಮೇಲಿನ ಹರಾಜು ಪ್ರಕ್ರಿಯೆಯನ್ನು ನಡೆಸಲಾಗುತ್ತದೆ.
3. ಆಸಕ್ತ ಬಿಡ್ಡುದಾರ/ರು **27.12.2022, ಬೆಳಿಗ್ಗೆ 10:00 ಗಂಟೆಯೊಳಗೆ ಇಂಡಿಯನ್ ಓವರ್‌ಸೀಸ್ ಬ್ಯಾಂಕ್ ಮೈಸೂರು ಮುಖ್ಯ ಶಾಖೆ (0061) ಹೆಸರಿನಲ್ಲಿ ಇಎಂಡಿ ರೂ. 5000/-ವನ್ನು** ಡಿಡಿ ರೂಪದಲ್ಲಿ ಪಾವತಿಸಬೇಕು. ಇಎಂಡಿಯಾಗಿ ಒದಗಿಸಲಾದ ಡಿಮ್ಯಾಂಡ್ ಡ್ರಾಫ್ಟ್ ಅನ್ನು ವಿಫಲ ಬಿಡ್ಡುದಾರರಿಗೆ ಹಿಂತಿರುಗಿಸಲಾಗುತ್ತದೆ.
4. ಬಿಡ್ಡುದಾರರಿಗೆ ಮಾನ್ಯವಾದ ಗುರುತು / ಕೆವೈಸಿ ಪುರಾವೆ ಮತ್ತು ಪಾನ್ ಅನ್ನು ಒದಗಿಸಬೇಕು.
5. ತೆರೆದ ಬಿಡ್ ಇರುತ್ತದೆ ಮತ್ತು ಅತಿ ಹೆಚ್ಚು ಕೊಟೇಶನ್ ಮಾಡುವ ಬಿಡ್ಡುದಾರರನ್ನು ಯಶಸ್ವಿ ಬಿಡ್ಡುದಾರ ಎಂದು ಘೋಷಿಸಲಾಗುತ್ತದೆ. 6. ಯಶಸ್ವಿ ಬಿಡ್ಡುದಾರರು ಹರಾಜಿನ ದಿನಾಂಕದಿಂದ ಮೂರು ದಿನಗಳಲ್ಲಿ ಬಿಡ್ ಮೊತ್ತದ 25% ಅನ್ನು ತಕ್ಷಣವೇ ಮತ್ತು 75% ಬಿಡ್ ಮೊತ್ತವನ್ನು ಪಾವತಿಸಬೇಕಾಗುತ್ತದೆ. ತಪ್ಪಿದಲ್ಲಿ ಅವರು ಠೇವಣಿ ಮಾಡಿದ ಮೊತ್ತವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಆಭರಣಗಳನ್ನು ಮರು-ಹರಾಜು ಮಾಡುವ ಹಕ್ಕನ್ನು ಬ್ಯಾಂಕ್ ಕಾಯ್ದಿರಿಸುತ್ತದೆ.
7. ಬಿಡ್‌ದಾರ/ರು ಅಂತಿಮ ಪಾವತಿಯೊಂದಿಗೆ ಬಿಡ್ ಮೊತ್ತದ ಮೇಲೆ 3% ರಷ್ಟು ಜಿಎಸ್‌ಟಿ ಪಾವತಿಸಬೇಕು.
8. ಗಿರವಿ ಇಟ್ಟ ಚಿನ್ನಾಭರಣಗಳ ಪಟ್ಟಿಯನ್ನು ಶಾಖೆಯ ನೋಟಿಸ್ ಬೋರ್ಡ್‌ನಲ್ಲಿ ಪ್ರದರ್ಶಿಸಲಾಗುತ್ತದೆ.

ಹರಾಜು ದಿನಾಂಕ: 21.12.2022, ಸಮಯ: ಬೆಳಿಗ್ಗೆ 11.00.
ಸ್ಥಳ: ಇಂಡಿಯನ್ ಓವರ್‌ಸೀಸ್ ಬ್ಯಾಂಕ್, ಮೈಸೂರು, ಮುಖ್ಯ ಶಾಖೆ, ಪ್ರಷ್ಠಿ ಆರ್ಕೆಡ್, ಅಶೋಕ ರಸ್ತೆ, ಪ್ರಧಾನ ಅಂಚೆ ಕಛೇರಿ ಎದುರು, ಮೈಸೂರು – 570001

ಶಾಖೆ ಹೆಸರು	ಖಾತೆ ಸಂಖ್ಯೆ	ಹೆಸರು
ಬೆಳಗುಂಬ	284103462000595	ರಂಗಪ್ಪ ಕೆ ಬಿ
ಬಿಡದಿ	230803462000571	ಹರೀಶ್ ಬಾಬು ಪಿ ವಿ
ತಂದಾಗ	097403741100502	ಕೆ ಗಂಗಾಧರಯ್ಯ
	097403741000470	ಚಂದ್ರಣ್ಣ
	097403741300269	ರಾಧಾ
	097403238000009	ಶಿವಣ್ಣ

ದಿನಾಂಕ: 16.12.2022, ಸ್ಥಳ: ಮೈಸೂರು ಸಹಿ/-, ಪ್ರಾದೇಶಿಕ ವ್ಯವಸ್ಥಾಪಕರು

ಬೆಂಗಳೂರು ಪೊಲೀಸರ ಸಭೆ ನಡೆಸಿದ ಗೃಹ ಸಚಿವ ಆರಗ ಜ್ಞಾನೇಂದ್ರ

‘ರೌಡಿ ಕೃತ್ಯ ತಡೆಗೆ ಜನಸ್ನೇಹಿ ವ್ಯವಸ್ಥೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಪರಾಧ ಕೃತ್ಯಗಳಲ್ಲಿ ಭಾಗಿಯಾಗುವವರ ವಿರುದ್ಧ ಕಾನೂನು ಕ್ರಮ ಕೈಗೊಂಡು ರೌಡಿ ಚಟುವಟಿಕೆ ನಿಯಂತ್ರಿಸಬೇಕು. ಜನಸಾಮಾನ್ಯರು ಯಾವುದೇ ಭಯವಿಲ್ಲದೇ ಬದುಕುವಂತೆ ಜನಸ್ನೇಹಿ ವ್ಯವಸ್ಥೆ ರೂಪಿಸಲು ಕೆಲಸ ಮಾಡಬೇಕು’ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಪೊಲೀಸರಿಗೆ ಸೂಚನೆ ನೀಡಿದರು.

ನಗರದ ಇನ್ಫೆಂಟ್ರಿ ರಸ್ತೆಯಲ್ಲಿರುವ ಬೆಂಗಳೂರು ಕಮಿಷನರ್ ಕಚೇರಿಯಲ್ಲಿ ಶುಕ್ರವಾರ ಹಿರಿಯ ಅಧಿಕಾರಿಗಳ ಸಭೆ ನಡೆಸಿದ ಗೃಹ ಸಚಿವರು, ಪೊಲೀಸರ ಕಾರ್ಯಗಳನ್ನು ಪರಿಶೀಲಿಸಿದರು.

‘ಹಲವರು ಅಕ್ರಮವಾಗಿ ಕ್ಲಬ್, ಪಬ್, ಜೂಜಾಟ ಸೇರಿ ಇತರೆ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಅವರೆಲ್ಲರ ವಿರುದ್ಧ ಕ್ರಮ ಜರುಗಿಸಿ, ಅಕ್ರಮ ಚಟುವಟಿಕೆ ಸ್ಥಳಗಳನ್ನು ಮುಚ್ಚಿಸಬೇಕು’ ಎಂದು ಗೃಹ ಸಚಿವ ಹೇಳಿದರು.

‘ಕೆಲ ಪೊಲೀಸರು ಸಾರ್ವಜನಿಕರ ಜೊತೆ ಅನುಚಿತವಾಗಿ ವರ್ತಿಸುತ್ತಿರುವ ದೂರುಗಳು ಬರುತ್ತಿವೆ. ಜೊತೆಗೆ, ಕೆಲವರು ಲಂಚ ಪಡೆದು ಇಲಾಖೆಗೆ ಕೆಟ್ಟ ಹೆಸರು ತರುತ್ತಿದ್ದಾರೆ. ಅಂಥ ಪೊಲೀಸರ ವಿರುದ್ಧವೂ ಕ್ರಮ ಜರುಗಿಸಿ, ಮತ್ತೊಮ್ಮೆ ಅಂಥ ತಪ್ಪುಗಳು ನಡೆಯದಂತೆ ಇತರೆ ಸಿಬ್ಬಂದಿಗೆ ಎಚ್ಚರಿಕೆ ರವಾನಿಸಬೇಕು’ ಎಂದೂ ಅವರು ಸೂಚಿಸಿದರು.

ಪೊಲೀಸ್ ಕಮಿಷನರ್ ಪ್ರತಾಪ್ ರೆಡ್ಡಿ, ವಿಶೇಷ ಕಮಿಷನರ್ ಎಂ.ಎ. ಸಲೀಂ ಸೇರಿ ಹೆಚ್ಚುವರಿ ಕಮಿಷನರ್, ಡಿಸಿಪಿಗಳು, ಎಸಿಪಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು.

ಬಾರ್–ಪಬ್ ಮಾಲೀಕರ ಸಭೆ

ಬೆಂಗಳೂರಿನ ಬಾರ್ ಹಾಗೂ ಪಬ್‌ಗಳ ಮಾಲೀಕರ ಜೊತೆ ಪೊಲೀಸರು ಶುಕ್ರವಾರ ಸಂಜೆ ಸಭೆ ನಡೆಸಿದರು. ಕಮಿಷನರ್ ಪ್ರತಾಪ್ ರೆಡ್ಡಿ ನೇತೃತ್ವದಲ್ಲಿ ಸಭೆ ಜರುಗಿತು.

‘ಹೊಸ ವರ್ಷಾಚರಣೆಗೆ ಬಾರ್–ಪಬ್ ಹಾಗೂ ಇತರರು ಸಿದ್ಧತೆ ಮಾಡಿಕೊಳ್ಳುತ್ತಿದ್ದಾರೆ. ಡಿ. 31ರಂದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಕಾನೂನು ಸುವ್ಯವಸ್ಥೆ ಕಾಪಾಡಲು ನಾವೂ ಸಜ್ಜಾಗುತ್ತಿದ್ದೇವೆ. ಹೀಗಾಗಿ, ಬಾರ್–ಪಬ್ ಮಾಲೀಕರ ಸಭೆ ಕರೆದು ಚರ್ಚಿಸಲಾಯಿತು. ರಾತ್ರಿ ವಹಿವಾಟು ಅವಧಿ ವಿಸ್ತರಣೆ ಸೇರಿ ಹಲವು ಬೇಡಿಕೆಗಳನ್ನು ಅವರು ಮುಂದಿಟ್ಟಿದ್ದಾರೆ. ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು’ ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

ಜಪ್ತಿ: ಸಭೆ ವೇಳೆ ಸುದ್ದಿಗಾರರ ಜೊತೆ ಮಾತನಾಡಿದ ಗೃಹ ಸಚಿವ, ‘ 2022ರ ಜನವರಿಯಿಂದ ಇದುವರೆಗೂ ₹77 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಿದ್ದಾರೆ. ಡ್ರಗ್ಸ್ ಜಾಲದಲ್ಲಿದ್ದ 69 ವಿದೇಶಿಗರನ್ನು ಗಡಿಪಾರು ಮಾಡಿದ್ದಾರೆ. ಹೊಸದಾಗಿ ನಾಲ್ಕು ಸಂಚಾರ ಠಾಣೆ ಹಾಗೂ ಎರಡು ಕಾನೂನು ಸುವ್ಯವಸ್ಥೆ ಉಪ ವಿಭಾಗಗಳನ್ನು ಸೃಜಿಸಲಾಗಿದೆ’ ಎಂದು ಅವರು ಹೇಳಿದರು.

ಕೊಲೆ ಯತ್ನ: ಬಾಬು ವಶಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯೊಬ್ಬರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದ ಆರೋಪದಡಿ ನಗರದ ಅಟ್ಟಿಕಾ ಗೋಲ್ಡ್ ಕಂಪನಿ ಮಾಲೀಕ ಬಾಬು ಅಲಿಯಾಸ್ ಬೊಮ್ಮನಹಳ್ಳಿ ಬಾಬು ಅವರನ್ನು ಆಂಧ್ರಪ್ರದೇಶ ಪೊಲೀಸರು ವಶಕ್ಕೆ ಪಡೆದಿದ್ದಾರೆ.

‘ಬಾಬು ನನಗೆ ವಂಚಿಸಿದ್ದಾರೆ. ಇದನ್ನು ಪ್ರಶ್ನಿಸಿದ್ದಕ್ಕೆ ಡಿ. 12ರಂದು ಮನೆಗೆ ನುಗ್ಗಿ ಹಲ್ಲೆ ಮಾಡಿ ಕೊಲೆಗೆ ಯತ್ನಿಸಿದ್ದಾರೆ’ ಎಂದು ಆರೋಪಿಸಿ ಮಹಿಳೆಯೊಬ್ಬರು ಆಂಧ್ರಪ್ರದೇಶದ ಅನಂತಪುರ ಪೊಲೀಸರಿಗೆ ದೂರು ನೀಡಿದ್ದರು. ಕೃತ್ಯ ಎಸಗಿ ಪರಾರಿಯಾಗಿದ್ದ ಬಾಬು ಬೆಂಗಳೂರಿಗೆ ಬಂದಿದ್ದ. ಈ ಬಗ್ಗೆ ಮಾಹಿತಿ ತಿಳಿದ ಅನಂತಪುರ ಪೊಲೀಸರು, ನಗರಕ್ಕೆ ಬಂದು ಆತನನ್ನು ವಶಕ್ಕೆ ಪಡೆದು ತಮ್ಮೂರಿಗೆ ಕರೆದೊಯ್ದಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಡಿಕ್ಕಿ: ಮಹಿಳೆ ಸಾವು

ಮೊಳಕಾಲ್ಮುರು: ಡಿವೈಡರ್‌ಗೆ ಕಾರು ಡಿಕ್ಕಿ ಹೊಡೆದು ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಶಿವಗಂಗ ಗ್ರಾಮದ ಯು.ಎಂ. ಪ್ರೇಮಾ (33) ಮೃತಪಟ್ಟು, ಇಬ್ಬರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬಿ.ಜಿ. ಕೆರೆ ಬಳಿ ರಾಷ್ಟ್ರೀಯ ಹೆದ್ದಾರಿ 150 ‘ಎ’ನಲ್ಲಿ ನಡೆದಿದೆ.

Dept. of Health Research, MoH&FW, Govt. of India, Nirmal Bhawan - ICMR Complex, Poojanahalli Road, Kannamangala Post, Bengaluru–562 110, Telephone: 080-22176400

Advertisement No. 17/2022

Online applications are invited from interested and eligible candidates for various contractual project posts i.e. Project Scientist – C (Medical), Project Scientist – B (Medical), Research Associate – III, Computer Programmer (Grade A), Computer Programmer (Grade B), Project Technical Officer (Statistics), Project Technical Officer, Project Assistant, Data Entry Operator (Grade A), Project Admin Assistant and Senior Project Assistant. **Last date for submission of online applications: 09.01.2023 upto 05:00 PM.** Detailed advertisement and other terms and conditions can be viewed/downloaded from the websites **www.ncdirindia.org / www.icmr.nic.in.**

Sd/-
Director

ಶಾದಿ ಮಹಲ್ ಶಾಫ್ಟ್‌ನಲ್ಲಿ ‘ಭದ್ರ’

ಬೆಂಗಳೂರು: ಸುರಂಗ ಕೊರೆಯುವ ಯಂತ್ರ ‘ಭದ್ರ’ ಶಾದಿ ಮಹಲ್ ಶಾಫ್ಟ್‌ನಲ್ಲಿ ಶುಕ್ರವಾರ ಹೊರಬಂದಿದೆ.

ಈ ಯಂತ್ರವು 2021ರ ಜೂನ್ 24ರಂದು ವೆಂಕಟೇಶಪುರ ನಿಲ್ದಾಣದಲ್ಲಿ ಆರಂಭಿಸಿ 540 ದಿನಗಳಲ್ಲಿ 1066.80 ಮೀಟರ್ ಸುರಂಗವನ್ನು ಕೊರೆದಿದೆ. ಶುಕ್ರವಾರ ಮೊದಲನೇ ಸುರಂಗ ಕೊರೆಯುವ ಕಾಮಗಾರಿಯನ್ನು ಪೂರ್ಣಗೊಳಿಸಿ ಶಾದಿ ಮಹಲ್ ಶಾಫ್ಟ್‌ನಲ್ಲಿ ಹೊರಬಂದಿದೆ.

ಇನ್ನು ಮುಂದೆ ವೆಂಕಟೇಶಪುರದಿಂದ ಕೆ.ಜಿ. ಹಳ್ಳಿ ಮೆಟ್ರೊ ನಿಲ್ದಾಣಗಳ ನಡುವೆ ಸುರಂಗ ಕೊರೆಯುವ ಕಾಮಗಾರಿಗಾಗಿ ಈ ಟಿಬಿಎಂ ಅನ್ನು ನಿಯೋಜಿಸಲಾಗುವುದು ಎಂದು ಬಿಎಂಆರ್‌ಸಿಎಲ್ ತಿಳಿಸಿದೆ.



‘ಭದ್ರ’ ಯಂತ್ರವು ಶಾದಿ ಮಹಲ್ ಶಾಫ್ಟ್‌ನಲ್ಲಿ ಶುಕ್ರವಾರ ಹೊರಬಂದಿತು.

ವಿಧಾನಸೌಧದಲ್ಲೇ ನಕಲಿ ವಿಭಾಗಾಧಿಕಾರಿ ಬಂಧನ

ಬೆಂಗಳೂರು: ‘ನಗರಾಭಿವೃದ್ಧಿ ಇಲಾಖೆಯ ವಿಭಾಗಾಧಿಕಾರಿ’ ಎಂಬುದಾಗಿ ಹೇಳಿ ಜನರು ಹಾಗೂ ಸರ್ಕಾರದ ಅಧಿಕಾರಿಗಳನ್ನು ವಂಚಿಸುತ್ತಿದ್ದ ಆರೋಪಿ ಎನ್. ಚಂದ್ರಪ್ಪ (36) ಎಂಬುವರನ್ನು ವಿಧಾನಸೌಧ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಸವೇಶ್ವರನಗರದ ಕಿರ್ಲೋಸ್ಕರ್ ಬಡಾವಣೆಯ ನಿವಾಸಿ ಚಂದ್ರಪ್ಪ, ವಿಧಾನಸೌಧದಲ್ಲಿ ಹೆಚ್ಚು ಸುತ್ತಾಡುತ್ತಿದ್ದ. ವಿಭಾಗಾಧಿಕಾರಿ ಎಂಬುದಾಗಿ ಹೇಳಿಕೊಂಡು ಹಲವರನ್ನು ವಂಚಿಸುತ್ತಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ವಿಧಾನಸೌಧದಲ್ಲೇ ಆರೋಪಿಯನ್ನು ಬಂಧಿಸ ಲಾಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ವಿಭಾಗಾಧಿಕಾರಿ, ನಗರಾಭಿವೃದ್ಧಿ ಇಲಾಖೆ’ ಎಂಬ ಹೆಸರಿನಲ್ಲಿ ನಕಲಿ ಗುರುತಿನ ಚೀಟಿ ಸೃಷ್ಟಿಸಿಕೊಂಡಿದ್ದ. ಕರ್ನಾಟಕ ಸರ್ಕಾರದ ಸಚಿವಾಲಯದಿಂದ ಗುರುತಿನ ಚೀಟಿ ನೀಡಿರುವ ರೀತಿಯಲ್ಲಿ, ಗುರುತಿನ ಚೀಟಿ ನಂ. 193/2019 ಎಂಬುದಾಗಿಯೂ ನಮೂದಿಸಿಕೊಂಡಿದ್ದ. ಹಲವರು ಈ ಗುರುತಿನ ಚೀಟಿ ನಿಜನೆಂದು ನಂಬಿದ್ದರು.’

‘ನಕಲಿ ಗುರುತಿನ ಚೀಟಿಯನ್ನು ಸಾರ್ವಜನಿಕರು ಹಾಗೂ ಅಧಿಕಾರಿಗಳಿಗೆ ಆರೋಪಿ ತೋರಿಸುತ್ತಿದ್ದ. ನಗರಾಭಿವೃದ್ಧಿ ಇಲಾಖೆಯಲ್ಲಿರುವ ಹಲವು ಕಾಮಗಾರಿ, ಕೆಲಸ ಕೊಡಿಸುವ ಆಮಿಷವೊಡ್ಡಿ ಹಲವರಿಂದ ಹಣ ಪಡೆಯುತ್ತಿದ್ದನೆಂಬ ಮಾಹಿತಿ ಇದೆ’ ಎಂದು ತಿಳಿಸಿವೆ.

‘ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದ್ದ ಸಂದರ್ಭದಲ್ಲೂ ತಾನೊಬ್ಬ ಸರ್ಕಾರಿ ಅಧಿಕಾರಿಯೆಂದು ಸುಳ್ಳು ಹೇಳಿದ್ದ. ಆತನ ಬಳಿಯ ಗುರುತಿನ ಚೀಟಿ ಜಪ್ತಿ ಮಾಡಿ ಪರಿಶೀಲಿಸಿದಾಗ, ಆತ ನಕಲಿ ವಿಭಾಗಾಧಿಕಾರಿ ಎಂಬುದು ತಿಳಿಯಿತು. ಈತನ ವಿರುದ್ಧ ಎರಡು ಪ್ರತ್ಯೇಕ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.



ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ 'ಪಿವಿ ಬ್ರ್ಯಾಂಡ್ ಸ್ಪಾಟ್'ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಹಾವು ಕಚ್ಚಿ ಬಾಲಕ ಸಾವು!

ರಾಮದಾಸ ಮಾಧವ್

ಔರಾದ್ (ಬೀದರ್ ಜಿಲ್ಲೆ): ತನ್ನ 8 ವರ್ಷದ ಮಗನ ದೇಹಕ್ಕೆ ಸುತ್ತಿಕೊಂಡಿದ್ದ ಕೊಳಕ ಮಂಡಲ ಹಾವನ್ನು ತೆಗೆಯಲು ಪೋಷಕರು ಜೀವದ ಹಂಗು ತೊರೆದು ಸೆಣ ಸಾಡಿದರೂ ಮಗ ಬದುಕುಳಿಯದೇ ಇರುವ ಘಟನೆ ತಾಲ್ಲೂಕಿನ ಭಂಡಾರಕುಮಟಾ ಗ್ರಾಮದಲ್ಲಿ ಗುರುವಾರ ರಾತ್ರಿ ನಡೆದಿದೆ.

ರಾಮದಾಸ ಮಾಧವ್ ವಾಗ್ದರಿ (8) ಮೃತಪಟ್ಟ ಬಾಲಕ. ರಾತ್ರಿ ತಂದೆ– ತಾಯಿ ಜತೆ ಮಲಗಿದ್ದ ಮಗುವನ್ನು ಸುಮಾರು 5 ಅಡಿ ಉದ್ದದ ಹಾವು ಸುತ್ತಿಕೊಂಡಿದೆ. ಮಗು ಅಳುವುದನ್ನು ಗಮನಿಸಿದ ತಂದೆ– ತಾಯಿ ಹಾವಿನ ಜೊತೆ ಸೆಣಸಾಡಿ ಹಾವನ್ನು ಕೊಂದಿದ್ದಾರೆ. ಬಳಿಕ ಮಗುವನ್ನು ಸಮೀಪದ ಉದಗೀರ್ ಆಸ್ಪತ್ರೆಗೆ ಕೊಂಡೊಯ್ದು ಚಿಕಿತ್ಸೆ ಕೊಡಿಸಿದರೂ ಮಗು ಉಳಿಯಲಿಲ್ಲ.

ಜ.12ಕ್ಕೆ ಬೆಳಗಾವಿಗೆ ಪ್ರಧಾನಿ ಮೋದಿ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಜನವರಿ 12ಕ್ಕೆ ಬೆಳಗಾವಿಗೆ ಭೇಟಿ ನೀಡಲಿದ್ದು, ಅಲ್ಲಿ ನಡೆಯುವ ರಾಷ್ಟ್ರೀಯ ಯುವಜನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸುವರು.

ಯುವ ಜನೋತ್ಸವ ಬೆಳಗಾವಿಯ ಜಿಲ್ಲಾ ಕ್ರೀಡಾಂಗಣದಲ್ಲಿ ಎರಡು ದಿನ ನಡೆಯಲಿದೆ. ವಿವಿಧ ರಾಜ್ಯಗಳಿಂದ 6 ಸಾವಿರಕ್ಕೂ ಹೆಚ್ಚು ಪ್ರತಿನಿಧಿಗಳು ಉತ್ಸವದಲ್ಲಿ ಪಾಲ್ಗೊಳ್ಳುವ ನಿರೀಕ್ಷೆಯಿದೆ.

ಜ. 9, 10 ರಂದು ಪತ್ರಕರ್ತರ ರಾಜ್ಯ ಸಮ್ಮೇಳನ

ವಿಜಯಪುರ: 'ಪತ್ರಕರ್ತರ ರಾಜ್ಯ ಮಟ್ಟದ 37ನೇ ಸಮ್ಮೇಳನ ಜನವರಿ 9 ಮತ್ತು 10 ರಂದು ನಡೆಯಲಿದೆ' ಎಂದು ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ತಿಳಿಸಿದರು.

'ವಿಜಯಪುರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ 2 ದಿನ ನಡೆಯಲಿರುವ ಸಮ್ಮೇಳನವನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಉದ್ಘಾಟಿಸಲಿದ್ದಾರೆ' ಎಂದು ಹೇಳಿದರು.

ಡೆತ್‌ನೋಟ್‌ನಲ್ಲಿ ಯಾರ ಹೆಸರೂ ಉಲ್ಲೇಖವಿಲ್ಲ • ಹಣಕ್ಕಾಗಿ ಈ ಕೃತ್ಯ ನಡೆದಿಲ್ಲ

'ಬ್ಲ್ಯಾಕ್‌ಮೇಲ್‌ಗೆ ಹೆದರಿ ಆತ್ಮಹತ್ಯೆ'

ಪ್ರಜಾವಾಣಿ ವಾರ್ತೆ

ಬಸವಲಿಂಗ ಸ್ವಾಮೀಜಿ

ರಾಮನಗರ: ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆಗೆ ಬ್ಲ್ಯಾಕ್‌ಮೇಲ್ ತಂತ್ರವೇ ಕಾರಣ ಎಂಬ ಅಂಶ ತನಿಖೆಯಲ್ಲಿ ಬಯಲಾಗಿದ್ದು, ನಾಲ್ವರು ಆರೋಪಿಗಳ ವಿರುದ್ಧ ಮಾಗಡಿ ಜೆಎಂಎಫ್ ನ್ಯಾಯಾಲಯಕ್ಕೆ ಪೊಲೀಸರು ಗುರುವಾರ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ.

ಮಾಗಡಿ ತಾಲ್ಲೂಕಿನ ಕಂಚುಗಲ್ ಬಂಡೆ ಮಠದ ಬಸವಲಿಂಗ ಸ್ವಾಮೀಜಿ (45) ಅ. 24ರಂದು ತಮ್ಮ ಕೊಠಡಿಯಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದರು.

ಸ್ಥಳದಲ್ಲಿ ದೊರೆತ ಮೂರು ಡೆತ್‌ನೋಟ್‌ಗಳಲ್ಲಿ ಸ್ವಾಮೀಜಿ ನೇರವಾಗಿ ಯಾರ ಹೆಸರನ್ನೂ ಉಲ್ಲೇಖಿಸಿಲ್ಲ. ಸ್ವಾಮೀಜಿ ತೇಜೋವಧೆಯೇ ಈ ಸಂಚಿನ ಮುಖ್ಯ ಉದ್ದೇಶ ಆಗಿತ್ತು. ಹಣಕ್ಕಾಗಿ ಈ ಕೃತ್ಯ ನಡೆದಿಲ್ಲ ಎಂದು ಚಾರ್ಜ್‌ಶೀಟ್‌ನಲ್ಲಿ ಹೇಳಲಾಗಿದೆ.

ಒಂದೂವರೆ ತಿಂಗಳಲ್ಲಿ ತನಿಖೆ ಪೂರ್ಣಗೊಳಿಸಿದ ಪೊಲೀಸರು ನ್ಯಾಯಾಲಯಕ್ಕೆ 216 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿದ್ದಾರೆ. ಒಟ್ಟು 72 ಸಾಕ್ಷಿಗಳ ಹೇಳಿಕೆ ದಾಖಲಿಸಿದ್ದಾರೆ.

ಆರೋಪಿಗಳಾದ ಕಣ್ಣೂರು ಮಠದ ಮೃತ್ಯುಂಜಯ ಸ್ವಾಮೀಜಿ, ಎಂಜಿನಿಯರಿಂಗ್ ವಿದ್ಯಾರ್ಥಿನಿ ನೀಲಾಂಬಿಕೆ ಹಾಗೂ ವಕೀಲ ಮಹದೇವಯ್ಯ ಸದ್ಯ ನ್ಯಾಯಾಂಗ ವಶದಲ್ಲಿದ್ದಾರೆ. ನಾಲ್ಕನೇ ಆರೋಪಿ, ಸಿದ್ಧಗಂಗಾ ಮಠದ ಎಂಜಿನಿಯರಿಂಗ್ ಕಾಲೇಜಿನ ಮೆಕ್ಯಾನಿಕಲ್ ಎಂಜಿನಿಯರಿಂಗ್ ವಿಭಾಗದ ಪ್ರಾಧ್ಯಾ ಪಕ ಸುರೇಶ್ ತಲೆಮರೆಸಿಕೊಂಡಿದ್ದಾರೆ.

ಯುವತಿಯೊಂದಿಗೆ ಸಂಭಾಷಣೆ ನಡೆಸಿದ ವಿಡಿಯೊ ಸಿ.ಡಿ ಬಹಿರಂಗಗೊಂಡ ಕಾರಣ ಬಸವಲಿಂಗ ಸ್ವಾಮೀಜಿ ಆತ್ಮಹತ್ಯೆ ಮಾಡಿ ಕೊಂಡಿದ್ದರು. ಸ್ಥಳದಲ್ಲಿ ದೊರೆತ ಮೂರು ಡೆತ್‌ನೋಟ್‌ಗಳನ್ನು ಸಾಕ್ಷ್ಯಗಳನ್ನಾಗಿ ಪರಿಗಣಿಸಲಾಗಿದೆ. ಭಕ್ತರು ಮತ್ತು ಪೊಲೀಸರಿಗೆ ಎರಡು ಪ್ರತ್ಯೇಕ ಡೆತ್‌ನೋಟ್‌ಗಳನ್ನು ಅವರು ಬರೆದಿದ್ದಾರೆ. ಅರ್ಧ ಬರೆದು ಎಸೆದ ಮತ್ತೊಂದು ಹಾಳೆ ಸ್ಥಳದಲ್ಲಿ ಸಿಕ್ಕಿದೆ.

ಚಾರ್ಜ್‌ಶೀಟ್‌ನಲ್ಲಿ ಏನಿದೆ?

ತುಮಕೂರು ಸಿದ್ಧಗಂಗಾ ಮಠದ ಈ ಹಿಂದಿನ ಶಿವಕುಮಾರ ಸ್ವಾಮೀಜಿ ಹಾಗೂ ಸದ್ಯದ ಸಿದ್ಧಲಿಂಗ ಶ್ರೀಗಳಿಬ್ಬರಿಗೂ ಬಂಡೆ ಮಠದ ಬಸವಲಿಂಗ ಸ್ವಾಮೀಜಿ ಆತ್ಮೀಯರಾಗಿದ್ದರು. ಇದನ್ನು ಸಹಿಸದ ದಾಯಾದಿ ಮೃತ್ಯುಂಜಯ ಸ್ವಾಮೀಜಿ, ಎಂಜಿನಿಯರಿಂಗ್ ವಿದ್ಯಾರ್ಥಿನಿ ನಾಗಲಾಂಬಿಕೆಯನ್ನು ಮುಂದೆ ಬಿಟ್ಟು ಸಂಚು ರೂಪಿಸಿದ್ದರು.

ಬಸವಲಿಂಗ ಸ್ವಾಮೀಜಿಗೆ ನೀಲಾಂಬಿಕೆಯಿಂದ ವಿಡಿಯೊ ಕಾಲ್ ಮಾಡಿಸಿದ್ದ ಮೃತ್ಯುಂಜಯ ಸ್ವಾಮೀಜಿ ಅದನ್ನು ರೆಕಾರ್ಡ್ ಮಾಡಿಸಿಕೊಂಡಿದ್ದರು. ಬಳಿಕ ನಾಲ್ಕನೇ ಆರೋಪಿ ಸುರೇಶ್ ಎಂಬುವರಿಂದ ಅದನ್ನು ಎಡಿಟ್ ಮಾಡಿಸಿ ಸಿ.ಡಿ ಮಾಡಿಸಿದ್ದರು.

ಮೂರನೇ ಆರೋಪಿ ಮಹದೇವಯ್ಯ ಈ ಸಿ.ಡಿಯನ್ನು ವಿವಿಧ ಮಠಾಧೀಶರು ಹಾಗೂ ಸಮುದಾಯದ ಮುಖಂಡರಿಗೆ ಹಂಚಿದ್ದರು ಎಂದು ಚಾರ್ಜ್‌ಶೀಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಗೌರವ ನಮನ

ವಿಜಯ್ ದಿವಸ್ ಪ್ರಯುಕ್ತ ಶುಕ್ರವಾರ ಬೆಂಗಳೂರಿನ ರಾಷ್ಟ್ರೀಯ ಸೇನಾ ಸ್ಮಾರಕದಲ್ಲಿ ಮೌಂಟ್ ಕಾರ್ಮೆಲ್ ಕಾಲೇಜಿನ ಎನ್‌ಸಿಸಿ ವಿದ್ಯಾರ್ಥಿಗಳು ಗೌರವ ಸಲ್ಲಿಸಿದರು

–ಪ್ರಜಾವಾಣಿ ಚಿತ್ರ

ಎಸ್‌ಸಿಎಸ್‌ಪಿ, ಟಿಎಸ್‌ಪಿ: ₹18,649 ಕೋಟಿ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2022-23ನೇ ಆರ್ಥಿಕ ವರ್ಷದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆಗೆ ₹29,165.81 ಕೋಟಿ ಅನುದಾನ ಮೀಸಲಿಟ್ಟಿದ್ದು, ಈವರೆಗೆ ₹ 18,649.71 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 'ಎಸ್‌ಸಿಎಸ್‌ಪಿ ಅಡಿ ₹13,483.79 ಕೋಟಿ ಬಿಡುಗಡೆಯಾಗಿದ್ದು, ₹10,783.47 ಕೋಟಿ ವೆಚ್ಚವಾಗಿದೆ. ಒಟ್ಟು ಶೇಕಡ 52ರಷ್ಟು ಅನುದಾನ ಬಿಡುಗಡೆ ಮಾಡಿದ್ದು, ಅದರಲ್ಲಿ ಶೇ 80ರಷ್ಟನ್ನು ಬಳಕೆ ಮಾಡಲಾಗಿದೆ ಎಂದರು.

ಟಿಎಸ್‌ಪಿ ಅಡಿಯಲ್ಲಿ ₹5,165.92 ಕೋಟಿ ಬಿಡುಗಡೆಯಾಗಿದ್ದು, ₹3,383.25 ಕೋಟಿ ವೆಚ್ಚ ಮಾಡಲಾಗಿದೆ. ಮೀಸಲಿಟ್ಟ ಅನುದಾನದಲ್ಲಿ ಶೇ 41ರಷ್ಟನ್ನು ಬಿಡುಗಡೆ ಮಾಡಿದ್ದು, ಅದರಲ್ಲಿ ಶೇ 65ರಷ್ಟು ವೆಚ್ಚವಾಗಿದೆ. ಎರಡೂ ಯೋಜನೆಗಳಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ₹4,314.28 ಕೋಟಿ ಒದಗಿಸಲಾಗಿದೆ. ₹ 3,085.96 ಕೋಟಿ ಬಿಡುಗಡೆಯಾಗಿದ್ದು, ₹2,348.92 ಕೋಟಿ ಬಳಕೆಯಾಗಿದೆ ಎಂದರು.

ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಅಭಿವೃದ್ಧಿ ನಿಗಮಗಳಿಗೆ ಈ ಬಾರಿ ₹ 420 ಕೋಟಿ ಹೆಚ್ಚುವರಿ ಅನುದಾನ ಒದಗಿಸಲಾಗಿದೆ. ಈ ನಿಗಮಗಳಿಗೆ ₹1,000.19 ಕೋಟಿ ಅನುದಾನ ನೀಡಲಾಗಿದೆ. ಸ್ವಉದ್ಯೋಗ, ವಾಹನ ಸಾಲ, ಭೂ ಒಡೆತನ ಮತ್ತಿತರ ಯೋಜನೆಗಳಿಗೆ ಫಲಾನುಭವಿಗಳ ಆಯ್ಕೆ ಪ್ರಕ್ರಿಯೆ ಪ್ರಗತಿಯಲ್ಲಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಬಡ ಕುಟುಂಬಗಳಿಗೆ 75 ಯೂನಿಟ್‌ವರೆಗೆ ಉಚಿತ ವಿದ್ಯುತ್ ಪೂರೈಸುವುದಕ್ಕಾಗಿ ಸಮಾಜ ಕಲ್ಯಾಣ ಇಲಾಖೆಯಿಂದ ₹ 800 ಕೋಟಿ ಅನುದಾನ ಒದಗಿಸಲಾಗಿದೆ ಎಂದರು.

ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು, ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ಅನ್ಯ ಉದ್ದೇಶಕ್ಕೆ ಬಳಸಲು ಅವಕಾಶ ಕಲ್ಪಿಸುವ ಸೆಕ್ಷನ್ 7 ಅನ್ನು ಜಾರಿಗೊಳಿಸಿದ್ದೇ ಸಿದ್ದರಾಮಯ್ಯ ನೇತೃತ್ವದ ಸರ್ಕಾರ. ಈಗ ಅವರೇ ಅದನ್ನು ತೆಗೆದು ಹಾಕಬೇಕು ಎನ್ನುತ್ತಿದ್ದಾರೆ. ಅವರ ಸರ್ಕಾರದ ಅವಧಿಗಿಂತಲೂ ಹೆಚ್ಚಿನ ಅನುದಾನವನ್ನು ಈಗಿನ ಸರ್ಕಾರ ಒದಗಿಸಿದೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಗೆ ಬಜೆಟ್‌ನಲ್ಲಿ ₹2,219.66 ಕೋಟಿ ಅನುದಾನ ಒದಗಿಸಲಾಗಿತ್ತು. ಈವರೆಗೆ ₹1,256.44 ಕೋಟಿ ಬಿಡುಗಡೆ ಮಾಡಿದ್ದು, ₹665.37 ಕೋಟಿ ವೆಚ್ಚ ಮಾಡಲಾಗಿದೆ ಎಂದು ವಿವರಿಸಿದರು.

'ಹೊರಗುತ್ತಿಗೆ ನೌಕರರಿಗೂ ನೇರ ವೇತನ ಪಾವತಿ'

ಪ್ರಜಾವಾಣಿ ವಾರ್ತೆ

ರಾಮನಗರ: ಪೌರಾಡಳಿತ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವ 10,600 ಹೊರಗುತ್ತಿಗೆ ನೌಕರರಿಗೆ ನೇರ ವೇತನ ಪಾವತಿ ವ್ಯವಸ್ಥೆಯನ್ನು ಶೀಘ್ರ ಜಾರಿಗೆ ತರಲಾಗುವುದು ಎಂದು ಪೌರಾಡಳಿತ ಸಚಿವ ಎಂ.ಟಿ.ಬಿ. ನಾಗರಾಜು ಶುಕ್ರವಾರ ಬಿಡದಿಯಲ್ಲಿ ತಿಳಿಸಿದರು.

ನಿಯೋಜನೆ 'ವ್ಯವಹಾರ' ಶುರು

ಒಂದನೇ ಪುಟದಿಂದ

ಈ ವರ್ಷದ ಮಾರ್ಚ್, ಏಪ್ರಿಲ್‌ನಲ್ಲೇ ಸಿಬ್ಬಂದಿ ನಿಯೋಜನೆಯ ದೊಡ್ಡಪಟ್ಟಿ ತಯಾರಾಗಿತ್ತು. ಆ ಹೊತ್ತಿನಲ್ಲಿ ಸಾರಿಗೆ ಇಲಾಖೆಯ ಕೆಲ ನೌಕರರು, 'ಕೆಲವು ಮೋಟಾರು ವಾಹನ ನಿರೀಕ್ಷಕರು ಸಿಬ್ಬಂದಿಯಿಂದ ಹಣ ಸಂಗ್ರಹ ಮಾಡುತ್ತಿದ್ದಾರೆ. ಹಣ ನೀಡಲು ಒಪ್ಪದವರನ್ನು ದೂರದ ಪ್ರದೇಶಗಳಿಗೆ ನಿಯೋಜನೆ ಮಾಡಲಾಗುತ್ತಿದೆ. ಆ ಮೂಲಕ ನೂರಾರು ಕೋಟಿ ರೂಪಾಯಿಗಳ ವ್ಯವಹಾರ ನಡೆಸುತ್ತಿದ್ದಾರೆ' ಎಂದು ಅಂದು ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿದ್ದ ರಾಜೇಂದ್ರಕುಮಾರ್ ಕಟಾರಿಯಾ ಅವರಿಗೆ ದೂರು ಸಲ್ಲಿಸಿದ್ದರು.

ದೂರು ಪರಿಶೀಲನೆ ನಡೆಸಿದ್ದ ಅವರು, 'ಸಾರ್ವಜನಿಕರಿಗೆ ಉತ್ತಮ ಸೇವೆ ಹಾಗೂ ಆಡಳಿತಾತ್ಮಕ ಹಿತದೃಷ್ಟಿಯಿಂದ ಸರ್ಕಾರದ ಮಾರ್ಗಸೂಚಿ ಅನ್ವಯ ಅಧಿಕಾರಿ, ಸಿಬ್ಬಂದಿಗೆ ಕನಿಷ್ಠ ಅವಧಿ ನಿಗದಿ ಮಾಡಲಾಗಿದೆ. ಆದರೆ, ಸಾರಿಗೆ ಆಯುಕ್ತರ ಅಧೀನದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂದಿಯನ್ನು ವರ್ಗಾವಣೆ ಮಾರ್ಗಸೂಚಿಗೆ ವಿರುದ್ಧವಾಗಿ ನಿರ್ವಹಣಾ ವ್ಯವಸ್ಥೆಯ ಹೆಸರಲ್ಲಿ ನಿಯೋಜನೆ ಮಾಡುತ್ತಿರುವುದು ನಿಯಮ ಬಾಹಿರ. ಕೂಡಲೇ ಈ ಪ್ರಕ್ರಿಯೆ ಸ್ಥಗಿತಗೊಳಿಸಬೇಕು' ಎಂದು ಲಿಖಿತ ಸೂಚನೆ ನೀಡಿದ್ದರು.

ಕೆಲವು ದಿನಗಳ ಹಿಂದೆ ಕಟಾರಿಯಾ ಅವರು ವರ್ಗಾವಣೆಯಾದರು. ಅದಾದ ಬಳಿಕ ಸಾರಿಗೆ ಮತ್ತು ಸುರಕ್ಷತಾ ಆಯುಕ್ತರು ನಿಯೋಜನೆಯ ಆದೇಶಕ್ಕೆ ಸಹಿ ಮಾಡಿದ್ದಾರೆ. ಡಿಸೆಂಬರ್ ಮೊದಲ ವಾರದಲ್ಲೇ ಮೂರು ಆದೇಶಗಳನ್ನು ಹೊರಡಿಸಲಾಗಿದೆ. 50ಕ್ಕೂ ಹೆಚ್ಚು ಸಿಬ್ಬಂದಿಯನ್ನು ಅವಧಿಪೂರ್ವದಲ್ಲಿ ಬೇರೆಡೆಗೆ ನಿಯೋಜನೆ ಮಾಡಲಾಗಿದೆ. ಪ್ರತಿ ಆದೇಶದಲ್ಲಿ 'ಸಾರಿಗೆ ಸಚಿವರಿಂದ ಅನುಮೋದಿತ' ಎಂಬ ಉಲ್ಲೇಖವಿದೆ.

ನಿಧನ ವಾರ್ತೆ

ಅಬ್ದುಲ್ ಫಾರೂಕ್

ಮೂಡುಬಿದಿರೆ (ದಕ್ಷಿಣ ಕನ್ನಡ): ಹೈಕೋರ್ಟ್ ವಕೀಲರಾಗಿದ್ದ ಅಬ್ದುಲ್ ಫಾರೂಕ್ (49) ಹೃದಯಾಘಾತದಿಂದ ಬೆಂಗಳೂರಿನಲ್ಲಿ ಶುಕ್ರವಾರ ನಿಧನರಾದರು. ಅವರಿಗೆ ಪತ್ನಿ, ಪುತ್ರ ಇದ್ದಾರೆ. ಮೂಡುಬಿದಿರೆ ತಾಲ್ಲೂಕು ಬೆಳುವಾಯಿ ಗ್ರಾಮದ ಪುತ್ತಿಗೆ ಕಾನಾದ ಅವರು ಬೆಂಗಳೂರಿನಲ್ಲಿ ನೆಲೆಸಿದ್ದರು. ಇವರು ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಎಸ್. ಅಬ್ದುಲ್ ನಜೀರ್ ಅವರ ಕಿರಿಯ ಸಹೋದರ.

ಫಾರೂಕ್ ಅವರ ಅಂತ್ಯಕ್ರಿಯೆ ಹುಟ್ಟೂರಾದ ಪುತ್ತಿಗೆ ಕಾನಾದಲ್ಲಿ ಶನಿವಾರ (ಡಿ.17) ಬೆಳಿಗ್ಗೆ ನೆರವೇರಲಿದೆ.

ಕರ್ನಾಟಕ ಸರಕಾರ
(ಲೋಕೋಪಯೋಗಿ, ಇಲಾಖೆ)
ಕಾರ್ಯನಿರ್ವಾಹಕ ಇಂಜಿನೀಯರ್‌ರವರ ಕಛೇರಿ
ಲೋಕೋಪಯೋಗಿ ಇಲಾಖೆ, ಸೇಡಂ ವಿಭಾಗ ಜಿಲ್ಲೆಃ ಕಲಬುರಗಿ.
ಸಂ:ಕಾನಿಇಂ/ಲೋಇ./ಸೇವಿ/ತಾಶಾ–1&2/2022–23/3177 ದಿನಾಂಕ:14–12–2022
:: ಅಲ್ಪಾವಧಿ ಇ–ಪ್ರೊಕ್ಯೂರಮೆಂಟ್ ಟೆಂಡರ್ ಪ್ರಕಟಣೆ ::
1) ಕಾಮಗಾರಿಯ ವಿವರ: 1. ಸೇಡಂ ತಾಲೂಕಿನ 03 ಕಾಮಗಾರಿಯ ಇಂಡೆಂಟ್ ಸಂ. **ಕೆ.ಕೆ.ಆರ್.ಡಿ.ಬಿ ಯೋಜನೆ–162531, 162532 & 162477,** 2. ಚಿತ್ತಾಪೂರ ತಾಲೂಕಿನ 01 ಕಾಮಗಾರಿಯ ಇಂಡೆಂಟ್ ಸಂ. **ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿಗಳು– 161342.** 3. ಚಿಂಚೋಳಿ ತಾಲೂಕಿನ 02 ಕಾಮಗಾರಿಯ ಇಂಡೆಂಟ್ ಸಂ. **ಕೆ.ಕೆ.ಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿಗಳು– 162601 & 160489.** 2) ಲೆಕ್ಕ ಶೀರ್ಷಿಕೆ: 2019–20 & 2022–23ನೇ ಸಾಲಿನ ಕೆ.ಕೆಆರ್.ಡಿ.ಬಿ ಯೋಜನೆ ಅಡಿಯಲ್ಲಿನ ಕಾಮಗಾರಿಗಳು. 3) ಟೆಂಡರಿಗಿಟ್ಟ ಮೊತ್ತ: **ಕನಿಷ್ಠ ರೂ. 50.00 ಲಕ್ಷಗಳು, ಗರಿಷ್ಠ ರೂ. 495.00 ಲಕ್ಷಗಳು,** 4) ಗುತ್ತಿಗೆದಾರರ ಅರ್ಹತೆ: 1ನೇ ದರ್ಜೆ & ಮೇಲ್ಪಟ್ಟು, 5) ಪೂರ್ವಭಾವಿ ಸಭೆ ದಿನಾಂಕ : **28–12–2022 ಬೆಳಿಗ್ಗೆ 11:30 ಗಂಟೆಯವರೆಗೆ,** 6) ಟೆಂಡರ್ ಸ್ಪಷ್ಟೀಕರಣ ಪಡೆಯುವ ಹಾಗೂ ಸಲ್ಲಿಸುವ ಅಂತಿಮ ದಿನಾಂಕ : **30–12–2022 ಸಾಯಂಕಾಲ 5:30 ಗಂಟೆಯವರೆಗೆ,** 7) ಟೆಂಡರ್ ಅರ್ಜಿ ಬೆಲೆ ಮತ್ತು ಇ.ಎಂ.ಡಿ ಮೊತ್ತ: ಟೆಂಡರ್ ಫಾರಂ ಬೆಲೆ & ಇ.ಎಮ್.ಡಿ ಇ–ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ. 8) ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: **31–12–2022 ರ ಸಾಯಂಕಾಲ 4:00 ಗಂಟೆಯವರೆಗೆ.** 9) ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **02–01–2023 ರ ಸಾಯಂಕಾಲ 4:30 ಗಂಟೆಯವರೆಗೆ.** 10) ಟೆಂಡರ್ ಆರ್ಥಿಕ ಬಿಡ್ ತೆರೆಯುವ ದಿನಾಂಕ: **03–01–2023 ರ ಸಾಯಂಕಾಲ 4:30 ಗಂಟೆಯವರೆಗೆ.** 11) ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ: ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ, ವಿಭಾಗ ಸೇಡಂ, 12) ಅಂತರಜಾಲ ತಾಣದ ವಿಳಾಸ: www.eproc.karnataka.gov.in, 13) ಬದಲಾವಣೆಗಾಗಿ ಸಂಪರ್ಕಿಸುವ ಬಗ್ಗೆ.: ಯಾವುದೇ ಮಾರ್ಪಾಡು ಬದಲಾವಣೆಗಳನ್ನು www.eproc.karnataka.gov.in ಮಾಡಲಾಗುವುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರ್
ಲೋಕೋಪಯೋಗಿ, ಇಲಾಖೆ ವಿಭಾಗ ಸೇಡಂ
ವಾ.ಸಾ.ಸಂ.ಇ/ಕಲಬುರಗಿ/962/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.
www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821–2420810
ಈ ಕಛೇರಿ ಐಟಂವಾರು ಟೆಂಡರ್ ಪ್ರಕಟಣೆ ಅಧಿಸೂಚನೆ ಸಂ:15/2022–23/CALL-3 ದಿನಾಂಕ: 14.12.2022
ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಸ್ಟ್ಯಾಂಡರ್ಡ್ ಬಿಡ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ–3ರ ಷರತ್ತು ಮತ್ತು ನಿಯಮಗಳನ್ವಯ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ.ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ ಲೋಕೋಪಯೋಗಿ ಸಿವಿಲ್ ಗುತ್ತಿಗೆದಾರರು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ದಿ: 21.12.2022ರ ಸಂಜೆ 4:00ರ ವರೆಗೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತ ರೂ. 100.00 ಲಕ್ಷಗಳು ಹಾಗೂ ಇ.ಎಂ.ಡಿ ರೂ. 200000/–ಗಳಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಮೀಸಲಾತಿ ವಿವರ	ಕೊನೆಯ ದಿನಾಂಕ
1.	15/2022–23	01	ಕರೆ – 3	3ನೇ ದರ್ಜೆ & ಮೇಲ್ಪಟ್ಟು	-	21.12.2022

ಕಾರ್ಯಪಾಲಕ ಇಂಜನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

ಕೃಷ್ಣ ಭಾಗ್ಯ ಜಲ ನಿಗಮ ನಿಯಮಿತ
ಕರ್ನಾಟಕ ಸರ್ಕಾರದ ಒಂದು ಉದ್ದಿಮೆ
ಕಾರ್ಯನಿರ್ವಾಹಕ ಅಭಿಯಂತರ ಕಚೇರಿ, ಕೃಭಾಜನಿನಿ, ನಾಎದಂಕಾ, ವಿಭಾಗ
ರೋಡಲಬಂಡಾ–584127 ತಾ: ಲಿಂಗಸುಗೂರು ಜಿ: ರಾಯಚೂರು
ಸಂ.ಕೃಭಾಜನಿನಿ/ನಾಎದಂಕಾ/"/ಪಿಬಿ/ಟೆಂಡರ್/22–23/1853 ದಿನಾಂಕ– 14.12.2022
ಅಲ್ಪಾವಧಿ ಟೆಂಡರ ಪ್ರಕಟಣೆ (2ನೇ ಕರೆ)
(Through eprocurement portal only)
Ref:- This office Tender Notification No. EE /KBJNL /NLBC/ PB/ 2022-23/ 446 Dtd. 24.6.2022.
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಇವರ ಪರವಾಗಿ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಮಿಸಲ್ಪಟ್ಟ 1ನೇ ದರ್ಜೆ, ಕೃಭಾಜನಿನಿ ಕೆಟೆಗರಿ–3 ಹಾಗೂ ಮೇಲ್ಪಟ್ಟ ಅರ್ಹ ಗುತ್ತಿಗೆದಾರರಿಂದ Construction of approach C C road From NavaliJackwell to Jadeshankarlingeshwar temple and Providing Electrification to Jadeshankarlingeshwar Temple at navali village(Indent No 21702) ದ್ವಿಲಕೋಟೆ ಮೂಲಕ ಶೇಕಡಾವಾರು ದರದ ಟೆಂಡರ್‌ಗಳನ್ನು ಇ–ಪ್ರೊಕ್ಯೂರಮೆಂಟ್ ಮೂಲಕ ಕರೆಯಲಾಗಿದೆ.
ಸದರಿ ಟೆಂಡರ್‌ಗಳನ್ನು ಅರ್ಹ ಗುತ್ತಿಗೆದಾರರು ದಿನಾಂಕ 15.12.2022 ರಿಂದ 30.12.2022ರ ಸಾಯಂಕಾಲ 4.00ಗಂಟೆಯವರೆಗೆ www.eproc.karnataka.gov.in ನಲ್ಲಿ ವೀಕ್ಷಿಸಿ ಟೆಂಡರ್ ಡಾಕುಮೆಂಟಗಳನ್ನು ಇ–ಪೋರ್ಟಲ್ ಮುಖಾಂತರ ಭರ್ತಿ ಮಾಡಿ ಸಲ್ಲಿಸಬಹುದಾಗಿದೆ ಹಾಗೂ ಸದರಿ ಕಾಮಗಾರಿಯ ತಾಂತ್ರಿಕ ಬಿಡ್ಡನ್ನು ದಿನಾಂಕ 02.01.2023 ರಂದು ಪೂರ್ವಾಹ್ನ 11.00 ಗಂಟೆಗೆ ತೆರೆಯಲಾಗುವುದು.
ಆಸಕ್ತ ಗುತ್ತಿಗೆದಾರರು ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರಮೆಂಟ್‌ನ ವೆಬ್‌ಸೈಟ್ www. eproc.karnataka. gov.in ನಲ್ಲಿ ಹಾಗೂ ಈ ಕೆಳ ಸಹಿ ಮಾಡಿರುವವರ ಕಚೇರಿಯಲ್ಲಿ, ಕಚೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರು,
ಕೃಭಾಜನಿನಿ, ನಾಎದಂಕಾ ವಿಭಾಗ,
ರೋಡಲಬಂಡಾ.
ವಾ.ಸಾ.ಸಂ.ಇ/ರಾಯಚೂರು/481/ಎಂ.ಸಿ.&ಎ/2022–23

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಲಯ, ದಾಸರಹಳ್ಳಿ ವಿಭಾಗ, 2ನೇ & 3ನೇ ಅಡ್ಡರಸ್ತೆ, 2ನೇ ಮುಖ್ಯ ರಸ್ತೆ, 3ನೇ ಬ್ಲಾಕ್, ಹೆಚ್.ಎಂ.ಟಿ. ಲೇಔಟ್, ಬಿಡಬ್ಲ್ಯುಎಸ್‌ಎಸ್‌ಬಿ ವಾಟರ್ ಟ್ಯಾಂಕ್ ಸಮೀಪ, ನಾಗಸಂದ್ರ, ಬೆಂಗಳೂರು –73
ನಂ.: ಬಿಬಿಎಂಪಿ/ಕಾಪಾಅ/ದಾವಿ/ಟೆಂಡರ್/13/2022–23 ದಿನಾಂಕ: 16.12.2022
ಟೆಂಡರ್‌ಗಳಿಗಾಗಿ ಆಹ್ವಾನ (ಐಎಫ್‌ಟಿ)
(ಅಲ್ಪಾವಧಿ ಟೆಂಡರ್ ಪ್ರಕಟಣೆ) (ದ್ವಿ ಟೆಂಡರ್ ದಸ್ತಾವೇಜು ಪದ್ಧತಿ)
(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) – ಕೆಡಬ್ಲ್ಯು–4
ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ ಇವರು, ಅರ್ಹ ಟೆಂಡರ್‌ದಾರರಿಂದ ಈ ಕೆಳಗಿನ ನಿರ್ಮಾಣ ಕಾಮಗಾರಿಗಳಿಗೆ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು	ಟೆಂಡರ್‌ಗಿಟ್ಟ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇಎಂಡಿ ಮೊತ್ತ (ಲಕ್ಷಗಳಲ್ಲಿ)
1	ಶೆಟ್ಟಿಹಳ್ಳಿ ಸರ್ಕಾರಿ ಶಾಲೆಯಿಂದ ಚಿಕ್ಕಸಂದ್ರ, ಕಾವೇರಿ ಲೇಔಟ್, ಬೃಂದಾವನ ಲೇಔಟ್, ಚಿನ್ನಮ್ಮ ಲೇಔಟ್ 1ನೇ, 2ನೇ ಮತ್ತು 4ನೇ ಅಡ್ಡರಸ್ತೆ, ಆರ್.ಕೆ. ಲೇಔಟ್, ಎ.ವೈ.ಆರ್. ಲೇಔಟ್ ಮತ್ತು ಬೈರವೇಶ್ವರ ಬಾಬಣ್ಣ ಲೇಔಟ್ 1ನೇ, 2ನೇ, 3ನೇ ಅಡ್ಡರಸ್ತೆ ಮತ್ತು 4ನೇ ದುರ್ಗಾಪರಮೇಶ್ವರಿ ದೇವಸ್ಥಾನ ಮತ್ತು ಮೇದಾರಹಳ್ಳಿ ಸುತ್ತಮುತ್ತಲಿನ ಪ್ರದೇಶ, ಎಲ್‌ವಿ ಎನ್‌ಕ್ಲೇವ್, ಸಪ್ತಗಿರಿ ಲೇಔಟ್ 1ನೇ, 2ನೇ, 3ನೇ, 4ನೇ ಮತ್ತು 5ನೇ ಅಡ್ಡರಸ್ತೆ, ಸಪ್ತಗಿರಿ ಲೇಔಟ್ 6ನೇ, 7ನೇ 8ನೇ, 9ನೇ ಮತ್ತು 10ನೇ ಅಡ್ಡರಸ್ತೆ, ಶೆಟ್ಟಿಹಳ್ಳಿ ಜನತಾ ಕಾಲೋನಿ (ರಾಗಿ ಫ್ಲೋರ್ ಮಿಲ್), ಎನ್‌ಎಂಎಚ್ ಲೇಔಟ್ ಮತ್ತು ಎಂಎಚ್‌ಆರ್ ಲೇಔಟ್ ಸುತ್ತಮುತ್ತಲ ಪ್ರದೇಶ, ಸಿದೇದಹಳ್ಳಿ ಜನತಾ ಕಲೋನಿ, 18ನೇ ಮತ್ತು 19ನೇ ಅಡ್ಡರಸ್ತೆ ಕೆಜಿ ಹಳ್ಳಿ, ಮೇದಾರಹಳ್ಳಿ ಶ್ರೀದೇವಿ ಲೇಔಟ್, ಕಿರ್ಲೋಸ್ಕರ್ ಲೇಔಟ್ ಮತ್ತು **ಡಬ್ಲ್ಯು ನಂ. 12**ರ ಸುತ್ತಮುತ್ತಲಿನ ಪ್ರದೇಶ, ಶೆಟ್ಟಿಹಳ್ಳಿ ಉಪ ವಿಭಾಗ, **ವಾರ್ಡ್ ನಂ. 14**ರಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ. ದಾಸರಹಳ್ಳಿ ಉಪ ವಿಭಾಗ, ದಾಸರಹಳ್ಳಿ ವಲಯದ – 110 ಗ್ರಾಮ ಅನುದಾನ. **(ವಾರ್ಡ್ ನಂ. 11 & 14)**	2084.00	20.84

ವೇಳಾಪಟ್ಟಿ: (1) ಟೆಂಡರ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **21.12.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು. (2) ದ್ವಿ ಲಕೋಟೆ ಟೆಂಡರ್ ಪೂರ್ವಭಾವಿ ಸಭೆಯು **28.12.2022**ರ **ಬೆಳಿಗ್ಗೆ 11:30 ಗಂಟೆಗೆ** ಮುಖ್ಯ ಅಭಿಯಂತರರ ಕಛೇರಿ, ದಾಸರಹಳ್ಳಿ ವಲಯ, ಎಂಇಐ ಲೇಔಟ್, ಬಾಗಲಗುಂಟೆ, ಬೆಂಗಳೂರು–560073 ಇಲ್ಲಿ ನಡೆಯಲಿದೆ. (3) ಟೆಂಡರ್‌ಗಳನ್ನು ಆನ್‌ಲೈನ್ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **05.01.2023**ರ **ಸಂಜೆ 4:00 ಗಂಟೆ**ಯೊಳಗೆ ಸಲ್ಲಿಸತಕ್ಕದ್ದು ಹಾಗೂ ಟೆಂಡರ್‌ಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮಾರ್ಗದರ್ಶನದಂತೆ ತೆರೆಯಲಾಗುವುದು. (4) ತಾಂತ್ರಿಕ ಬಿಡ್‌ಗಳನ್ನು **https://eproc.karnataka.gov.in** ವೆಬ್‌ಸೈಟ್ ಮೂಲಕ ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬಿಬಿಎಂಪಿಯಲ್ಲಿ **06.01.2023**ರ **ಸಂಜೆ 4:30 ಗಂಟೆಗೆ** ತೆರೆಯಲಾಗುವುದು. (5) ಆರ್ಥಿಕ ಬಿಡ್‌ಗಳನ್ನು **https://eproc.karnataka.gov.in** ವೆಬ್‌ಸೈಟ್ ಮೂಲಕ ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬಿಬಿಎಂಪಿಯಲ್ಲಿ **07.01.2023**ರ **ಸಂಜೆ 4:30 ಗಂಟೆಗೆ** ತೆರೆಯಲಾಗುವುದು **(ಸಾಧ್ಯವಾದಲ್ಲಿ)**. ಹೆಚ್ಚಿನ ಮಾಹಿತಿಯನ್ನು ಮೇಲಿನ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಅಥವಾ ವೆಬ್‌ಸೈಟ್ **https://eproc.karnataka.gov.in** ನಿಂದ ಪಡೆದುಕೊಳ್ಳಬಹುದು.
ಸಹಿ/– ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ

ಮಹಾನಗರ ಪಾಲಿಕೆ, ವಿಜಯಪುರ
ನಂ:ಮನಪಾ/:ಲೋ.ವಿ/ಕಾಅ/ಡಿಎಮ್/ಟಿಎನ್‌ಡಿ/ಇಪ್ರೋ– /2022–23/4066 ದಿನಾಂಕ:15.12.2022
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ **1) ಸನ್ 2022–23 ನೇ ಸಾಲಿನ ಮಹಾನಗರಪಾಲಿಕೆಯ ಅನುದಾನದಲ್ಲಿ 05 ಕಾಮಗಾರಿಗಳು 2) ಸನ್ 2022–23ನೇ ಸಾಲಿನ ಎಸ್.ಎಫ್.ಸಿ. ವಿಶೇಷ ಅನುದಾನದಲ್ಲಿ 02 ಕಾಮಗಾರಿಗಳು** ಕೆ.ಪಿ.ಡಬ್ಲ್ಯೂಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೋಕ್ಯೂರಮೆಂಟ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ ಮೂಲಕ ವೆಬ್‌ಸೈಟ್ **(https://www.eproc.karnataka.gov.in)** ನಲ್ಲಿ ಪ್ರಕಟಿಸಲಾಗಿದೆ.
1) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 22–12–2022
ಸಹಿ/– ಕಾರ್ಯಪಾಲಕ ಅಭಿಯಂತರರು,
ಮಹಾನಗರ ಪಾಲಿಕೆ, ವಿಜಯಪುರ
ವಾಸಾಸಂಇ/ವಿಜಯಪುರ/673/ಎಂಸಿಎ/2022–23

ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯತಿ ಕಟ್ಟಡ, ಮೊದಲನೇ ಮಹಡಿ, ಎಸ್. ಕರಿಯಪ್ಪ ರಸ್ತೆ, ಬನಶಂಕರಿ, ಬೆಂಗಳೂರು – 560070.
ಸಂಖ್ಯೆ: ಕಾಅ/ಪಂರಾಇಂವಿ/ಬೆಂನ/ಎಇ–1/ಟೆಂಡರ್/41/2022–23 ದಿನಾಂಕ: 14–12–2022
ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ
(ದ್ವಿ–ಲಕೋಟೆ ಪದ್ಧತಿ)
ಕಾರ್ಯಪಾಲಕ ಅಭಿಯಂತರರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಛೇರಿಯಿಂದ 5054 Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು ದಿನಾಂಕ: **30–12–2022 ರಂದು ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಛೇರಿ ವೇಳೆಯಲ್ಲಿ ಕಛೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್: **http://www.eproc.karnataka.gov.in** ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು.
ವಾಸಾಸಂಇ/ವಾ.ಪ್ರ/3559/ಅಡ್ವರ್ಟೋರ್/2022–23

ಕರ್ನಾಟಕ ಲೋಕಸೇವಾ ಆಯೋಗ
''ಉದ್ಯೋಗ ಸೌಧ'', ಬೆಂಗಳೂರು – 560 001
ಸಂಖ್ಯೆ: ಪಿಎಸ್‌ಸಿ 597 ಆರ್‌ಟಿಬಿ–2/22–23/3309 ದಿನಾಂಕ: 15.12.2022
ಪ್ರಕಟಣೆ
ಆಯೋಗವು ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ 201 ಆರ್‌ಟಿಬಿ(2)/2021–22/2431, ದಿ: 17.03.2022ರಲ್ಲಿ ಅಧಿಸೂಚಿಸಲಾದ **ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿನ ಕಿರಿಯ ಅಭಿಯಂತರರು (Junior Engineer) ಹುದ್ದೆಗಳ ನೇಮಕಾತಿ ಸಂಬಂಧಿಸಿದಂತೆ ಆಯೋಗವು** ದಿನಾಂಕ: 24.12.2022 ಮತ್ತು 25.12.2022ರಂದು ನಡೆಸುವ ಕಡ್ಡಾಯ ಕನ್ನಡ ಭಾಷಾ ಪರೀಕ್ಷೆ/ಸ್ಪರ್ಧಾತ್ಮಕ ಪರೀಕ್ಷೆಗಳ "**ಪ್ರವೇಶ ಪತ್ರಗಳನ್ನು**" ಅಭ್ಯರ್ಥಿಗಳು ಆಯೋಗದ ವೆಬ್‌ಸೈಟ್ **http://kpsc.kar.nic.in**ನಲ್ಲಿ ದಿನಾಂಕ: **16.12.2022**ರಿಂದ ಡೌನ್‌ಲೋಡ್ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಅರ್ಹ ಅಭ್ಯರ್ಥಿಗಳು ಪ್ರವೇಶ ಪತ್ರ ಡೌನ್‌ಲೋಡ್ ಮಾಡಲು ತಾಂತ್ರಿಕ ಸಮಸ್ಯೆ ಎದುರಾದಲ್ಲಿ ಹೆಲ್ಪ್‌ಲೈನ್ ಸಂಖ್ಯೆ: 18005728707ನ್ನು ಸಂಪರ್ಕಿಸತಕ್ಕದ್ದು.
ಸಹಿ/– (ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ
ಕರ್ನಾಟಕ ಲೋಕಸೇವಾ ಆಯೋಗ

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
ಬೆಂಗಳೂರು ಗ್ರಾಮಾಂತರ ಜಿಲ್ಲಾ ಪಂಚಾಯತ್
ಕಾರ್ಯಪಾಲಕ ಅಭಿಯಂತರರ ಕಛೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರ
ಇ–ಮೇಲ್: eerdwsd.bngr1@gmail.com; ದೂ: 080–29787463 (ಮೊ) 9448367736
ಸಂ: ಕಾಪಾಅ/ಗ್ರಾ.ಕು.ನೀ&ನೈರ್ಮಲ್ಯ ವಿಭಾಗ/ಬೆಂ.ಗ್ರಾ/ತಾ.ಶಾ/ಟೆಂಡರ್/22–23 ದಿನಾಂಕ: 14.12.2022
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 26/2022–23/1938 ದಿನಾಂಕ: 14.12.2022
(ಇ– ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೆಂಗಳೂರು ಗ್ರಾಮಾಂತರರವರಿಂದ 2021–2022 ನೇ ಸಾಲಿನ 2215 JJM ಲೆಕ್ಕಶೀರ್ಷಿಕೆಯಡಿ ಬೆಂಗಳೂರು ಗ್ರಾಮಾಂತರ ವಿಭಾಗ ವ್ಯಾಪ್ತಿಯ ಕಾಮಗಾರಿಗಳಿಗೆ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಣಿಯಾಗಿರುವ ಹಾಗೂ ಇ–ಪ್ರೊಕ್ಯೂರ್‌ಮೆಂಟ್ ಸಂಸ್ಥೆಯಲ್ಲಿ ನೊಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ ಐಟಂವಾರು ಟೆಂಡರ್‌ಗಳನ್ನು ಅನ್ವಯವಾಗುವ ಸ್ಟ್ಯಾಂಡರ್ ಟೆಂಡರ್ ಬಿಡ್ ಡಾಕ್ಯೂಮೆಂಟ್ KW-1, KW-2, KW-3 & KW-4 ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಅರ್ಜಿ ಮತ್ತು ಇ.ಎಂ.ಡಿಯನ್ನು ಇ–ಪೇಮೆಂಟ್ ಮುಖಾಂತರ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಸಲ್ಲಿಸುವುದು.
ಸಾಮಾನ್ಯ ಸೂಚನೆಗಳು: (1) ಗುತ್ತಿಗೆದಾರರು ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸಬೇಕು. (2) ಅರ್ಹತೆಗೆ ಬೇಕಾಗುವ ಎಲ್ಲಾ ಪ್ರಮಾಣ ಪತ್ರ ಆನ್‌ಲೈನ್ ಮೂಲಕ ಸಲ್ಲಿಸಬೇಕು. 1) ಟೆಂಡರ್ ದಾಸ್ತಾವೇಜುಗಳನ್ನು ವೆಬ್‌ಸೈಟ್: **http://eproc.karnataka.gov.in** ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ: **15.12.2022 ರ ಸಂಜೆ 4.00 ಗಂಟೆಯ ನಂತರ.** 2) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **22.12.2022 ಸಂಜೆ 5.30 ಗಂಟೆಯವರೆಗೆ.** 3) ಟೆಂಡರ್/ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **23.12.2022 ಸಂಜೆ 5.35 ಗಂಟೆಗೆ.** 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: **26.12.2022 ಬೆಳಿಗ್ಗೆ 11.00 ಗಂಟೆಗೆ.**
ಸಹಿ/–
ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಬೆಂಗಳೂರು ಗ್ರಾಮಾಂತರ.
ವಾಸಾಸಂಇ/ವಾಪ್ರ/3554/ಎಎಎ/2022–23

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳ ಚರಂಡಿ ಮಂಡಳಿ
ಮುಖ್ಯ ಅಭಿಯಂತರರ ಕಾರ್ಯಾಲಯ,
ಜಲಮಂಡಳಿ ಆವರಣ, ಸರ್.ಎಂ. ವಿಶ್ವೇಶ್ವರಯ್ಯ ರಸ್ತೆ, ಧಾರವಾಡ–580001.
ದೂರವಾಣಿ :0836–2447090 ಇಮೇಲ್ : kwbcen@gmail.com
ಟೆಂಡರ್ ಪ್ರಕಟಣೆ (ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನ ಮುಖಾಂತರ ಮಾತ್ರ)
ಈ ಕೆಳಗಿನ ಕಾಮಗಾರಿಗೆ ತಾಂತ್ರಿಕ ಮತ್ತು ಆರ್ಥಿಕ ಅರ್ಹತಾ ಅಗತ್ಯತೆಗಳನ್ನು ತೃಪ್ತಿಕರವಾಗಿ ಈಡೇರಿಸುವ ಸಂಸ್ಥೆ/ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕೆಳಕಂಡ (ದ್ವಿ ಲಕೋಟೆ ಪದ್ಧತಿಯಲ್ಲಿ) ಇಡುಗಂಟು ಟೆಂಡರ್ ಆಹ್ವಾನಿಸಲಾಗಿದೆ. ಈ ಕಚೇರಿ ಟೆಂಡರ ನೋಟಿಫಿಕೇಷನ್ ಪತ್ರ ಸಂಖ್ಯೆ:1646, ದಿನಾಂಕ:16.12.2022. (2ನೇ ಕರೆ)
ಕಾಮಗಾರಿಯ ಹೆಸರು: ಸ್ಥಳೀಯ ಸಂಸ್ಥೆಗಳಾದ ಗಜೇಂದ್ರಗಡ, ನರೇಗಲ್ ಮತ್ತು ರೋಣ ಪಟ್ಟಣಗಳ ಠೇವಣಿ ಆಧಾರದ ಮೇಲೆ ಗಜೇಂದ್ರಗಡ, ನರೇಗಲ್, ರೋಣ ಮತ್ತು ಮಾರ್ಗ ಮಧ್ಯದ ಗ್ರಾಮಗಳಿಗೆ ನೀರು ಸರಬರಾಜು ಯೋಜನೆಯಡಿ ಮಲಪ್ರಭಾ ಬಲದಂಡೆ ಕಾಲುವೆಯಿಂದ ಜಲಸಂಗ್ರಹಾಗಾರಕ್ಕೆ ನೀರನ್ನು ಪಡೆಯಲು 9.00 ಲಕ್ಷ ಲೀಟರ್ ಸಾಮರ್ಥ್ಯದ ಸಂಪ್ ಕಂ ಪಂಪ್ ಹೌಸ್ ನಿರ್ಮಿಸುವ, 1168 ಎಂ.ಎಂ. ವ್ಯಾಸದ ಎಂ.ಎಸ್. ಏರು ಕೊಳವೆ ಮಾರ್ಗ ಅಳವಡಿಸುವ, 1168 ಎಂ.ಎಂ. ವ್ಯಾಸದ ಎಂ.ಎಸ್. ಗ್ರ್ಯಾವಿಟಿ ಮೇನ್ ಅಳವಡಿಸುವ, 180 ಅಶ್ವಶಕ್ತಿ/ ಸೂಕ್ತ ಅಶ್ವಶಕ್ತಿ ಪಂಪಿಂಗ್ ಮಶಿನರಿಗಳನ್ನು ಅಳವಡಿಸಿ ವಿದ್ಯುದ್ದೀಕರಣಗೊಳಿಸುವುದು ಚಾಲನೆಗೊಳಿಸುವ ಕಾಮಗಾರಿ ಹಾಗೂ ಅಗತ್ಯ ಇತರೆ ಕಾಮಗಾರಿಗಳ ಮೂಲಸ್ಥಾವರ ನಿರ್ಮಾಣ ಕಾಮಗಾರಿ ಟೆಂಡರ್. (ಇಡುಗಂಟು)
INDENT.NO. KUWSDB/2022-23/WS/WORK_INDENT-3233/CALL-2.
ಹೆಚ್ಚಿನ ವಿವರಗಳಿಗಾಗಿ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಡುವುದು. ಹೆಚ್ಚಿನ ವಿವರಗಳಿಗಾಗಿ ಮುಖ್ಯ ಅಭಿಯಂತರು, ಕನನೀಸ ಮತ್ತು ಒಚ ಮಂಡಳಿ, ಧಾರವಾಡ ಕಚೇರಿಯನ್ನು ದಯವಿಟ್ಟು ಸಂಪರ್ಕಿಸಬಹುದು.
ಸಹಿ/– ಮುಖ್ಯ ಅಭಿಯಂತರು,
ಕನನೀಸ ಮತ್ತು ಒಚ ಮಂಡಳಿ, ಧಾರವಾಡ.
ವಾ.ಸಾ.ಇ./ಧಾ/866/2022–23/ದೇಶಪಾಂಡೆಪಬ್ಲಿಸಿಟಿ

ಕರ್ನಾಟಕ ಸರ್ಕಾರ
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ ನಿಯಮಿತ
ನಂ 10, 3ನೇ ಮಹಡಿ, ಖಾದಿ ಭವನ, ಜಸ್ಮಾದೇವಿ ಭವನ ರಸ್ತೆ, ವಸಂತನಗರ, ಬೆಂಗಳೂರು–560052.
ದೂರವಾಣಿ ಸಂಖ್ಯೆ: 29901193 ಇ–ಮೇಲ್:mdkmvstdc@gmail.com
ಸಂಖ್ಯೆ : ಕಮವಾಪಪಂಅನಿ/ಸಿ&ಆ/ಸಿಆರ್–30/2022–23 ದಿನಾಂಕ : 16.12.2022
ಟೆಂಡರ್ ಪ್ರಕಟಣೆ
(ಇ–ಟೆಂಡರ್ ಮೂಲಕ ಮಾತ್ರ)
ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಕೇಂದ್ರ ಕಚೇರಿ ಹಾಗೂ ಜಿಲ್ಲಾ ಕಚೇರಿಗಳಲ್ಲಿ 'ಸಿ' ಮತ್ತು, 'ಡಿ' ಸಮೂಹದ ಹುದ್ದೆಗಳಲ್ಲಿ ಹೊರಸಂಪನ್ಮೂಲದ ಆಧಾರದ ಮೇರೆಗೆ ಕಾರ್ಯನಿರ್ವಹಿಸಲು ಸಿಬ್ಬಂದಿ ಸೇವೆಯನ್ನು ಒದಗಿಸಲು ನೊಂದಾಯಿತ ಹೊರ ಮಾನವ ಸಂಪನ್ಮೂಲ ಏಜೆನ್ಸಿಗಳಿಂದ ಇ–ಪೋರ್ಟಲ್ ಮುಖಾಂತರ ದಿನಾಂಕ : 15.12.2022 ರಂದು ಟೆಂಡರ್ ಕರೆಯಲಾಗಿದ್ದು, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕವನ್ನು 30.12.2022ರ ಅಪರಾಹ್ನ 5.00 ಗಂಟೆಗೆ ನಿಗಧಿಪಡಿಸಲಾಗಿದೆ. ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ http://eproc.karnataka/gov.iv ರಲ್ಲಿ ನೋಡಬಹುದಾಗಿದೆ.
ಸಹಿ/–
ವ್ಯವಸ್ಥಾಪಕ ನಿರ್ದೇಶಕರು
DIPR/CP/3558/Zenkar/2022-23

ಕರ್ನಾಟಕ ಸರಕಾರ
ಜಿಲ್ಲಾ ನಗರಾಭಿವೃದ್ಧಿ ಕೋಶ, ಉತ್ತರ ಕನ್ನಡ ಜಿಲ್ಲೆ, ಕಾರವಾರ–581301
DISTRICT URBAN DEVELPOMENT CELL, D.C. OFFICE
UTTARA KANNADA DISTRICT, KARWAR,-581 301
ಫೋನ್: 08382–221170 ಇ–ಮೇಲ್: itstaffdudckarwar@gmail.com
No: DUDC-4/Nagarothana Phase-3/Saving/CR 01/2022-23 Date: 13-12-2022
TENDER NOTIFICATION (CALL-2)
The Deputy Commissioner, Uttar Kannada district, Karwar invites short term e-tenders from PWD registered contractors for Nagarothana-3 (saving amount) Project works as detailed below:
(1) Improvement of Roads & Drains works in Kumta TMC Limit Under Nagarothana (Municipality-3) (Saving amount **(Indent No. DMA/2022-23 RD/WORK_INDENT 132806/Call-2), Amount Put to Tender Rs. 53.71 Lakhs, EMD Amount: 1.08 Lakhs, Period of Construction: 06 Months (Including monsoon),** Tenders shall be submitted electronically at **www.eproc.karnataka.gov.in.**
Calendar of Events: (1) Last Date for uploading of completed tender documents: **28-12-2022 up to 16.30 hrs** (2) Date of Opening of Tenders (Technical Bids): **29-12-2022 at 17.00 hrs.** (3) Date of Opening of Tenders (Financial Bids): **30-12-2022 at 11.00 hrs.**
Tender conditions and further information can be obtained from the said office during working hours.
Sd/- Project Director
District Urban Development Cell,
U.K. District, Karwar
DIPR/KWR/MCA/722/22-23 dt15.12.2022

ದೇಶದ ವಿರುದ್ಧವಾಗಿ ಮಾತನಾಡುವವರಿಗೆ ಕಾನೂನು ವ್ಯವಸ್ಥೆ ತಕ್ಕ ಪಾಠ ಕಲಿಸಲಿದೆ: ಬಸವರಾಜ ಬೊಮ್ಮಾಯಿ

‘ಉಗ್ರರಿಗೆ ಬೆಂಬಲ: ಕೈ ಮುಖಂಡರಿಗೆ ಜೈಲೇ ಗತಿ’

ಪ್ರಜಾವಾಣಿ ವಾರ್ತೆ

ಪಾಂಡವಪುರ (ಮಂಡ್ಯ ಜಿಲ್ಲೆ): ‘ಭಯೋತ್ಪಾದಕರ ಬಗ್ಗೆ ಅನುಕಂಪ ವ್ಯಕ್ತಪಡಿಸುವ, ಅವರಿಗೆ ಬೆಂಬಲ ನೀಡುತ್ತಿರುವ ಕಾಂಗ್ರೆಸ್ ಮುಖಂಡರಿಗೆ ಜೈಲು ಶಾಶ್ವತವಾದ ನೆಲೆಯಾಗಲಿದೆ. ದೇಶದ ವಿರುದ್ಧವಾಗಿ ಮಾತನಾಡುವವರಿಗೆ ಕಾನೂನು ವ್ಯವಸ್ಥೆ ತಕ್ಕ ಪಾಠ ಕಲಿಸಲಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಶುಕ್ರವಾರ ಆಕ್ರೋಶ ವ್ಯಕ್ತಪಡಿಸಿದರು.

ಪಟ್ಟಣದ ಪಾಂಡವ ಕ್ರೀಡಾಂಗಣದಲ್ಲಿ ನಡೆದ ‘ಜನ ಸಂಕಲ್ಪ ಯಾತ್ರೆ’ಯಲ್ಲಿ ಮಾತನಾಡಿದ ಅವರು, ‘ಕುಕ್ಕರ್ ಬಾಂಬ್ ಸ್ಫೋಟಿಸಲು ಹೊರಟಿದ್ದ ಭಯೋತ್ಪಾದನ ಬಗ್ಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅನುಕಂಪ ವ್ಯಕ್ತಪಡಿಸುತ್ತಾರೆ. ಆತ ಭಯೋತ್ಪಾದಕ ಆಗಿರದಿದ್ದರೆ ಎನ್‌ಐಎ ಹೇಗೆ ತನಿಖೆ ನಡೆಸುತ್ತಿತ್ತು. ಇಷ್ಟೂ ಗೊತ್ತಾಗುವುದಿಲ್ಲವೇ’ ಎಂದು ಕೇಳಿದರು.

‘ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ತಮ್ಮ ನಿಲುವು ಸ್ಪಷ್ಟಪಡಿಸಬೇಕು. ದೇಶದ ಪರವೋ, ಭಯೋತ್ಪಾದಕರ ಪರವೋ ಎಂಬುದನ್ನು ಜನರಿಗೆ ತಿಳಿಸಬೇಕು. ದೇಶದ ಸುರಕ್ಷತೆ ಬಗ್ಗೆ ಹಗುರವಾಗಿ ಮಾತನಾಡುವ ಕಾಂಗ್ರೆಸ್ ನಾಯಕರು ಜೈಲಿಗೆ ಹೋಗುವುದು ನಿಶ್ಚಿತ’ ಎಂದರು.

ಪಾಂಡವಪುರದ ಪಾಂಡವ ಕ್ರೀಡಾಂಗಣದಲ್ಲಿ ಶುಕ್ರವಾರ ಬಿಜೆಪಿ ಜನಸಂಕಲ್ಪ ಯಾತ್ರೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಉದ್ಘಾಟಿಸಿದರು. ಸಚಿವರಾದ ಆರ್.ಅಶೋಕ, ಕೆ.ಗೋಪಾಲಯ್ಯ,ಇತರರು ಇದ್ದಾರೆ

‘ಹಿಂದೆ ಕಾಂಗ್ರೆಸ್ ಮಾಡಿದ್ದ ತಪ್ಪಿನಿಂದಾಗಿ ಭಾರತದ ಭೂಮಿ ಚೀನಾ ಪಾಲಾಯಿತು. ಈಗ ಒಂದಿಂಚೂ ಜಾಗ ಚೀನಾ ಪಾಲಾಗದಂತೆ ಪ್ರಧಾನಿ ನರೇಂದ್ರ ಮೋದಿ ಎಚ್ಚರ ವಹಿಸಿದ್ದಾರೆ. ಚೀನಾ ಹಾಗೂ ನಮ್ಮ ಸೈನಿಕರ ನಡುವೆ ಘರ್ಷಣೆ ನಡೆದರೂ ಆ ಬಗ್ಗೆ ಕಾಂಗ್ರೆಸ್ ಮುಖಂಡರು ಹಗುರವಾಗಿ ಮಾತನಾಡುತ್ತಾರೆ. ಚುನಾವಣೆಗಳಲ್ಲಿ ಸೋಲುತ್ತಿರುವುದರಿಂದ ಹತಾಶರಾಗಿ ಮಾತನಾಡುತ್ತಿದ್ದಾರೆ’ ಎಂದು ವಾಗ್ದಾಳಿ ನಡೆಸಿದರು.

‘ಅನ್ನಭಾಗ್ಯ ಯೋಜನೆ ಜಾರಿಯಿಂದಾಗಿ ಕನ್ನ ಹಾಕುವವರಿಗೆ ಅನುಕೂಲವಾಗಿದೆ. ಅನ್ನಭಾಗ್ಯ ಅಕ್ಕಿ ಮಾರಾಟ ಹಗರಣ ತೀವ್ರಗೊಂಡಿದೆ’ ಎಂದು ದೂರಿದರು. ‘ಅಕ್ಕಿ ಕೊಟ್ಟವರು ಸಿದ್ದರಾಮಯ್ಯ ಅಲ್ಲ, ನರೇಂದ್ರ ಮೋದಿ. ಒಳಗೆ ನರೇಂದ್ರ ಮೋದಿ ಕೊಟ್ಟ ₹ 30ರ ಅಕ್ಕಿ ಇದ್ದರೆ, ಸಿದ್ದರಾಮಯ್ಯ ಕೊಡುತ್ತಿದ್ದುದು ₹ 3ರ ಚೀಲ ಮಾತ್ರ’ ಎಂದರು.

ಟಿಪ್ಪು ಡ್ರಾಪ್‌ಗೆ ಹಾಕುತ್ತಾರೆ: ಕಂದಾಯ ಸಚಿವ ಆರ್.ಅಶೋಕ ಮಾತನಾಡಿ, ‘ಮಾತೆತ್ತಿದರೆ ಸಿದ್ದರಾಮಯ್ಯ ಧರ್ಮಾಂಧ ಟಿಪ್ಪುವನ್ನು ಹುಲಿ ಎನ್ನುತ್ತಾರೆ. ಅಲ್ಪಸಂಖ್ಯಾತರ ಮತಕ್ಕಾಗಿ ಹಿಂದೂ ಸಮಾಜವನ್ನು ತೆಗಳುತ್ತಾರೆ. ಹೀಗೆಯೇ ಮುಂದುವರಿದರೆ ಜನ ಕಾಂಗ್ರೆಸ್ ಮುಖಂಡರನ್ನು ನಂದಿ ಬೆಟ್ಟದ ಟಿಪ್ಪು ಡ್ರಾಪ್‌ನಲ್ಲಿ ಹಾಕುತ್ತಾರೆ’ ಎಂದು ವ್ಯಂಗ್ಯವಾಡಿದರು.

‘ಒಂದೆರಡು ರಾಜ್ಯಗಳಲ್ಲಿ ಮಾತ್ರ ಕಾಂಗ್ರೆಸ್ ಉಸಿರಾಡುತ್ತಿದೆ. ಹಲವು ಕಾಂಗ್ರೆಸ್ ಮುಖಂಡರು ಬಿಜೆಪಿ ಸೇರಲಿದ್ದು, ವಿಧಾನಸಭೆ ಚುನಾವಣೆ ನಂತರ ಕರ್ನಾಟಕವೂ ಕಾಂಗ್ರೆಸ್ ಮುಕ್ತವಾಗಲಿದೆ. ಕಾಂಗ್ರೆಸ್ ಸರ್ಕಾರ ಮಾಡದ ಹಲವು ಕೆಲಸಗಳನ್ನು ಬಿಜೆಪಿ ಮಾಡಿದೆ. ವಿಧಾನಸೌಧದ ಎದುರು ಕೆಂಪೇಗೌಡ ಪ್ರತಿಮೆ ಸ್ಥಾಪಿಸುವುದು ನಮ್ಮ ಸಂಕಲ್ಪವಾಗಿದೆ’ ಎಂದರು.

ಮುಖ್ಯಮಂತ್ರಿಗೆ ರೈತರ ಪ್ರತಿಭಟನೆ ಬಿಸಿ

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಭೇಟಿಯಾಗಿ ಕಬ್ಬು ಸೇರಿ ಕೃಷಿ ಬೆಳೆಗಳಿಗೆ ವೈಜ್ಞಾನಿಕ ಬೆಲೆ ನೀಡಲು ಒತ್ತಾಯಿಸಲು ರೈತ ಸಂಘದ ಸಾವಿರಾರು ಸದಸ್ಯರು ಪಾಂಡವಪುರದ ಶ್ರೀರಂಗಪಟ್ಟಣ ರಸ್ತೆಯಲ್ಲಿ ಸೇರಿದ್ದರು. ಆದರೆ, ಮುಖ್ಯಮಂತ್ರಿ ರೈತರನ್ನು ಭೇಟಿಯಾಗಲಿಲ್ಲ. ಇದರಿಂದ ಆಕ್ರೋಶಗೊಂಡ ರೈತರು ಕಪ್ಪು ಬಟ್ಟೆ ಪ್ರದರ್ಶಿಸಿದರು. ಮುಖ್ಯಮಂತ್ರಿ, ಬಿಜೆಪಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

‘ಕಾಂಗ್ರೆಸ್‌ಗೆ ಭಯೋತ್ಪಾದಕರ ಮೇಲೆ ಪ್ರೀತಿ’

ಮಂಗಳೂರು: ‘ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮತ್ತೆ ಭಯೋತ್ಪಾದನೆಗೆ ಪ್ರೇರಣೆ ನೀಡಲಿದೆ. ಅವರಿಗೆ ಪೊಲೀಸ್ ಇಲಾಖೆಯ ಬಗ್ಗೆ ಗೌರವ ಇಲ್ಲ. ಭಯೋತ್ಪಾದಕರ ಮೇಲೆ ಪ್ರೀತಿ ಇದೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಶುಕ್ರವಾರ ಸುದ್ದಿಗಾರರಿಗೆ ತಿಳಿಸಿದರು.

ಬಹು ಮಾಧ್ಯಮ ಪ್ರಜಾವಾಣಿ 75 www.prajavani.net LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರಪ್ರಸಾರ
ಇಂದು
ಪಾಡ್‌ಕಾಸ್ಟ್: ಪ್ರಚಲಿತ: ಬೆಳಿಗ್ಗೆ 9. ಸಂಪಾದಕೀಯ: ಬೆಳಿಗ್ಗೆ 9.30
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ನಾಳೆ
ನಿರುಪಮಾ - ರಾಜೇಂದ್ರ ಸೆಲೆಬ್ರಿಟಿ PREMIER
ಭರತ ನಾಟ್ಯ ಮತ್ತು ಕಥಕ್ ಕಲಾವಿದರು
ನೃತ್ಯಾರ್ಪಣ
ಬೆಳಿಗ್ಗೆ 10 ಗಂಟೆಗೆ

ಸ್ಫೋಟ ಸಮರ್ಥಿಸಿಲ್ಲ: ಡಿಕೆಶಿ

ಬೆಂಗಳೂರು: ‘ಮಂಗಳೂರಿನಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟದ ಘಟನೆಯನ್ನು ಸಮರ್ಥಿಸಿಕೊಂಡಿಲ್ಲ. ಸರ್ಕಾರ ವೈಫಲ್ಯ ಮುಚ್ಚಿಕೊಳ್ಳಲು ಬಿಜೆಪಿಯವರು ಇಂತಹ ಘಟನೆಗಳನ್ನು ಹೇಗೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎಂದಷ್ಟೇ ಹೇಳಿದ್ದೇನೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಶುಕ್ರವಾರ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ ಪಕ್ಷದ ನಾಯಕರೇ ಭಯೋತ್ಪಾದನೆಗೆ ಬಲಿಯಾಗಿದ್ದಾರೆ. ದೇಶದ ಏಕತೆ, ಸಮಗ್ರತೆ ರಕ್ಷಣೆ, ಶಾಂತಿಯುತ ವಾತಾವರಣ ಸ್ಥಾಪನೆಗೆ ನಮ್ಮ ಬೆಂಬಲ. ಕುಕ್ಕರ್ ಬಾಂಬ್ ಪ್ರಕರಣದ ತನಿಖೆ ಬೇಡ ಎಂದು ನಾನು ಹೇಳಿಲ್ಲ’ ಎಂದರು.

ಮತದಾರರ ಮಾಹಿತಿ ಕಳವು ಪ್ರಕರಣ ಮುಚ್ಚಿಹಾಕಲು ಬಿಜೆಪಿಯು ಈ ಘಟನೆಯನ್ನು ಬಳಸಿಕೊಂಡಿತು. ಈಗ ಮುಖ್ಯಮಂತ್ರಿ ಬೊಮ್ಮಾಯಿ ಮತ್ತು ಬಿ.ಎಸ್.ಯಡಿಯೂರಪ್ಪ ಭಿನ್ನಾಭಿಪ್ರಾಯವನ್ನು ಮುಚ್ಚಿಟ್ಟು, ಜನರ ಗಮನ ಬೇರೆಡೆ ಸೆಳೆಯಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಿದರು.

ಪೊಲೀಸ್ ಕಸ್ಟಡಿಗೆ ಸೌಭಾಗ್ಯ

ಚಿತ್ರದುರ್ಗ: ಮುರುಘಾ ಮಠದ ಶಿವಮೂರ್ತಿ ಶರಣರ ವಿರುದ್ಧ ಪೋಕ್ಸೊ ಕಾಯ್ದೆಯಡಿ ದೂರು ದಾಖಲಿಸಲು ವಿದ್ಯಾರ್ಥಿನಿಯರಿಗೆ ಕುಮ್ಮಕ್ಕು ನೀಡಿದ ಹಾಗೂ ಪಿತೂರಿ ನಡೆಸಿದ ಆರೋಪದಡಿ ಗುರುವಾರ ತಡರಾತ್ರಿ ಬಂಧನಕ್ಕೊಳಗಾಗಿರುವ ಜಿಲ್ಲಾ ಪಂಚಾಯಿತಿ ಮಾಜಿ ಅಧ್ಯಕ್ಷೆ ಸೌಭಾಗ್ಯ ಬಸವರಾಜನ್ ಅವರನ್ನು ಪೊಲೀಸರು ಶುಕ್ರವಾರ ನ್ಯಾಯಾಲಯಕ್ಕೆ ಹಾಜರುಪಡಿಸಿದರು.

ಸಂಜೆ 5.45ಕ್ಕೆ 1ನೇ ಹೆಚ್ಚುವರಿ ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯಕ್ಕೆ ಸೌಭಾಗ್ಯ ಅವರನ್ನು ಗ್ರಾಮಾಂತರ ಠಾಣೆ ಪೊಲೀಸರು ಹಾಜರುಪಡಿಸಿದರು. ಈ ವೇಳೆ ವಿಚಾರಣೆಗಾಗಿ ಐದು ದಿನ ಪೊಲೀಸ್ ಕಸ್ಟಡಿಗೆ ನೀಡುವಂತೆ ಮನವಿ ಮಾಡಲಾಯಿತು. ಆದರೆ ಡಿ.17 ರ ಸಂಜೆ 5.45 ರವರೆಗೆ ಮಾತ್ರ ಪೊಲೀಸ್ ಕಸ್ಟಡಿಗೆ ವಹಿಸಿ ನ್ಯಾಯಾಧೀಶರು ಆದೇಶಿಸಿದರು.

ಬಂಧನ ಭೀತಿ ಎದುರಿಸುತ್ತಿದ್ದ ಸೌಭಾಗ್ಯ ನಿರೀಕ್ಷಣಾ ಜಾಮೀನು ಕೋರಿ ಸಲ್ಲಿಸಿದ್ದ ಅರ್ಜಿಯನ್ನು ಜಿಲ್ಲಾ ಪ್ರಧಾನ ಮತ್ತು ಸೆಷನ್ಸ್ ನ್ಯಾಯಾಲಯ ವಜಾ ಮಾಡಿತ್ತು. ಇದೇ ಪ್ರಕರಣದಲ್ಲಿ ಸೌಭಾಗ್ಯ ಅವರ ಪತಿ ಎಸ್.ಕೆ. ಬಸವರಾಜನ್, ಶಿಕ್ಷಕ ಬಸವರಾಜೇಂದ್ರ, ಛಾಯಾಗ್ರಾಹಕ ಮಯೂರ ಈಗಾಗಲೇ ಬಂಧಿತರಾಗಿದ್ದಾರೆ.

ಖಜಾನೆ ಲೂಟಿಯೇ ಬಿಜೆಪಿಯ ಸಾಧನೆ ಕಾರ್ಡ್

ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿರುಗೇಟು

ಪ್ರಜಾವಾಣಿ ವಾರ್ತೆ

ಕುಷ್ಟಗಿ (ಕೊಪ್ಪಳ ಜಿಲ್ಲೆ): ‘ನಾಲ್ಕೂವರೆ ವರ್ಷಗಳಲ್ಲಿ ಮಾಡಿದ ಭ್ರಷ್ಟಾಚಾರ ಹಾಗೂ ಖಜಾನೆ ಲೂಟಿಯೇ ಬಿಜೆಪಿ ಸರ್ಕಾರದ ಸಾಧನೆಯ ಕಾರ್ಡ್’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ತಿರುಗೇಟು ನೀಡಿದರು.

ಕುಷ್ಟಗಿಯಲ್ಲಿ ಶುಕ್ರವಾರ ನಡೆದ ಶಾಸಕ ಅಮರೇಗೌಡ ಬಯ್ಯಾಪುರ ಜನ್ಮದಿನ ಮತ್ತು ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ ಸೇರಿದ್ದ ಸಾವಿರಾರು ಜನರ ಎದುರು ಮಾತನಾಡಿದ ಅವರು, 'ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ ಸರ್ಕಾರದ ಯೋಜನೆಗಳ ಸಾಧನೆಯ ಕಾರ್ಡ್ ಹಿಡಿದು ಮತ ಕೇಳಿ ಎಂದು ಕರೆ ನೀಡಿದ್ದಾರೆ. ಆದರೆ, ಈ ಸರ್ಕಾರದ ಭ್ರಷ್ಟಾಚಾರದ ಬಗ್ಗೆ ವಿಧಾನಸೌಧದ ಗೋಡೆಗಳು ಕೂಡ ಪಿಸುಗುಡುತ್ತಿವೆ. ಶೇ 40ರಷ್ಟು ಕಮಿಷನ್ ಬಗ್ಗೆ ಜನರೇ ಮಾತನಾಡುತ್ತಿದ್ದಾರೆ. ಗುತ್ತಿಗೆದಾರರ ಸಂಘದವರು ಪ್ರಧಾನಿಗೆ ದೂರು ಸಲ್ಲಿಸಿದರೂ ಬಸವರಾಜ ಬೊಮ್ಮಾಯಿ ಏನೂ ಕ್ರಮ ಕೈಗೊಂಡಿಲ್ಲ' ಎಂದು ಹರಿಹಾಯ್ದರು.

'ನಾನು ತಿನ್ನುವುದಿಲ್ಲ, ತಿನ್ನಲು ಬಿಡುವುದಿಲ್ಲ ಎಂದು ಮೋದಿ ಹೇಳುತ್ತಿದ್ದಾರೆ. ಆದರೆ, ಹಣ ಕೊಳ್ಳೆ ಹೊಡೆದ ಬೊಮ್ಮಾಯಿ ಸರ್ಕಾರದ ವಿರುದ್ಧ ಏನು ಕ್ರಮ ಕೈಗೊಂಡರು. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾಗ ಕೊಟ್ಟ 7 ಕೆ.ಜಿ ಅಕ್ಕಿಯನ್ನು 5 ಕೆ.ಜಿ.ಗೆ ಇಳಿಸಿದ್ದು ಯಾಕೆ? ಇದಕ್ಕೆ ಬಿಜೆಪಿ 'ಅವರಪ್ಪನ ಮನೆಯಿಂದ ದುಡ್ಡು ಕೊಡುತ್ತಿತ್ತಾ' ಎಂದು ಪ್ರಶ್ನೆಗಳನ್ನು ಕೇಳಿದರು.

ಕೊಪ್ಪಳ ಜಿಲ್ಲೆ ಕುಷ್ಟಗಿಯಲ್ಲಿ ಶುಕ್ರವಾರ ನಡೆದ ಕಾಂಗ್ರೆಸ್ ಸಾಧನಾ ಸಮಾವೇಶದಲ್ಲಿ ಪಾಲ್ಗೊಂಡಿದ್ದ ಜನ –ಪ್ರಜಾವಾಣಿ ಚಿತ್ರ/ ಭರತ್ ಕಂದಕೂರ

‘ಜನಸಾಮಾನ್ಯರು, ಮಹಿಳೆಯರು, ಬಡವರು, ಹಿಂದುಳಿದವರು, ಅಲ್ಪಸಂಖ್ಯಾತರ ವಿರೋಧಿ ಸರ್ಕಾರ ಇದಾಗಿದ್ದು, ಮುಂಬರುವ ಚುನಾವಣೆಯಲ್ಲಿ ಕಿತ್ತೊಗೆಯಬೇಕು. ಇಲ್ಲವಾದರೆ ರಾಜ್ಯದ ಬೆಳವಣಿಗೆ ಅಭಿವೃದ್ಧಿ ಹತ್ತು ವರ್ಷ ಹಿಂದಕ್ಕೆ ಹೋಗುತ್ತದೆ. ಇದು ರಣಹೇಡಿ ಸರ್ಕಾರ' ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, 'ಅಧಿಕಾರವಿದ್ದಾಗ ಏನೂ ಮಾಡದ ಕಿವಿ, ಕಣ್ಣು ಹಾಗೂ ಹೃದಯವಿಲ್ಲದ ಬಿಜೆಪಿ ಸರ್ಕಾರ ಈಗ ಜನಸಂಕಲ್ಪ ಯಾತ್ರೆ ಮಾಡುತ್ತಿದೆ. ನಿಮ್ಮ ಆಡಳಿತ ಇರುವುದು ಕೇವಲ ನೂರು ದಿನ ಮಾತ್ರ' ಎಂದರು.

ಶಾಸಕ ಅಮರೇಗೌಡ ಬಯ್ಯಾಪುರ ಅವರು ಸಿದ್ದರಾಮಯ್ಯಗೆ ಕಂಬಳಿ ಹೊದಿಸಿ ಬೆಳ್ಳಿ ಗದೆ ಮತ್ತು ಡಿ.ಕೆ. ಶಿವಕುಮಾರ್‌ಗೆ ಬೆಳ್ಳಿ ಕತ್ತಿ ಉಡುಗೊರೆಯಾಗಿ ನೀಡಿದರು.

ಲಕ್ಷ್ಮಿ ಹೆಬ್ಬಾಳಕರ, ಮಹಾಂತೇಶ ಕೌಜಲಗಿ, ಕೆ.ರಾಘವೇಂದ್ರ ಹಿಟ್ನಾಳ, ಯು.ಟಿ. ಖಾದರ್, ಸತೀಶ್ ಜಾರಕಿಹೊಳಿ, ಆನಂದ ನ್ಯಾಮಗೌಡ, ಭೀಮಾನಾಯ್ಕ, ಬಸವನಗೌಡ ತುರವಿಹಾಳ, ಮಾಜಿ ಸಚಿವ ಬಸವರಾಜ ರಾಯರಡ್ಡಿ ಪಾಲ್ಗೊಂಡಿದ್ದರು.

‘ಕುಷ್ಟಗಿಯಿಂದ ಸ್ಪರ್ಧೆ ಇಲ್ಲ’

ಕುಷ್ಟಗಿ: ಮೊದಲಿನಿಂದಲೂ ಕೊಪ್ಪಳ ಜಿಲ್ಲೆಯ ಜನ ನನ್ನ ಬಗ್ಗೆ ಅಪಾರ ಪ್ರೀತಿ ಹಾಗೂ ಗೌರವ ಹೊಂದಿದ್ದಾರೆ. ನಿಮ್ಮ ಪ್ರೀತಿಗೆ ಅಭಾರಿಯಾಗಿದ್ದೇನೆ. ಮುಂದಿನ ಚುನಾವಣೆಗೆ ಕುಷ್ಟಗಿ ಕ್ಷೇತ್ರದಿಂದ ಸ್ಪರ್ಧಿಸುವಂತೆ ನೀವು ಆಹ್ವಾನ ನೀಡಿದ್ದೀರಿ. ಆದರೆ ನಾನು ಇಲ್ಲಿಂದ ಸ್ಪರ್ಧೆ ಮಾಡುವುದಿಲ್ಲ ಎಂದು ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದರು.

ನರೇಂದ್ರ ಮೋದಿ ಭಾವನಾತ್ಮಕ ವಿಷಯಗಳನ್ನು ಮುಂದಿಟ್ಟು ದೇಶವನ್ನು ಒಡೆದಿದ್ದಾರೆ. ರಾಹುಲ್ ಗಾಂಧಿ ಯಾತ್ರೆ ಮೂಲಕ ಒಡೆದ ಭಾರತವನ್ನು ಜೋಡಿಸುವ ಕೆಲಸ ಮಾಡುತ್ತಿದ್ದಾರೆ.

ಸಿದ್ದರಾಮಯ್ಯ ವಿಧಾನಸಭೆ ವಿರೋಧ ಪಕ್ಷದ ನಾಯಕ

ಸಂಕ್ಷಿಪ್ತ ಸುದ್ದಿಗಳು

ದಸರಾ ಆನೆ ‘ಬಲರಾಮ’ಗೆ ಗುಂಡು

ಪಿರಿಯಾಪಟ್ಟಣ (ಮೈಸೂರು ಜಿಲ್ಲೆ): ನಾಡಹಬ್ಬ ದಸರಾ ಜಂಬೂಸವಾರಿಯಲ್ಲಿ 14 ಬಾರಿ ಚಿನ್ನದ ಅಂಬಾರಿ ಹೊತ್ತಿದ್ದ ಹೆಗ್ಗಳಿಕೆಯ ‘ಬಲರಾಮ’ ಆನೆಗೆ ಗುರುವಾರ ರಾತ್ರಿ ಗುಂಡು ಹಾರಿಸಿದ್ದ ಸುರೇಶ್ ಎಂಬುವರನ್ನು ಅರಣ್ಯ ಇಲಾಖೆ ಅಧಿಕಾರಿಗಳು ಶುಕ್ರವಾರ ಬಂಧಿಸಿದ್ದಾರೆ.

ತಾಲ್ಲೂಕಿನ ಭೀಮನಕಟ್ಟೆ ಆನೆ ಶಿಬಿರ ಬಳಿಯ ಜಮೀನಿಗೆ ‘ಬಲರಾಮ’ ಬಂದಿತ್ತು. ಇದರಿಂದ ಸಿಟ್ಟಿಗೆದ್ದ ಮಾಲೀಕ ಸುರೇಶ್ ಗುಂಡು ಹಾರಿಸಿದ್ದಾರೆ. ಆನೆಯ ಬಲ ತೊಡೆಯ ಬಳಿ ಗುಂಡು ಹೊಕ್ಕಿದ್ದು, ಚೇತರಿಸಿಕೊಳ್ಳುತ್ತಿದೆ.

‘ಕೃತ್ಯ ಎಸಗಿದ್ದ ಆರೋಪದ ಮೇರೆಗೆ ಆರೋಪಿಯನ್ನು ಬಂಧಿಸಲಾಗಿದೆ. ಒಂಟಿ ನಳಿಕೆಯ ಕೋವಿ ಹಾಗೂ ಗುಂಡುಗಳನ್ನು ವಶಕ್ಕೆ ಪಡೆಯಲಾಗಿದೆ’ ಎಂದು ಆರ್‌ಎಫ್‌ಒ ರತನ್ ಕುಮಾರ್ ‘ಪ್ರಜಾವಾಣಿ’ಗೆ ತಿಳಿಸಿದರು.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದ್ದು, 14 ದಿನಗಳ ನ್ಯಾಯಾಂಗ ಬಂಧನ ವಿಧಿಸಿದೆ.

ಅಭ್ಯರ್ಥಿ ಘೋಷಣೆ ಸರಿಯಲ್ಲ: ಜಾರಕಿಹೊಳಿ

ಕುಷ್ಟಗಿ (ಕೊಪ್ಪಳ ಜಿಲ್ಲೆ): ‘ಸಿದ್ದರಾಮಯ್ಯ ಅವರು ಹೋದಲೆಲ್ಲ ಮುಂದಿನ ಚುನಾವಣೆಗೆ ಪಕ್ಷದ ಅಭ್ಯರ್ಥಿಗಳನ್ನು ಘೋಷಣೆ ಮಾಡುವುದು ಸರಿಯಲ್ಲ’ ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಇನ್ನೂ ಅರ್ಜಿಗಳ ಪರಿಶೀಲನೆಯಾಗಿಲ್ಲ. ಆಗಲೇ ಮತ್ತೊಂದು ಕಡೆ ಇಂಥವರಿಗೇ ಮತ ಹಾಕಿ ಅನ್ನೋದು ಸರಿಯಲ್ಲ’ ಎಂದರು.

ಜಾರಕಿಹೊಳಿ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ 'ನಾನು ಅಭ್ಯರ್ಥಿಗಳನ್ನು ಎಲ್ಲಿಯೂ ಘೋಷಣೆ ಮಾಡಿಲ್ಲ. ’ ಎಂದರು.

ಚಂದ್ರಶೇಖರ್ ಸಾವು: ಸಿಐಡಿಗೆ

ಹೊನ್ನಾಳಿ: ಶಾಸಕ ಎಂ.ಪಿ. ರೇಣುಕಾಚಾರ್ಯ ಅವರ ತಮ್ಮನ ಮಗ ಚಂದ್ರಶೇಖರ್ ಅವರ ಸಾವಿನ ಪ್ರಕರಣವನ್ನು ಸಿಐಡಿ ತನಿಖೆಗೆ ವಹಿಸಲಾಗಿದೆ.

ಚಂದ್ರಶೇಖರ್ ಸಾವು ಕೊಲೆಯೋ ಅಥವಾ ಅಪಘಾತವೋ ಎಂಬ ಸಂಶಯವನ್ನು ಶಾಸಕ ಎಂ.ಪಿ. ರೇಣುಕಾಚಾರ್ಯ, ತಮ್ಮ ಎಂ.ಪಿ. ರಮೇಶ್ ಅವರ ಕುಟುಂಬ ವ್ಯಕ್ತಪಡಿಸಿ, ಉನ್ನತ ಮಟ್ಟದ ತನಿಖೆ ನಡೆಸುವಂತೆ ಮುಖ್ಯಮಂತ್ರಿಗೆ ಮನವಿ ಮಾಡಿತ್ತು.

ಶ್ರೀ ದೇವರಾಜ ಅರಸ್ ಎಜುಕೇಷನಲ್ ಟ್ರಸ್ಟ್ (ರಿ.) ಟಮಕ, ಕೋಲಾರ
ಆರ್.ಎಲ್.ಜಾಲಪ್ಪ ಸಮೂಹ ಶಿಕ್ಷಣ ಸಂಸ್ಥೆಗಳು, ದೊಡ್ಡಬಳ್ಳಾಪುರ

ಜಾಲಪ್ಪ ನೆನಪು
ಪ್ರಥಮ ವರ್ಷದ ಪುಣ್ಯಸ್ಮರಣೆ
ಆರ್.ಎಲ್.ಜಾಲಪ್ಪ ಸ್ಮೃತಿವನ
ಮತ್ತು
ವಸ್ತು ಸಂಗ್ರಹಾಲಯ ಉದ್ಘಾಟನೆ
ದಿನಾಂಕ: 17-12-2022, ಶನಿವಾರ
ಸಮಯ: ಬೆಳಗ್ಗೆ 11 ಗಂಟೆಗೆ
ಸ್ಥಳ: ಆರ್‌ಎಲ್‌ಜೆಐಟಿ ಕ್ಯಾಂಪಸ್, ದೊಡ್ಡಬಳ್ಳಾಪುರ
ಸರ್ವರಿಗೂ ಆದರದ ಸ್ವಾಗತ
ಶ್ರೀ ಆರ್.ಎಲ್. ಜಾಲಪ್ಪ
1925-2021
ಮಾಜಿ ಕೇಂದ್ರ ಸಚಿವರು ಹಾಗೂ ಸಂಸ್ಥಾಪಕ ಅಧ್ಯಕ್ಷರು
ಶ್ರೀ ದೇವರಾಜ ಅರಸ್ ಶಿಕ್ಷಣ ಸಂಸ್ಥೆ ಟ್ರಸ್ಟ್ (ರಿ.)
ಶ್ರೀ ಜಿ.ಎಚ್. ನಾಗರಾಜ, ಅಧ್ಯಕ್ಷರು, ಎಸ್‌ಡಿಯುಇಟಿ
ಶ್ರೀ ಜೆ.ರಾಜೇಂದ್ರ, ಉಪಾಧ್ಯಕ್ಷರು, ಎಸ್‌ಡಿಯುಇಟಿ
ಶ್ರೀ ಕೆ.ಜಿ.ಹನುಮಂತರಾಜು ಕಾರ್ಯದರ್ಶಿ, ಎಸ್‌ಡಿಯುಇಟಿ
ಶ್ರೀ ದೇವರಾಜ ಅರಸ್ ಎಜುಕೇಷನಲ್ ಟ್ರಸ್ಟ್ ಆಡಳಿತ ಮಂಡಳಿಯ ಎಲ್ಲ ಸದಸ್ಯರು, ಶೈಕ್ಷಣಿಕ ಘಟಕಗಳ ಮುಖ್ಯಸ್ಥರು, ಬೋಧಕ-ಬೋಧಕೇತರ ಸಿಬ್ಬಂದಿ, ಜಾಲಪ್ಪ ಅವರ ಕುಟುಂಬದ ಎಲ್ಲ ಸದಸ್ಯರು ಹಾಗೂ ಅಭಿಮಾನಿಗಳು

ಸುಭಾಷಿತ

ಸಾಮಾಜಿಕ ನ್ಯಾಯ ಇಲ್ಲದಿದ್ದರೆ ಸ್ವಾತಂತ್ರ್ಯ ಅಪೂರ್ಣವಾಗುತ್ತದೆ.

-ಅಟಲ್ ಬಿಹಾರಿ ವಾಜಪೇಯಿ

ಸ್ಟ್ಯಾನ್ ಸ್ವಾಮಿ ಪ್ರಕರಣ ಸಂಚಿನತ್ತ ಬೊಟ್ಟು ಮಾಡುವ ವರದಿ

ಎಲ್ಗಾರ್ ಪರಿಷತ್ ಪ್ರಕರಣದ ಆರೋಪಿಯಾಗಿದ್ದ, ಜೈಲಿನಲ್ಲಿಯೇ ಕಳೆದ ವರ್ಷ ಮೃತಪಟ್ಟ ಸ್ಟ್ಯಾನ್ ಸ್ವಾಮಿ ಅವರ ಲ್ಯಾಪ್‌ಟಾಪ್‌ನಲ್ಲಿ ಅವರನ್ನು ಸಿಲುಕಿಸಲು ಬೇಕಾಗಿದ್ದ ದಾಖಲೆಗಳನ್ನು ಸೇರಿಸಲಾಗಿತ್ತು ಎಂಬುದು ವರದಿಯಾಗಿದೆ. ಸ್ವಾಮಿ ಅವರ ಮೇಲೆ ಹುಸಿ ಪ್ರಕರಣ ದಾಖಲಿಸಲು ಸಂಚು ನಡೆದಿತ್ತು ಮತ್ತು ಅದರ ಯೋಜನೆ ಹಾಗೂ ಅನುಷ್ಠಾನ ಅತ್ಯುನ್ನತ ಮಟ್ಟದಲ್ಲಿಯೇ ಆಗಿತ್ತು ಎಂಬುದರತ್ತ ಈ ವರದಿಯು ಬೊಟ್ಟು ಮಾಡುತ್ತಿದೆ. 'ಕುತಂತ್ರಾಂಶ ಬಳಸಿ ಲ್ಯಾಪ್‌ಟಾಪ್‌ಗಳಲ್ಲಿ ದಾಖಲೆಗಳನ್ನು ಸೇರಿಸುವ ಅಭಿಯಾನವು ಸುಮಾರು ಐದು ವರ್ಷ ನಡೆದಿದೆ. 2019ರ ಜೂನ್‌ನಲ್ಲಿ ಸ್ಟ್ಯಾನ್ ಸ್ವಾಮಿ ಅವರ ಲ್ಯಾಪ್‌ಟಾಪ್ ಅನ್ನು ಪೊಲೀಸರು ವಶಕ್ಕೆ ಪಡೆಯುವವರೆಗೂ ಇದು ನಡೆದಿದೆ' ಎಂದು ಮೆಸಾಚುಸೆಟ್ಸ್‌ನ ಡಿಜಿಟಲ್ ವಿಧಿವಿಜ್ಞಾನ ಸಂಸ್ಥೆ ಆರ್ಸೆನಲ್ ಕನ್ಸಲ್ಟಿಂಗ್‌ನ ವಿಶ್ಲೇಷಣೆಯು ಬಹಿರಂಗಪಡಿಸಿದೆ ಎಂದು ವಾಷಿಂಗ್ಟನ್ ಪೋಸ್ಟ್ ದಿನಪತ್ರಿಕೆಯ ವರದಿಯು ಹೇಳಿದೆ. ಆ ಅವಧಿಯಲ್ಲಿ ಹ್ಯಾಕರ್ ಒಬ್ಬ ಸ್ವಾಮಿ ಅವರ ಕಂಪ್ಯೂಟರ್‌ಗೆ ಹತ್ತಾರು ದಾಖಲೆಗಳನ್ನು ಸೇರಿಸಿದ್ದಾನೆ. ಇವು ಅಗೋಚರ ಫೋಲ್ಡರ್‌ನಲ್ಲಿ ಇದ್ದವು. ಹಾಗಾಗಿ, ಸ್ವಾಮಿ ಅವರ ಗಮನಕ್ಕೆ ಇವು ಬಂದೇ ಇರಲಿಲ್ಲ. 2020ರ ಅಕ್ಟೋಬರ್ 8ರಂದು ಸ್ವಾಮಿ ಅವರನ್ನು ರಾಷ್ಟ್ರೀಯ ತನಿಖಾ ದಳ (ಎನ್‌ಐಎ) ಬಂಧಿಸಿತು. ಸ್ವಾಮಿ ಅವರ ಕಂಪ್ಯೂಟರ್‌ನಲ್ಲಿ ಸಿಕ್ಕ ಕಡತಗಳನ್ನು ಅವರ ವಿರುದ್ಧದ ದಾಖಲೆಯಾಗಿ ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಅದೇ ಪ್ರಕರಣದಲ್ಲಿ ಬಂಧಿತರಾಗಿರುವ ಇನ್ನಿಬ್ಬರ ಕಂಪ್ಯೂಟರ್‌ಗಳನ್ನು ಕೂಡ ಇದೇ ರೀತಿಯಲ್ಲಿ ಹ್ಯಾಕ್ ಮಾಡಲಾಗಿದೆ ಮತ್ತು ಅವರ ಕಂಪ್ಯೂಟರ್‌ಗಳಿಗೂ ಕಡತಗಳನ್ನು ಸೇರಿಸಲಾಗಿದೆ.



ಪ್ರಜೆಗಳಿಗೆ ಮೂಲಭೂತ ಸ್ವಾತಂತ್ರ್ಯ ಮತ್ತು ಹಕ್ಕುಗಳು ಇಲ್ಲದ ನಿರಂಕುಶ ವ್ಯವಸ್ಥೆ ಇರುವ ದೇಶಗಳಲ್ಲಿ ಮಾತ್ರ ಇಂತಹುದು ನಡೆಯಲು ಸಾಧ್ಯ

ಪ್ರಾಧ್ಯಾಪಕರು, ವಕೀಲರು, ಸಾಮಾಜಿಕ ಹೋರಾಟಗಾರರು ಮತ್ತು ಪತ್ರಕರ್ತರು ಸೇರಿದಂತೆ ಸ್ವಾಮಿ ಹಾಗೂ ಇತರ 15 ಮಂದಿಯನ್ನು ಎಲ್ಗಾರ್ ಪರಿಷತ್ ಪ್ರಕರಣದಲ್ಲಿ ಬಂಧಿಸಲಾಗಿತ್ತು. ಅವರಲ್ಲಿ ಕೆಲವರು ಈಗಲೂ ಕಠೋರ ಕಾನೂನಿನ ಅಡಿ ಜೈಲಿನಲ್ಲಿ ಇದ್ದಾರೆ. ಸ್ವಾಮಿ ಅವರಿಗೆ 80ಕ್ಕೂ ಹೆಚ್ಚು ವರ್ಷ ವಯಸ್ಸಾಗಿತ್ತು ಮತ್ತು ಅವರಿಗೆ ಗಂಭೀರವಾದ ಆರೋಗ್ಯ ಸಮಸ್ಯೆಗಳು ಇದ್ದವು. ಮೂಲಭೂತ ಸೌಲಭ್ಯಗಳು ಮತ್ತು ಅಗತ್ಯ ವೈದ್ಯಕೀಯ ಆರೈಕೆ ಸಿಗದೆ ಅವರು ಮೃತಪಟ್ಟರು. ಪದೇ ಪದೇ ಅವರು ಜಾಮೀನಿಗೆ ಅರ್ಜಿ ಹಾಕಿದ್ದರೂ ಅದನ್ನು ನಿರಾಕರಿಸಲಾಗಿತ್ತು. ಈಗ ಬಯಲಾದ ಅಂಶಗಳ ಆಧಾರದಲ್ಲಿ, ಅವರ ಸಾವನ್ನು ಕೊಲೆ ಎಂದೇ ಪರಿಗಣಿಸಬೇಕಾಗುತ್ತದೆ. ಆರ್ಸೆನಲ್ ಕನ್ಸಲ್ಟಿಂಗ್‌ನ ವರದಿಯು ಕಟ್ಟುಕತೆ ಅಥವಾ ದುರುದ್ದೇಶಪೂರಿತ ಎಂದು ಹೇಳಿ ತಳ್ಳಿಹಾಕುವುದು ಸುಲಭವಲ್ಲ. ಈ ಸಂಸ್ಥೆಯು ತನಿಖೆ ನಡೆಸಿ ಈ ವರದಿಯನ್ನು ಸಿದ್ಧಪಡಿಸಿದೆ. ಈ ಕ್ಷೇತ್ರದಲ್ಲಿ ಸಂಸ್ಥೆಗೆ ಪರಿಣತಿ ಇದೆ. ಜೊತೆಗೆ, ಈ ಸಂಸ್ಥೆಗೆ ಬೇರೆ ಹಿತಾಸಕ್ತಿ ಇದೆ ಎಂದೂ ಹೇಳಲಾಗದು. ಈ ಸಂಸ್ಥೆ ಮತ್ತು ಅದರ ವರದಿಯನ್ನು ಪ್ರಕಟಿಸಿದ ಪತ್ರಿಕೆಯು ಅತ್ಯುನ್ನತ ಮಟ್ಟದ ವಿಶ್ವಾಸಾರ್ಹತೆಯನ್ನು ಹೊಂದಿವೆ.

ವಾಷಿಂಗ್ಟನ್ ಪೋಸ್ಟ್ ಪತ್ರಿಕೆಯಲ್ಲಿ ಪ್ರಕಟವಾದ ವರದಿಯು ತಪ್ಪು ಎಂದು ಎನ್‌ಐಎ ಈವರೆಗೆ ಹೇಳಿಲ್ಲ. ಕಂಪ್ಯೂಟರ್‌ಗಳಿಗೆ ಕಡತಗಳನ್ನು ಸೇರಿಸಿದವರು ಯಾರು ಮತ್ತು ಅದಕ್ಕೆ ಆದೇಶ ಕೊಟ್ಟವರು ಯಾರು? ದೇಶದಲ್ಲಿ ಅತ್ಯಂತ ಭಯಾನಕವಾದ ಪರಿಸ್ಥಿತಿ ಇದೆ ಎಂಬುದನ್ನು ಈ ಪ್ರಕರಣವು ಎತ್ತಿ ತೋರಿಸುತ್ತದೆ. ಪ್ರಜೆಯೊಬ್ಬನನ್ನು ಸುಳ್ಳು ಪ್ರಕರಣದಲ್ಲಿ ಸಿಲುಕಿಸಬಹುದು, ಹುಸಿ ಪುರಾವೆಗಳನ್ನು ಅವನ ವಿರುದ್ಧ ಸೃಷ್ಟಿಸಬಹುದು, ಅನಿರ್ದಿಷ್ಟ ಅವಧಿಗೆ ಜೈಲಿಗೆ ತಳ್ಳಬಹುದು. ಆರೈಕೆ ಮತ್ತು ಚಿಕಿತ್ಸೆ ಸಿಗದೆ ವ್ಯಕ್ತಿಯು ಜೈಲಿನಲ್ಲಿಯೇ ಸಾಯಬಹುದು. ನ್ಯಾಯಾಲಯ ಕೂಡ ಆ ವ್ಯಕ್ತಿಯ ನೆರವಿಗೆ ಬರುವುದು ಸಾಧ್ಯವಾಗಲಿಲ್ಲ. ಕಾನೂನಿನ ಆಳ್ವಿಕೆ ಇಲ್ಲದ, ಪ್ರಜೆಗಳಿಗೆ ಮೂಲಭೂತ ಸ್ವಾತಂತ್ರ್ಯ ಮತ್ತು ಹಕ್ಕುಗಳು ಇಲ್ಲದ ನಿರಂಕುಶ ವ್ಯವಸ್ಥೆ ಇರುವ ದೇಶಗಳಲ್ಲಿ ಮಾತ್ರ ಇಂತಹುದು ನಡೆಯಲು ಸಾಧ್ಯ. ಆರ್ಸೆನಲ್ ಕನ್ಸಲ್ಟಿಂಗ್‌ನ ವರದಿಯು ನಿಜವಾಗಿದ್ದರೆ, ಇಂತಹುದು ಭಾರತದಲ್ಲಿಯೂ ನಡೆಯಬಹುದು ಎಂಬುದನ್ನು ಸ್ಟ್ಯಾನ್ ಸ್ವಾಮಿ ಅವರ ಪ್ರಕರಣವು ತೋರಿಸಿಕೊಟ್ಟಿದೆ. ಸರ್ಕಾರವು ಸ್ವೇಚ್ಛೆ ಮತ್ತು ದುರುದ್ದೇಶದಿಂದ ಕೈಗೊಳ್ಳುವ ಕ್ರಮಗಳಿಂದ ಪೌರರಿಗೆ ಇರುವ ರಕ್ಷಣೆ ಏನು? ಮೂಲಭೂತ ಹಕ್ಕುಗಳಲ್ಲಿಯೇ ಅತ್ಯಂತ ಮುಖ್ಯವಾದ ಜೀವಿಸುವ ಹಕ್ಕನ್ನು ಸ್ಟ್ಯಾನ್ ಸ್ವಾಮಿ ಅವರಿಗೆ ನಿರಾಕರಿಸಲಾಗಿದೆ.

ದಿನದ ಟ್ವೀಟ್

ದುಬಾರಿ ಶುಲ್ಕ ಸರಿಯೇ?

ಎಂಬಿಬಿಎಸ್ ವಾರ್ಷಿಕ ಶುಲ್ಕ: ಖಾಸಗಿ ವೈದ್ಯಕೀಯ ಕಾಲೇಜುಗಳಲ್ಲಿ ₹ 11.5 ಲಕ್ಷ (ಅನಿವಾಸಿ ಭಾರತೀಯರಿಗೆ ₹ 24 ಲಕ್ಷ). ಇದು, ಸರ್ಕಾರಿ ಕಾಲೇಜುಗಳಲ್ಲಿನ ಶುಲ್ಕಕ್ಕಿಂತ 6 ಪಟ್ಟು ಹೆಚ್ಚು. ಡೀಮ್ಡ್ ವಿಶ್ವವಿದ್ಯಾಲಯ ಕಾಲೇಜುಗಳಲ್ಲಿ ₹ 21 ಲಕ್ಷ (ಅನಿವಾಸಿ ಭಾರತೀಯರಿಗೆ ₹ 31 ಲಕ್ಷ). ಇದು, ಸರ್ಕಾರಿ ಕಾಲೇಜುಗಳಲ್ಲಿನ ಶುಲ್ಕಕ್ಕಿಂತ 10 ಪಟ್ಟು ಹೆಚ್ಚು. ನೀಟ್ ಮತ್ತು ಮೆರಿಟ್ ವಿಫಲವಾಗುವುದಕ್ಕೆ ಇದೇ ಕಾರಣ.

ಡಾ. ಶ್ರೀನಿವಾಸ ಕಕ್ಕಿಲ್ಲಾಯ, ವೈದ್ಯ

ಕಿಡಿನುಡಿ

ಮಹಿಳೆಯನ್ನು ಟೀಕಿಸಲು, ಅವಳ ಚಾರಿತ್ರ್ಯವಧೆ ಮಾಡಲು ಅವಳು ತೊಡುವ ಬಟ್ಟೆಯೇ ಕಾರಣವಾಗುವಂತಹ ಪರಿಸ್ಥಿತಿ ಇರುವಾಗ, ಘಟನೆ ನಡೆದ ಹತ್ತು ವರ್ಷಗಳಾದ ಬಳಿಕ ನಿರ್ಭಯಾಳನ್ನು ನೆನಪಿಸಿಕೊಳ್ಳುವುದರಲ್ಲಿ ಅರ್ಥವಾದರೂ ಏನಿದೆ?

ಪಲ್ಲವಿ ಘೋಷ್, ಪತ್ರಕರ್ತೆ

25 ವರ್ಷಗಳ ಹಿಂದೆ

ಬುಧವಾರ, 17-12-1997

- **ನಂಜನಗೂಡು: ಕಾರ್ಖಾನೆಯಲ್ಲಿ ಅನಿಲ ಸೋರಿ ನಾಲ್ವರು ಕಾರ್ಮಿಕರ ಸಾವು**

ನಂಜನಗೂಡು, ಡಿ. 16– ಇಲ್ಲಿನ ಕೈಗಾರಿಕಾ ಪ್ರದೇಶದಲ್ಲಿರುವ ಔಷಧಿ ತಯಾರಿಕಾ ಘಟಕ– ಮ್ಯಾಕ್ಸಿ ಫಾರ್ಮಾದಲ್ಲಿ (ಮ್ಯಾಕ್ಸ್ ಇಂಡಿಯಾ ಲಿಮಿಟೆಡ್ ಸಂಸ್ಥೆಯ ಶಾಖೆ) ಮಂಗಳವಾರ ಬೆಳಗಿನ ಜಾವ ಅನಿಲ ಸೋರಿ ನಾಲ್ವರು ಕಾರ್ಮಿಕರು ಸತ್ತಿದ್ದಾರೆ.

ಏಳು ಜನ ಕಾರ್ಮಿಕರು ಅಸ್ವಸ್ಥರಾಗಿದ್ದು ಅವರನ್ನು ಚಿಕಿತ್ಸೆಗಾಗಿ ನಂಜನಗೂಡು ಮತ್ತು ಮೈಸೂರಿನ ಖಾಸಗಿ ಆಸ್ಪತ್ರೆಗಳಿಗೆ ಸೇರಿಸಲಾಗಿದೆ.

ರಾತ್ರಿಯ ಪಾಳಿಯಲ್ಲಿ ಹನ್ನೊಂದು ಜನ ಕೆಲಸ ಮಾಡುತ್ತಿದ್ದಾಗ ಅನಿಲ ಸೋರಿಕೆ ಆರಂಭವಾಗಿ ಎಲ್ಲರೂ ಪ್ರಜ್ಞೆತಪ್ಪಿ ಬಿದ್ದರು. ಹತ್ತಿರದಲ್ಲಿದ್ದವರು ಕೂಡಲೇ ನೆರವಿಗೆ ಬಂದರು. ಸ್ಥಳೀಯ ನರ್ಸಿಂಗ್ ಹೋಂಗೆ ಎಲ್ಲರನ್ನೂ ಸಾಗಿಸಲಾಯಿತು. ಆತಂಕದ ಸ್ಥಿತಿಯಲ್ಲಿದ್ದವರನ್ನು ಮೈಸೂರಿಗೆ ಸಾಗಿಸುವಾಗ ನಾಲ್ಕು ಜನ ಪ್ರಾಣಬಿಟ್ಟರು.

- **ಗಡಿ ವಿವಾದ: ಘರ್ಷಣೆ ಅಗತ್ಯವಿಲ್ಲ– ಜೋಷಿ**

ನಾಗ್ಪುರ, ಡಿ. 16– ಮಹಾರಾಷ್ಟ್ರ ಮತ್ತು ಕರ್ನಾಟಕ ನಡುವಿನ ಗಡಿ ವಿವಾದವನ್ನು ಪರಿಹರಿಸಲು ಘರ್ಷಣೆಯ ಮಾರ್ಗ ಅನುಸರಿಸುವ ಅಗತ್ಯವಿಲ್ಲ ಎಂದು ಮಹಾರಾಷ್ಟ್ರದ ಮುಖ್ಯಮಂತ್ರಿ ಮನೋಹರ ಜೋಷಿ ಅವರು ಇಂದು ರಾಜ್ಯ ವಿಧಾನಸಭೆಗೆ ತಿಳಿಸಿದರು.

ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ವಿವಾದವನ್ನು ಬರುವ ಆಗಸ್ಟ್ 15ರ ಒಳಗೆ ಬಗೆಹರಿಸುವ ವಿಶ್ವಾಸ ತೋರಿದ್ದಾರೆ ಎಂದು ಅವರು ಹೇಳಿದರು. ಪ್ರಶ್ನೋತ್ತರ ಅವಧಿಯಲ್ಲಿ ಕೇಳಲಾದ ಪ್ರಶ್ನೆಯೊಂದಕ್ಕೆ ಅವರು ಉತ್ತರ ನೀಡುತ್ತಿದ್ದರು.

50 ವರ್ಷಗಳ ಹಿಂದೆ

ಭಾನುವಾರ, 17-12-1972

- **ಠಾಕೂರ್ ಚೌಕದಿಂದ ಪಾಕ್ ಪಡೆ ನಿರ್ಗಮನ**

ಜಮ್ಮು, ಡಿ. 16– ಠಾಕೂರ್ ಚೌಕ್ ಪ್ರದೇಶವನ್ನು ಪಾಕಿಸ್ತಾನಿ ಸೇನೆಯು ಇಂದು ಮಧ್ಯಾಹ್ನ ತೆರವು ಮಾಡಿತು. ಭಾರತೀಯ ಪಡೆಗಳು ತತ್‌ಕ್ಷಣ ಅಲ್ಲಿಗೆ ಕಾಲಿಟ್ಟವು.

ಭಾರತೀಯ ಪಡೆಯ ವಲಯ ದಂಡನಾಯಕ ಬ್ರಿ. ಎಸ್.ಕೆ. ಮಾಥುರ್ ಮೂರೂವರೆ ಕಿಲೊಮೀಟರ್ ವಿಸ್ತೀರ್ಣದ ಈ ಪ್ರದೇಶವನ್ನು ಮೊದಲು ಪ್ರವೇಶಿಸಿದರು. ಈ ಪ್ರದೇಶವು ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಪಾಕಿಸ್ತಾನದ ವಶದಲ್ಲಿತ್ತು.

ಸೈನ್ಯಾಧಿಕಾರಿ ಹಾಗೂ ಪತ್ರಕರ್ತರ ಜತೆ ಆಗಮಿಸಿದ ಭಾರತೀಯ ವಲಯ ದಂಡ ನಾಯಕರನ್ನು ಪಾಕಿಸ್ತಾನಿ ಸೇನೆಯ ಬ್ರಿ. ಖಮರ್ ಆಸ್ಲಾಂ ಅವರು ಸ್ವಾಗತಿಸಿದರು.

ಮಾವಿನ ಮರದಡಿಯಲ್ಲಿ ಅವರು ಪರಸ್ಪರ ಭೇಟಿಯಾದರು. ಇಷ್ಟು ಕಾಲವೂ ಪಾಕಿಸ್ತಾನದವರಿಗೆ ಇದು ವೀಕ್ಷಣಾ ನೆಲೆಯಾಗಿತ್ತು.

- **ಮುಂದಿನ ಹಿಂಗಾರು ಕಾಲದಿಂದ ರಾಜ್ಯ ಸರ್ಕಾರಗಳಿಂದಲೇ ಗೋಧಿ, ಅಕ್ಕಿ ಸಗಟು ವ್ಯಾಪಾರ**

ನವದೆಹಲಿ, ಡಿ. 16– ಮುಂದಿನ ಹಿಂಗಾರು ಕಾಲದಿಂದ ರಾಷ್ಟ್ರದಾದ್ಯಂತ ಗೋಧಿ ಮತ್ತು ಅಕ್ಕಿಯ ಸಗಟು ವ್ಯಾಪಾರವನ್ನು ಸರ್ಕಾರವೇ ವಹಿಸಿಕೊಂಡು ನಿರ್ವಹಿಸುವುದು.

ಸಂಗ್ರಹಣೆ ಮತ್ತು ವಿತರಣೆಯನ್ನು ಸರ್ಕಾರಿ ಏಜೆನ್ಸಿಗಳ ಮೂಲಕ ನಿರ್ವಹಿಸುವ ಈ ನಿರ್ಧಾರವನ್ನು ರಾಜ್ಯ ಆಹಾರ ಸಚಿವರ ಎರಡು ದಿನಗಳ ಸಮ್ಮೇಳನದ ನಂತರ ಇಂದು ಸುದ್ದಿಗಾರರಿಗೆ ಕೇಂದ್ರ ಕೃಷಿ ಸಚಿವ ಫಕ್ರುದ್ದೀನ್ ಅಲೀ ಅಹ್ಮದ್ ತಿಳಿಸಿದರು.

ಧಾನ್ಯ ಸಗಟು ವ್ಯಾಪಾರವನ್ನು ಸರ್ಕಾರ ವಹಿಸಿಕೊಳ್ಳಬೇಕೆಂಬ ಕಾಂಗ್ರೆಸ್ ಕಾರ್ಯ ಸಮಿತಿ ನಿರ್ಣಯವನ್ನು ಕಾರ್ಯಗತಗೊಳಿಸಲು ಎಲ್ಲ ರಾಜ್ಯಗಳೂ ಒಪ್ಪಿವೆಯೆಂದು ಅವರು ಹೇಳಿದರು.

ದಿಗ್ಗಜರ ಸತ್ವಪರೀಕ್ಷೆಯ ವೇದಿಕೆಯಾದ ಫಿಫಾ ವಿಶ್ವಕಪ್

ಮೆಸ್ಸಿ, ಕಿಲಿಯನ್: ಯಾರು ಚಾಂಪಿಯನ್?

ವಿಶ್ಲೇಷಣೆ

ಗಿರೀಶ ದೊಡ್ಡಮನಿ

'ಪೆಲೆ ಮತ್ತು ಮರಡೋನಾ ಅವರಲ್ಲಿ ಯಾರು ಶ್ರೇಷ್ಠರು ಎಂದು ಜನ ಯಾವಾಗಲೂ ಚರ್ಚಿಸುತ್ತಾರೆ. ಆದರೆ ಡಿ ಸ್ಟಿಫಾನೊ ಮಾತ್ರ ಶ್ರೇಷ್ಠರು. ಅವರು ಹೆಚ್ಚು ಪರಿಪೂರ್ಣರು...'

– ಬ್ರೆಜಿಲ್ ದಿಗ್ಗಜ ಮತ್ತು ಮೂರು ಬಾರಿ ವಿಶ್ವಕಪ್ ವಿಜೇತ ಫುಟ್‌ಬಾಲ್ ಆಟಗಾರ ಪೆಲೆ ಹೇಳಿದ ಮಾತು ಇದು. ಅರ್ಜೆಂಟೀನಾದ ಮಾಜಿ ಆಟಗಾರ ಅಲ್ಫ್ರೆಡ್ ಡಿ ಸ್ಟಿಫಾನೊ 1947ರಿಂದ 1962ರವರೆಗೂ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಮಿಂಚಿದವರು. ಪೆಲೆಯಿಂದ ಮೊದಲ್ಗೊಂಡು ಇಂದಿನ ಕಿಲಿಯನ್ ಎಂಬಾಪೆ ಅವರ ಪೀಳಿಗೆಗಳ ಆಟಗಾರರಿಗೆ ಪ್ರೇರಣೆಯಾಗಿದ್ದಾರೆ. ಅವರ ನಿವೃತ್ತಿಯ ನಂತರ ಅರ್ಜೆಂಟೀನಾ ಎರಡು ಬಾರಿ ವಿಶ್ವಕಪ್ ಜಯಿಸಿತು. ಇದೀಗ ಮೂರನೇ ಪ್ರಶಸ್ತಿ ಗೆಲುವಿನ ಹೊಸ್ತಿಲಲ್ಲಿದೆ.

1978ರಲ್ಲಿ ಮಾರಿಯೊ ಕ್ಯಾಂಪೆಸ್ ಮತ್ತು 1986ರಲ್ಲಿ ಡಿಯೆಗೊ ಮರಡೋನಾ ಮಾಡಿದ್ದ ಚಮತ್ಕಾರವನ್ನು ಈ ಸಲ ಲಯೊನೆಲ್ ಮೆಸ್ಸಿ ಅವರಿಂದ ನಿರೀಕ್ಷಿಸಲಾಗುತ್ತಿದೆ. ಅವರಿಗೂ ಈಗ ಅರ್ಜೆಂಟೀನಾ ಪಾಲಿನ ಮಹಾತಾರೆ ಆಗುವ ಸುವರ್ಣಾವಕಾಶ ಒದಗಿಬಂದಿದೆ.

ಏಕೆಂದರೆ ಕತಾರ್‌ನಲ್ಲಿ ನಡೆಯುತ್ತಿರುವ ಈ ಬಾರಿಯ ಫಿಫಾ ವಿಶ್ವಕಪ್ ಟೂರ್ನಿಯ ಆರಂಭಿಕ ಹಂತದಲ್ಲಿಯೇ ಅರ್ಜೆಂಟೀನಾ ಆಘಾತ ಅನುಭವಿಸಿತ್ತು. 25 ದಿನಗಳ ಹಿಂದೆ ಲುಸೈಲ್ ಕ್ರೀಡಾಂಗಣದಲ್ಲಿ ತನ್ನ ಮೊದಲ ಪಂದ್ಯದಲ್ಲಿ ಅರ್ಜೆಂಟೀನಾವು ಫುಟ್‌ಬಾಲ್ ಲೋಕದ 'ಶಿಶು' ಸೌದಿ ಅರೇಬಿಯಾ ವಿರುದ್ಧ ಸೋತಿತ್ತು. ಸೌದಿ ತಂಡ ಮತ್ತು ಅಭಿಮಾನಿಗಳು ವಿಶ್ವಕಪ್ ಗೆದ್ದಷ್ಟೇ ಸಂಭ್ರಮಿಸಿದ್ದರು. ದಿಗ್ಗಜ ಮೆಸ್ಸಿ ಇರುವ ತಂಡವನ್ನು ಸೋಲಿಸಿದ್ದು ಕಮ್ಮಿ ಸಾಧನೆಯೇನೂ ಅಲ್ಲ. ಸಾಮಾಜಿಕ ಜಾಲತಾಣಗಳಲ್ಲಿ 'ಮೆಸ್ಸಿ ಬರೀ ಫ್ರ್ಯಾಂಚೈಸಿ ಲೀಗ್‌ಗಳಲ್ಲಿ ದುಡ್ಡಿಗಾಗಿ ಆಡುತ್ತಾರೆ' ಎಂಬ ಟೀಕೆಗಳು ವ್ಯಕ್ತವಾದವು.

ಆದರೆ ಅವೆಲ್ಲವೂ ಈಗ 'ರಿಸೈಕಲ್ ಬಿನ್' ಸೇರಿವೆ. ಹಿಂದಿನ ಮೂರು ವಾರಗಳಲ್ಲಿ ಅರ್ಜೆಂಟೀನಾದ ಪಾಲಿಗೆ ಮೆಸ್ಸಿ ಸ್ಫೂರ್ತಿಯ ಸೆಲೆಯಾಗಿದ್ದಾರೆ. ಅವರು ಈ ಟೂರ್ನಿಯಲ್ಲಿ ಗಳಿಸಿರುವ ಐದು ಗೋಲುಗಳು ಮತ್ತು ಮೂರು ಅಸಿಸ್ಟ್‌ಗಳು (ಪಾಸ್) ಇದಕ್ಕೆ ಕಾರಣ. ಅರ್ಜೆಂಟೀನಾ ಮಾತ್ರವಲ್ಲ, ಭಾರತವೂ ಸೇರಿದಂತೆ ಬಹಳಷ್ಟು ದೇಶಗಳಲ್ಲಿರುವ ಮೆಸ್ಸಿ ಅಭಿಮಾನಿಗಳೂ ಈಗ ಅರ್ಜೆಂಟೀನಾದ ಜಯಕ್ಕಾಗಿ ಪ್ರಾರ್ಥಿಸುತ್ತಿದ್ದಾರೆ.

ಅರ್ಜೆಂಟೀನಾ ತಂಡವು ಹಾಲಿ ಚಾಂಪಿಯನ್ ಫ್ರಾನ್ಸ್ ವಿರುದ್ಧದ ಫೈನಲ್‌ನಲ್ಲಿ ಗೆದ್ದರೆ ಹೊಸದೊಂದು ಇತಿಹಾಸ ನಿರ್ಮಾಣವಾಗುವುದು ಖಚಿತ. ಮೆಸ್ಸಿಗೆ ಇದು ಐದನೇ ವಿಶ್ವಕಪ್ ಟೂರ್ನಿ. ಅವರ ಮನೆಯಲ್ಲಿರುವ ಭವ್ಯವಾದ ಗಾಜಿನ ಕಪಾಟಿನಲ್ಲಿ ಬಹುತೇಕ ಎಲ್ಲ ಪ್ರತಿಷ್ಠಿತ ಟೂರ್ನಿಗಳ ಟ್ರೋಫಿಗಳೂ ಇವೆ. ಆದರೆ ಚಿನ್ನದ ಹೊಳಪಿನ ವಿಶ್ವಕಪ್ ಮಾತ್ರ ಇಲ್ಲ. ಈ ಬಾರಿ ಆ ಕೊರತೆ ನೀಗುವುದೇ?

ಆದರೆ ಫ್ರಾನ್ಸ್ ವಿರುದ್ಧ ಜಯಿಸುವುದು ಅಷ್ಟು ಸುಲಭವಲ್ಲ. ಏಕೆಂದರೆ ತಮ್ಮ ಬಾಲ್ಯದಿಂದಲೂ ಪೋರ್ಚುಗಲ್ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರನ್ನು ನೋಡುತ್ತಲೇ ಫುಟ್‌ಬಾಲ್ ಪ್ರೀತಿ ಬೆಳೆಸಿಕೊಂಡ ಕಿಲಿಯನ್ ಎಂಬಾಪೆ ಎಂಬ ಪ್ರತಿಭಾವಂತ ಆಟಗಾರ ಮೆಸ್ಸಿಗೆ ಪೈಪೋಟಿಯೊಡ್ಡಲು ಸಿದ್ಧರಾಗಿದ್ದಾರೆ. 2018ರಲ್ಲಿಯೂ ಚಿನ್ನದ ಬೂಟು ಗೆದ್ದಿದ್ದ ಕಿಲಿಯನ್ ಈ ಸಲವೂ ಸ್ಪರ್ಧೆಯಲ್ಲಿದ್ದಾರೆ. ಅಲ್ಲದೆ ಅವರು ಮೆಸ್ಸಿ ಜೊತೆಗೆ ಪ್ಯಾರಿಸ್ ಸೇಂಟ್ ಜರ್ಮನ್ (ಪಿಎಸ್‌ಜಿ) ಫುಟ್‌ಬಾಲ್ ಕ್ಲಬ್‌ನಲ್ಲಿ ಜೊತೆಯಾಗಿ ಆಡುತ್ತಾರೆ. ಇವರಿಬ್ಬರಲ್ಲಿ ಯಾರಿಗೆ ಕಿರೀಟ ಒಲಿಯುವುದೋ ನೋಡಲು ಭಾನುವಾರ ರಾತ್ರಿಯವರೆಗೂ ಕಾಯಬೇಕು. ಅಂದಹಾಗೆ ಇವರಿಬ್ಬರ ಪೋಷಾಕು ಸಂಖ್ಯೆಯೂ 10.

ಆದರೆ ಈ ಟೂರ್ನಿಯ ನಂತರವೂ ಫುಟ್‌ಬಾಲ್ ಪ್ರೇಮಿಗಳ ಮನದಲ್ಲಿ ಅಚ್ಚಳಿಯದೇ ಉಳಿಯುವಂತಹ ಹತ್ತಾರು ವಿಶೇಷಗಳು ಈಗಾಗಲೇ ದಾಖಲಾಗಿವೆ. ಅರ್ಜೆಂಟೀನಾವನ್ನು ಸೌದಿ ಅರೇಬಿಯಾ ಸೋಲಿಸಿದ ರೀತಿಯಲ್ಲಿಯೇ ಇನ್ನೂ ಕೆಲವು ಪುಟ್ಟ ರಾಷ್ಟ್ರಗಳು ದಿಗ್ಗಜ ತಂಡಗಳಿಗೆ ಆಘಾತ ನೀಡಿದವು.

ನಾಲ್ಕು ಸಲ ವಿಶ್ವಕಪ್ ಗೆದ್ದಿರುವ ಜರ್ಮನಿ ಮತ್ತು ಸ್ಪೇನ್ ತಂಡಗಳ ಎದುರು ಜಪಾನ್, ವೇಲ್ಸ್ ಎದುರು ಇರಾನ್, ಪೋರ್ಚುಗಲ್ ವಿರುದ್ಧ ದಕ್ಷಿಣ ಕೊರಿಯಾ, ಫ್ರಾನ್ಸ್ ಎದುರು ಟ್ಯುನೀಷಿಯಾ, ಬ್ರೆಜಿಲ್ ಎದುರು ಕ್ಯಾಮರೂನ್ ಹಾಗೂ ಬೆಲ್ಜಿಯಂ ವಿರುದ್ಧ ಮೊರೊಕ್ಕೊ ತಂಡಗಳು ಜಯಿಸಿದವು. ಅದರಲ್ಲೂ ಅಶ್ರಫ್ ಹಕೀಮಿ ನೇತೃತ್ವದ ಮೊರೊಕ್ಕೊ 16ರ ಘಟ್ಟದಲ್ಲಿ ಸ್ಪೇನ್ ಹಾಗೂ ಕ್ವಾರ್ಟರ್‌ಫೈನಲ್‌ನಲ್ಲಿ ಪೋರ್ಚುಗಲ್‌ಗೆ ಆಘಾತ ನೀಡಿ ಮೊದಲ ಬಾರಿಗೆ ಸೆಮಿಫೈನಲ್ ಪ್ರವೇಶಿಸಿತು.

ಮೊರೊಕ್ಕೊ ತಂಡದ ವಿಜಯವು ಪೋರ್ಚುಗಲ್ ತಂಡದ ತಾರೆ ಕ್ರಿಸ್ಟಿಯಾನೊ ರೊನಾಲ್ಡೊ ಅವರ ವಿಶ್ವಕಪ್ ಗೆಲ್ಲುವ ಕನಸನ್ನು ನುಚ್ಚುನೂರು ಮಾಡಿತು. 37 ವರ್ಷದ ರೊನಾಲ್ಡೊಗೆ ಇದು ಕೊನೆಯ ವಿಶ್ವಕಪ್ ಟೂರ್ನಿ ಎನ್ನಲಾಗಿದೆ. ಒಂದೊಮ್ಮೆ ಪೋರ್ಚುಗಲ್ ಫೈನಲ್ ಪ್ರವೇಶಿಸಿದ್ದರೆ ಸಮಕಾಲೀನ ದಿಗ್ಗಜರಾದ ಮೆಸ್ಸಿ ಮತ್ತು ರೊನಾಲ್ಡೊ ಅವರಿಬ್ಬರ ಹಣಾಹಣಿ ಕಣ್ತುಂಬಿಕೊಳ್ಳುವ ಅವಕಾಶ ಇತ್ತು.

ಪೋರ್ಚುಗಲ್ ತಂಡದ ಆಂತರಿಕ ವಿಷಯಗಳು ಸೋಲಿಗೆ ಕಾರಣವಾಗಿವೆ ಎನ್ನಲಾಗಿದೆ. ಪ್ರೀಕ್ವಾರ್ಟರ್ ಫೈನಲ್‌ನಲ್ಲಿ ರೊನಾಲ್ಡೊ ಅವರನ್ನು ಬೆಂಚ್‌ನಲ್ಲಿ ಕೂರಿಸಿದ ತಂಡದ ಮ್ಯಾನೇಜರ್ ಫರ್ನಾಂಡೊ ಸಾಂತೋಸ್ ಸುದ್ದಿಯಾದರು. ಆ ಪಂದ್ಯದಲ್ಲಿ ಪೋರ್ಚುಗಲ್, ರೊನಾಲ್ಡೊ ಇಲ್ಲದೆಯೂ ಸ್ವಿಟ್ಜರ್‌ಲೆಂಡ್ ವಿರುದ್ಧ ಭರ್ಜರಿ ಜಯ ಸಾಧಿಸಿತು. ಸಾಂತೋಸ್ ಕ್ರಮವನ್ನು ಖಂಡಿಸಿ ರೊನಾಲ್ಡೊ ಬಾಳಸಂಗಾತಿ ಜಾರ್ಜಿನಾ ರಾಡ್ರಿಗೇಜ್ ಮಾಡಿದ ಟ್ವೀಟ್ ವಿವಾದಕ್ಕೆ ಕಾರಣವಾಯಿತು. ಕ್ವಾರ್ಟರ್‌ಫೈನಲ್‌ನ ಮೊದಲಾರ್ಧದಲ್ಲಿ ರೊನಾಲ್ಡೊ ಬೆಂಚ್‌ನಲ್ಲಿದ್ದರು. ನಂತರ ಕಣಕ್ಕೆ ಇಳಿದರೂ ಅವರಿಂದ ಚಮತ್ಕಾರ ನಡೆಯಲಿಲ್ಲ. ಮೊರೊಕ್ಕೊ ತಂಡದ ಎದುರು ಪೋರ್ಚುಗಲ್ ಸೋತಿತು. ರೊನಾಲ್ಡೊ ಕಣ್ಣೀರಿಡುತ್ತ ಮೈದಾನದಿಂದ ನಿರ್ಗಮಿಸಿದರು. ಕ್ರೀಡಾಲೋಕದ ಅತ್ಯಂತ ಶ್ರೀಮಂತ ಹಾಗೂ ಪ್ರಭಾವಿ ಆಟಗಾರ ರೊನಾಲ್ಡೊ ಅವರ ಅಂತರರಾಷ್ಟ್ರೀಯ ಫುಟ್‌ಬಾಲ್ ಜೀವನಕ್ಕೆ ಬಹುತೇಕ ತೆರೆಬಿದ್ದಿದೆ. ಬಡ ಕುಟುಂಬದಲ್ಲಿ ಹುಟ್ಟಿ ಈ ಎತ್ತರಕ್ಕೆ ಬೆಳೆದು ಹಲವು ಯುವಪ್ರತಿಭೆಗಳಿಗೆ ಪ್ರೇರಣೆಯಾಗಿರುವ ರೊನಾಲ್ಡೊಗೆ ವಿಶ್ವಕಪ್ ಜಯಿಸದ ಕೊರತೆಯು ಜೀವನಪೂರ್ತಿ ಉಳಿಯುವುದು ಖಚಿತ.

ಅವರಂತೆಯೇ ಕ್ರೊವೇಷ್ಯಾದ 37 ವರ್ಷದ ಲೂಕಾ ಮಾಡ್ರಿಚ್ ಅವರಿಗೂ ವಿಶ್ವಕಪ್ ಕೊರಗು ಕಾಡಬಹುದು. ಹೋದ ಬಾರಿ ರನ್ನರ್ಸ್ ಅಪ್ ಆಗಿದ್ದ ತಂಡವು ಈ ಬಾರಿ ಅರ್ಜೆಂಟೀನಾ ಮುಂದೆ ಸೆಮಿಫೈನಲ್‌ನಲ್ಲಿ ಮುಗ್ಗರಿಸಿತು. ಮಾಡ್ರಿಚ್ ಕ್ರೊವೇಷ್ಯಾದಲ್ಲಿ ಫುಟ್‌ಬಾಲ್ ಕ್ರಾಂತಿಗೆ ಕಾರಣರಾದವರು. ಬಾಲ್ಯವನ್ನು ನಿರಾಶ್ರಿತರ ಶಿಬಿರದಲ್ಲಿ ಕಳೆದು, ಅಲ್ಲಿಯೇ ಫುಟ್‌ಬಾಲ್ ಕಲಿತು ಈ ಮಟ್ಟಕ್ಕೆ ಬೆಳೆದವರು. ಸರ್ಬಿಯಾ ಸೈನಿಕರಿಂದ ತನ್ನ ಅಜ್ಜ ಹತ್ಯೆಗೊಳಗಾಗಿದ್ದನ್ನು ಕಣ್ಣಾರೆ ಕಂಡಿದ್ದವರು ಮಾಡ್ರಿಚ್. ಇದೀಗ ಅವರ ಪ್ರೇರಣೆಯಿಂದಾಗಿ ದೇಶದ ಹಲವು ಯುವಕರು ಹಿಂಸೆಯ ಮಾರ್ಗ ಬಿಟ್ಟು ಕಾಲ್ಚೆಂಡಿನತ್ತ ಧಾವಿಸುತ್ತಿದ್ದಾರೆ. ಆ ಮಟ್ಟಿಗೆ ಮಾಡ್ರಿಚ್ ವಿಜಯಿಯೇ ಹೌದು.

ಫುಟ್‌ಬಾಲ್ ವಿಶ್ವಕಪ್ ಇತಿಹಾಸದ ಪುಟಗಳನ್ನು ತಿರುವಿದರೆ ಇಂತಹ ಹತ್ತಾರು ಸ್ಫೂರ್ತಿದಾಯಕ ಸಂಗತಿಗಳು ಸೆಳೆಯುತ್ತವೆ. ಈ ಸಲ ಕತಾರ್ ಸುಮಾರು ₹ 16 ಲಕ್ಷ ಕೋಟಿ ಖರ್ಚು ಮಾಡಿ ಟೂರ್ನಿಯನ್ನು ಆಯೋಜಿಸಿದೆ. ಆದರೆ ವಲಸೆ ಕಾರ್ಮಿಕರ ಸಾವು ನೋವಿನ ಕಳಂಕ ಹೊತ್ತಿದೆ. ಆದರೆ ಕಾಕತಾಳೀಯ ನೋಡಿ. ಫೈನಲ್‌ನಲ್ಲಿ ಮುಖಾಮುಖಿಯಾಗಲಿರುವ ಮೆಸ್ಸಿ ಮತ್ತು ಎಂಬಾಪೆಯ ಪೂರ್ವಜರು ಕೂಡ ವಲಸಿಗರೇ. ಈಗ ಅವರಿಬ್ಬರೂ ತಮಗೆ ಆಶ್ರಯ ನೀಡಿದ ದೇಶಗಳ ಖ್ಯಾತಿಯನ್ನು ಉತ್ತುಂಗಕ್ಕೇರಿಸಿದ್ದಾರೆ. ಫೈನಲ್‌ನಲ್ಲಿ ಆಡುವ ಎರಡು ತಂಡಗಳಲ್ಲಿ ಒಂದು ವಿಜಯಿಯಾಗುತ್ತದೆ. ಅದೆಲ್ಲದರಾಚೆ ಮೆಸ್ಸಿ, ರೊನಾಲ್ಡೊ, ನೇಮರ್, ಮಾಡ್ರಿಚ್ ಮತ್ತು ಎಂಬಾಪೆ ಅವರು ಅಲ್ಫ್ರೆಡ್ ಡಿ ಸ್ಟಿಫಾನೊ ಅವರಂತೆ ಯುವಪೀಳಿಗೆಗೆ ಮಾದರಿಯಾದರೆ ಫುಟ್‌ಬಾಲ್ ಕ್ರೀಡೆ ಗೆಲ್ಲುತ್ತದೆಯಲ್ಲವೇ?

ಚುರುಮುರಿ

ಈಟ್ ರಿಪೀಟ್ ಸ್ಟ್ರೀಟ್!

• ನಾರಾಯಣ ರಾಯಚೂರ್

'ಬೆಂಗಳೂರಲ್ಲಿ 'ಇ.ಎ.ಟಿ.'- ಈಟ್ ಸ್ಟ್ರೀಟ್' ಅಂತ ಬಸವನಗುಡಿಯಲ್ಲಿ ಒಂದು ಸ್ಟ್ರೀಟ್ ಇದೆ- ಇದರ ವಿಸ್ತೃತ ರೂಪ ಏನ್ಹೇಳಿ'- ಕ್ವಿಜ್ ಪ್ರಶ್ನೆ ಹಾಕಿದಳು ಮಡದಿ ನಿಶ್ಚಿತ.

'ಇ... ಎ... ಟಿ... ಈಟ್, ಅಂದ್ರೆ ತಿಂಡಿ; ಈಟ್ ಸ್ಟ್ರೀಟ್ ಅಂದ್ರೆ ತಿಂಡಿ ಬೀದಿ. ಅದು ವಿಶ್ವೇಶ್ವರಪುರದಲ್ಲಿದೆ. ಬಸವನಗುಡಿದ್ಯಾವುದು ಗೊತ್ತಿಲ್ಲವೇ, ಸೋತೆ'.

'ಇ.ಎ.ಟಿ.- ಈಸ್ಟ್ ಆಂಜನೇಯ ಟೆಂಪಲ್ ರೋಡ್ ಗೊತ್ತಿಲ್ಲವೇನ್ರೀ?! ಬಸವನಗುಡೀಲಿ ಕೋಲೆ ಬಸವನ ಹಂಗೆ ಮೂವತ್ತು ವರ್ಷದಿಂದ ಸುತ್ತಾಡ್ತಿದೀರಿ'.

'ನಾವು ಹೇಳಿಕೇಳಿ ತಿಂಡಿಪೋತರು, ನಮಗೆ ತಿಂಡಿ ಬೀದಿದೇ ಯೋಚನೆ. ಇಲ್ಲಿಕೇಳೇ... ವಿಶ್ವೇಶ್ವರಪುರದ ಪುರಾತನ ಕಾಲದ ತಿಂಡಿ ಬೀದಿಗೆ ಹೊಸಾ ಲುಕ್ ಕೊಡೋ ಕೋಟ್ಯಂತರ ರೂಪಾಯಿ ಯೋಜನೆಗೆ ಶಂಕುಸ್ಥಾಪನೆ ಅಂತ ಸುದ್ದಿ ನೋಡಿಲ್ಲೆ'.

'ಎಲ್ಲಿ? ನೋಡೋಣ, ಹೌದಲ್ರೀ... ಚಿತ್ರಾನೂ ಕೊಟ್ಟಿದಾರೆ. ಹೊಸ ತಿಂಡಿ ಬೀದಿ ಕಂಗೊಳಿ-ಸ್ತಾಯಿದೆಯಲ್ಲರೀ! ಎಲ್ಲಾ ನೀಟ್, ಕೊಳಾಯಿ, ಕಾಲುವೆ, ಅಂಗಡಿಗಳು, ಬೀದಿ ವ್ಯಾಪಾರಿಗಳು ಎಲ್ಲ ಅಚ್ಚುಕಟ್ಟು. ತಿಂಡಿತಟ್ಟೆ ಜೊತೆ ಫುಡ್ ಫಾರ್-ಥಾಟ್ ಕೂಡಾ ಇರಲಿ ಅಂತ ಬೀದಿನಾಟಕ ಮಾಡೋಕೆ ಅಂತಾನೆ ಸಪರೇಟ್ ಜಾಗ, ಅಲಂಕಾರದ ಗಿಡ, ಎಷ್ಟು ಚೆನ್ನಾಗಿದೆ ಯಲ್ಲರೀ-ಕಣ್ಣಿಗೂ ಸವಿ, ಬಾಯಿಗೂ ರುಚಿ'.

'ಚರ್ಚ್ ಸ್ಟ್ರೀಟ್‌ನ ತರಹ ಇದಕ್ಕೂ ಇಂಟರ್‌ನ್ಯಾಷನಲ್ ಸ್ಟ್ಯಾಂಡರ್ಡು ಕಣೆ!'

'ಆಗಸ್ಟಲ್ಲಿ ವಿದೇಶಾಂಗ ಸಚಿವ ಜೈಶಂಕರ್ ಅವರಂಥವರು ಈ ಬೀದಿತಿಂಡಿಗಳನ್ನ ಸವಿದು ಹೋದಮೇಲೆ ಈ ಭಾಗ್ಯ ಬರದೇ ಇರುತ್ಯೆ?! ಗುಡ್, ಸ್ವೀಟ್ ನ್ಯೂಸು'.

'ಬರೀ ಸ್ವೀಟ್ ಅಲ್ಲ, ಖಾರ, ಹುಳಿ, ಮಸಾಲಾ- ವಿಥ್ ಹೈಟೆಕ್ ಸ್ಪರ್ಶ!'

'ಅಂತೂ ವಿಶ್ವೇಶ್ವರಪುರದ ತಿಂಡಿಗಳಿಗೆ ವಿಶ್ವಪ್ರಸಿದ್ಧಿಯ ಯೋಗ'.

'ಯೋಗ ಅಲ್ಲ ಕಣೆ, ಭೋಗ, ಸವಿಭೋಗ'.

'ಇದನ್ನ 'ಈಟ್ ರಿಪೀಟ್ ಸ್ಟ್ರೀಟ್' ಅಂತ ಕರೆದರೆ ಹೇಗಿರುತ್ತೆ?'

'ಬ್ಯೂಟಿಫುಲ್! ಬಿಬಿಎಂಪಿಯವರಿಗೆ ಈ ಹೆಸರು ಸೂಚಿಸೋಣ, ನಿನಗೆ ಬಹುಮಾನ ಖಚಿತ'.

'ಖಚಿತ ಮಾತ್ರವಲ್ಲ ನಿಶ್ಚಿತ...ನಾನು ನಿಶ್ಚಿತ!

ಸಂಗತ

ಗುಣಾತ್ಮಕ ಶಿಕ್ಷಣ: ಬೇಕು ಭದ್ರ ಬುನಾದಿ

ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ರಾಜ್ಯದ ಪರಿಸ್ಥಿತಿಗೆ ಸರಿಹೊಂದುವಂತೆ ಮಾಡುವ ಸವಾಲು ನಮ್ಮ ಮುಂದಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಪ್ರಾಥಮಿಕ ಶಾಲಾ ಶಿಕ್ಷಣವನ್ನು 'ಶಿಕ್ಷಣದ ಬುನಾದಿ' ಎಂದು ಪರಿಗಣಿಸಲಾಗುತ್ತದೆ. ಬುನಾದಿ ಅಥವಾ ತಳಪಾಯ ಗಟ್ಟಿ ಇದ್ದರೆ ಭವಿಷ್ಯದ ಶಿಕ್ಷಣ ಸರಾಗ ಎಂಬರ್ಥದ ಮಾತುಗಳು ಸಾಮಾನ್ಯವಾಗಿ ಚಾಲ್ತಿಯಲ್ಲಿವೆ. ಈ ಬುನಾದಿಯನ್ನು ಭದ್ರವಾಗಿ ಹೇಗೆ ನಿರ್ಮಿಸಬೇಕು ಎಂಬ ಕುರಿತ ಚಿಂತನೆ, ಚರ್ಚೆಗಳು ದೇಶದಲ್ಲಿ ನಡೆಯಬೇಕಾದಷ್ಟು ಪ್ರಮಾಣದಲ್ಲಿ ನಡೆದಿಲ್ಲ ಎನ್ನಬಹುದು.

ಅನೇಕ ರಾಷ್ಟ್ರಗಳಲ್ಲಿ ಪ್ರಾಥಮಿಕ ಮತ್ತು ಪೂರ್ವ ಪ್ರಾಥಮಿಕ ಶಾಲಾ ಶಿಕ್ಷಣಕ್ಕೆ ಉಳಿದ ಹಂತದ ಶಿಕ್ಷಣಕ್ಕಿಂತ ಅಧಿಕ ಪ್ರಾಮುಖ್ಯ ನೀಡಲಾಗುತ್ತದೆ. ಈ ಹಂತದ ಶಿಕ್ಷಕರ ವಿದ್ಯಾರ್ಹತೆ, ಅವರಿಗೆ ನೀಡುವ ವೇತನ ಮತ್ತು ಅವರನ್ನು ಸಿದ್ಧಗೊಳಿಸಲು ಅಧಿಕ ಶ್ರಮ, ಹಣ ವೆಚ್ಚ ಮಾಡಲಾಗುತ್ತದೆ. ಉದಾಹರಣೆಗೆ, ಸ್ವಿಟ್ಜರ್‌ಲೆಂಡ್, ಜರ್ಮನಿ, ಡೆನ್ಮಾರ್ಕ್ ದೇಶಗಳಲ್ಲಿ ಪ್ರಾಥಮಿಕ ಹಂತದ ಶಿಕ್ಷಕರಿಗೆ ಅಧಿಕ ವೇತನ ನೀಡಲಾಗುತ್ತಿದೆ. ಇದರಿಂದ ಅಂತಹ ದೇಶಗಳ ಶಿಕ್ಷಣ ವ್ಯವಸ್ಥೆಯು ಪರಿಣಾಮಕಾರಿಯಾಗಿ ಹಾಗೂ ಗುಣಾತ್ಮಕವಾಗಿ ರಚನೆಗೊಂಡಿದೆ.

ನಮ್ಮ ದೇಶದಲ್ಲಿ ಬುನಾದಿ ಹಂತದ ಶಿಕ್ಷಣವನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಯಾವ ರೀತಿ ಕಟ್ಟಬಹುದು ಎಂಬ ಕುರಿತಾದ ಚಿಂತನೆಗಳನ್ನು ರಾಷ್ಟ್ರೀಯ ಶಿಕ್ಷಣ ನೀತಿ- 2020ರಲ್ಲಿ ಮಾಡಲಾಗಿದೆ. ಪೂರ್ವ ಪ್ರಾಥಮಿಕ ಹಂತದ ಮೂರು ವರ್ಷ ಹಾಗೂ ಪ್ರಾಥಮಿಕ ಶಾಲಾ ಶಿಕ್ಷಣದ ಒಂದು ಮತ್ತು ಎರಡನೇ ತರಗತಿಗಳನ್ನು ಒಳಗೊಂಡಂತೆ ಮಕ್ಕಳ ಬೆಳವಣಿಗೆಯ 3ರಿಂದ 8 ವರ್ಷದೊಳಗಿನ 5 ವರ್ಷಗಳ ಶಿಕ್ಷಣವನ್ನು 'ಬುನಾದಿ ಹಂತ' ಎನ್ನಲಾಗುತ್ತದೆ. ಈ ತಳಪಾಯದ ಮೇಲೆ 3ರಿಂದ 5ರವರೆಗಿನ ತರಗತಿಗಳನ್ನು ಒಳಗೊಂಡ ಪೂರ್ವಸಿದ್ಧತಾ ಹಂತವನ್ನು ನಿರ್ಮಿಸಲು ಪ್ರಸ್ತಾಪಿಸಲಾಗಿದೆ.

ಬುನಾದಿ ಹಂತದ ಶಿಕ್ಷಣ ಹೇಗಿರಬೇಕು ಎಂಬ ಕುರಿತಂತೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ಅ. 15ರಂದು ಬಿಡುಗಡೆ ಮಾಡಲಾಗಿದೆ. ಈ ವ್ಯವಸ್ಥೆಯನ್ನು ಸುಗಮವಾಗಿ ಜಾರಿಗೊಳಿಸಲು ಅನುಕೂಲ ಕಲ್ಪಿಸುವ 360 ಪುಟಗಳ ದಾಖಲೆಯನ್ನು ಬಹಳ ಉತ್ತಮವಾಗಿ ರಚಿಸಲಾಗಿದೆ. ಮಗುವಿನ ಬೆಳವಣಿಗೆಯ ಮೊದಲ 6 ವರ್ಷದೊಳಗೆ ಶೇ 85ರಷ್ಟು ಮೆದುಳಿನ ಬೆಳವಣಿಗೆ ಆಗುತ್ತದೆ.

ಆರಂಭಿಕ ವರ್ಷಗಳಲ್ಲಿ ಮಕ್ಕಳಿಗೆ ದೊರೆಯುವ ಆರೈಕೆ, ಗಮನ, ಪ್ರೀತಿ, ಭದ್ರತೆ, ಆಹಾರವು ಮಕ್ಕಳ ಭವಿಷ್ಯದ ಆರೋಗ್ಯ, ಶಿಕ್ಷಣದ ಮೇಲೆ ಪ್ರಭಾವ ಬೀರುತ್ತವೆ. ಗರ್ಭಿಣಿಗೆ ದೊರೆಯುವ ಆರೈಕೆ, ಆಹಾರ, ಮನಃಸ್ಥಿತಿಯು ಗರ್ಭದಲ್ಲಿರುವ ಮಗುವಿನ ಮೇಲೆ ಪ್ರಭಾವ ಬೀರುತ್ತವೆ. ಜನನ ನಂತರದ ಮೊದಲ ಮೂರು ವರ್ಷಗಳಲ್ಲಿ ತಾಯಿ ಮತ್ತು ಮಗುವಿನ ಆರೈಕೆ ಹೇಗಿರಬೇಕು ಎಂಬ ಬಗ್ಗೆ ವಿವರವಾದ ಮಾರ್ಗಸೂಚಿಯನ್ನು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಹೊರಡಿಸುವ ಪ್ರಸ್ತಾವವನ್ನು ಪಠ್ಯಕ್ರಮ ಚೌಕಟ್ಟಿನಲ್ಲಿ ಮಾಡಲಾಗಿದೆ. 3 ವರ್ಷದಿಂದ 6 ವರ್ಷದೊಳಗಿನ ಪೂರ್ವ ಪ್ರಾಥಮಿಕ ಶಿಕ್ಷಣವನ್ನು ಯಾವ ರೀತಿ ನೀಡಬೇಕು ಹಾಗೂ ಈ ಹಂತದಲ್ಲಿ ಮಕ್ಕಳು ಯಾವ ರೀತಿ ವಿವಿಧ ರೀತಿಯ ಆಟಗಳು, ಚಟುವಟಿಕೆಗಳ ಮೂಲಕ ಕಲಿಯುತ್ತಾರೆ ಎಂಬುದನ್ನು ವಿವರಿಸಲಾಗಿದೆ. ಒಂದು ಮತ್ತು ಎರಡನೇ ತರಗತಿಗಳಿಗೂ ಪಠ್ಯಪುಸ್ತಕಗಳ ಅಳವಡಿಕೆಯ ಅಗತ್ಯ ಇಲ್ಲ. ಮಕ್ಕಳು ಸಂತಸ, ಖುಷಿಯಿಂದ ಆಟ, ಪಾಠಗಳ ಮೂಲಕ ಕಲಿಯುವ ವಿಧಾನಗಳ ಬಗ್ಗೆ ವಿವರಿಸಲಾಗಿದೆ.

ಭಾರತೀಯ ತರಗತಿಗಳಲ್ಲಿ ಬಹುಭಾಷಾ ಪರಿಸರ ಸಾಮಾನ್ಯ. ಇಂತಹ ಸನ್ನಿವೇಶದಲ್ಲಿ ಮಾತೃಭಾಷೆಯ ಮೂಲಕ ಮಕ್ಕಳೊಂದಿಗೆ ಒಡನಾಡುವ ಪ್ರಾಮುಖ್ಯವನ್ನು ಚೌಕಟ್ಟಿನಲ್ಲಿ ತಿಳಿಸಲಾಗಿದೆ. ತರಗತಿಯಲ್ಲಿ ಬೇರೆ ಬೇರೆ ಮಾತೃಭಾಷೆಗಳಿಗೆ ಸಂಬಂಧಿಸಿದ ಮಕ್ಕಳು ಇರುವ ಸನ್ನಿವೇಶದಲ್ಲಿ ಶಿಕ್ಷಕರು ಹೆಚ್ಚು ಸಂಪದ್ಭರಿತರಾಗಿ ಹಲವು ಭಾಷೆಗಳನ್ನು ತಿಳಿದುಕೊಂಡು, ಸಂಬಂಧಿಸಿದ ಭಾಷೆಯನ್ನು ಸಂಬಂಧಿಸಿದ ಮಕ್ಕಳೊಂದಿಗೆ ಆಡುವ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮೂಡಿಸುತ್ತಾ, ಹಂತ ಹಂತವಾಗಿ ಮಕ್ಕಳನ್ನು ಪಠ್ಯದ ಭಾಷೆ ಅಥವಾ ಸ್ಥಳೀಯ ಭಾಷೆಗೆ ಹೊಂದಿಕೊಳ್ಳುವಂತೆ ಮಾಡಬೇಕು. ಈ ವಿಧಾನದಲ್ಲಿ ಮಕ್ಕಳ ಆರಂಭಿಕ ಓದು, ಬರವಣಿಗೆ, ಲೆಕ್ಕಾಚಾರಗಳನ್ನು ಪರಿಣಾಮಕಾರಿಯಾಗಿ ಕಲಿಸುವ ವಿಧಾನಗಳನ್ನು ಚೌಕಟ್ಟು ವಿವರಿಸಿದೆ.

ಅಂಗನವಾಡಿ ಕಾರ್ಯಕರ್ತೆಯರ ಶೈಕ್ಷಣಿಕ ಸಾಮರ್ಥ್ಯವನ್ನು ಹೆಚ್ಚಿಸುವ ದಿಸೆಯಲ್ಲಿ ಸ್ಪಷ್ಟ ಯೋಜನೆಗಳು ರೂಪುಗೊಳ್ಳುತ್ತಿವೆ. ಪೂರ್ವ ಪ್ರಾಥಮಿಕ ಶಿಕ್ಷಣ ನೀಡುತ್ತಿರುವ ಶಾಲೆಗಳ ಕಡೆ ಗಮನ ನೀಡಿ, ಅಲ್ಲಿನ ಕಲಿಕಾ ಚಟುವಟಿಕೆಗಳನ್ನು ಉತ್ತಮಪಡಿಸುವ ಮತ್ತು ನಿಯಂತ್ರಣ ಮಾಡುವ ಸ್ಪಷ್ಟ ಆಡಳಿತ ವ್ಯವಸ್ಥೆ ಸದ್ಯ ಇಲ್ಲ. ಇಂತಹ ಒಂದು ವ್ಯವಸ್ಥೆಯನ್ನು ಸೃಷ್ಟಿಸುವ ಅಗತ್ಯ ಇದೆ. ಇದರ ಜೊತೆ ಅಂಗನವಾಡಿಗಳ ಗುಣಮಟ್ಟ ಉತ್ತಮಪಡಿಸುವುದು ಸಹ ಅಗತ್ಯ. ಇದಕ್ಕಾಗಿ ಅವುಗಳ ಆಡಳಿತ ಮತ್ತು ಕಲಿಕಾ ಚಟುವಟಿಕೆಗಳ ಉಸ್ತುವಾರಿಯನ್ನು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ತರಬೇಕಿದೆ.

ಬುನಾದಿ ಹಂತದ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟನ್ನು ರಾಜ್ಯದ ಪರಿಸ್ಥಿತಿಗೆ ಸ್ಥಳೀಯವಾಗಿ ಸರಿಹೊಂದುವಂತೆ ಮಾಡಲು ಆಯಾ ಜಿಲ್ಲೆ, ತಾಲ್ಲೂಕು, ಗ್ರಾಮ ಮಟ್ಟದಲ್ಲಿನ ಸ್ಥಳೀಯ ಅಂಶಗಳನ್ನು ಒಳಗೊಳ್ಳುವಂತೆ ಮಾಡುವ ಸವಾಲೂ ನಮ್ಮ ಮುಂದಿದ್ದು, ಈ ದಿಸೆಯಲ್ಲಿ ಪ್ರಯತ್ನಗಳು ನಡೆದಿವೆ.

ವಾಚಕರ ವಾಣಿ

ಸರ್ಕಾರಕ್ಕೆ ದಂಡ: ಹೊರೆ ಜನರಿಗೆ!

ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳನ್ನು ನಡೆಸುವಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯ ಸರ್ಕಾರಕ್ಕೆ ಸಾಂವಿಧಾನಿಕ ಹೊಣೆಗಾರಿಕೆ ನಿಭಾಯಿಸುವ ಬದ್ಧತೆ ಇದ್ದಂತಿಲ್ಲ ಎಂದು ಅತೃಪ್ತಿ ವ್ಯಕ್ತಪಡಿಸಿ, ₹ 5 ಲಕ್ಷ ದಂಡ ವಿಧಿಸಿರುವ ಹೈಕೋರ್ಟ್ ಕ್ರಮ ಒಪ್ಪುವಂಥದ್ದು. ಆದರೆ, ಸರ್ಕಾರವು ದಂಡ ಪಾವತಿಸುವುದು ಜನರ ತೆರಿಗೆ ಹಣದಿಂದಲೇ ಆಗಿರುವುದರಿಂದ, ಆಡಳಿತಾರೂಢರ ನಿರ್ಲಕ್ಷ್ಯಕ್ಕೆ ಜನರು ಪರೋಕ್ಷವಾಗಿ ದಂಡ ಪಾವತಿಸಿದಂತೆ ಆಗುವುದಿಲ್ಲವೇ? ಬದಲಾಗಿ, ಚುನಾವಣೆ ವಿಳಂಬಕ್ಕೆ ಕಾರಣರಾಗಿರುವ ಅಧಿಕಾರಿಗಳು ಅಥವಾ ಜನಪ್ರತಿನಿಧಿಗಳಿಂದ ದಂಡ ವಸೂಲಿ ಮಾಡಿದರೆ, ಮುಂದಿನ ದಿನಗಳಲ್ಲಿ ಸಮಯಕ್ಕೆ ಸರಿಯಾಗಿ ಚುನಾವಣೆಗಳನ್ನು ನಡೆಸಲು ಸರ್ಕಾರ ಎಚ್ಚರ ವಹಿಸುತ್ತದೆ. ಮಿಗಿಲಾಗಿ, ಸರ್ಕಾರದ ಕರ್ತವ್ಯಗಳನ್ನು ಕಾರ್ಯರೂಪಕ್ಕೆ ತರುವಾಗ ವ್ಯವಸ್ಥಿತ ಯೋಜನೆ ಮತ್ತು ಮುಂದಾಲೋಚನೆ ಕ್ರಮಗಳು ಕೂಡ ಬಲಗೊಳ್ಳುತ್ತವೆ.

ಡಾ. ಜಿ.ಬೈರೇಗೌಡ, ಬೆಂಗಳೂರು

ಶಕ್ತಿರಾಜಕಾರಣದ ಕಟು ವಾಸ್ತವ

ರಾಹುಲ್ ಗಾಂಧಿ ಅವರು ನಡೆಸುತ್ತಿರುವ 'ಭಾರತ್ ಜೋಡೊ' ಯಾತ್ರೆ ಕುರಿತ ರಾಜಾರಾಮ ತೋಳ್ಪಾಡಿ ಮತ್ತು ನಿತ್ಯಾನಂದ ಬಿ. ಶೆಟ್ಟಿ ಅವರ ಲೇಖನವನ್ನು ಓದಿದಾಗ (ಪ್ರ.ವಾ., ಡಿ. 15), ಹಿಂದಿನ ಬೇಸರ ಮರುಕಳಿಸಿತು. ಯಾತ್ರೆಯ ಬಗೆಗಿನ ಈ ಎಲ್ಲ ಸಕಾರಾತ್ಮಕ ವಿಶ್ಲೇಷಣೆ, ಆಶಯ, ನಿರೀಕ್ಷೆಗಳು, ರಾಜ್ಯದಲ್ಲಿ ಅಧಿಕಾರ ಹಿಡಿಯುವ ತರಾತುರಿಯಲ್ಲಿರುವ ಕಾಂಗ್ರೆಸ್ ಪಕ್ಷದಲ್ಲಿ, ಅದರ ಮುಖಂಡರಲ್ಲಿ ಕಿಂಚಿತ್ತಾದರೂ ಕಂಡುಬರುತ್ತಿವೆಯೇ? ಅಷ್ಟೇಕೆ, ಈಗಾಗಲೇ ಅಧಿಕಾರ ಹಿಡಿದಿರುವ ಹಿಮಾಚಲ ಪ್ರದೇಶದ (ಅಲ್ಲಿ ಭಾರತ ಜೋಡಿಸುವ ಯಾತ್ರೆ ಕೂಡ ಪ್ರಭಾವ ಬೀರಿರುತ್ತದೆ ಎಂದು ಸ್ವತಃ ಮಲ್ಲಿಕಾರ್ಜುನ ಖರ್ಗೆ ಹೇಳಿದ್ದಾರೆ) ಸರ್ಕಾರದ ನಡೆ ನುಡಿಗಳಲ್ಲಿ ಏನಾದರೂ ಬದಲಾವಣೆ ಬಯಸಬಹುದೇ? ಸಕಾರಾತ್ಮಕ ಉತ್ತರ ನಿರೀಕ್ಷಿಸಲು ಸ್ವಲ್ಪ ಕಷ್ಟವಾಗುತ್ತದೆ.

ಬಹುಶಃ ಇದು ಜನತಂತ್ರದ ಇತಿಮಿತಿಗಳು, ಶಕ್ತಿ ರಾಜಕಾರಣದ ಕಟು ವಾಸ್ತವವಾಗಿರಬಹುದು. ಅಂದಮೇಲೆ ಈ ಹೋರಾಟ, ಚಳವಳಿ, ಅವುಗಳಲ್ಲಿ ಏಳುವ 'ಬಿಸಿ ಕಾವು'ಗಳೆಲ್ಲಾ ಹುಸಿಯೇ ಅವಾಸ್ತವಿಕವೇ ಎನ್ನುವ ಪ್ರಶ್ನೆ ಎತ್ತಲೂ ಧೈರ್ಯವಿಲ್ಲ. ಇದೇನು ಹೊಸತಲ್ಲ, ಚಾರಿತ್ರಿಕ ಸತ್ಯ ಕೂಡ. ಸ್ವಾತಂತ್ರ್ಯ ಚಳವಳಿ ನಂತರದ ನೆಹರೂ ನೇತೃತ್ವದ ಕಾಂಗ್ರೆಸ್ ಪಕ್ಷದ ಅಧಿಕಾರವಾಗಲಿ, ಜೆ.ಪಿ. ಮುಂಚೂಣಿಯ ಹೋರಾಟದ ಫಲ ಕಂಡ ಜನತಾ ಪಕ್ಷದ ಅಧಿಕಾರವಾಗಲಿ, ಜಾಗತಿಕ ಮಟ್ಟದಲ್ಲಿ ನೋಡಿದರೂ ನೆಲ್ಸನ್ ಮಂಡೇಲ ಅವರ ಹೋರಾಟದ ಫಲ ಕಂಡ ದಕ್ಷಿಣ ಆಫ್ರಿಕಾದ ಪರಿಸ್ಥಿತಿಯಾಗಲಿ ಇದಕ್ಕಿಂತ ಬೇರೆಯೇನಲ್ಲ. ಇದೇನು ನೆಮ್ಮದಿ ತರುವ ವಿಚಾರವಲ್ಲ. ಈ ಯೋಚನೆ ಯಾವ ನಿರ್ಣಯದತ್ತ ಕೊಂಡೊಯ್ಯುತ್ತಿದೆ ಅನ್ನುವುದೂ ಗೊತ್ತಿಲ್ಲ.

ಪ್ರಕಾಶ್ ಕಮ್ಮರಡಿ, ಬೆಂಗಳೂರು

ಆಸೆ ಮರೆತರೆ ಲೇಸು!

ಗುಣಮಟ್ಟದ ರಸ್ತೆ
ತೋರಿಸಿದರೆ ಬಹುಮಾನವಂತೆ
ಬಿಬಿಎಂಪಿಗೆ ರವಿಂದ್ರನಾಥ್
ಸವಾಲು ಹಾಕಿದ್ದಾರಂತೆ
ಅಂತಹ ರಸ್ತೆಗಳು
ಸಿಗಬಹುದೇ ಬೆಂಗಳೂರಿನಲ್ಲಿ?
ಬಹುಮಾನದ ಆಸೆ
ಮರೆತು ಕುಳಿತುಬಿಡಿ ಕೈಚೆಲ್ಲಿ.

ಕುಮಾರ ಚಲವಾದಿ, ಹಾಸನ

ಗಡಿ ತಂಟೆ: ಚೀನಾಗೆ ತಕ್ಕ ಉತ್ತರ ನೀಡಬೇಕು

ಚೀನಾದ ಸೈನಿಕರು ಪದೇಪದೇ ನಮ್ಮ ನೆಲದೊಳಗೆ ನುಗ್ಗಲು ಪ್ರಯತ್ನಿಸುತ್ತಿದ್ದಾರೆ. ತವಾಂಗ್ ವಲಯದಲ್ಲಿ ನಮ್ಮ ಸೈನಿಕರು ಅಂತಹ ಪ್ರಯತ್ನವನ್ನು ಯಶಸ್ವಿಯಾಗಿ ತಡೆದಿದ್ದಾರೆ. ಚೀನಾದ ಉದ್ಧಟತನವನ್ನು ಇನ್ನೂ ಎಷ್ಟು ದಿನ ಸಹಿಸಿಕೊಳ್ಳಬೇಕು? ಸಾಕು, ನಮ್ಮ ಪ್ರಧಾನಿ ಎಚ್ಚೆತ್ತುಕೊಳ್ಳಬೇಕು ಹಾಗೂ ಪದೇಪದೇ ಕೆಣಕುತ್ತಿರುವ ತಂಟೆಕೋರರಿಗೆ ತಕ್ಕ ಉತ್ತರ ನೀಡಬೇಕು. ಚೀನಾಕ್ಕೆ ಸಂಬಂಧಿಸಿದ ನೀತಿಗಳನ್ನು ರೂಪಿಸುವಾಗ ವಿರೋಧ ಪಕ್ಷಗಳನ್ನು ಹೊರಗೆ ಇಟ್ಟು ಏಕಪಕ್ಷೀಯವಾಗಿ ನಿರ್ಧಾರ ಕೈಗೊಳ್ಳುವುದನ್ನು ಕೇಂದ್ರ ಸರ್ಕಾರ ಬಿಡಬೇಕು. ಇಂತಹ ಸೂಕ್ಷ್ಮ ವಿಷಯಗಳಲ್ಲಿ ರಾಜಕೀಯ ಲಾಭ ಪಡೆಯಲು ಹಾತೊರೆಯುವುದು ತರವಲ್ಲ.

ರಾಮಲಿಂಗ, ಮಾಡಗಿರಿ

ಅನುಚಿತ ವರ್ತನೆ: ಆರಂಭದಲ್ಲೇ ಬಿಸಿ ಮುಟ್ಟಿಸಿ

ತೆಲಂಗಾಣದ ಲೈನ್‌ವುಮನ್‌ಗಳ ರೋಚಕ ಕಥೆ ಹಾಗೂ ಪಾಂಡವಪುರದ ಸರ್ಕಾರಿ ಹಾಸ್ಟೆಲ್‌ನಲ್ಲಿ ಅನುಚಿತವಾಗಿ ವರ್ತಿಸಿದ ಮುಖ್ಯ ಶಿಕ್ಷಕನಿಗೆ ವಿದ್ಯಾರ್ಥಿನಿಯರು ಅಟ್ಟಾಡಿಸಿ ಹೊಡೆದ ಸಾಹಸದ ಸುದ್ದಿಗಳು (ಪ್ರ.ವಾ., ಡಿ. 16) ಹೆಣ್ಣುಮಕ್ಕಳ ಮನೋಬಲಕ್ಕೆ ನಿದರ್ಶನವಾಗಿವೆ. ಹೆಣ್ಣು ಎಂದರೆ ಬಲಹೀನ, ಭೋಗದ ವಸ್ತು ಎಂಬ ಪುರುಷ ಪ್ರಧಾನ ಸಮಾಜದ ಧೋರಣೆಯು ಬದಲಾಗಲೇಬೇಕಾದ ಅನಿವಾರ್ಯ ಸ್ಥಿತಿಯ ಸಂದೇಶವನ್ನು ಕೊಟ್ಟಿವೆ. ಇನ್ನಾದರೂ 'ಕೈಗೆ ಬಳೆ ತೊಟ್ಟಿಲ್ಲ' ಎಂಬಂತಹ ಮಾತು ಹಾಗೂ ಅನುಚಿತ ವರ್ತನೆಗಳಿಗೆ ಆರಂಭದಲ್ಲೇ ಬಿಸಿ ಮುಟ್ಟಿಸಲು ಹೆಣ್ಣುಮಕ್ಕಳು ಒಂದಾಗಬೇಕಿದೆ.

ವಿನ್ಸೆಂಟ್ ಪಿಂಟೊ, ಮಂಗಳೂರು

ಶೈಕ್ಷಣಿಕ ಪ್ರವಾಸ: ಅವಧಿ ವಿಸ್ತರಿಸಿ

ಶಾಲಾ ಮಕ್ಕಳ ಶೈಕ್ಷಣಿಕ ಪ್ರವಾಸವನ್ನು ಇದೇ 31ರೊಳಗೆ ಮುಗಿಸುವಂತೆ ಸೂಚಿಸಲಾಗಿದೆ. ಶೈಕ್ಷಣಿಕ ಮತ್ತು ಪರೀಕ್ಷಾ ದೃಷ್ಟಿಯಿಂದ ಇದು ಸರಿಯಾದ ನಿಯಮ ಹೌದು. ಆದರೆ ಇದರಿಂದ ಒಟ್ಟಾರೆಯಾಗಿ ಪ್ರವಾಸಿ ಸ್ಥಳಗಳಲ್ಲಿ ವಿಪರೀತ ಜನಸಂದಣಿ ಉಂಟಾಗಿ, ಮಕ್ಕಳು ಇನ್ನಿಲ್ಲದ ಪರಿತಾಪವನ್ನು ಅನುಭವಿಸಬೇಕಾಗುತ್ತದೆ. ರಾಜ್ಯದ ಪ್ರಮುಖ ಪ್ರವಾಸಿ ಕೇಂದ್ರಗಳಾದ ಮೈಸೂರಿನ ಬೃಂದಾವನ, ಹಂಪಿ, ವಿಜಯಪುರ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ಧರ್ಮಸ್ಥಳ, ಉಡುಪಿ, ಕೊಲ್ಲೂರು ಹೀಗೆ ಪ್ರತಿಯೊಂದು ಸ್ಥಳದಲ್ಲೂ ಜನಸಂದಣಿ ಹೆಚ್ಚಾಗಿ, ಮಕ್ಕಳಿಗೆ ಪ್ರವಾಸಿ ಸ್ಥಳಗಳ ದರ್ಶನ ಮಾಡಿಸುವುದು ಶಿಕ್ಷಕರಿಗೆ ದೊಡ್ಡ ಹೊರೆಯಾಗುತ್ತದೆ.

ಹೀಗಾಗಿ, ಶಿಕ್ಷಣ ಇಲಾಖೆಯು ಶೈಕ್ಷಣಿಕ ಪ್ರವಾಸದ ಅವಧಿಯನ್ನು ಜನವರಿ 31ರವರೆಗೆ ವಿಸ್ತರಿಸಬೇಕು. ಅಲ್ಲದೆ, ಶೈಕ್ಷಣಿಕ ಪ್ರವಾಸವನ್ನು ದಿನಾಂಕದ ಇತಿಮಿತಿಗೆ ಒಳಪಡಿಸುವುದು ಅವೈಜ್ಞಾನಿಕವಾದ ಕ್ರಮವಾಗುತ್ತದೆ.

ಸರೋಜಿನಿ ನಾಯಕ್, ಆಶಿಹಾಳ ತಾಂಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕನ್ನಡ ಸಾಹಿತ್ಯದ ಅಮೃತವಾಹಿನಿ

ಅಮೃತ ಮಹೋತ್ಸವದ ಸಡಗರ

• ರಘುನಾಥ ಚ.ಹ.

‘ಕನ್ನಡ ನವೋದಯದ ಮುಂಗೋಳಿ’ ಎನ್ನುವುದು ‘ಶ್ರೀರಾಮಾಶ್ವಮೇಧಂ’ ಕಾವ್ಯದ ಕವಿ ಮುದ್ದಣನ ಕುರಿತು ಸೇಡಿಯಾಪು ಕೃಷ್ಣಭಟ್ಟರ ಬಣ್ಣನೆ. ಆಧುನಿಕ ಕನ್ನಡ ಸಾಹಿತ್ಯದ ಮಟ್ಟಿಗೆ ಇಂಥ ಬಣ್ಣನೆ ‘ಪ್ರಜಾವಾಣಿ’ ಪತ್ರಿಕೆಗೆ ಸಲ್ಲಬೇಕು. ಕಳೆದ ಎಪ್ಪತ್ತೈದು ವರ್ಷಗಳ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ‘ಪ್ರಜಾವಾಣಿ’ ಸಹೃದಯರನ್ನು ಎಚ್ಚರಿಸುವ ಹಾಗೂ ಹೊಸತನ್ನು ಪರಿಚಯಿಸುವ ಕೆಲಸವನ್ನು ಸತತವಾಗಿ ಮಾಡುತ್ತಾ ಬಂದಿದೆ. ಕನ್ನಡ ಸಾಹಿತ್ಯದ ಪಾಲಿಗೆ ‘ಪ್ರಜಾವಾಣಿ’ ಅಮೃತವಾಹಿನಿಯೂ ಹೌದು, ಸಾಕ್ಷಿಪ್ರಜ್ಞೆಯೂ ಹೌದು.

ಕನ್ನಡ ಸಾಹಿತ್ಯಕ್ಕೆ ‘ಪ್ರಜಾವಾಣಿ’ ನೀಡಿದ ಕೊಡುಗೆಯನ್ನು ಮುಖ್ಯವಾಗಿ ಮೂರು ನೆಲೆಗಳಲ್ಲಿ ಗುರ್ತಿಸಬಹುದು: 1. ಸಾಪ್ತಾಹಿಕ ಪುರವಣಿ, 2. ದೀಪಾವಳಿ ವಿಶೇಷಾಂಕ ಹಾಗೂ ಕಥಾಸ್ಪರ್ಧೆ, 3. ಸಾಹಿತ್ಯಿಕ–ಸಾಂಸ್ಕೃತಿಕ ಸಂವಾದಗಳು.

‘ಸಾಪ್ತಾಹಿಕ ಪುರವಣಿ’ಯ ಮೊದಲ ಸಂಚಿಕೆ ಪ್ರಕಟಗೊಂಡಿದ್ದು 1956ರ ಜೂನ್ 17ರಂದು. ನಾಲ್ಕು ಪುಟಗಳ ಈ ಸಂಚಿಕೆಯಲ್ಲಿ ಮ. ಶ್ರೀಧರಮೂರ್ತಿ ಅವರ ‘ಅವನು ಕದಿಯಲಿಲ್ಲ’ ಕಥೆ ಹಾಗೂ ಅಮೀರ್ ಖುಸ್ರು ಕುರಿತಂತೆ ಇ.ಆರ್. ಸೇತೂರಾಂ ಅವರ ಪರಿಚಯಾತ್ಮಕ ಬರಹಗಳು ಪ್ರಮುಖವಾಗಿ ಪ್ರಕಟವಾಗಿದ್ದವು. ಹೊಸ ಪುಸ್ತಕಗಳ ಕುರಿತ ‘ಸಾದರ ಸ್ವೀಕಾರ’ವೂ ಮೊದಲ ಸಂಚಿಕೆಯಲ್ಲೇ ಇದೆ.

1956ರಲ್ಲಿ ‘ಸಾಪ್ತಾಹಿಕ ಪುರವಣಿ’ ಅಧಿಕೃತವಾಗಿ ಆರಂಭವಾದರೂ ಪತ್ರಿಕೆಯ ಸಾಹಿತ್ಯಿಕ ನಂಟನ್ನು 1951ರಿಂದಲೇ ಗುರ್ತಿಸಬಹುದು. 1951ರ ಮಾರ್ಚ್ 25ರ ಪತ್ರಿಕೆಯಲ್ಲಿ ಪ್ರಕಟವಾಗಿರುವ ಕಥೆಯೊಂದನ್ನು ಗಮನಿಸಿದರೆ, ಪುರವಣಿಯ ತಾಲೀಮು ಅದು ಆರಂಭಗೊಳ್ಳುವ ಐದು ವರ್ಷಗಳ ಮೊದಲಿನಿಂದಲೂ ನಡೆಯುತ್ತಿತ್ತೆನ್ನಬಹುದು.

ಸಾಹಿತ್ಯಿಕ ಏಕೀಕರಣ

ಕಳೆದ ಆರೂವರೆ ದಶಕಗಳ ಅವಧಿಯಲ್ಲಿ ‘ಸಾಪ್ತಾಹಿಕ ಪುರವಣಿ’ ಒಡನಾಡಿರುವ ಲೇಖಕರ ಸಂಖ್ಯೆಯನ್ನು ಗಮನಿಸಿದರೆ, ಆ ಸಂಖ್ಯೆ ಕನ್ನಡ ಸಾಹಿತ್ಯದೊಂದಿಗೆ ಪತ್ರಿಕೆ ನಡೆಸಿದ ಅಪೂರ್ವ ಅನುಸಂಧಾನದಂತೆ ಕಾಣಿಸುತ್ತದೆ. ಬಹುಶಃ, ಸ್ವಾತಂತ್ರ್ಯೋತ್ತರ ಭಾರತದಲ್ಲಿ ಬೇರಾವುದೇ ಪತ್ರಿಕೆ ತನ್ನ ಭಾಷೆಯ ಸಾಹಿತ್ಯದೊಂದಿಗೆ ‘ಪ್ರಜಾವಾಣಿ’ ನಡೆಸಿದಷ್ಟು ದೊಡ್ಡ ಪ್ರಮಾಣದಲ್ಲಿ ಅನುಸಂಧಾನ ನಡೆಸಿರಲಿಕ್ಕಿಲ್ಲ. 1956, ಕರ್ನಾಟಕ ಏಕೀಕರಣ ಸಾಕಾರಗೊಂಡ ವರ್ಷ. ಆ ಸಂಭ್ರಮಕ್ಕೆ ಮುನ್ನುಡಿಯ ರೂಪದಲ್ಲಿ ನೋಡಬಹುದಾದ ‘ಸಾಪ್ತಾಹಿಕ ಪುರವಣಿ’, ಕರ್ನಾಟಕವನ್ನು ಸಾಹಿತ್ಯಿಕವಾಗಿ ಒಗ್ಗೂಡಿಸಿತೆಂದು ಹೇಳಿದರೆ ಅತಿಶಯೋಕ್ತಿ ಆಗಲಾರದು. ‘ಹಲವು ಕನ್ನಡಂ’ಗಳ ಬರಹಗಾರರ ಪ್ರಯೋಗಗಳಿಗೆ ಪುರವಣಿ ಪ್ರಯೋಗಶಾಲೆಯ ರೂಪದಲ್ಲಿ ತನ್ನನ್ನು ಒಡ್ಡಿಕೊಂಡಿದ್ದುದು, ಚಾರಿತ್ರಿಕ ಅಗತ್ಯವೊಂದು ‘ಪ್ರಜಾವಾಣಿ’ ಮೂಲಕ ಪೂರ್ಣಗೊಂಡಂತೆ ಕಾಣಿಸುತ್ತದೆ.

‘ಸಾಹಿತ್ಯ ಪುರವಣಿ’ಯ ಮೊದಲ ಸಂಚಿಕೆ

ಸಾಮಾಜಿಕ ಮತ್ತು ಸಾಂಸ್ಕೃತಿಕ ಸಂಗತಿಗಳಿಗೂ ತೆರೆದುಕೊಂಡಿರುವ ‘ಸಾಪ್ತಾಹಿಕ ಪುರವಣಿ’ (ಇಂದಿನ ‘ಭಾನುವಾರದ ಪುರವಣಿ’) ಸಾಹಿತ್ಯಕ್ಕಷ್ಟೇ ಸೀಮಿತವಾದ ಪುರವಣಿ ಅಲ್ಲವಾದರೂ, ಅದು ಓದುಗರ ಮನಸ್ಸಿನಲ್ಲಿ ಅಚ್ಚೊತ್ತಿರುವುದು ಸಾಹಿತ್ಯದ ಕಾರಣದಿಂದಾಗಿಯೇ. ‘ಸಾಪ್ತಾಹಿಕ ಪುರವಣಿ’ಯಲ್ಲಿ ಕಥೆ ಅಥವಾ ಕವಿತೆ ಪ್ರಕಟಗೊಳ್ಳುವುದನ್ನು ಬರಹಗಾರನೊಬ್ಬ ತನ್ನ ಸೃಜನಶೀಲತೆಗೆ ದೊರೆತ ಪ್ರಮಾಣಪತ್ರದಂತೆ ಭಾವಿಸುತ್ತಿದ್ದ ದಿನಗಳೂ ಇದ್ದವು. ಸಾವಿರಾರು ಬರಹಗಾರರಿಗೆ ಕಥೆಗಾರರ ಹಾಗೂ ಕವಿಗಳ ಪಟ್ಟ ದೊರಕಿಸಿಕೊಟ್ಟ ಅಗ್ಗಳಿಕೆ ಪುರವಣಿಯದು. ಕಥೆ, ಕವಿತೆಯೊಂದಿಗೆ – ಅಂಕಣ ಬರಹಗಳು, ಸಂವಾದಗಳು, ಪುಸ್ತಕ ವಿಮರ್ಶೆ, ಮಕ್ಕಳ ಸಾಹಿತ್ಯ – ಹೀಗೆ ಸಾಹಿತ್ಯದ ಹಲವು ಪ್ರಕಾರಗಳಿಗೆ ಪುರವಣಿ ವೇದಿಕೆಯಾಗಿದೆ.

ನಾಲ್ಕು ಪುಟಗಳಿಂದ ಆರಂಭವಾದ ‘ಸಾಪ್ತಾಹಿಕ ಪುರವಣಿ’ ನಂತರದ ದಿನಗಳಲ್ಲಿ ಕಾಲದ ಅಗತ್ಯಗಳಿಗೆ ತಕ್ಕಂತೆ ಆರು ಹಾಗೂ ಎಂಟು ಪುಟಗಳಿಗೆ ತನ್ನ ಸ್ವರೂಪ ಬದಲಿಸಿಕೊಂಡಿದೆ. ಪುಟಗಳ ಸಂಖ್ಯೆಯಂತೆಯೇ ಅದರ ಶೀರ್ಷಿಕೆಯೂ (ಮುಕ್ತಛಂದ, ಭಾನುವಾರದ ಪುರವಣಿ) ಬದಲಾಗಿದೆ. ರೂಪಾಂತರಗಳ ನಡುವೆಯೂ ಈಗಲೂ ಬಹುಸಂಖ್ಯೆಯ ಓದುಗರ ಹೃದಯದಲ್ಲಿ ಛಾಪುಗೊಂಡಿರುವುದು ‘ಸಾಪ್ತಾಹಿಕ ಪುರವಣಿ’ ಹೆಸರಿನಲ್ಲಿಯೇ.

‘ಸಾಪ್ತಾಹಿಕ ಪುರವಣಿ’ಯ ಮತ್ತೊಂದು ಸಾಧನೆ, ನವ್ಯ ಚಳವಳಿಗೆ ಅಂತರ್ಜಲದ ರೂಪದಲ್ಲಿ ಪರಿಣಮಿಸಿದ್ದು. ನವೋದಯಕ್ಕಿಂಥ ಭಿನ್ನವಾಗಿ ಬರೆಯಲು ಹೊರಟ ಬರಹಗಾರರ ಕಥೆ–ಕವಿತೆ–ವಿಮರ್ಶೆಗಳನ್ನು ಪುರವಣಿ ಮುಕ್ತ ಮನಸ್ಸಿನಿಂದ ಪ್ರಕಟಿಸಿತು. ದಲಿತ, ಬಂಡಾಯ ಚಳವಳಿಗಳ ಬರಹಗಳಿಗೂ ವೇದಿಕೆಯಾಯಿತು. ಅನೇಕ ಸಾಹಿತ್ಯಿಕ ಸಂವಾದಗಳಿಗೆ ವೇದಿಕೆಯಾಗುವ ಮೂಲಕ ಸಂವಾದ ಸಂಸ್ಕೃತಿಯನ್ನು ಬಲಗೊಳಿಸಿತು.

2011ರ ಫೆಬ್ರುವರಿ 6ರಂದು ಮೊದಲ ಸಂಚಿಕೆಯಾಗಿ ಪ್ರಕಟಗೊಂಡು, ಸುಮಾರು ಮೂರು ವರ್ಷಗಳ ಕಾಲ ಪ್ರತಿ ತಿಂಗಳ ಮೊದಲ ಭಾನುವಾರ ಪ್ರಕಟಗೊಂಡ ‘ಸಾಹಿತ್ಯ ಪುರವಣಿ’, ಸಾಹಿತ್ಯಕ್ಕಾಗಿಯೇ ಮೀಸಲಾಗಿದ್ದ ಪುರವಣಿ. ಇಂಗ್ಲಿಷ್ ಪತ್ರಿಕೆಗಳನ್ನು ಹೊರತು ಪಡಿಸಿದರೆ, ಭಾರತೀಯ ಭಾಷಾ ಪತ್ರಿಕೆಗಳಲ್ಲಿ ಸಾಹಿತ್ಯಕ್ಕಾಗಿಯೇ ಪುರವಣಿಯೊಂದನ್ನು ಪ್ರಕಟಿಸಿದ ಮೊತ್ತಮೊದಲ ಪತ್ರಿಕೆ ‘ಪ್ರಜಾವಾಣಿ’. ಪ್ರತಿ ತಿಂಗಳ ಮೊದಲ ಭಾನುವಾರದಂದು ಪ್ರಕಟಗೊಳ್ಳುತ್ತಿದ್ದ ‘ಸಾಹಿತ್ಯ ಪುರವಣಿ’, ಜಾಹೀರಾತುಗಳಿಂದ ಮುಕ್ತವಾಗಿದ್ದ, ಟ್ಯಾಬ್ಲಾಯಿಡ್ ಆಕಾರದ ಎಂಟು ಪುಟಗಳ ಪುರವಣಿ. ಆರಂಭದ ಕೆಲವು ಸಂಚಿಕೆಗಳನ್ನು ರೂಪಿಸುವಲ್ಲಿ, ‘ದೇಶಕಾಲ’ ಸಾಹಿತ್ಯಪತ್ರಿಕೆ ‘ಪ್ರಜಾವಾಣಿ’ಯೊಂದಿಗೆ ಕೈಗೂಡಿಸಿತ್ತು.

ಸುಗ್ಗಿಕೊಯಿಲಿನ ದೀಪಾವಳಿ ಸಂಚಿಕೆಗಳು

‘ದೀಪಾವಳಿ ವಿಶೇಷಾಂಕ’ದ ಮೊದಲ ಸಂಚಿಕೆ ಪ್ರಕಟಗೊಂಡಿದ್ದು 1957ರಲ್ಲಿ. ಕನ್ನಡ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಭ್ರಮದ ರೂಪದಲ್ಲಿ ಪ್ರಕಟಗೊಳ್ಳುತ್ತಿದ್ದ ದೀಪಾವಳಿ ಸಂಚಿಕೆಗಳು, ಸಾಹಿತ್ಯಿಕ ಲೋಕದ ವಾರ್ಷಿಕ ಸುಗ್ಗಿಯ ರೂಪದಲ್ಲಿ ಸಹೃದಯರ ಪಾಲಿಗೆ ಸಂಗ್ರಾಹ್ಯ ಸಂಚಿಕೆಗಳಾಗಿ ಒದಗಿ ಬಂದಿವೆ. ಮೊದಲ ಸಂಚಿಕೆಯೊಂದಿಗೇ ಆರಂಭವಾದ ‘ದೀಪಾವಳಿ ಕಥಾಸ್ಪರ್ಧೆ’ ನೂರಾರು ಉತ್ತಮ ಕಥೆಗಾರರನ್ನು ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯಿಸಿದೆ. ಗೋಪಾಲಕೃಷ್ಣ ಅಡಿಗರ ‘ಪ್ರಾರ್ಥನೆ’ ಕವಿತೆ ಚೊಚ್ಚಿಲ ದೀಪಾವಳಿ ಸಂಚಿಕೆಯ ಅಮೃತಫಲಗಳಲ್ಲೊಂದು.

ಚೊಚ್ಚಿಲ ವರ್ಷದ ಕಥಾಸ್ಪರ್ಧೆಯಲ್ಲಿ ಮೊದಲ ಬಹುಮಾನ ಪಡೆದ ಬಿ.ಸಿ. ರಾಮಚಂದ್ರ ಶರ್ಮರ ‘ಬೆಳಗಾಯಿತು’ ಕಥೆ, ಕಥಾಸಾಹಿತ್ಯಕ್ಕೆ ಹೊಸತೊಂದು ಬೆಳಗನ್ನು ಉದ್ಘಾಟಿಸಿದ ಕಥೆಯೂ ಹೌದು. ಪೂರ್ಣಚಂದ್ರ ತೇಜಸ್ವಿ (ಲಿಂಗಬಂದ), ಸುಧಾಕರ (ಕಣ್ಣಿ ಕಿತ್ತ ಹಸು), ಬೆಸಗರಹಳ್ಳಿ ರಾಮಣ್ಣ (ಸುಗ್ಗಿ), ಲಂಕೇಶ್ (ನಾನಲ್ಲ), ಶ್ರೀಕೃಷ್ಣ ಆಲನಹಳ್ಳಿ (ತೊರೆ ಬತ್ತಿರಲಿಲ್ಲ), ರಾಘವೇಂದ್ರ ಪಾಟೀಲ (ಪ್ರತಿಮೆಗಳು), ಎಸ್. ದಿವಾಕರ್ (ಕ್ರೌರ್ಯ), ವೈದೇಹಿ (ಒಂದು ಅಪರಾಧದ ತನಿಖೆ), ಜಯಂತ ಕಾಯ್ಕಿಣಿ (ಕಣ್ಣಿಗೊಂದು ಕ್ಷಿತಿಜ), ಬೊಳುವಾರು ಮಹಮದ್ ಕುಂಞಿ (ಅಂಕ), ವಿವೇಕ ಶಾನಭಾಗ (ಗುರುತು), ಅಬ್ದುಲ್ ರಶೀದ್ (ಹಾಲು ಕುಡಿದ ಹುಡುಗ), ಮೊಗಳ್ಳಿ ಗಣೇಶ (ಒಂದು ಹಳೆಯ ಚಡ್ಡಿ, ಬತ್ತ, ತೋಪು), ಅಮರೇಶ ನುಗಡೋಣಿ (ತಮಂಧದ ಕೇಡು, ಧರೆ ಉರಿದರೆ, ನೀರು ತಂದವರು), ನಾಗವೇಣಿ ಹೊನ್ನೆಕಟ್ಟೆ (ಒಡಲು) – ಹೀಗೆ, ಕನ್ನಡದ ಅನೇಕ ಅತ್ಯುತ್ತಮ ಕಥೆಗಾರರು ಮತ್ತು ಕಥೆಗಳಿಗೆ ಕಾವು–ಬೆಳಕಾದ ಅಗ್ಗಳಿಕೆ ದೀಪಾವಳಿ ಕಥಾಸ್ಪರ್ಧೆಯದು. ಒಂದೇ ಸಾಲಿನಲ್ಲಿ ಹೇಳುವುದಾದರೆ, ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಗಳ ಇತಿಹಾಸವನ್ನು ಹೊರತುಪಡಿಸಿ ಕನ್ನಡ ಸಣ್ಣಕಥೆಗಳ ಇತಿಹಾಸವನ್ನು ಕಟ್ಟುವುದು ಸಾಧ್ಯವೇ ಇಲ್ಲ.



‘ದೀಪಾವಳಿ ವಿಶೇಷಾಂಕ’ (1957) ಮೊದಲ ಸಂಚಿಕೆಯ ಮುಖಪುಟ

‘ನೌಕರಿ ಕಾಯಂ’ಗೆ ನೆರವಾದ ಬಹುಮಾನ!

‘ಒಪ್ಪತ್ತು ಊಟ; ಒಪ್ಪತ್ತು ಪಾಠ’ ಎಂಬ 1990ರ ದಿನಗಳಲ್ಲಿ ‘ಪ್ರಜಾವಾಣಿ’ ವಿಶೇಷಾಂಕ ಸ್ಪರ್ಧೆಯಲ್ಲಿ ಬರುವ ಬಹುಮಾನ ನಂಬಿಕೊಂಡು ನಾನು ಜೀವನ ಸಾಗಿಸುತ್ತಿದ್ದೆ. ಒಂದು ಸಾರಿಯ ಬಹುಮಾನ 2–3 ತಿಂಗಳು ಊಟ ಹಾಕುತ್ತಿತ್ತು.

1994–95ರಲ್ಲಿ ಹಂಪಿ ವಿಶ್ವವಿದ್ಯಾಲಯದಲ್ಲಿ ನನ್ನ ಕೆಲಸ ಕಾಯಂ ಆಗಬೇಕಾಗಿತ್ತು. ಆ ಎರಡೂ ವರ್ಷ ನನಗೆ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಲಭಿಸಿತ್ತು. ನೌಕರಿ ಕಾಯಂ ಆಗಲು ಆ ಬಹುಮಾನಗಳೂ ಕಾರಣವಾದವು. ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆಯುವವರು 2–3 ಜನರಾದರೂ, ಸ್ಪರ್ಧೆಯಲ್ಲಿ ಭಾಗವಹಿಸುವ 600ರಿಂದ 800 ಜನರಲ್ಲಿ ಬರವಣಿಗೆಯ ವಿವೇಕ ಜಾಗೃತಗೊಳ್ಳುತ್ತದೆ.

ಅಮರೇಶ ನುಗಡೋಣಿ, ಕಥೆಗಾರ
ಆಕರ: ಅ. 27, 2013ರ ‘ಪ್ರಜಾವಾಣಿ’

ಒಂದು ಸಮುದಾಯದ ಸೌಷ್ಟವ ಕಾಪಾಡುವುದಕ್ಕೆ ಬೇಕಾದ ದೃಷ್ಟಿಕೋನ ರೂಪಿಸುವ ಜವಾಬ್ದಾರಿ ಮಾಧ್ಯಮದ ಮೇಲೆ ಇರುತ್ತದೆ. ಈ ಜವಾಬ್ದಾರಿಯನ್ನು ಬಹಳ ಘನವಾಗಿ ನಿಭಾಯಿಸಿದ ಕೀರ್ತಿ ‘ಪ್ರಜಾವಾಣಿ’ಗೆ ಸಲ್ಲುತ್ತದೆ. ನಾಗರಿಕ ಸಮಾಜದಲ್ಲಿ ವರ್ತಮಾನದ ಆಗುಹೋಗುಗಳ ಸುದ್ದಿಗಳನ್ನು ತಿಳಿಸುವ ವೇದಿಕೆ ಮಾತ್ರ ಆಗದೇ ಸಾಮಾಜಿಕ–ಸಾಂಸ್ಕೃತಿಕ ಮತ್ತು ಸಾಹಿತ್ಯಿಕ ಆಗುಹೋಗುಗಳಿಗೂ ‘ಪ್ರಜಾವಾಣಿ’ ವೇದಿಕೆಯಾಗಿದೆ. ಆಧುನಿಕ ಕನ್ನಡದ ಎಲ್ಲ ಸಾಹಿತ್ಯಿಕ ಚಳವಳಿಗಳ ಹುಟ್ಟಿನಲ್ಲಿಯೂ ‘ಪ್ರಜಾವಾಣಿ’ ವಹಿಸಿರುವ ಪಾತ್ರ ನಿರ್ಣಾಯಕವಾದದ್ದು. ಈ ಪತ್ರಿಕೆಗಿದ್ದ ಸಾಹಿತ್ಯದ ಮತ್ತು ಸಂಸ್ಕೃತಿಯ ಸ್ಪರ್ಶ ಅದರ ಓದುಗರಿಗೆ ಅಗತ್ಯವಾಗಿ ಬೇಕಾಗಿದ್ದ ಓರಿಯಂಟೇಷನ್ ನೀಡಿತು.
ಎಂ.ಎಸ್. ಆಶಾದೇವಿ, ವಿಮರ್ಶಕಿ

ಸ್ಪರ್ಧೆಯ ಹೊರತಾಗಿಯೂ ಅನೇಕ ಅತ್ಯುತ್ತಮ ಕಥೆ–ಕವಿತೆ, ಅಸಂಗತ ನಾಟಕಗಳನ್ನು ಮೊದಲು ಪ್ರಕಟಿಸಿದ ಹೆಮ್ಮೆ ದೀಪಾವಳಿ ಸಂಚಿಕೆಗಳದು. ಯಶವಂತ ಚಿತ್ತಾಲ, ಯು.ಆರ್. ಅನಂತಮೂರ್ತಿ ಅವರ ಅತ್ಯುತ್ತಮ ಕಥೆಗಳು ದೀಪಾವಳಿ ಸಂಚಿಕೆಗಳಲ್ಲಿ ಪ್ರಕಟಗೊಂಡಿವೆ. ದೇವನೂರ ಮಹಾದೇವ ಅವರ ‘ಒಡಲಾಳ’ ಮೊದಲು ಪ್ರಕಟಗೊಂಡಿದ್ದು 1978ರ ದೀಪಾವಳಿ ಸಂಚಿಕೆಯಲ್ಲಿ.

ಕಿರುನಾಟಕ, ಕಾದಂಬರಿ, ಶಿಶುಕಾವ್ಯ ಸ್ಪರ್ಧೆಗಳನ್ನೂ ದೀಪಾವಳಿ ಸಂಚಿಕೆಗಳಿಗಾಗಿ ‘ಪ್ರಜಾವಾಣಿ’ ನಡೆಸಿದೆ. ಮಕ್ಕಳ ದಿನಾಚರಣೆ ಸಂದರ್ಭದಲ್ಲಿ ಪತ್ರಿಕೆ ಪ್ರಕಟಿಸಿರುವ ಮಕ್ಕಳ ವಿಶೇಷ ಸಂಚಿಕೆಗಳು ಮಕ್ಕಳ ಸಾಹಿತ್ಯದ ವಿರಳ ಪ್ರಯೋಗಗಳಾಗಿ ಸಹೃದಯರ ಮೆಚ್ಚುಗೆ ಗಳಿಸಿವೆ.

ದೀಪಾವಳಿ ವಿಶೇಷಾಂಕ ಮತ್ತು ‘ಸಾಪ್ತಾಹಿಕ ಪುರವಣಿ’ ಹೊಸ ಬರಹಗಾರರಿಗೆ– ಮುಖ್ಯವಾಗಿ ನಾಡಿನ ಯಾವುದೋ ಮೂಲೆಯ ಅಜ್ಞಾತ ಬರಹಗಾರರಿಗೆ– ವೇದಿಕೆಯನ್ನು ದೊರಕಿಸಿಕೊಟ್ಟಿವೆ; ಬರಹಗಾರರಿಗೆ ಬರೆಯುವ ಆತ್ಮವಿಶ್ವಾಸವನ್ನು ದೊರಕಿಸಿಕೊಟ್ಟಿವೆ. ‘ಒಡಲಾಳ’, ‘ಬುಗುರಿ’, ‘ತಮಂಧದ ಕೇಡು’ಗಳಂಥ ಭಿನ್ನ ನುಡಿಗಟ್ಟಿನ, ಕಥನ ಸಾಹಿತ್ಯದ ಚೌಕಟ್ಟುಗಳನ್ನು ವಿಸ್ತರಿಸಿದ ಕಥೆಗಳು ಪ್ರಕಟಗೊಳ್ಳುವ ನಿಟ್ಟಿನಲ್ಲಿ ಪತ್ರಿಕೆ ತಳೆದ ಮುಕ್ತಧೋರಣೆ ಕನ್ನಡಕ್ಕೆ ಹೊಸ ಸಂವೇದನೆಗಳನ್ನು ಪರಿಚಯಿಸಿದ್ದಲ್ಲದೆ, ಆ ಸಂವೇದನೆಗೆ ಓದುಗಸಮೂಹದ ಸ್ವೀಕೃತಿಯನ್ನೂ ದೊರಕಿಸಿಕೊಟ್ಟಿತು. ಇಂಥ ಕಥೆಗಳು ನೇರವಾಗಿ ಪುಸ್ತಕ ರೂಪದಲ್ಲಿ ಪ್ರಕಟಗೊಂಡಿದ್ದರೆ, ಜನರ ಗಮನ ಸೆಳೆಯುತ್ತಿದ್ದವೆಂದು ಹೇಳುವುದು ಕಷ್ಟ. ದೀಪಾವಳಿ ಸಂಚಿಕೆಗಳು ಮತ್ತು ‘ಸಾಪ್ತಾಹಿಕ ಪುರವಣಿ’ ಸಾಹಿತ್ಯಿಕ ಬರಹಗಳನ್ನು ಪ್ರಕಟಿಸುವುದು ಮಾತ್ರವಲ್ಲ, ಓದುಗರ ಅಭಿರುಚಿ ಬೆಳೆಸುವ ಕೆಲಸವನ್ನೂ ಮಾಡಿದವು.

ಪ್ರಕಾಶನದ ಪುಸ್ತಕ ರೂಪ

ಪುಸ್ತಕ ಪ್ರಕಾಶನ ಸಂಸ್ಥೆಯಾಗಿಯೂ ‘ಪ್ರಜಾವಾಣಿ’ ಬಹುಮುಖ್ಯ ಕೆಲಸ ಮಾಡಿದೆ. ‘ಪ್ರಿಂಟರ್ಸ್ ಪ್ರಕಾಶನ’ ಹಾಗೂ ‘ಪ್ರಜಾವಾಣಿ ಪ್ರಕಾಶನ’ ಹೆಸರಿನಲ್ಲಿ ಪತ್ರಿಕೆ ಪ್ರಕಟಿಸಿರುವ ಮೌಲಿಕ ಪುಸ್ತಕಗಳು ಓದುಗರ ಗಮನಸೆಳೆದಿವೆ. ‘ಪ್ರಿಂಟರ್ಸ್ ಪ್ರಕಾಶನ’ದಿಂದ ಪ್ರಕಟಗೊಂಡ ಚಂದ್ರಶೇಖರ ಕಂಬಾರರ ‘ಸಿಂಗಾರೆವ್ವ ಮತ್ತು ಅರಮನೆ’, ಸಿದ್ಧಲಿಂಗಯ್ಯನವರ ‘ಅವತಾರಗಳು’, ಪ್ರಸನ್ನರ ‘ತದ್ರೂಪಿ, ‘ಪ್ರಜಾವಾಣಿ ಪ್ರಕಾಶನ’ ಪ್ರಕಟಿಸಿರುವ ಕುಲದೀಪ್ ನಯ್ಯರ್ ಅವರ ಆತ್ಮಕಥನ ‘ಒಂದು ಜೀವನ ಸಾಲದು’ ಹಾಗೂ ದೀಪಾವಳಿ ಕಥಾಸ್ಪರ್ಧೆಗಳ ಬಹುಮಾನಿತ ರಚನೆಗಳ ಸಂಕಲನ ‘ಹೊನ್ನಕಣಜ’ ಕೃತಿಗಳನ್ನು ಇಲ್ಲಿ ಉಲ್ಲೇಖಿಸಬಹುದು.

2018ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ‘ಮುದ್ರಣ ಮಾಧ್ಯಮ ಸಾಹಿತ್ಯ ಪ್ರಶಸ್ತಿ’ ನೀಡಿ ‘ಪ್ರಜಾವಾಣಿ’ಯನ್ನು ಗೌರವಿಸಿದೆ. ಈ ಗೌರವ ಪಡೆದ ಏಕೈಕ ಮುದ್ರಣ ಮಾಧ್ಯಮ ‘ಪ್ರಜಾವಾಣಿ’. ವೈಚಾರಿಕ, ಸಾಹಿತ್ಯಿಕ ಬರಹಗಳು, ಹೊಸ ಬರಹಗಾರರಿಗೆ ನೀಡಿದ ಅವಕಾಶ, ಲೇಖನ ಸ್ಪರ್ಧೆಗಳು, ಬರಹಗಳ ಮೂಲಕ ಬಿತ್ತಿದ ಮೌಲ್ಯಗಳನ್ನು ಪರಿಗಣಿಸಿ ‘ಪ್ರಜಾವಾಣಿ’ ಪತ್ರಿಕೆಗೆ ಈ ಪುರಸ್ಕಾರ ನೀಡಲಾಗಿದೆ ಎಂದು ಅಕಾಡೆಮಿ ಹೇಳಿದೆ.

ಭಾಷಾ ಬೆಳವಣಿಗೆಯ ಪ್ರಕ್ರಿಯೆಯಲ್ಲೂ ‘ಪ್ರಜಾವಾಣಿ’ ಪತ್ರಿಕೆಯದು ಅಸಾಧಾರಣ ಕೊಡುಗೆ. ‘ಸಾಪ್ತಾಹಿಕ ಪುರವಣಿ’ಯಲ್ಲಿ ಸುಮಾರು 18 ವರ್ಷಗಳ ಕಾಲ ಪ್ರಕಟಗೊಂಡ ಪ್ರೊ. ಜಿ. ವೆಂಕಟಸುಬ್ಬಯ್ಯ ಅವರ ‘ಇಗೋ ಕನ್ನಡ’ ಅಂಕಣವನ್ನು ಜನನಿಘಂಟಿನ ರೂಪದಲ್ಲಿ ಗುರ್ತಿಸಬಹುದು. ಓದುಗರೊಂದಿಗೆ ಸೇರಿ ನಿಘಂಟುಕಾರರು ರೂಪಿಸಿದ ‘ಇಗೋ ಕನ್ನಡ’ ಓದುಗರ ಪದಸಂಪತ್ತನ್ನು ಹೆಚ್ಚಿಸುವುದರ ಜೊತೆಗೆ, ಭಾಷೆಗೆ ಸಂಬಂಧಿಸಿದ ಗೊಂದಲಗಳನ್ನು ತಿಳಿಗೊಳಿಸುವ ಕೆಲಸವನ್ನೂ ಮಾಡಿತ್ತು.

ಕನ್ನಡ ಸಾಹಿತ್ಯ ಪರಂಪರೆಯ ಭಾಗವಾಗಿದ್ದುಕೊಂಡೇ ಅದನ್ನು ಬೆಳೆಸಿದ ಕೀರ್ತಿ ಪತ್ರಿಕೆಯದು. ಈ ಸಾಹಿತ್ಯಿಕ ನಂಟು ‘ಪ್ರಜಾವಾಣಿ’ಗೆ ಅನನ್ಯ ಸ್ವರೂಪವನ್ನು ನೀಡಿರುವುದರ ಜೊತೆಗೆ, ಜನರ ಮನಸ್ಸಿನಲ್ಲಿ ಆಪ್ತ ಸ್ಥಾನ ಪಡೆಯುವುದಕ್ಕೂ ಕಾರಣವಾಗಿದೆ.

‘ಸಾಪ್ತಾಹಿಕ ಪುರವಣಿ’ಯ ಚೊಚ್ಚಲ ಸಂಚಿಕೆ

ಸಾಹಿತ್ಯದ ಅನುಬಂಧ

‘ಸಾಪ್ತಾಹಿಕ ಪುರವಣಿ’ ಮತ್ತು ‘ದೀಪಾವಳಿ ಸಂಚಿಕೆ’ಗಳು ಮಾತ್ರವಲ್ಲದೆ, ‘ಪ್ರಜಾವಾಣಿ’ಯ ವಿಷಯವಾರು ನಿಯತಕಾಲಿಕಗಳು ಕೂಡ ಪರೋಕ್ಷವಾಗಿ ಸಾಹಿತ್ಯಕ್ಷೇತ್ರದೊಂದಿಗೆ ಕೊಡು–ಕೊಳು ನಂಟು ಹೊಂದಿದ್ದವು. ಈ ಸಂಬಂಧದ ಭಾಗವಾಗಿ, ಮಹಿಳಾ ಅಭಿವ್ಯಕ್ತಿಯ ‘ಭೂಮಿಕಾ’ ಹಾಗೂ ಯುವಜನರ ಅಭಿವ್ಯಕ್ತಿಯ ‘ಕಾಮನಬಿಲ್ಲು’ ಪುರವಣಿಗಳನ್ನು ಗಮನಿಸಬಹುದು. ಮಹಿಳೆಯರಿಗಾಗಿ ‘ಭೂಮಿಕಾ’ ಪುರವಣಿ ಆಯೋಜಿಸುತ್ತಿದ್ದ ‘ಪ್ರಬಂಧ ಸ್ಪರ್ಧೆ’ ಹಾಗೂ ‘ಕಾಮನಬಿಲ್ಲು’ವಿನ ‘ಪ್ರೇಮಪತ್ರ ಸ್ಪರ್ಧೆ’ಗಳು ಭಿನ್ನ ವಯೋಮಾನದ ಬರಹಗಾರರ ಅಭಿವ್ಯಕ್ತಿಗೆ ವೇದಿಕೆಗಳಾಗಿದ್ದವು. ಪ್ರಜಾವಾಣಿಯೊಂದಿಗೆ ಅದರ ಸೋದರ ಪ್ರಕಟಣೆಗಳಾದ ‘ಸುಧಾ’ ಮತ್ತು ‘ಮಯೂರ’ ಕೂಡ ಆಧುನಿಕ ಕನ್ನಡ ಸಾಹಿತ್ಯದ ಕೊಂಡಿಗಳಾಗಿವೆ.

ಇಶಾನ್ ಕಿಶನ್ ಹಂತ ಹಂತವಾಗಿಯೇ ಮೇಲೇರಿ ಬಂದ ಪ್ರತಿಭೆ

• ಮಹಮ್ಮದ್ ನೂಮಾನ್

‘ನನ್ನ ಭಾವನೆಗಳನ್ನು ಪದಗಳಲ್ಲಿ ವರ್ಣಿಸಲು ಸಾಧ್ಯವಿಲ್ಲ. ಎಲ್ಲರ ಪ್ರೀತಿ, ಹಾರೈಕೆಗಳಲ್ಲಿ ಮಿಂದೆದ್ದಿದ್ದೇನೆ. ಈ ಇನಿಂಗ್ಸ್ ಹೃದಯದಲ್ಲಿ ಶಾಶ್ವತವಾಗಿ ಉಳಿಯುವಂತಹದ್ದು...’

–ಭಾರತ ಕ್ರಿಕೆಟ್‌ನ ಯುವ ಪ್ರತಿಭೆ ಇಶಾನ್ ಕಿಶನ್ ಅವರ ಟ್ವಿಟರ್ ಖಾತೆಯಲ್ಲಿರುವ ಬರಹ ಇದು. ಚಟ್ಟೊಗ್ರಾಮ್‌ನಲ್ಲಿ ಬಾಂಗ್ಲಾದೇಶ ವಿರುದ್ಧ ಡಿ.10ರಂದು ನಡೆದ ಮೂರನೇ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ದ್ವಿಶತಕ ಗಳಿಸಿದ ಬಳಿಕ ಈ ಬರಹ ಪೋಸ್ಟ್ ಮಾಡಿದ್ದರು.

‘ಕ್ರಿಕೆಟ್ ಕ್ರೇಜ್’ ವ್ಯಾಪಕವಾಗಿರುವ ಭಾರತದಲ್ಲಿ ಪ್ರತಿಭೆಗಳಿಗೆ ಕೊರತೆಯಿಲ್ಲ. ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆಯಲು ಯುವ ಆಟಗಾರರ ನಡುವೆ ಪ್ರಬಲ ಸ್ಪರ್ಧೆಯಿದೆ. ತೀವ್ರ ಪೈಪೋಟಿಯ ನಡುವೆಯೂ ಒಂದಿಬ್ಬರು ಆಟಗಾರರು ಇತರರನ್ನು ಮೀರಿ ನಿಲ್ಲುವರು. ಆ ಸಾಲಿನಲ್ಲಿ ಇಶಾನ್ ಕಿಶನ್ ಸೇರಿಕೊಂಡಿದ್ದಾರೆ.

ಬಾಂಗ್ಲಾ ಬೌಲಿಂಗ್ ದಾಳಿಯನ್ನು ಪುಡಿಗಟ್ಟಿ ಕಟ್ಟಿದ 210 ರನ್‌ಗಳ ಇನಿಂಗ್ಸ್ ಅವರಿಗೆ ಭಾರತದ ಕ್ರಿಕೆಟ್‌ನ ‘ನವತಾರೆ’ ಎಂಬ ಹೆಸರು ತಂದುಕೊಟ್ಟಿದೆ. ಅತಿವೇಗದ ದ್ವಿಶತಕ ಗಳಿಸಿ ವಿಶ್ವದಾಖಲೆ ಮಾಡಿದ್ದಾರೆ. 126 ಎಸೆತಗಳಲ್ಲಿ ದ್ವಿಶತಕ ಪೂರೈಸಿದ್ದರಲ್ಲದೆ, ವೆಸ್ಟ್‌ಇಂಡೀಸ್‌ನ ಕ್ರಿಸ್ ಗೇಲ್ (138 ಎಸೆತ) ಹೆಸರಲ್ಲಿದ್ದ ದಾಖಲೆಯನ್ನೂ ಮುರಿದರು.

ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್ ಮತ್ತು ರೋಹಿತ್ ಶರ್ಮ ಬಳಿಕ ಏಕದಿನ ಕ್ರಿಕೆಟ್‌ನಲ್ಲಿ ದ್ವಿಶತಕ ಗಳಿಸಿದ ಭಾರತದ ನಾಲ್ಕನೇ ಬ್ಯಾಟರ್ ಅವರಾಗಿದ್ದಾರೆ. ಸಚಿನ್ ಈ ಸಾಧನೆಗೆ 431 ಇನಿಂಗ್ಸ್‌ಗಳನ್ನು ತೆಗೆದುಕೊಂಡಿದ್ದರೆ, ಸೆಹ್ವಾಗ್ 234 ಇನಿಂಗ್ಸ್‌ನಲ್ಲಿ ಈ ಸಾಧನೆ ಮಾಡಿದ್ದರು. ರೋಹಿತ್ ತಮ್ಮ 103ನೇ ಇನಿಂಗ್ಸ್‌ನಲ್ಲಿ ದ್ವಿಶತಕ ಗಳಿಸಿದ್ದರು. ಆದರೆ ಇಶಾನ್ 9ನೇ ಇನಿಂಗ್ಸ್‌ನಲ್ಲಿ ಅಪೂರ್ವ ಸಾಧನೆಗೆ ಭಾಜನರಾಗಿರುವುದು ವಿಶೇಷ.

ಏಕದಿನ ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಚೊಚ್ಚಲ ಶತಕವನ್ನು ದ್ವಿಶತಕವಾಗಿ ಪರಿವರ್ತಿಸಿದ ಮೊದಲ ಬ್ಯಾಟರ್ ಅವರು. ಹೊಡೆತಗಳ ಆಯ್ಕೆ, ಚೆಂಡಿನ ಗತಿ ಅಂದಾಜಿಸುವ ರೀತಿ, ವೇಗ ಮತ್ತು ಸ್ಪಿನ್ ದಾಳಿಯನ್ನು ದಿಟ್ಟವಾಗಿ ಎದುರಿಸಬಲ್ಲ ಅವರ ಸಾಮರ್ಥ್ಯ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ವ್ಯಕ್ತಿತ್ವ

ಏಕದಿನ ಕ್ರಿಕೆಟ್‌ನಲ್ಲಿ ಸಾಮಾನ್ಯವಾಗಿ 11ನೇ ಓವರ್‌ನಿಂದ 40ನೇ ಓವರ್‌ವರೆಗೆ ಸ್ಕೋರಿಂಗ್‌ನ ವೇಗ ಹೆಚ್ಚು ಇರುವುದಿಲ್ಲ. ಬ್ಯಾಟರ್‌ಗಳು ವಿಕೆಟ್ ಕಾಪಾಡಿಕೊಂಡು ಇನಿಂಗ್ಸ್‌ಗೆ ಬಲ ನೀಡಲು ಮುಂದಾಗುತ್ತಾರೆ. ಆದರೆ ಇಶಾನ್ 11ರಿಂದ 40ನೇ ಓವರ್ ನಡುವೆ 91 ಎಸೆತಗಳಲ್ಲಿ 177 ರನ್ ಕಲೆಹಾಕಿದ್ದರು!

ಹಂತ ಹಂತವಾಗಿ ಮೇಲೇರಿದ ಬ್ಯಾಟರ್: 24 ವರ್ಷದ ಇಶಾನ್ ಹುಟ್ಟಿದ್ದು ಬಿಹಾರದ ಪಟ್ನಾದಲ್ಲಿ. ದೇಶಿ ಕ್ರಿಕೆಟ್‌ನಲ್ಲಿ ಅವರು ಬಿಹಾರ ಬದಲು, ಜಾರ್ಖಂಡ್ ತಂಡದ ಪರ ಆಡುತ್ತಿದ್ದಾರೆ. ಇಶಾನ್ ಇತರ ಕೆಲವು ಆಟಗಾರರಂತೆ ಐಪಿಎಲ್‌ನಲ್ಲಿ ಒಂದೆರಡು ಭರ್ಜರಿ ಇನಿಂಗ್ಸ್ ಆಡಿ ಆಯ್ಕೆಗಾರರ ಗಮನ ಸೆಳೆದು ರಾಷ್ಟ್ರೀಯ ತಂಡದಲ್ಲಿ ಸ್ಥಾನ ಪಡೆದಿಲ್ಲ. ಹಂತ ಹಂತವಾಗಿಯೇ ಮೇಲೇರಿ ಬಂದವರು.

2016–17ರ ರಣಜಿ ಕ್ರಿಕೆಟ್ ಋತುವಿನಲ್ಲಿ ದೆಹಲಿ ವಿರುದ್ಧ 273 ರನ್ ಗಳಿಸಿ ಜಾರ್ಖಂಡ್ ಪರ ದಾಖಲೆ ಬರೆದಿದ್ದರು. 2017–18ರ ರಣಜಿ ಋತುವಿನಲ್ಲಿ ಆರು ಪಂದ್ಯಗಳಿಂದ 484 ರನ್ ಗಳಿಸಿ ತಮ್ಮ ರಾಜ್ಯದ ಪರ ಗರಿಷ್ಠ ಸ್ಕೋರರ್ ಎನಿಸಿಕೊಂಡಿದ್ದರು. 2018–19ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿ ಟೂರ್ನಿಯಲ್ಲಿ ಜಮ್ಮು ಮತ್ತು ಕಾಶ್ಮೀರ ಹಾಗೂ ಮಣಿಪುರ ವಿರುದ್ಧ ಶತಕ ಗಳಿಸಿ ತಮ್ಮ ಬ್ಯಾಟಿಂಗ್‌ನ ಆಳ ಏನೆಂಬುದನ್ನು ತೆರೆದಿಟ್ಟಿದ್ದರು.

ದೇಶಿ ಕ್ರಿಕೆಟ್‌ನಲ್ಲಿ ತೋರಿದ ಸ್ಥಿರವಾದ ಪ್ರದರ್ಶನ, ಅವರಿಗೆ ರಾಷ್ಟ್ರೀಯ ತಂಡದ ಬಾಗಿಲು ತೆರೆಯುವಂತೆ ಮಾಡಿತು. 2021ರ ಮಾರ್ಚ್ 14ರಂದು ಇಂಗ್ಲೆಂಡ್ ವಿರುದ್ಧದ ಟಿ20 ಪಂದ್ಯದೊಂದಿಗೆ ಅಂತರರಾಷ್ಟ್ರೀಯ ಕ್ರಿಕೆಟ್ ಜೀವನ ಆರಂಭವಾಯಿತು. ಮೊದಲ ಪಂದ್ಯದಲ್ಲೇ 32 ಎಸೆತಗಳಲ್ಲಿ 56 ರನ್ ಗಳಿಸಿ ಪಂದ್ಯಶ್ರೇಷ್ಠ ಆಟದ ಹೆಗ್ಗಳಿಕೆ. 2021ರ ಜುಲೈನಲ್ಲಿ ಶ್ರೀಲಂಕಾ ಪ್ರವಾಸದ ವೇಳೆ ಏಕದಿನ ಅಂತರರಾಷ್ಟ್ರೀಯ ಪಂದ್ಯಕ್ಕೆ ಪದಾರ್ಪಣೆ ಮಾಡುವ ಅವಕಾಶ ದೊರೆಯಿತು. ಚೊಚ್ಚಲ ಪಂದ್ಯದಲ್ಲೇ ಅರ್ಧಶತಕ (42 ಎಸೆತಗಳಲ್ಲಿ 59) ಸಾಧನೆ ಮಾಡಿದ್ದರು.

ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗುತ್ತಿದ್ದರೂ ಅಂತಿಮ ಇಲೆವೆನ್‌ನಲ್ಲಿ ಅವರಿಗೆ ಸ್ಥಾನ ಖಚಿತವಾಗಿರಲಿಲ್ಲ. ಹಿರಿಯ ಆಟಗಾರರು ಗಾಯಗೊಂಡಾಗ ಅಥವಾ ವಿಶ್ರಾಂತಿ ಪಡೆದಾಗ ಮಾತ್ರ ಅವಕಾಶ ಸಿಗುತ್ತಿತ್ತು. ನಾಯಕ ರೋಹಿತ್ ಶರ್ಮ ಅವರು ಗಾಯಗೊಳ್ಳದೇ ಇರುತ್ತಿದ್ದಲ್ಲಿ, ಇಶಾನ್‌ಗೆ ಬಾಂಗ್ಲಾ ವಿರುದ್ಧ ಆಡುವ ಅವಕಾಶವೇ ಸಿಗುತ್ತಿರಲಿಲ್ಲ. ಅನಿರೀಕ್ಷಿತವಾಗಿ ಲಭಿಸಿದ ಅವಕಾಶವನ್ನು ಎರಡೂ ಕೈಗಳಲ್ಲಿ ಬಾಚಿಕೊಂಡಿದ್ದಾರೆ.

ಬಾಂಗ್ಲಾ ವಿರುದ್ಧದ ದ್ವಿಶತಕದ ಇನಿಂಗ್ಸ್ ಅವರಿಗೆ ತಂಡದಲ್ಲಿ ಸ್ಥಾನ ಭದ್ರಪಡಿಸಿಕೊಳ್ಳಲು ನೆರವಾಗಲಿದೆ. ಇಶಾನ್ ಅವರ ದಿಟ್ಟ ಆಟ, ಶಿಖರ್ ಧವನ್ ಸ್ಥಾನಕ್ಕೆ ಕುತ್ತು ತರಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

‘ದ್ವಿಶತಕದ ಇನಿಂಗ್ಸ್‌ಅನ್ನು ತಲೆಯಲ್ಲೇ ಇಟ್ಟುಕೊಂಡು, ಯಶಸ್ಸಿನ ಅಲೆಯಲ್ಲಿ ತೇಲಾಡಬೇಡ’ ಎಂದು ತಂದೆ ಪ್ರಣವ್ ಕುಮಾರ್ ಪಾಂಡೆ, ಮಗನಿಗೆ ಕಿವಿಮಾತು ಹೇಳಿದ್ದಾರೆ. ‘ಶತಕ ಹೊಡೆದಾಗ ನಾನು ಮಗನಿಗೆ ಹೆಚ್ಚಿನದ್ದೇನೂ ಹೇಳುವುದಿಲ್ಲ. ಏಕೆಂದರೆ ಎಲ್ಲರಿಂದಲೂ ಆತ ಅಭಿನಂದನೆ ಸ್ವೀಕರಿಸುತ್ತಾನೆ. ದ್ವಿಶತಕದ ಬಳಿಕ ನನಗೆ ಕರೆಮಾಡಿದ್ದ. ಮುಂದಿನ ಪಂದ್ಯದಲ್ಲಿ ನೀನು ಸೊನ್ನೆಯಿಂದ ಇನಿಂಗ್ಸ್ ಆರಂಭಿಸುತ್ತಿ. ಈ ಸಾಧನೆಯನ್ನು ತಲೆಯಲ್ಲಿ ಇಟ್ಟುಕೊಳ್ಳಬೇಡ ಎಂದಿದ್ದೆ’ ಎಂಬುದು ಪ್ರಣವ್ ಅವರ ಮಾತು.

ತಂದೆಯ ಮಾತನ್ನು ಇಶಾನ್ ಗಂಭೀರವಾಗಿ ತೆಗೆದುಕೊಂಡಂತಿದೆ. ಏಕೆಂದರೆ ಬಾಂಗ್ಲಾದಿಂದ ನೇರವಾಗಿ ರಾಂಚಿಗೆ ಬಂದು ಜಾರ್ಖಂಡ್ ರಣಜಿ ತಂಡವನ್ನು ಸೇರಿಕೊಂಡಿದ್ದಾರೆ. ಕೇರಳ ವಿರುದ್ಧದ ಪಂದ್ಯದಲ್ಲಿ 132 ರನ್ ಕಲೆಹಾಕಿದ್ದಾರೆ. ದ್ವಿಶತಕ ಗಳಿಸಿದ ಐದು ದಿನಗಳ ಬಳಿಕ ರಣಜಿ ಕ್ರಿಕೆಟ್‌ನಲ್ಲಿ ಶತಕ ಸಾಧನೆ ಮೂಡಿಬಂದಿದೆ. ತನ್ನ ಮುಂದಿರುವ ಸವಾಲು ಏನೆಂಬುದು ಈ ಯುವ ಆಟಗಾರನಿಗೆ ತಿಳಿದಿದೆ. ಅದನ್ನು ಎದುರಿಸುವ ಛಲವೂ ಅವರಲ್ಲಿದೆ.

ಪದಬಂಧ 5171 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
3.ನಡುವೆ ಗರಿಯಿಟ್ಟು ಅಪಹರಿಸು! (4)
5.ತಾಯಿಯ ಮನೆ ಕಿಟಕಿ (4)
6. ಕಾಜಾಣವನ್ನು ಬಂಧಿಸಿಟ್ಟಿರುವ ಬುದ್ಧಿವಂತ! (2)
7.ವಟಗುಟ್ಟುವವನ ವಕ್ಕಣೆ! (4)
10.ಕಾನನದಲ್ಲಿನ ವಾಸ (4)
13. ತಳಿರು ನೋಡಿದಾಗ ಅನುವಂಶಿಕ ಗುಣ ಕಂಡೀತೇ (2)
14.ಒಳಗಿನ ಅಭಿಪ್ರಾಯ (4)
15.ದಪ್ಪ ನೂಲಿನ ಹಾಸು (4)

ಮೇಲಿಂದ ಕೆಳಕ್ಕೆ
1. ಸೈನಿಕರು ಮಾಡುವ ವ್ಯಾಯಾಮ (4)
2. ಗೆಲುವನ್ನು ಪಡೆದವನು (4)
3. ಬಲಕ್ಕೆ ವಿರುದ್ಧವಾಗಿ ರೂಢಿಗೆ ವಿರುದ್ಧವಾದದ್ದು ಬಂದಿದೆ (4)
4. ಒಳ್ಳೆಯ ಸ್ವಭಾವವಿದು (3)
6. ಜಾಣತನದಿಂದ ಕೂಡಿದ ಮಾತು (3)
8. ದನದ ಕಡೆ ನೋಡುತ್ತಿರುವ ಮುಖ (3)
9. ಮುಚ್ಚಿದ ಕದ ತೆಗೆಯಲಾರದಂತೆ ತಡೆಯುವ ಅಡ್ಡಮರ (3)
10. ವರ್ತಕನು ಹೇಳಿದ ಸುದ್ದಿ (4)
11. ನಡುವೆ ನಾತವಿದ್ದರೆ ಹಳಬ ಕಾಣಿಸಿಕೊಳ್ಳುತ್ತಾನೆ (4)
12. ಆ ಜಗಲಿ ಹತ್ತಿರ ಕಾಣಿಸಿದ ಹೆಬ್ಬಾವು (4)
13. ಮಗ ಇಲ್ಲಿದ್ದಾನೆ (3)



5170ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜವಾನ 3.ಗತ್ಯಂತರ
5.ತಿಲಕ 7.ಗಡಿಯಾರ
9.ಮೆಲುಮಾತು 12.ನವಮಿ
14.ಚದುರಂಗ 15.ಕಠೋರ

ಮೇಲಿಂದ ಕೆಳಕ್ಕೆ:
1.ಜಯಂತಿ 2.ನರಕ
3.ಗಡಿಬಿಡಿ 4.ರಥಿಕ
6.ಲವಾಜಮೆ 7.ಗರತಿ
8.ರಥೋತ್ಸವ
10.ಮಾವಟಿಗ 11.ಚಮಚ
12.ನಡುಕ 13.ಮಿಹಿರ

ಸುಡೊಕು 5557

	4			2		7		3
6		9	5		7		4	
	3			8		6		
	7			9			3	
	9	3	6		8			4
4				5		8		
7			8		9			
	5							7
	8			4		9		

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5556 ಸುಡೊಕು

2	1	8	3	7	5	4	6	9
4	9	7	6	1	2	8	5	3
3	6	5	9	4	8	1	7	2
9	2	3	1	8	7	5	4	6
5	7	1	4	6	3	9	2	8
8	4	6	5	2	9	3	1	7
7	3	9	2	5	1	6	8	4
6	5	2	8	9	4	7	3	1
1	8	4	7	3	6	2	9	5

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶನಿವಾರ ಡಿಸೆಂಬರ್ 17, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶೀರ್ಷ ಕೃಷ್ಣ ನವಮಿ ಗಂ. 27-42 ನಕ್ಷತ್ರ: ಉತ್ತರಫಲ್ಗುನಿ ಗಂ. 09-18 ಯೋಗ: ಆಯುಷ್ಮಾನ್ ಗಂ. 07- 33 ಕರಣ: ತೈತಿಲ ಗಂ. 15-28, ಧನುರ್ ಮಾಸದ 01 ನೇ ದಿನ.
ರಾಹುಕಾಲ : ಬೆಳಿಗ್ಗೆ 09-00 –10-30
ಸೂರ್ಯೋದಯ : 06-50 ಸೂರ್ಯಾಸ್ತ : 06-03
ಮುಸ್ಲಿಂ ದಿನಾಂಕ : 22 ಜುಮಾದುಲ್ಲಾವಲ್
ಅದೃಷ್ಟ ಸಂಖ್ಯೆ : 4, 5

ಮೇಷ: ಅನೇಕ ಕ್ಷೇತ್ರಗಳಲ್ಲಿ ಹೊತ್ತು-ಗೊತ್ತು, ಆಹಾರ, ವಿಶ್ರಾಂತಿಗಳಿಲ್ಲದೆ ದುಡಿಯುವ ನಿಮಗೆ ಜನಗಳ ದೃಷ್ಟಿ ದೋಷವು ಸ್ವಲ್ಪ ಮಟ್ಟಿನ ಆರೋಗ್ಯವನ್ನು ಹಾಳುಮಾಡುವುದು. ಮಗಳ ವಿವಾಹ ಪ್ರಸ್ತಾವನೆ ನಡೆದು ಶುಭದಲ್ಲಿ ಮುಕ್ತಾಯ

ವೃಷಭ: ಇತರರನ್ನು ಹೀಯಾಳಿಸುವ, ಅನವಶ್ಯಕವಾಗಿ ತಿರಸ್ಕರಿಸುವ ಅಥವಾ ನಿಂದನೆ ಮಾಡುವ ಮನೋಭಾವ ಕಡಿಮೆ ಮಾಡಿಕೊಳ್ಳಿ. ದೀರ್ಘಕಾಲೀನ ಯೋಜನೆಗಳು ಫಲದಾಯಕವೆನಿಸಲಿದೆ. ವಿವಾಹದ ಬಗ್ಗೆ ಪ್ರಯತ್ನವಿರಲಿ.

ಮಿಥುನ: ಈ ದಿನ ಕೆಲಸಗಳನ್ನು ಸಮರ್ಪಕವಾಗಿ ಮಾಡಿದ ತೃಪ್ತಿಕರ ಭಾವ ನಿಮ್ಮಲ್ಲುಂಟಾಗಲಿದೆ. ದಿನದಲ್ಲಿ ಅಧಿಕ ಸಮಯ ಸಂತೋಷವಿರುವುದು. ಸಾಮಾಜಿಕ ಸಂಘ ಸಂಸ್ಥೆಗಳ ಪದಾಧಿಕಾರ ಆಕಸ್ಮಿಕವಾಗಿ ದೊರಕುವುದು.

ಕರ್ಕಾಟಕ: ಈ ದಿನ ನಿಮ್ಮ ಯೋಜನೆಗಳನ್ನು ಇತರರು ಅಪೇಕ್ಷಿಸುವಂತೆ ಅಥವಾ ಸ್ವೀಕರಿಸುವಂತೆ ಮಾಡುವ ಸಾಮರ್ಥ್ಯ ಅದ್ಭುತವಾದದ್ದು. ಹೊರ ಗುತ್ತಿಗೆ ಕೆಲಸ ಲಾಭ ತರಲಿದೆ. ರೈತರಿಗೆ ಕಾಡು ಪ್ರಾಣಿಗಳ ಕಾಟದಿಂದ ನಷ್ಟ

ಸಿಂಹ: ಸಿನಿಮಾ ಕಲಾವಿದರಿಗೆ ಸದವಕಾಶ ಒದಗಿ ಬರಲಿದೆ. ಸರಳ ಸ್ವಭಾವದಿಂದ ಮೆಚ್ಚುಗೆ ಪಡೆಯಬಹುದು. ಮೊದಲು ಪ್ರಯತ್ನ ಸಫಲವಾಗಿದ್ದರಿಂದ ಉತ್ಸಾಹ ಗರಿಗೆದರಿದೆ. ಸಾರಿಗೆ ಉದ್ಯೋಗದವರಿಗೆ ಉತ್ತಮ ದಿನ.

ಕನ್ಯಾ: ಮಿತ್ರರಿಂದ ಉತ್ತಮ ಸಹಾಯ ದೊರೆಯುವ ಶುಭ ಸೂಚನೆಯೊಂದಿಗೆ ಪ್ರಾರಂಭವಾಗುವ ಈ ದಿನವು ನಿಮ್ಮ ಜೀವನದಲ್ಲಿ ಮಹತ್ವಪೂರ್ಣ ದಿನವಾಗಿ ಪರಿಣಮಿಸಲಿದೆ. ಜವಳಿ ವ್ಯಾಪಾರಿಗಳಿಗೆ ಈ ದಿನವು ಲಾಭದಾಯಕ.

ತುಲಾ: ಕಂಟ್ರಾಕ್ಟ್ ಕೆಲಸಗಾರರಿಗೆ ಶ್ರಮಕ್ಕೆ ತಕ್ಕ ಪ್ರತಿಫಲದೊರೆಯಲಿದೆ. ಉದ್ಯೋಗಿಗಳಿಗೆ ವೃತ್ತಿ ತಾತ್ಕಾಲಿಕ ಸಮಾಧಾನವನ್ನು ತಂದರೂ ಬದಲಾವಣೆಗೆ ಅವಕಾಶಇರುತ್ತದೆ. ಹಾಗೂ ಬಂದ ಅವಕಾಶ ಬಳಸಿಕೊಳ್ಳುವುದು ಉತ್ತಮ.

ವೃಶ್ಚಿಕ: ರಾಜಕೀಯ ವ್ಯಕ್ತಿಗಳೊಂದಿಗೆ ಒಡನಾಟ ಬೆಳೆಸಿಕೊಳ್ಳುವಿರಿ. ಅಧಿಕಾರಿ ವರ್ಗದವರಿಗೆ ರಾಜಕಾರಣಿಗಳ ಕಿರುಕುಳ ಹೆಚ್ಚಾಗುತ್ತದೆ. ದೈವಾನುಗ್ರಹ ನಿಮ್ಮ ಮೇಲಿರುವುದರಿಂದ ಹಿಡಿದ ಕೆಲಸಗಳು ದಡ ಸೇರುವುದು.

ಧನು: ಕಾರ್ಯಕ್ಷೇತ್ರದಲ್ಲಿ ಆಗಾಗ ಪ್ರಯತ್ನಬಲಕ್ಕೆ ಅಡ್ಡಿ ಆತಂಕಗಳಿದ್ದರೂ ಈ ದಿನ ನಿಮ್ಮ ಕಾರ್ಯ ಸಾಧನೆಯಲ್ಲಿ ಜಯ ಕಾಣುವುದರ ಬಗ್ಗೆ ಸಂದೇಹವಿಲ್ಲ. ಯಾವುದೇ ವ್ಯಕ್ತಿಗಳ ಹೊಗಳಿಕೆಯ ಮಾತುಗಳಿಗೆ ಮರಳಾಗಬೇಡಿ.

ಮಕರ: ಅನ್ವೇಷಣೆಯ ಸ್ವಭಾವ ವೃತ್ತಿ ಬದುಕಿಗೆ ಉತ್ತಮ ತಿರುವು ನೀಡಲಿದೆ. ಪ್ರಸ್ತುತ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಅವಕಾಶ ಸಿಗುವುದು. ವೈವಾಹಿಕ ಜೀವನದಲ್ಲಿ ಪರಸ್ಪರ ಹೊಂದಾಣಿಕೆಯಿದ್ದು ಸಂತೋಷದಿಂದಿರುವಿರಿ.

ಕುಂಭ: ಕೃಷಿ ಮತ್ತು ಹೈನುಗಾರಿಕೆ ಉತ್ಪನ್ನಗಳಿಂದ ಆದಾಯದಲ್ಲಿ ಗಣನೀಯ ಸುಧಾರಣೆ ಕಾಣಲಿದೆ. ನಿಮ್ಮೆಲ್ಲಾ ಪ್ರಮುಖ ಗುರಿ ಸಾಧನೆಗಳಿಗೆ ಇಂದಿನಿಂದ ಒಳ್ಳೆಯ ಬೇಡಿಕೆ ಸಿಗುವುದು. ಸಾಮಾಜಿಕ ಚಟುವಟಿಕೆಗಳಲ್ಲಿ ಭಾಗವಹಿಸುವಿರಿ.

ಮೀನ: ನಿಮ್ಮ ಗೌರವ ಪ್ರತಿಷ್ಠೆ ಹೆಚ್ಚಲು ಸಮಯ ಬೇಕಿದೆ. ಸೇವಾ ಮನೋಭಾವವಿರುವ ವ್ಯಕ್ತಿಗಳು ಹೆಚ್ಚು ಪ್ರಶಂಸೆ ಪಡೆಯುವರು. ತಾಂತ್ರಿಕ ವಿದ್ಯಾರ್ಥಿಗಳಿಗೆ ಶುಭ. ನೀವು ಕೈಗೊಂಡ ಕೆಲಸಗಳು ಸುಗಮವಾಗಿ ಸಾಗಲಿದೆ.

ಮೋದಿ–ಪುಟಿನ್ ಮಾತುಕತೆ

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಹಾಗೂ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಶುಕ್ರವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದು, ಇಂಧನ, ವ್ಯಾಪಾರ, ರಕ್ಷಣೆ ಹಾಗೂ ಭದ್ರತೆ ಸೇರಿದಂತೆ ಇತರೆ ಪ್ರಮುಖ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ಕೋರಿದ್ದಾರೆ' ಎಂದು ಅಧಿಕಾರಿಗಳು ಹೇಳಿದ್ದಾರೆ.

'ಭಾರತವು ಜಿ–20 ಗುಂಪಿನ ಅಧ್ಯಕ್ಷತೆ ವಹಿಸಿಕೊಂಡಿರುವ ಕುರಿತು ಪುಟಿನ್ ಜೊತೆ ಚರ್ಚಿಸಿರುವ ಮೋದಿ ಅವರು ಭಾರತದ ಪ್ರಮುಖ ಆದ್ಯತೆಗಳ ಕುರಿತು ರಷ್ಯಾ ಅಧ್ಯಕ್ಷರಿಗೆ ಮಾಹಿತಿ ನೀಡಿದ್ದಾರೆ' ಎಂದೂ ತಿಳಿಸಿದ್ದಾರೆ.

ಭಾರತ–ರಷ್ಯಾ ವಾರ್ಷಿಕ ಸಮ್ಮೇಳನದಲ್ಲಿ ಪಾಲ್ಗೊಳ್ಳಲು ಮೋದಿ ಅವರು ರಷ್ಯಾಕ್ಕೆ ತೆರಳುವುದಿಲ್ಲ ಎಂದು ವರದಿಯಾದ ಕೆಲವೇ ದಿನಗಳಲ್ಲಿ ಈ ಮಾತುಕತೆ ನಡೆದಿದೆ. ಈ ಸಮ್ಮೇಳನದಲ್ಲಿ ಭಾಗವಹಿಸಲು ಕಳೆದ ವರ್ಷ ಪುಟಿನ್ ಭಾರತಕ್ಕೆ ಬಂದಿದ್ದರು.

ಸೇನಾ ಶಿಬಿರದ ಹೊರಗೆ ಗುಂಡಿನ ದಾಳಿ: ಇಬ್ಬರು ನಾಗರಿಕರ ಸಾವು

ರಜೌರಿ/ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ರಜೌರಿ ಜಿಲ್ಲೆಯ ಸೇನಾ ಶಿಬಿರದ ಹೊರಗೆ ಶುಕ್ರವಾರ ನಡೆದ ಗುಂಡಿನ ದಾಳಿಯಲ್ಲಿ ರಜೌರಿ ನಿವಾಸಿಗಳಾದ ಕಮಲ್ ಕುಮಾರ್, ಸುರಿಂದರ್ ಕುಮಾರ್ ಮೃತಪಟ್ಟಿದ್ದು, ಉತ್ತರಾಖಂಡದ ಅನಿಲ್ ಕುಮಾರ್ ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಲವು ಅಪರಿಚಿತ ಭಯೋತ್ಪಾದಕರು ಶಿಬಿರದ ಮೇಲೆ ಗುಂಡು ಹಾರಿಸಲು ಪ್ರಾರಂಭಿಸಿದ್ದಾರೆ ಎಂದು ಸೇನೆ ಟ್ವೀಟ್ ಮಾಡಿದ್ದರೆ, ಗೇಟ್‌ನಲ್ಲಿ ನಿಯೋಜನೆಗೊಂಡಿದ್ದ ಸೇನಾ ಸಿಬ್ಬಂದಿಯೊಬ್ಬರು ಸ್ಥಳೀಯರ ಮೇಲೆ ಗುಂಡು ಹಾರಿಸಿದ್ದರಿಂದ ಸಾವು, ನೋವು ಸಂಭವಿಸಿವೆ ಎಂದು ಪ್ರತ್ಯಕ್ಷದರ್ಶಿ ಹೇಳಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮೊದಲನೇ ವರ್ಷದ ಪುಣ್ಯಸ್ಮರಣೆ

ಶ್ರೀ ಬಿ. ಗಂಗಾಧರ್ ರವರು
ಜನನ: 30.06.1950 ● ಮರಣ: 17.12.2021
ಇಂತಿ: ಶ್ರೀಮತಿ ನಂಜಮ್ಮ ಹಾಗೂ ಕುಟುಂಬವರ್ಗದವರು

ಸುಪ್ರೀಂ ಕೋರ್ಟ್ ಚಳಿಗಾಲದ ರಜೆ ಇಂದಿನಿಂದ: ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಘೋಷಣೆ

'ಜ. 1ರವರೆಗೆ ಯಾವುದೇ ಪೀಠ ಲಭ್ಯವಿಲ್ಲ'

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ಯಾವ ಪೀಠವೂ ಡಿಸೆಂಬರ್ 17ರಿಂದ ಜನವರಿ 1ರವರೆಗೆ ಲಭ್ಯವಿರುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಮುಖ್ಯನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಚಳಿಗಾಲದ ರಜೆ ಶನಿವಾರದಿಂದ ಆರಂಭವಾಗಲಿದ್ದು, ಜನವರಿ 1ಕ್ಕೆ ಅಂತ್ಯವಾಗಲಿದೆ. ಜನವರಿ 2ರಿಂದ ಸುಪ್ರೀಂ ಕೋರ್ಟ್ ಎಂದಿನಂತೆ ಕೆಲಸ ಮಾಡಲಿದೆ.

ನ್ಯಾಯಾಲಯಗಳು ರಜೆ ತೆಗೆದುಕೊಳ್ಳುವುದರಿಂದ ನ್ಯಾಯಬಯಸಿ ಬರುವವರಿಗೆ ತೊಡಕಾಗಲಿದೆ ಎಂದು ಕೇಂದ್ರ ಕಾನೂನು ಸಚಿವ ಕಿರಣ್ ರಿಜಿಜು ಗುರುವಾರವಷ್ಟೇ ಲೋಕಸಭೆಯಲ್ಲಿ ಹೇಳಿದ್ದರು.

ಡಿ.ವೈ. ಚಂದ್ರಚೂಡ್

ನ್ಯಾಯಾಲಯಗಳಲ್ಲಿ ಲಕ್ಷಾಂತರ ಪ್ರಕರಣಗಳ ವಿಚಾರಣೆ ಬಾಕಿ ಇರಲು ಇದೂ ಒಂದು ಕಾರಣ ಎಂದು ಅವರು ಹೇಳಿದ್ದರು. ಅದರ ಮರುದಿನವೇ ಮುಖ್ಯ ನ್ಯಾಯಮೂರ್ತಿ ಚಂದ್ರಚೂಡ್ ಅವರು, ನ್ಯಾಯಾಲಯದಲ್ಲಿ ಇದ್ದ ವಕೀಲರಿಗೆ ಚಳಿಗಾಲದ ರಜೆಯ ಮಾಹಿತಿಯನ್ನು ಔಪಚಾರಿಕವಾಗಿ ನೀಡಿದ್ದಾರೆ.

ನ್ಯಾಯಾಲಯಗಳ ದೀರ್ಘಾವಧಿಯ ರಜೆಯ ಬಗ್ಗೆ ಈ ಹಿಂದೆಯೂ ಆಕ್ಷೇಪಗಳು ವ್ಯಕ್ತವಾಗಿದ್ದವು. ಹಲವು ನ್ಯಾಯಮೂರ್ತಿಗಳು ಸಾರ್ವಜನಿಕ ವೇದಿಕೆಗಳಲ್ಲಿ ಈ ಬಗ್ಗೆ ಪ್ರತಿಕ್ರಿಯೆ ನೀಡಿದ್ದರು.

ಮುಖ್ಯಾಂಶಗಳು

- ನ್ಯಾಯಾಲಯಗಳ ರಜೆಯಿಂದ ತೊಂದರೆ ಎಂದಿದ್ದ ಕಾನೂನು ಸಚಿವ
- ನ್ಯಾಯಬಯಸಿ ಬರುವವರಿಗೆ ತೊಡಕಾಗುತ್ತದೆ ಎಂದಿದ್ದ ಕಿರಣ್ ರಿಜಿಜು

ಈ ಹಿಂದೆ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿದ್ದ, ನ್ಯಾಯಮೂರ್ತಿ ಎನ್.ವಿ.ರಮಣ ಅವರು, 'ನ್ಯಾಯಾಧೀಶರು, ನ್ಯಾಯಮೂರ್ತಿಗಳು ತುಂಬಾ ಆರಾಮವಾಗಿ ಇರುತ್ತಾರೆ ಮತ್ತು ರಜೆಯನ್ನು ಎಂಜಾಯ್ ಮಾಡುತ್ತಾರೆ ಎಂಬ ತಪ್ಪು ಕಲ್ಪನೆ ಇದೆ' ಎಂದು ಹೇಳಿದ್ದರು.

ಇದೇ ಜುಲೈನಲ್ಲಿ ರಾಂಚಿಯಲ್ಲಿ ನಡೆದಿದ್ದ ನ್ಯಾಯಮೂರ್ತಿ ಎಸ್.ಬಿ. ಸಿನ್ಹಾ ಸ್ಮಾರಕ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದ್ದರು.

'ನ್ಯಾಯಾಧೀಶರು ಅತ್ಯಂತ ಸುಖವಾಗಿ ಇರುತ್ತಾರೆ, ಬೆಳಿಗ್ಗೆ 10ರಿಂದ ಸಂಜೆ ನಾಲ್ಕರವರೆಗೆ ಮಾತ್ರ ಕೆಲಸ ಮಾಡುತ್ತಾರೆ ಮತ್ತು ರಜೆಯನ್ನು ಚೆನ್ನಾಗಿ ಅನುಭವಿಸುತ್ತಾರೆ ಎಂಬ ತಪ್ಪು ಕಲ್ಪನೆ ಜನರಲ್ಲಿದೆ. ನ್ಯಾಯಾಧೀಶರ ಜೀವನ ಆರಾಮವಾಗಿರುತ್ತದೆ ಎಂಬ ಸುಳ್ಳು ಸಂಕಥನಗಳನ್ನು ಸೃಷ್ಟಿಸಿದಾಗ, ಅವನ್ನು ಅರಗಿಸಿಕೊಳ್ಳಲು ಕಷ್ಟವಾಗುತ್ತದೆ' ಎಂದು ಅವರು ಹೇಳಿದ್ದರು.

'ನಾವು ವಾರಾಂತ್ಯದಲ್ಲೂ ಕೆಲಸ ಮಾಡುತ್ತೇವೆ. ನ್ಯಾಯಾಲಯದ ರಜೆಯ ಅವಧಿಯಲ್ಲಿ ಸಂಶೋಧನೆ, ಅಧ್ಯಯನ ಮತ್ತು ಪ್ರಕರಣಗಳ ತೀರ್ಪನ್ನು ಬರೆಯುವ ಕೆಲಸವಿರುತ್ತದೆ. ಈ ಎಲ್ಲಾ ಜವಾಬ್ದಾರಿಗಳ ಮಧ್ಯ ನಾವು ನಮ್ಮ ಜೀವನದ ಮಹತ್ವದ ಕ್ಷಣಗಳನ್ನು ಅನುಭವಿಸಲು ಆಗುವುದಿಲ್ಲ' ಎಂದು ಅವರು ಹೇಳಿದ್ದರು.

ದೆಹಲಿ ಹೈಕೋರ್ಟ್‌ನ ನ್ಯಾಯಮೂರ್ತಿಯಾಗಿದ್ದ, ನ್ಯಾಯಮೂರ್ತಿ ಜಯಂತ್‌ನಾಥ್ ಸಹ ಇಂಥದ್ದೇ ಮಾತು ಹೇಳಿದ್ದರು. 2021ರ ನವೆಂಬರ್‌ನಲ್ಲಿ ತಮ್ಮ ನಿವೃತ್ತಿಯ ದಿನ ಮಾತನಾಡಿದ್ದ ಅವರು, 'ನ್ಯಾಯಾಲಯಗಳು ದೀರ್ಘಾವಧಿಯಿಂದ ವಿಚಾರಣೆ ಬಾಕಿ ಇರುವ ಪ್ರಕರಣಗಳಿಂದ ಬಳಲುತ್ತಿವೆ. ಆದರೆ, ಸಾಮಾನ್ಯ ಜನರು ಇದಕ್ಕೆ ನ್ಯಾಯಾಲಯವನ್ನೇ ದೂಷಿಸುತ್ತಾರೆ. ನ್ಯಾಯಾಲಯದ ರಜೆಗಳನ್ನು ಶಾಲಾ ರಜೆಗೆ ಹೋಲಿಸಲಾಗುತ್ತದೆ. ಈ ಸ್ವರೂಪದ ಅಭಿಪ್ರಾಯ ಸರಿಯಲ್ಲ. ಇದು ಬದಲಾಗಬೇಕು' ಎಂದು ಅವರು ಹೇಳಿದ್ದರು.

ವಿದ್ಯಾರ್ಥಿನಿಯನ್ನು ಕೆಳಗೆಸೆದ ಶಿಕ್ಷಕಿ

ನವದೆಹಲಿ (ಪಿಟಿಐ): ಇಲ್ಲಿನ ಮಾಡೆಲ್ ಬಸ್ತಿ ಪ್ರದೇಶದ ಮಹಾನಗರ ಪಾಲಿಕೆಗೆ ಒಳಪಟ್ಟ ಪ್ರಾಥಮಿಕ ಶಾಲೆಯೊಂದರಲ್ಲಿ ಐದನೇ ತರಗತಿ ವಿದ್ಯಾರ್ಥಿನಿಗೆ ಕತ್ತರಿಯಿಂದ ಹೊಡೆದು, ಶಾಲೆಯ ಮೊದಲ ಮಹಡಿಯಿಂದ ಕೆಳಗೆಸೆದ ಘಟನೆ ಶುಕ್ರವಾರ ನಡೆದಿದೆ.

ಆರೋಪಿ ಶಿಕ್ಷಕಿಯನ್ನು ಬಂಧಿಸಲಾಗಿದ್ದು, ಕೊಲೆಯತ್ನ ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಶಿಕ್ಷಕಿ ಗೀತಾ ದೇಶ್ವಾಲ್ ಎಂಬುವವರು ಸಣ್ಣ ಕತ್ತರಿಯಿಂದ ಬಾಲಕಿಗೆ ಹೊಡೆದು, ಕಟ್ಟಡದಿಂದ ಕೆಳಗೆಸೆದಿದ್ದಾರೆ. ಗಾಯಗೊಂಡಿರುವ ಬಾಲಕಿಯನ್ನು ಆಸ್ಪತ್ರೆಗೆ ದಾಖಲಿಸಿದ್ದು, ಆಕೆ ಪ್ರಾಣಾಪಾಯದಿಂದ ಪಾರಾಗಿದ್ದಾಳೆ' ಎಂದು ಹೇಳಿದ್ದಾರೆ.

'ಶಿಕ್ಷಕಿಯನ್ನು ತಕ್ಷಣ ಸೇವೆಯಿಂದ ಅಮಾನತು ಮಾಡಲಾಗಿದೆ' ಎಂದು ಪಾಲಿಕೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಗುಜರಾತಿನ ಕಟುಕ': ಪಾಕ್ ವಿದೇಶಾಂಗ ಸಚಿವನ ಹೇಳಿಕೆಗೆ ಭಾರತದ ಖಂಡನೆ

'ಪಾಕ್ ಮಟ್ಟದಲ್ಲೂ ಅತ್ಯಂತ ಕೀಳು ಹೇಳಿಕೆ'

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಗುಜರಾತಿನ ಕಟುಕ' ಎಂದಿರುವ ಪಾಕಿಸ್ತಾನದ ವಿದೇಶಾಂಗ ಸಚಿವ ಬಿಲಾವಲ್ ಭುಟ್ಟೊ ಅವರ ಹೇಳಿಕೆಯನ್ನು ಭಾರತವು ತೀವ್ರವಾಗಿ ಖಂಡಿಸಿದೆ. 'ಪಾಕಿಸ್ತಾನದ ಮಾನದಂಡಗಳ ಮಟ್ಟದಲ್ಲೂ ಈ ಹೇಳಿಕೆ ಅತ್ಯಂತ ಕೀಳು' ಎಂದು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯವು ಹೇಳಿದೆ.

ವಿಶ್ವಸಂಸ್ಥೆಯ ಭದ್ರತಾ ಮಂಡಳಿ ಸಭೆಯಲ್ಲಿ ಗುರುವಾರ ಮಾತನಾಡಿದ್ದ ವಿದೇಶಾಂಗ ಸಚಿವ ಎಸ್.ಜೈಶಂಕರ್ ಅವರು, 'ಕೆಲವು ದೇಶಗಳು ಭಯೋತ್ಪಾದನೆಯ ಕೇಂದ್ರಗಳಾಗಿವೆ' ಎಂದು ಹೇಳಿದ್ದರು. ಅನಂತರ ಪತ್ರಕರ್ತರ ಜತೆಗೆ ಮಾತನಾಡಿದ್ದ ಜೈಶಂಕರ್, '2011ರಲ್ಲಿ ಅಮೆರಿಕದ ಹಿಲರಿ ಕ್ಲಿಂಟನ್ ಅವರು ಪಾಕಿಸ್ತಾನಕ್ಕೆ ಭೇಟಿ ನೀಡಿದ್ದರು. ಆಗ, 'ಹಿತ್ತಲಲ್ಲಿ ಹಾವು ಸಾಕಿದರೆ ಅದು ಪಕ್ಕದ ಮನೆಯವರನ್ನು ಮಾತ್ರ ಕಚ್ಚುವುದಿಲ್ಲ. ಮನೆಯವರನ್ನೂ ಕಚ್ಚುತ್ತದೆ' ಎಂದು ಹೇಳಿದ್ದರು' ಎಂದಿದ್ದರು.

ಇದಕ್ಕೆ ಪ್ರತಿಕ್ರಿಯಿಸಿದ್ದ ಬಿಲಾವಲ್ ಭುಟ್ಟೊ, 'ಒಸಾಮ ಬಿನ್ ಲಾಡೆನ್ ಈಗಾಗಲೇ ಸತ್ತಿದಾನೆ. ಆದರೆ, ಗುಜರಾತಿನ ಕಟುಕ ಇನ್ನೂ ಬದುಕಿದ್ದಾನೆ. ಆತ ಭಾರತದ ಪ್ರಧಾನಿಯಾಗಿದ್ದಾನೆ' ಎಂದು ಹೇಳಿದ್ದರು.

ಈ ಬಗ್ಗೆ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ ಶುಕ್ರವಾರ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

'ಉಗ್ರರನ್ನು, ಉಗ್ರ ಸಂಘಟನೆಗಳನ್ನು ಪಾಕಿಸ್ತಾನವು ಸಲಹುತ್ತಿದೆ. ಆದರೆ, ಪಾಕಿಸ್ತಾನಕ್ಕೆ ತನ್ನಲ್ಲಿನ ಭಯೋತ್ಪಾದಕರನ್ನು ಬಳಸಿಕೊಳ್ಳುವ ಸಾಮರ್ಥ್ಯ ಕುಗ್ಗುತ್ತಿದೆ. ಆ ಹತಾಶೆಯಲ್ಲಿಯೇ ಇಂತಹ ಅನಾಗರಿಕ ಮಾತುಗಳು ಬರುತ್ತಿವೆ' ಎಂದು ಅವರು ಹೇಳಿದ್ದಾರೆ.

ಪಾಕಿಸ್ತಾನದ ಮಟ್ಟಿಗೂ ಇದು ಇನ್ನಷ್ಟು ಕೀಳಾದ ಹೇಳಿಕೆ. 1971ರಲ್ಲಿ ಇದೇ ದಿನ ಏನಾಗಿತ್ತು ಎಂಬುದನ್ನು ಪಾಕಿಸ್ತಾನದ ವಿದೇಶಾಂಗ ಸಚಿವರು ಮರೆತಿದ್ದಾರೆ. ಪಾಕಿಸ್ತಾನದ ಮುಂದಾಳುಗಳು ಬಂಗಾಳಿಗಳು ಮತ್ತು ಹಿಂದೂಗಳ ಮೇಲೆ ನಡೆಸಿದ್ದ ನರಮೇಧವೇ 1971ರಲ್ಲಿ ಪಾಕಿಸ್ತಾನದ ಸೋಲಿಗೆ ಕಾರಣವಾಗಿತ್ತು. (1971ರ ಬಾಂಗ್ಲಾ ವಿಮೋಚನಾ ಯುದ್ಧದಲ್ಲಿ ಭಾರತದ ಎದುರು ಪಾಕಿಸ್ತಾನ ಸೋತಿತ್ತು. ಬಾಂಗ್ಲಾದೇಶದ ಉದಯವಾಗಿತ್ತು). ಆದರೆ ದುರಾದೃಷ್ಟವಶಾತ್ ಪಾಕಿಸ್ತಾನವು ಅಲ್ಪಸಂಖ್ಯಾತರನ್ನು ನಡೆಸಿಕೊಳ್ಳುವ ವಿಚಾರದಲ್ಲಿ ಇಂದಿಗೂ ಬದಲಾಗಿಲ್ಲ ಎಂದು ಬಾಗ್ಚಿ ಟೀಕಿಟಿದ್ದಾರೆ.

ಮುಖ್ಯಾಂಶಗಳು

- ದೆಹಲಿ ಪಾಕ್ ಹೈಕಮಿಷನರ್ ಕಚೇರಿ ಎದುರು ಶುಕ್ರವಾರ ಪ್ರತಿಭಟನೆ
- ಶನಿವಾರ ದೇಶದಾದ್ಯಂತ ಪ್ರತಿಭಟನೆಗೆ ಬಿಜೆಪಿ ಕರೆ

ಪಾಕಿಸ್ತಾನದ ವಿಶೇಷ ಭಯೋತ್ಪಾದನಾ ವಲಯದಲ್ಲಿ ಜನ್ಮತಾಳಿದ ಹಿಂಸಾಚಾರವು ಜಗತ್ತಿಗೆಲ್ಲಾ ಹರಡಿದೆ. 'ಮೇಕ್ ಇನ್ ಪಾಕಿಸ್ತಾನ್' ಭಯೋತ್ಪಾದನೆ ನಿಲ್ಲಬೇಕಿದೆ
ಅರಿಂದಮ್ ಬಾಗ್ಚಿ, ವಿದೇಶಾಂಗ ಸಚಿವಾಲಯದ ವಕ್ತಾರ

1971ರ ಈ ದಿನ ಭಾರತದ ಎದುರು ಸೋತ ಗಾಯದ ನೋವಿನಲ್ಲಿ ಪಾಕಿಸ್ತಾನದಿಂದ ಈ ಮಾತು ಬಂದಿರಬಹುದು. ಆದರೂ ಉಗ್ರರಿಗೆ ನೆಲೆಯಾಗುವುದನ್ನು ಪಾಕಿಸ್ತಾನ ಬಿಟ್ಟಿಲ್ಲ
ಅನುರಾಗ್ ಠಾಕೂರ್, ಕೇಂದ್ರ ಸಚಿವ

ಯಾವ ದೇಶದ ವಿದೇಶಾಂಗ ಸಚಿವರೂ ಈ ರೀತಿ ಮಾತನಾಡುವುದಿಲ್ಲ. ಆದರೆ, ಈ ಮಾತು ಬಂದಿದ್ದು ಕಾಶ್ಮೀರದ ಜನರನ್ನು ಕೊಚ್ಚಿದ ಕರಾಚಿಯ ಕಟುಕರ ಪಾಕಿಸ್ತಾನದಿಂದ
ಮೀನಾಕ್ಷಿ ಲೇಖಿ, ವಿದೇಶಾಂಗ ಖಾತೆ ರಾಜ್ಯ ಸಚಿವೆ

ಅಡ್ವೊಕೇಟ್ ಅಪಿಯರೆನ್ಸ್ ಪೋರ್ಟಲ್‌ಗೆ ಜ. 1ರಂದು ಚಾಲನೆ: ಸಿಜೆಐ

ನವದೆಹಲಿ (ಪಿಟಿಐ): 'ಡಿಜಿಲೀಕರಣದ ಮತ್ತೊಂದು ಹೆಜ್ಜೆಯಾಗಿ ಹಾಗೂ ಸುಪ್ರೀಂ ಕೋರ್ಟ್ ಅನ್ನು 'ಕಾಗದರಹಿತ'ವನ್ನಾಗಿಸುವ ನಿಟ್ಟಿನಲ್ಲಿ, ವಕೀಲರು ಜ. 1ರಿಂದ ಹಾಜರಾತಿಯನ್ನು ತೋರಿಸಲು ಹಸ್ತಚಾಲಿತ ಸ್ಲಿಪ್ ನೀಡಬೇಕಿಲ್ಲ. ಅವರು 'ಅಡ್ವೊಕೇಟ್ ಅಪಿಯರೆನ್ಸ್ ಪೋರ್ಟಲ್'ಗೆ ಲಾಗಿನ್ ಆದರೆ ಸಾಕು' ಎಂದು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಶುಕ್ರವಾರ ಹೇಳಿದ್ದಾರೆ.

'2023ರ ಜ. 1ರಂದು 'ಅಡ್ವೊಕೇಟ್ ಅಪಿಯರೆನ್ಸ್ ಪೋರ್ಟಲ್'ಗೆ ಚಾಲನೆ ನೀಡಲಾಗುವುದು' ಎಂದು ಅವರು ತಿಳಿಸಿದ್ದಾರೆ.

'ಮರ್ಮಗೋವಾ' ಯುದ್ಧನೌಕೆ ನಾಳೆ ನೌಕಾಪಡೆಗೆ ನಿಯೋಜನೆ

ನವದೆಹಲಿ (ಪಿಟಿಐ): ಸಂಪೂರ್ಣ ಸ್ವದೇಶಿ ನಿರ್ಮಿತ ಪಥ ನಿರ್ದೇಶಿತ ಕ್ಷಿಪಣಿ ನಾಶಕ ಯುದ್ಧನೌಕೆ 'ಐಎನ್‌ಎಸ್ ಮರ್ಮಗೋವಾ' ಅನ್ನು ಭಾನುವಾರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಮುಂಬೈನಲ್ಲಿ ನೌಕಾಪಡೆಗೆ ನಿಯೋಜನೆ ಮಾಡಲಿದ್ದಾರೆ.

'163 ಮೀಟರ್ ಉದ್ದದ ಈ ಯುದ್ಧನೌಕೆ ಅತ್ಯಾಧುನಿಕ ರೇಡಾರ್, ಸೆನ್ಸಾರ್ ಹಾಗೂ ಶಸ್ತ್ರಾಸ್ತ್ರ ವ್ಯವಸ್ಥೆಯನ್ನು ಒಳಗೊಂಡಿದೆ.

ಶಬರಿಮಲೆ: ಮಿನಿಬಸ್ ಮಗುಚಿ ಬಾಲಕಿ ಸಾವು

ಕೋಟಯಂ (ಪಿಟಿಐ): ಶಬರಿಮಲೆ ಯಾತ್ರಿಕರು ಪ್ರಯಾಣಿಸುತ್ತಿದ್ದ ಮಿನಿ ಬಸ್ಸೊಂದು ಕೇರಳದ ಕೋಟಯಂ ಜಿಲ್ಲೆಯ ಎರುಮೇಲಿ ಬಳಿ ಮಗುಚಿ ಬಿದ್ದು 10 ವರ್ಷದ ಬಾಲಕಿ ಮೃತಪಟ್ಟಿದ್ದಾಳೆ ಎಂದು ಪೊಲೀಸರು ಶುಕ್ರವಾರ ತಿಳಿಸಿದ್ದಾರೆ.

ಅಪಘಾತದಲ್ಲಿ ಹಲವು ಮಂದಿ ಗಾಯಗೊಂಡಿದ್ದಾರೆ.

ವೈಯಕ್ತಿಕ ಸ್ವಾತಂತ್ರ್ಯದ ಕೂಗಿಗೆ ಉತ್ತರ ನೀಡಲೇಬೇಕು:'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ವೈಯಕ್ತಿಕ ಸ್ವಾತಂತ್ರ್ಯಕ್ಕೆ ಸಂಬಂಧಿಸಿದ ವಿಚಾರಗಳಲ್ಲಿ ಹಸ್ತಕ್ಷೇಪ ಮಾಡಲು ಆಗದಿದ್ದರೆ, ಅಪರಾಧಿಯನ್ನು ಬಿಡುಗಡೆಗೊಳಿಸುವಂತೆ ಆದೇಶಿಸಲು ಸಾಧ್ಯವಾಗದೆ ಇದ್ದ ಮೇಲೆ ನಾವೇಕೆ ಇಲ್ಲಿರಬೇಕು' ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಪ್ರಶ್ನಿಸಿದೆ.

ವಿದ್ಯುತ್ ಉಪಕರಣಗಳನ್ನು ಕಳವು ಮಾಡಿದ್ದಕ್ಕೆ ಸಂಬಂಧಿಸಿದ 9 ಪ್ರತ್ಯೇಕ ಪ್ರಕರಣಗಳಲ್ಲಿ ಉತ್ತರ ಪ್ರದೇಶದ ಇಕ್ರಂ ಎಂಬುವವರಿಗೆ ವಿಚಾರಣಾಧೀನ ನ್ಯಾಯಾಲಯವು ತಲಾ ಎರಡು ವರ್ಷದಂತೆ ಒಟ್ಟು 18 ವರ್ಷಗಳ ಜೈಲು ಶಿಕ್ಷೆ ವಿಧಿಸಿತ್ತು. ಇದನ್ನು ಪ್ರಶ್ನಿಸಿ ಅವರು ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ.ಚಂದ್ರಚೂಡ್ ಹಾಗೂ ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರನ್ನೊಳಗೊಂಡ ದ್ವಿಸದಸ್ಯ ನ್ಯಾಯಪೀಠ ವಿಚಾರಣೆಗೆ ಒಳಪಡಿಸಿತು.

'ಸುಪ್ರೀಂ ಕೋರ್ಟ್‌ಗೆ ಯಾವ ಪ್ರಕರಣವೂ ಸಣ್ಣದಲ್ಲ. ಯಾವ ಪ್ರಕರಣವೂ ದೊಡ್ಡದಲ್ಲ. ನಾಗರಿಕರ ಆತ್ಮಸಾಕ್ಷಿ ಹಾಗೂ ಸ್ವಾತಂತ್ರ್ಯದ ಕೂಗಿಗೆ ನಾವು ಉತ್ತರ ನೀಡಲೇಬೇಕಾಗುತ್ತದೆ. ಅದಕ್ಕಾಗಿಯೇ ನಾವು ಇಲ್ಲಿದ್ದೇವೆ. ವೈಯಕ್ತಿಕ ಸ್ವಾತಂತ್ರ್ಯದ ಹಕ್ಕು ಅಮೂಲ್ಯ ಹಾಗೂ ಪರಭಾರೆ ಮಾಡಲಾರದಂತದ್ದು' ಎಂದು ನ್ಯಾಯಪೀಠ ಹೇಳಿದೆ.

ಅರ್ಜಿದಾರರ ಪರ ನ್ಯಾಯಾಲಯಕ್ಕೆ ಹಾಜರಾಗಿದ್ದ ವಕೀಲರ ವಾದ ಆಲಿಸಿದ ನ್ಯಾಯಪೀಠವು, 'ಇದೊಂದು ಆಘಾತಕಾರಿ ಪ್ರಕರಣ' ಎಂದು ಹೇಳಿ ಅಪರಾಧಿಯನ್ನು ಬಿಡುಗಡೆಗೊಳಿಸುವಂತೆ ಆದೇಶಿಸಿತು.

ರಾಜ್ಯಸಭೆ:ವಿರೋಧ ಪಕ್ಷದ ನಾಯಕ ಖರ್ಗೆ ಅಸಮಾಧಾನ

ಸಭಾಪತಿ ಆದೇಶವಿದ್ದರೂ ಮಾತನಾಡಲು ಸಿಗದ ಅವಕಾಶ

ನವದೆಹಲಿ (ಪಿಟಿಐ): 'ಸದನದ ನಾಯಕ, ವಿರೋಧ ಪಕ್ಷದ ನಾಯಕ ಹಾಗೂ ಮಾಜಿ ಪ್ರಧಾನಮಂತ್ರಿಯವರು ಸದನದಲ್ಲಿ ಯಾವಾಗ ಬೇಕಾದರೂ ಮಾತನಾಡಬಹುದು ಎಂದು ಸಭಾಪತಿ ಜಗದೀಪ್ ಧನಕರ್ ಅವರು ಆದೇಶ ನೀಡಿದ್ದರೂ ಕೂಡ ನನಗೆ ಮಾತನಾಡಲು ಅವಕಾಶ ನೀಡುತ್ತಿಲ್ಲ' ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಶುಕ್ರವಾರ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ಸಂಬಂಧ ಪ್ರತಿಭಟನೆಯನ್ನೂ ದಾಖಲಿಸಿದ್ದಾರೆ.

ಶುಕ್ರವಾರ ಸದನದ ಕಲಾಪ ಆರಂಭವಾಗುತ್ತಿದ್ದಂತೆ ಅವರು ಅರುಣಾಚಲ ಪ್ರದೇಶದ ಗಡಿಯಲ್ಲಿ ನಡೆದಿರುವ ಭಾರತ–ಚೀನಾ ಸೇನಾ ಸಂಘರ್ಷದ ಕುರಿತ ಮಾತನಾಡಲು ಅವಕಾಶ ನೀಡುವಂತೆ ಕೋರಿದರು. ಉಪ ಸಭಾ ಪತಿ ಹರಿವಂಶ್ ಅವರು ಅವಕಾಶ ನಿರಾಕರಿಸಿದರು.

'ಸದನದಲ್ಲಿ ಯಾವಾಗ ಬೇಕಾದರೂ ತಮ್ಮ ಅಭಿಪ್ರಾಯ ವ್ಯಕ್ತಪಡಿಸಬಹುದು ಎಂದು ಸಭಾಪತಿಯವರು ತಿಳಿಸಿದ್ದರು. ಅದನ್ನು ನಮಗೆ ನೀಡಿರುವ ಭರವಸೆ ಎಂದು ಭಾವಿಸಿದ್ದೆ. ಅದು ಇಡೀ ಸದನಕ್ಕೆ ನೀಡಿದ ಸೂಚನೆ ಎಂದೂ ತಿಳಿದುಕೊಂಡಿದ್ದೆ. ಹೀಗಿರುವಾಗ ರಕ್ಷಣಾ ಸಚಿವರು ಭಾರತ–ಚೀನಾ ಗಡಿ ಸಂಘರ್ಷದ ಕುರಿತು ಸದನದಲ್ಲಿ ಹೇಳಿಕೆ ನೀಡುವಾಗ ಮಧ್ಯಪ್ರವೇಶಿಸಲು ನನಗೆ ಅವಕಾಶ ನಿರಾಕರಿಸಿದ್ದು ಏಕೆ?' ಎಂದು ಪ್ರಶ್ನಿಸಿದರು.

'ಭಾರತ–ಚೀನಾ ಗಡಿ ಸಂಘರ್ಷವು ದೇಶಕ್ಕೆ ಹಾಗೂ ದೇಶದ ಭದ್ರತೆಗೆ ಸಂಬಂಧಿಸಿದ ವಿಚಾರ. ಈ ಕುರಿತ ಚರ್ಚೆಗೆ ಅವಕಾಶ ನೀಡುವಂತೆ ವಿರೋಧ ಪಕ್ಷಗಳ ಸಂಸದರು ಕೆಲ ದಿನಗಳಿಂದ ಮನವಿ ಮಾಡುತ್ತಲೇ ಇದ್ದಾರೆ. ವಿರೋಧ ಪಕ್ಷದ ನಾಯಕನಾಗಿರುವ ನಾನು ಅವರೊಂದಿಗೆ ಕೈಜೋಡಿಸಬೇಕು. ಅದು ನನ್ನ ಜವಾಬ್ದಾರಿ' ಎಂದರು.

'ಉಪ ಸಭಾಪತಿಯವರೆ ಈ ವಿಚಾರದ ಕುರಿತು ವಿಷಾದ ವ್ಯಕ್ತಪಡಿಸಿ. ಇಲ್ಲವೇ ಮಾತನಾಡಲು ಅವಕಾಶ ನೀಡುವ ಅಧಿಕಾರ ತಮಗೆ ಇಲ್ಲವೆಂದಾದರೂ ತಿಳಿಸಿ' ಎಂದು ಖರ್ಗೆ ಅವರು ಹರಿವಂಶ್ ಅವರಿಗೆ ಹೇಳಿದರು.

1971ರ ಯುದ್ಧದಲ್ಲಿ ಭಾರತದ ವಿಜಯ: ರಕ್ಷಣಾ ಸಚಿವ, ಪ್ರಧಾನಿ, ರಾಷ್ಟ್ರಪತಿ ಟ್ವೀಟ್

ಸಶಸ್ತ್ರ ಪಡೆಗಳ ಧೈರ್ಯ, ಸಾಹಸ: ದೇಶದ ನಮನ

ನವದೆಹಲಿ (ಪಿಟಿಐ): 'ದೇಶವನ್ನು ಸುರಕ್ಷಿತವಾಗಿಡುವಲ್ಲಿ ಸಶಸ್ತ್ರ ಪಡೆಗಳು ವಹಿಸಿದ ಪಾತ್ರಕ್ಕಾಗಿ ದೇಶವು ಅವರಿಗೆ ಸದಾ ಋಣಿಯಾಗಿರುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶುಕ್ರವಾರ ಹೇಳಿದ್ದಾರೆ.

ವಿಜಯ್ ದಿವಸ್ ಪ್ರಯುಕ್ತ ಟ್ವೀಟ್ ಮಾಡಿರುವ ಅವರು, '1971ರ ಯುದ್ಧದಲ್ಲಿ ಭಾರತವು ಅಸಾಧಾರಣ ಗೆಲುವು ಸಾಧಿಸಲು ಕಾರಣರಾದ ಎಲ್ಲ ವೀರ ಸೇನಾ ಸಿಬ್ಬಂದಿಗೆ ವಿಜಯ್ ದಿವಸ್‌ನಂದು ನಾನು ಗೌರವ ಸಲ್ಲಿಸುತ್ತೇನೆ' ಎಂದು ಹೇಳಿದ್ದಾರೆ.

'ಪಾಕಿಸ್ತಾನದ ವಿರುದ್ಧ 1971ರಲ್ಲಿ ಭಾರತವು ನಡೆಸಿದ ಯುದ್ಧವು ಅಮಾನವೀಯತೆ ಮೇಲಿನ ಮಾನವೀಯತೆಯ ಮತ್ತು ಅನ್ಯಾಯದ ಮೇಲಿನ ನ್ಯಾಯದ ವಿಜಯವಾಗಿದೆ. ಬಾಂಗ್ಲಾದೇಶದ ಜನ್ಮಕ್ಕೆ ಕಾರಣವಾದ ಈ ಯುದ್ಧದಲ್ಲಿ ಭಾರತವು ನಿರ್ಣಾಯಕ ವಿಜಯ ಸಾಧಿಸಿತು' ಎಂದು ರಕ್ಷಣಾ ಸಚಿವ ರಾಜನಾಥ ಸಿಂಗ್ ಹೇಳಿದ್ದಾರೆ.

ನವದೆಹಲಿಯಲ್ಲಿ ಶುಕ್ರವಾರ ವಿಜಯ್ ದಿವಸ್ ನಿಮಿತ್ತ ರಾಷ್ಟ್ರೀಯ ಯುದ್ಧ ಸ್ಮಾರಕಕ್ಕೆ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಪುಷ್ಪ ನಮನ ಸಲ್ಲಿಸಿದರು –ಪಿಟಿಐ ಚಿತ್ರ

ರಾಷ್ಟ್ರಪತಿ ಟ್ವೀಟ್: '1971ರ ಯುದ್ಧದ ಸಮಯದಲ್ಲಿ ದೇಶದ ಸಶಸ್ತ್ರ ಪಡೆಗಳು ಪ್ರದರ್ಶಿಸಿದ ಅಸಾಧಾರಣ ಶೌರ್ಯವನ್ನು ರಾಷ್ಟ್ರವು ಕೃತಜ್ಞತೆಯಿಂದ ಸ್ಮರಿಸುತ್ತದೆ ಮತ್ತು ಪಡೆಗಳ ಅಪ್ರತಿಮ ಧೈರ್ಯ ಮತ್ತು ತ್ಯಾಗದ ಕಥೆಗಳು ಪ್ರತಿಯೊಬ್ಬ ಭಾರತೀಯನನ್ನು ಪ್ರೇರೇಪಿಸುತ್ತಲೇ ಇವೆ' ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಟ್ವೀಟ್ ಮಾಡಿದ್ದಾರೆ.

ಬಾಂಗ್ಲಾದೇಶವನ್ನು ಸಾರ್ವಭೌಮ ರಾಷ್ಟ್ರವನ್ನಾಗಿಸಲು ಕಾರಣವಾದ 1971ರ ಪಾಕಿಸ್ತಾನದ ವಿರುದ್ಧ ನಡೆದ ಯುದ್ಧದಲ್ಲಿ ಭಾರತವು ಜಯಗಳಿಸಿದ ನೆನಪಿಗಾಗಿ ಪ್ರತಿ ವರ್ಷ ಡಿಸೆಂಬರ್ 16ರಂದು 'ವಿಜಯ್ ದಿವಸ್' ಆಚರಿಸಲಾಗುತ್ತದೆ.

ಯುದ್ಧದಲ್ಲಿ ಭಾರತೀಯ ಹಾಗೂ ಬಾಂಗ್ಲಾ ದೇಶದ ಸೇನೆಗಳಿಗೆ ಸುಮಾರು 93 ಸಾವಿರ ಪಾಕಿಸ್ತಾನಿ ಸೈನಿಕರು ಶರಣಾಗಿದ್ದರು.

'ವೀರಯೋಧರಿಗೆ ನಮನ ಸಲ್ಲಿಸಿ'

ನವದೆಹಲಿ: 'ವಿಜಯ್ ದಿವಸ್' ನಿಮಿತ್ತ ಇಂಡಿಯಾ ಗೇಟ್ ಬಳಿ ಇರುವ ಯುದ್ಧ ಸ್ಮಾರಕಕ್ಕೆ ಕೇಂದ್ರ ಎಲೆಕ್ಟ್ರಾನಿಕ್ಸ್, ಐಟಿ, ಕೌಶಲ ಅಭಿವೃದ್ಧಿ ಮತ್ತು ಉದ್ಯಮಶೀಲತೆಯ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರು ಪುಷ್ಪ ನಮನ ಸಲ್ಲಿಸಿದರು.

ಈ ಸಂದರ್ಭದಲ್ಲಿ ಸಶಸ್ತ್ರ ಪಡೆಗಳ ಸಾಹಸವನ್ನು ಸ್ಮರಿಸಿದ ರಾಜೀವ್, 'ಸಾರ್ವಜನಿಕರು ಬಿಡುವು ಮಾಡಿಕೊಂಡು ಇಂಡಿಯಾ ಗೇಟ್ ಬಳಿಯ ಯುದ್ಧ ಸ್ಮಾರಕಕ್ಕೆ ಭೇಟಿ ನೀಡಿ, ಅಗಲಿದ ಧೈರ್ಯಶಾಲಿ ಯೋಧರಿಗೆ ಗೌರವ ಸಲ್ಲಿಸಬೇಕು' ಎಂದು ವಿನಂತಿ ಮಾಡಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ : 18000-20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟ 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

TOYOTA, ಬ್ರಿಟಾನಿಯಾ, ಟಾಟಾಮೋಟಾರ್ಸ್, ಬಿಗ್‌ಬಜಾರ್‌ಗಳಿಗೆ 5th,10th,PUC, Degree, ITI, Diplomaದವರು ನೇರನೇಮಕಾತಿಯಿದೆ. 18,000 -56,000/-. ವಸತಿಯೂಟವಿದೆ. 9902869769

ಬೆಂಗಳೂರಿನ ಬಾಣಸವಾಡಿ ಮನೆಯಲ್ಲಿ ಅಡುಗೆ (ವೆಜ್ & ನಾನ್‌ವೆಜ್) ಕೆಲಸ ಹಾಗೂ ಮನೆಕೆಲಸ ಮಾಡಲು ಮಹಿಳೆ ಬೇಕಾಗಿದ್ದಾರೆ. ಸಂಬಳ: 13,000. ಉಚಿತ ಊಟ+ವಸತಿ ಕೊಡಲಾಗುವುದು. ಸಂಪರ್ಕಿಸಿ: 9902817655

ಆಯುರ್ವೇದ ಕಂಪನಿಗೆ ಉದ್ಯೋಗಿ /ನಿರುದ್ಯೋಗಿ, ಪುರುಷ /ಮಹಿಳೆ ಅಗತ್ಯವಿದೆ, 25000/- ರಿಂದ 30000/- ಪ್ರತಿ ತಿಂಗಳು ಗಳಿಸಿ, ಸಂಪರ್ಕಿಸಿ. 9040578922

Marketing & Sales

SALES & MARKETING EXECUTIVES Urgently required for reputed Company. Young target oriented preferable. ATTRACTIVE SALRY & INCENTIVES .Send resumes to whatsApp : +919440807570.

Hospital & Medical Jobs

ಬೇಕಾಗಿದ್ದಾರೆ ಮಹಿಳೆಯರು, ಪುರುಷರು, ವಿಧವೆ, ವಿಚ್ಛೇದಿತಿಯರು 24 ಗಂಟೆ ನಮ್ಮಲ್ಲಿ ಉಳಿದುಕೊಳ್ಳುವಂತವರು ಬೇಕಾಗಿದ್ದಾರೆ ಸಂಬಳ: 13000- 24000 ಸಂಪರ್ಕಿಸಿ: 7483960098, 9739292222

Part-Time Jobs

ಮನೆಯಿಂದಲೇ ಕೆಲಸ. ವಿದ್ಯಾರ್ಥಿಗಳಿಗೆ, ಗೃಹಿಣಿಯರಿಗೆ ಮತ್ತು ವಯಸ್ಕರಿಗೆ ಮನೆಯಲ್ಲಿಯೇ ಕುಳಿತು ತಮ್ಮ ಬಿಡುವಿನ ವೇಳೆಯಲ್ಲಿ ನಾವು ಕೊಡುವ ಫಾರಂನಲ್ಲಿ ಅಕ್ಷರ ಮತ್ತು ಅಂಕಿಗಳನ್ನು ತುಂಬುವ ಮೂಲಕ ತಿಂಗಳಿಗೆ 15,000- 20,000 ಗಳಿಸುವ ಸುವರ್ಣಾವಕಾಶ. ಗ್ರಾಮೀಣ ಅಭ್ಯರ್ಥಿಗಳಿಗೆ ಕೊರಿಯರ್ ಸೌಲಭ್ಯವಿದೆ. ತಕ್ಷಣ ಸಂಪರ್ಕಿಸಿ: 9611225388/ 9611225266

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611224633/9611225344

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ 15,000-20,000/- ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8884777502, 8884777503.

Wanted

ಕರ್ನಾಟಕದಾದ್ಯಂತ ಹೆಸರಾಂತ ಕಂಪನಿ, ಆಫೀಸ್ ಕೆಲಸಕ್ಕೆ ಯುವಕ/ಯುವತಿಯರು ಬೇಕಾಗಿದ್ದಾರೆ. ವಸತಿಯೂಟದೊಂದಿಗೆ Salary+ OT. 17,800-68,000/-. 8792156697, 8792155097

EDUCATION SUCCESS

SESHADRIPURAM INSTITUTIONS
Bengaluru • Mysuru • Tumakuru • Mandya
website: www.set.edu.in e-mail : info@set.edu.in

Congratulations
to
Kum. Keerthi Rangaswamy
Seshadripuram Evening College
on being conferred with
Ekalavya Award 2022
for Cycling
(Highest Sports Award of the Govt. of Karnataka)
N. R. Pandith Aradhya, President
Nadoja Dr. Wooday P. Krishna, Honorary General Secretary

1)ಉತ್ತಮ ಅನುಭವವುಳ್ಳ ಇಸ್ತ್ರೀ ಮಾಡುವ ಕೆಲಸಗಾರರು ಬೇಕಾಗಿದ್ದಾರೆ ಸಂಬಳ23000- 26000/-. ಕೆಲಸ ಬೆಳಿಗ್ಗೆ 10.00ರಿಂದ ರಾತ್ರಿ 8.00.+ ವಸತಿಯಿರುತ್ತದೆ. 2)ಪುರುಷ ಆಫೀಸ್ ಸಹಾಯಕರುಬೆಳಿಗ್ಗೆ 9.30 ರಿಂದರಾತ್ರಿ 9.00.ಸಂಬಳ 14000/- ವಸತಿಯಿದೆ. 3)ಮ್ಯಾನೇಜರ್ (ಡ್ರೈ ಕ್ಲೀನಿಂಗ್ನಲ್ಲಿ ಉತ್ತಮ ಅನುಭವವಿರಬೇಕು) ಸಂಬಳ20,000/- ದಿಂದ 25,000/- +ವಸತಿಯಿದೆ. ಸಂಪರ್ಕಿಸಿ: ಜಯನಗರ, ಬೆಂಗಳೂರು. 9880266007, 9663668007

ರಿಯಲ್ ಎಸ್ಟೇಟ್ ಸೆಲ್ಲಿಂಗ್

Commerical

Out-Station

KADUR 8300 Sqft. KHB alloted commercial site highway facing attached-to highway Sale. OWNER 9743535151, 9844811841.

Old Airport Road

2BHK 1100 SFT White marble Flooring Adjacent to Old Airport Rd Car Prkg and Semi FurnMurugeshpalya for IMMEDIATE SALE CONTACT 9701378389 NO Brokers

Farm House/ Land/ Resorts

Mysore

ಮೈಸೂರ್ ತಾಲೂಕು ಜೈಪುರ್ ಹೋಬಳಿ, ಹಂಪಾಪುರ ಹೋಬಳಿಗಳಲ್ಲಿ ಮಾವಿನ ತೋಟ ಹಾಗೂ ತೆಂಗಿನ ತೋಟಗಳು ಅತಿ ಕಡಿಮೆ ಬೆಲೆಯಲ್ಲಿ ಮಾರಾಟಕ್ಕಿದೆ: 9945661696/ 8618848886

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ವೈವಾಹಿಕ

Brides Wanted

Hindu

ದಾವಣಗೆರೆಯಲ್ಲಿ ವಾಸವಾಗಿರುವ ಸರ್ಕಾರಿ ನೌಕರಿಯಲ್ಲಿರುವ ಬಂಜಾರ (ಜಾತ್) ಯುವಕನಿಗೆ ಸರ್ಕಾರಿ ನೌಕರಿ/ಇಂಜಿನಿಯರ್ (ಭೂಕ್ಯಾ) ವಧು ಬೇಕಾಗಿದ್ದಾರೆ. ಸಂಪರ್ಕಿಸಿ 9632274557

ಇತರೆ

For Sale

ಬೇಕರಿಗೆ ಸಂಬಂಧಿಸಿದಂತಹ ರೆಫ್ರಿಜರೇಟರ್, ಮೇಕಿಂಗ್ ಮಿಷನ್, ಇನ್ನು ಮುಂತಾದವುಗಳು ಮಾರಾಟಕ್ಕೆ ಇದೆ ಸಂಪರ್ಕಿಸಿ 90603 75678, 70224 60137

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100%ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್. ಉಚಿತ:ಭವಿಷ್ಯ:ಖಚಿತ:ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ಪ್ರವಾಸ

Travel

28.12.2022 13 ದಿನಗಳ ವಿಮಾನ/ A/C ರೂಂ/ A/C ಬಸ್ಸಿನಲ್ಲಿ ಕಚ್‌ಬುಜ್ ಸೋಮನಾಥ ದ್ವಾರಕ ಓಂಕಾರೇಶ್ವರ್ ಮಂಹಾಕಾಳೇಶ್ವರ್ 24.12.2022 9 ದಿನಗಳ ರಾಮೇಶ್ವರ,ಮದುರೈ ಕನ್ಯಾಕುಮಾರಿ ನವಗ್ರಹ ಸಮೇತ 25.12.2022 8 ದಿನಗಳ ಬುದ್ದಗಯಾ ಅಲಹಾಬಾದ್ ನೈಮಿಶಾರಣ್ಯ 11.02.2023 ಮಹಾ ಶಿವರಾತ್ರಿ ನೇಪಾಳ ಪಶುಪತಿನಾಥ್ ದರ್ಶನ. ಸಂಪರ್ಕಿಸಿ. ಏಷ್ಯನ್ ಟ್ರಾವಲ್ ಏಜೆನ್ಸಿ 26574131 8317446683 9448508708 9686708171

ಮಹಾಶಿವರಾತ್ರಿ ಪ್ರಯುಕ್ತ 09/02/2023ರಿಂದ ವಿಮಾನ ಮತ್ತು ಏ.ಸಿ ಬಸ್ಸಿನಲ್ಲಿ 16ದಿನಗಳ ಮುಕ್ತಿನಾಥ್,ಪಶುಪತಿನಾಥ್, ಪೋಕ್ರಾ,ಭಕ್ತಪುರ,ಕಾಶಿ, ನೈಮಿಷಾರಣ್ಯ ಹಾಗು 13ದಿನಗಳ ಪಂಚರಾಮಕ್ಷೇತ್ರ ಸಮೇತ ಅನ್ನಾವರಂ,ಸಿಂಹಾಚಲಂ,ವಿಶಾಖಪಟ್ಟಣ 28.1.2023ರಿಂದ 9ದಿನಗಳ ಕಾಶಿ,ಗಯಾ, ಬೈದ್ಯನಾಥೇಶ್ವರ,ಅಲಹಾಬಾದ್. ಏಷ್ಯನ್ ಟ್ರಾವೆಲ್ ಲೈನ್ಸ್, #164/3,ಆರ್.ವಿ.ರಸ್ತೆ, ಬೆಂಗಳೂರು-4. ಫೋನ್: 8105657052, 9480182865.

★22.02.2023 14ದಿನಗಳು★ ಮಧ್ಯಪ್ರದೇಶ ಗುಜರಾತ್, ರಾಜಸ್ಥಾನ, 4ಜ್ಯೋತಿರ್ಲಿಂಗ ದ್ವಾರಕಾ, ನಿಷ್ಕಳಂಕಮಹಾದೇವ್, ಅಂಬಾಜಿ,ಜೆಸ್ಮಲೇರ್, ಬಿಕಾನೇರ್ ಜೈಪುರ. ಶ್ರೀಗಂಗಾ ಟೂರಿಸ್ಟ್: 9480253807/ 8105522123

★16.02.2023 ಶಿವರಾತ್ರಿ★ ವಿಶೇಷ 9ದಿನ ಕಾಶಿಯಲ್ಲಿ ತಂಗುವುದು, 07.02.2023 16ದಿನ 95ದಿವ್ಯದೇಶ ಪ್ರವಾಸ. ಆರ್.ಗಾಂಧಿ ಟೂರ್ಸ್ (ರಿ) 9902433500/ 9945445809

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್ 3/1/2023 ಪೂರಿ, ಕೋನಾರ್ಕ್, ಭುನೇಶ್ವರ. 29/1/2023 ಗುಜರಾತ್, ಮಧ್ಯಪ್ರದೇಶ 4 ಜ್ಯೋತಿರ್ಲಿಂಗ,ಮಹಾಕಾಳೇಶ್ವರ, ಓಂಕಾರೇಶ್ವರ, ನಾಗನಾಥ್, ಸೋಮನಾಥ. 9591017782

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

ಪ್ರಜಾವಾಣಿ
BOOK YOUR CLASSIFIEDS ADVERTISEMENT
PRAJAVANI ALL KARNATAKA CLASSIFIEDS PACKAGE RATES

Per word	Ordinary	Bold	Ordinary Semi Display	Bold Semi Display
	70	100	80	135

CD Per Sqcm	Single Col	Double Col	Multi Col
	480	450	475

SPECIAL OFFER

PAY	2	And	GET	1	Free
PAY	3	And	GET	2	Free
PAY	5	And	GET	5	Free

For More Details Contact:
Ph: 080- 45557160 | 163 | 164 |
9731810277 | 9901641752 | 9845114560 | 9886213331
dhclassifieds@deccanherald.co.in www.dhclassifieds.com
conditions apply*

ಮೊರೊಕ್ಕೊ ತಂಡದ ಆಟಗಾರರು ಅಭ್ಯಾಸ ನಡೆಸಿದರು– ಎಎಫ್‌ಪಿ ಚಿತ್ರ

ಮೂರನೇ ಸ್ಥಾನದ ಪ್ಲೇಆಫ್ ಪಂದ್ಯ ಇಂದು: ಕ್ರೊವೇಷ್ಯಾ ಎದುರು ಸೆಣಸಾಟ

ಮೂರಕ್ಕೇರಲಿದೆಯೇ ಮೊರೊಕ್ಕೊ?

ದೋಹಾ (ಎಎಫ್‌ಪಿ/ರಾಯಿಟರ್ಸ್): ಒಂದೇ ವಿಶ್ವಕಪ್ ಟೂರ್ನಿಯಲ್ಲಿ ಏಳು ಪಂದ್ಯಗಳನ್ನು ಆಡಿರುವ ಆಫ್ರಿಕಾದ ಮೊದಲ ದೇಶ ಎನಿಸಿಕೊಂಡಿರುವ ಮೊರೊಕ್ಕೊ ಮತ್ತೊಂದು 'ಗೌರವ'ಕ್ಕಾಗಿ ಶನಿವಾರ ಹೋರಾಡಲಿದೆ.

ಖಲೀಫಾ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ನಡೆಯಲಿರುವ ಮೂರನೇ ಸ್ಥಾನದ ಪ್ಲೇ ಆಫ್ ಹಣಾಹಣಿಯಲ್ಲಿ ಕ್ರೊವೇಷ್ಯಾ ತಂಡದ ಎದುರು ಮೊರೊಕ್ಕೊ ಸೆಣಸಲಿದೆ. ಇಲ್ಲಿ ಯಾವುದೇ ಫಲಿತಾಂಶ ಹೊರಹೊಮ್ಮಿದರೂ ಮೊರೊಕ್ಕೊ ಆಟಗಾರರಿಗೆ ತಮ್ಮ ದೇಶದಲ್ಲಿ ಭರ್ಜರಿ ಸ್ವಾಗತ ಸಿಗುವುದು ಖಚಿತ. ಹಾಗಾಗಿ ತಂಡ ಅತ್ಯಂತ ನಿರಾಳವಾಗಿ ಇಲ್ಲಿ ಕಣಕ್ಕಿಳಿಯಲಿದೆ.

ಸೆಮಿಫೈನಲ್ ಪಂದ್ಯಗಳಲ್ಲಿ ಮೊರೊಕ್ಕೊ ಮತ್ತು ಕ್ರೊವೇಷ್ಯಾ ಕ್ರಮವಾಗಿ ಫ್ರಾನ್ಸ್ ಹಾಗೂ ಅರ್ಜೆಂಟೀನಾ ಎದುರು ಸೋತಿದ್ದವು.

'ಮಾನಸಿಕವಾಗಿ ಇದೊಂದು ಕಠಿಣ ಸವಾಲು. ಅವಕಾಶ ಸಿಗದ ಆಟಗಾರರನ್ನು ಪಂದ್ಯದಲ್ಲಿ ಆಡಿಸಲಾಗುವುದು. ನಾವು ಮೂರನೇ ಸ್ಥಾನ ಪಡೆಯುವ ವಿಶ್ವಾಸವಿದೆ' ಎಂದು ಮೊರೊಕ್ಕೊ ಕೋಚ್ ವಾಲಿದ್ ರೆಗ್ರಾಗ್ ಹೇಳಿದ್ದಾರೆ.

ದಿಗ್ಗಜ ಮಿಡ್‌ಫೀಲ್ಡರ್, ತಂಡದ ನಾಯಕ ಲೂಕಾ ಮಾಡ್ರಿಚ್ ಅವರಿಗೆ 'ಗೌರವ'ದ ಬೀಳ್ಕೊಡುಗೆ ನೀಡುವ ತವಕದಲ್ಲಿ ಕ್ರೊವೇಷ್ಯಾ ಆಟಗಾರರಿದ್ದಾರೆ. 37 ವರ್ಷದ ಆಟಗಾರನಿಗೆ ಬಹುತೇಕ ಇದು ಕೊನೆಯ ವಿಶ್ವಕಪ್ ಆಗಿದೆ.

ಜಪಾನ್ ಮತ್ತು ಬ್ರೆಜಿಲ್ ತಂಡಗಳ ವಿರುದ್ಧ ಪೆನಾಲ್ಟಿ ಶೂಟೌಟ್‌ಗಳ ಮೂಲಕ ಗೆದ್ದು ಕ್ರೊವೇಷ್ಯಾ ನಾಲ್ಕರ ಘಟ್ಟಕ್ಕೆ ಕಾಲಿಟ್ಟಿತ್ತು. ಉಭಯ ತಂಡಗಳ ನಡುವೆ ಜಿದ್ದಾಜಿದ್ದಿನ ಪೈಪೋಟಿ ನಿರೀಕ್ಷಿಸಬಹುದು.

ವಿಶ್ವ ರ‍್ಯಾಂಕಿಂಗ್	
ಕ್ರೊವೇಷ್ಯಾ	12
ಮೊರೊಕ್ಕೊ	22
ಮುಖಾಮುಖಿ ಪಂದ್ಯಗಳು	2
ಕ್ರೊವೇಷ್ಯಾ ಗೆಲುವು	1
ಮೊರೊಕ್ಕೊ	0
ಡ್ರಾ	1

ಪಂದ್ಯ ಆರಂಭ: ರಾತ್ರಿ 8.30

'ವಾಸ್ತವವಾಗಿ, ನಾವು ಸೆಮಿಫೈನಲ್ ತಲುಪುತ್ತೇವೆ ಎಂಬ ವಿಶ್ವಾಸ ಟೂರ್ನಿ ಆರಂಭಕ್ಕೂ ಮೊದಲೇ ಇತ್ತು. ಆ ಬಳಿಕ ಟ್ರೋಫಿ ಕನಸು ಕಾಣಲಾರಂಭಿಸಿದೆವು. ಕಂಚಿನ ಪದಕ ಗೆಲ್ಲಲು ಶಕ್ತಿಮೀರಿ ಪ್ರಯತ್ನಿಸುತ್ತೇವೆ' ಎಂದು ಕ್ರೊವೇಷ್ಯಾ ಮಿಡ್‌ಫೀಲ್ಡರ್ ಲೊವ್ರೊ ಮಜೆರ್ ಹೇಳಿದ್ದಾರೆ.

ಫೈನಲ್‌ಗೆ ಮಾರ್ಸಿನಿಯಾಕ್ ರೆಫರಿ

ದೋಹಾ (ರಾಯಿಟರ್ಸ್): ಪೋಲೆಂಡ್‌ನ ಸೈಮನ್ ಮಾರ್ಸಿನಿಯಾಕ್ ಅವರು ಭಾನುವಾರ ನಡೆಯಲಿರುವ ಟೂರ್ನಿಯ ಫೈನಲ್ ಪಂದ್ಯದಲ್ಲಿ ರೆಫರಿಯಾಗಿ ಕಾರ್ಯನಿರ್ವಹಿಸಲಿದ್ದಾರೆ. ಪೋಲೆಂಡ್ ಫುಟ್‌ಬಾಲ್ ಸಂಸ್ಥೆ ಗುರುವಾರ ಈ ವಿಷಯ ತಿಳಿಸಿದೆ.

ಅರ್ಜೆಂಟೀನಾ ಮತ್ತು ಫ್ರಾನ್ಸ್ ತಂಡಗಳ ನಡುವಣ ಈ ಪ್ರಶಸ್ತಿ ಸುತ್ತಿನ ಪಂದ್ಯಕ್ಕೆ ಮೊದಲ ಬಾರಿ ಪೋಲೆಂಡ್ ದೇಶದ ರೆಫರಿ ಕಾರ್ಯನಿರ್ವಹಿಸುವರು. ರಷ್ಯಾದಲ್ಲಿ ನಡೆದ 2018ರ ವಿಶ್ವಕಪ್ ಟೂರ್ನಿಯಲ್ಲಿ ಮೊದಲ ಬಾರಿ ಅವರು ರಫರಿಯಾಗಿದ್ದರು. ಪೋಲೆಂಡ್‌ನವರೇ ಆದ ಪಾವೆಲ್ ಸೊಕೊಲ್ನಿಕಿ ಮತ್ತು ಥಾಮಸ್ ಲಿಸ್ಟ್ಕಿವಿಚ್ ಅವರು ಮಾರ್ಸಿನಿಯಾಕ್ ಅವರಿಗೆ ಸಹಾಯಕರಾಗಿ ಕಾರ್ಯನಿರ್ವಹಿಸುವರು.

ಕತಾರ್‌ನ ಅಬ್ದುಲ್‌ರಹಮಾನ್ ಅಲ್ ಜಾಸಿಮ್ ಅವರು ಕ್ರೊವೇಷ್ಯಾ–ಮೊರೊಕ್ಕೊ ನಡುವಣ ಮೂರನೇ ಸ್ಥಾನದ ಪ್ಲೇ ಆಫ್‌ನಲ್ಲಿ ರೆಫರಿಯಾಗುವರು. ಅವರದೇ ದೇಶದ ತಾಲೆಬ್ ಅಲ್ ಮ್ಯಾರಿ ಮತ್ತು ಸವೋದ್ ಅಹಮದ್ ಅಲ್ಮಾಕಲೆಹ್ ಅವರು ಸಹಾಯಕರಾಗಿ ಅಂಗಣಕ್ಕಿಳಿಯಲಿದ್ದಾರೆ.

ಬಿಎಫ್‌ಸಿ–ಜೆಎಫ್‌ಸಿ ಪೈಪೋಟಿ

ಬೆಂಗಳೂರು: ಗೆಲುವಿನ ಲಯಕ್ಕೆ ಮರಳುವ ವಿಶ್ವಾಸದಲ್ಲಿರುವ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ತಂಡವು ಶನಿವಾರ ಜಮ್ಶೆಡ್‌ಪುರ ಎಫ್‌ಸಿ (ಜೆಎಫ್‌ಸಿ) ತಂಡಕ್ಕೆ ಮುಖಾಮುಖಿಯಾಗಲಿದೆ.

ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಈ ಪಂದ್ಯಕ್ಕೆ ಕಂಠೀರವ ಕ್ರೀಡಾಂಗಣ ಸಜ್ಜಾಗಿದೆ. ಇದುವರೆಗೆ ನಿರೀಕ್ಷಿತ ಸಾಮರ್ಥ್ಯ ತೋರುವಲ್ಲಿ ವಿಫಲವಾಗಿರುವ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ಈ ಪಂದ್ಯದಲ್ಲಿ ಪುಟಿದೇಳುವ ಹಂಬಲದಲ್ಲಿದೆ. ತಂಡವು ಒಂಬತ್ತು ಪಂದ್ಯಗಳಿಂದ ಕೇವಲ ಏಳು ಪಾಯಿಂಟ್ಸ್ ಗಳಿಸಿ ಒಂಬತ್ತನೇ ಸ್ಥಾನದಲ್ಲಿದೆ.

ಜಮ್ಶೆಡ್‌ಪುರ ತಂಡವೂ ಒಂಬತ್ತು ಪಂದ್ಯಗಳನ್ನು ಆಡಿದ್ದು, ಕೇವಲ ನಾಲ್ಕು ಪಾಯಿಂಟ್ಸ್‌ನೊಂದಿಗೆ 10ನೇ ಸ್ಥಾನದಲ್ಲಿದೆ.

ಪಂದ್ಯ ಆರಂಭ: ಸಂಜೆ 5.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬೆಂಗಳೂರು ರೇಸ್

ಶ್ಯಾಮ್‌ರಾಕ್ ಗೆಲ್ಲುವ ನಿರೀಕ್ಷೆ

ವೂಲ್ಫ್ 777 ಬೆಂಗಳೂರು 2000 ಗಿನ್ನೀಸ್ ಶನಿವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಶ್ಯಾಮ್‌ರಾಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2.15ಕ್ಕೆ ಪ್ರಾರಂಭವಾಗಲಿರುವ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ:

1ನೇ ರೇಸ್: ಈಸ್‌ನಾಟ್ ಶೀ ಬ್ಯೂಟಿಫುಲ್ 8, ಸ್ಟೈಲ್ ಅರೌಂಡ್ 1, ದಿ ಕಿಂಗ್ ಎನ್ ಐ 2
2ನೇ ರೇಸ್: ಟರ್ಕೊಮ್ಯಾನ್ 1, ಸ್ಪೀಡ್ ಸೆವೆನ್ 3, ರೂಲ್ ಆಫ್ ಲಾ 2
3ನೇ ರೇಸ್:, ಸ್ಟಾರ್ ಅಡ್ಮಿರಲ್ 2, ಫಾರ್ಟಿ ನೈನರ್ 3, ಚಿಸಾಕ್ಸ್ 7
4ನೇ ರೇಸ್: ಪ್ರೇಗ್ 4, ಸಿಲ್ವೇರಿಯಸ್ 1, ಓನ್ಲಿ ಯು 5
5ನೇ ರೇಸ್: ಶ್ಯಾಮ್‌ರಾಕ್ 6, ಸೀಜ್ ಕರೇಜಿಯಸ್ 7, ಲಾಸ್ಟ್ ವಿಶ್ 5
6ನೇ ರೇಸ್: ಸ್ಟೈಫೈರ್ 8, ಡೆಲ್ ಮಾರ್ 5, ಫರ್ನೆಟ್ ಬ್ರಾಂಕಾ 3
7ನೇ ರೇಸ್: ಸ್ಪೆಂಡಿಡೊ 2, ಅರ್ಬನ್ ಬೋರ್ಬಾನ್ 7, ಆಲ್ವೇಸ್ ಹ್ಯಾಪಿ 4

ಉತ್ತಮ ಬೆಟ್: ಈಸ್‌ನಾಟ್ ಶೀ ಬ್ಯೂಟಿಫುಲ್

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
3,4,5,6,7	2,3,4	5,6,7

ಕರ್ನಾಟಕ–ಸರ್ವಿಸಸ್ ಪಂದ್ಯ ಡ್ರಾ; ರವಿ, ಅನ್ಷುಲ್ ಅರ್ಧಶತಕ

ರಣಜಿ: ಸಮರ್ಥ್ ಸುಂದರ ಶತಕ

• ಗಿರೀಶ ದೊಡ್ಡಮನಿ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶುಕ್ರವಾರ ಶತಕ ಬಾರಿಸಿದ ಆರ್. ಸಮರ್ಥ್ ಆತಿಥೇಯ ಕರ್ನಾಟಕಕ್ಕೆ ಈ ಬಾರಿಯ ರಣಜಿ ಟ್ರೋಫಿ ಟೂರ್ನಿಯಲ್ಲಿ ಜಯದ ಆರಂಭ ಮಾಡುವ ಅವಕಾಶವನ್ನು ಸೃಷ್ಟಿಸಿದರು. ಆದರೆ ಅನ್ಷುಲ್ ಗುಪ್ತಾ ಸರ್ವಿಸಸ್ ತಂಡದ ಸೋಲು ತಪ್ಪಿಸಿದರು. ಇದರಿಂದಾಗಿ ಪಂದ್ಯ ಡ್ರಾದಲ್ಲಿ ಮುಕ್ತಾಯವಾಯಿತು.

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಸಿ ಗುಂಪಿನ ಪಂದ್ಯದಲ್ಲಿ ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಕರ್ನಾಟಕ 3 ಅಂಕ ಗಳಿಸಿತು. ಸಮರ್ಥ್ (ಅಜೇಯ 119) ಶತಕದ ಬಲದಿಂದ ಆತಿಥೇಯ ತಂಡವು ಎರಡನೇ ಇನಿಂಗ್ಸ್‌ನಲ್ಲಿ 56 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 253 ರನ್ ಗಳಿಸಿತು. ಗುರುವಾರ ಮೊದಲ ಇನಿಂಗ್ಸ್‌ನಲ್ಲಿ 43 ರನ್‌ಗಳ ಮುನ್ನಡೆ ಗಳಿಸಿತ್ತು.

ಶುಕ್ರವಾರ ಊಟದ ವಿರಾಮದಲ್ಲಿ ಕರ್ನಾಟಕ ಡಿಕ್ಲೇರ್ ಮಾಡಿಕೊಂಡಿತು. 296 ರನ್‌ಗಳ ಗುರಿ ಬೆನ್ನಟ್ಟಿದ ಸರ್ವಿಸಸ್ 21 ರನ್‌ಗಳಿಸುವಷ್ಟರಲ್ಲಿ ಮೂರು ವಿಕೆಟ್ ಕಳೆದುಕೊಂಡಿತು. ಆದರೆ ಈ ಸಂದರ್ಭದಲ್ಲಿ ಜೊತೆಗೂಡಿದ ರವಿ ಚೌಹಾಣ್ (ಅಜೇಯ 66; 105ಎ, 4X10) ಮತ್ತು ಅನ್ಷುಲ್ ಗುಪ್ತಾ (ಅಜೇಯ 71; 92ಎ, 4X9, 6X2) ತಂಡಕ್ಕೆ ಆಸರೆಯಾದರು.

ತಂಡವು 39 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 150 ರನ್ ಗಳಿಸಿತು. ಚಹಾ ವಿರಾಮದ ನಂತರ ಪಂದ್ಯವನ್ನು ಡ್ರಾ ಎಂದು ಘೋಷಿಸಲು ಉಭಯ ತಂಡಗಳ ನಾಯಕರು ಸಮ್ಮತಿಸಿದರು.

ಪಂದ್ಯದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಸಮರ್ಥ್, 'ನಮ್ಮ ತಂಡಕ್ಕೆ ಇದು ಉತ್ತಮ ಆರಂಭ. ಈ ಹಿಂದೆ ಲೀಗ್ ಟೂರ್ನಿಗಳಲ್ಲಿ ಆಡಿದ್ದು ಮತ್ತು ಸತತ ಅಭ್ಯಾಸ ಮಾಡಿದ್ದು ನನಗೆ ಫಾರ್ಮ್‌ಗೆ ಮರಳಲು ಸಹಾಯಕವಾಗಿದೆ. ಈ ಶತಕ ನನ್ನ ಆತ್ಮವಿಶ್ವಾಸ ಹೆಚ್ಚಿಸಿದೆ' ಎಂದರು.

ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಸಮರ್ಥ್ ಎಂಟು ರನ್ ಗಳಿಸಿದ್ದರು. ಎರಡನೇ ಇನಿಂಗ್ಸ್‌ನಲ್ಲಿ ಅವರು ತಮ್ಮ ನೈಜ ಆಟಕ್ಕಿಂತ ತುಸು ವೇಗವಾಗಿ ರನ್ ಗಳಿಸಿದರು. ನಾಯಕ ಮಯಂಕ್ (73; 100ಎ) ಅವರೊಂದಿಗೆ ಮೊದಲ ವಿಕೆಟ್ ಜೊತೆಯಾಟದಲ್ಲಿ 143 ರನ್ ಸೇರಿಸಿದರು. 36ನೇ ಓವರ್‌ನಲ್ಲಿ ಅರ್ಪಿತ್ ಗುಲೇರಿಯಾ ಎಸೆತದಲ್ಲಿ ಮಯಂಕ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಜೊತೆಯಾಟ ಮುರಿಯಿತು. ಸಮರ್ಥ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 11ನೇ ಶತಕ ದಾಖಲಿಸಿದರು. ನಿಕಿನ್ ಜೋಸ್ ಕೇವಲ ಎರಡು ರನ್ ಗಳಿಸಿ ಔಟಾದರು. ಅವರು ಕೂಡ ಗುಲೇರಿಯಾ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು.

ಮನೀಷ್ ಪಾಂಡೆ ಮತ್ತು ವಿಶಾಲ್ ಒನತ್ ವಿಕೆಟ್‌ಗಳನ್ನು ಪುಳ್ಕಿತ್ ಗಳಿಸಿದರು. ಇದರಿಂದಾಗಿ ತಂಡವು ಊಟಕ್ಕೂ ಮುನ್ನವೇ 232 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ಕ್ರೀಸ್‌ಗೆ ಬಂದ ಗೌತಮ್ ಎರಡು ಸಿಕ್ಸರ್ ಸಿಡಿಸಿದರು. ಮುನ್ನಡೆಯನ್ನು ಹೆಚ್ಚಿಸಿದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಕರ್ನಾಟಕ: 304
ಸರ್ವಿಸಸ್: 261 (83.2 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ಕರ್ನಾಟಕ 4ಕ್ಕೆ253 ಡಿಕ್ಲೇರ್ಡ್ (56 ಓವರ್‌ಗಳಲ್ಲಿ)
ಸಮರ್ಥ್ ಔಟಾಗದೆ 119 (178ಎ, 4X12)
ಮಯಂಕ್ ಎಲ್‌ಬಿಡಬ್ಲ್ಯು ಅರ್ಪಿತ್ 73 (100ಎ, 4X10)
ನಿಕಿನ್ ಎಲ್‌ಬಿಡಬ್ಲ್ಯು ಅರ್ಪಿತ್ 2 (3ಎ)
ಮನೀಷ್ ಬಿ ಪುಳ್ಕಿತ್ 23 (24ಎ, 4X3, 6X1)
ವಿಶಾಲ್ ಬಿ ಪುಳ್ಕಿತ್ 14 (26ಎ, 4X2)
ಗೌತಮ್ ಔಟಾಗದೆ 17 (8ಎ, 6X2)
ಇತರೆ: 5 (ಬೈ1, ವೈಡ್ , ನೋಬಾಲ್ 3)
ವಿಕೆಟ್ ಪತನ: 1–143 (ಮಯಂಕ್ ಅಗರವಾಲ್; 35.6), 2–149 (ನಿಕಿನ್ ಜೋಸ್; 37.1), 3–194 (ಮನೀಷ್ ಪಾಂಡೆ; 46.1), 4–232 (ವಿಶಾಲ್ ಒನತ್; 54.2)
ಬೌಲಿಂಗ್: ದಿವೇಶ್ ಪಠಾಣಿಯಾ 8–0–53–0, ನಿಶಾನ್ ಸಿಂಗ್ 7–2–23–0, ಅರ್ಪಿತ್ ಗುಲೇರಿಯಾ 15–2–59–2, ಪುಳ್ಕಿತ್ ನಾರಂಗ್ 16–1–68–2, ರಾಹುಲ್ ಸಿಂಗ್ 10–1–49–0
ಸರ್ವಿಸಸ್: 3ಕ್ಕೆ150 (39 ಓವರ್‌ಗಳಲ್ಲಿ)
ರೊಹಿಲಾ ಸಿ ಶರತ್ ಬಿ ಮೋರೆ 1 (6ಎ)
ರವಿ ಔಟಾಗದೆ 66 (105ಎ, 4X10)
ಗೆಹ್ಲೊತ್ ಸಿ ಮನೀಷ್ ಬಿ ವಿದ್ವತ್ 10 (27ಎ, 4X2)
ರಾಹುಲ್ ಎಲ್‌ಬಿಡಬ್ಲ್ಯು ಗೌತಮ್ 0
ಅನ್ಷುಲ್ ಔಟಾಗದೆ 71 (92ಎ, 4X9, 6X2)
ಇತರೆ: 2(ಬೈ1, ಲೆಗ್‌ಬೈ 1)
ವಿಕೆಟ್ ಪತನ: 1–1 (ರೊಹಿಲಾ; 1.3), 2–16 (ರಾಹುಲ್‌ಸಿಂಗ್ ಗೆಹ್ಲೊತ್, 10.4), 3–21 (ರಾಹುಲ್ ಸಿಂಗ್; 11.4)
ಬೌಲಿಂಗ್: ವಿದ್ವತ್ ಕಾವೇರಪ್ಪ 7–3–15–1, ರೋನಿತ್ ಮೋರೆ 9–3–29–1, ಕೆ. ಗೌತಮ್ 12–1–50–1, ವಿಜಯಕುಮಾರ್ ವೈಶಾಖ್ 5–0–18–0, ಶ್ರೇಯಸ್ ಗೋಪಾಲ್ 6–1–36–0
ಫಲಿತಾಂಶ: ಪಂದ್ಯ ಡ್ರಾ. ಕರ್ನಾಟಕಕ್ಕೆ 3 ಅಂಕ ಹಾಗೂ ಸರ್ವಿಸಸ್‌ಗೆ 1 ಅಂಕ

ರಣಜಿ ಪಂದ್ಯದಲ್ಲಿ ಶತಕ ದಾಖಲಿಸಿದ ಕರ್ನಾಟಕದ ಆರ್. ಸಮರ್ಥ್ ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್

ನೆರಳು..ಮಂದಬೆಳಕು..

'ಮಳೆ ಮತ್ತು ಮಂದಬೆಳಕಿನಿಂದ ಪಂದ್ಯದಲ್ಲಿ ಬಹಳಷ್ಟು ಸಮಯ ನಷ್ಟವಾಗಿದೆ. ಗುರುವಾರ ಸಂಜೆ ಕೂಡ ಕ್ರೀಡಾಂಗಣದ ಕಟ್ಟಡದ ನೆರಳು ಪಿಚ್ ಅನ್ನೂ ಆವರಿಸಿದ್ದರಿಂದ ಮಂದಬೆಳಕು ಎಂದು ಆಟ ಸ್ಥಗಿತವಾಗಿತ್ತು. ಆಗ ಇನ್ನಷ್ಟು ಸಮಯ ಸಿಕ್ಕಿದ್ದರೆ ಮತ್ತಷ್ಟು ರನ್ ಸೇರಿಸಬಹುದಿತ್ತು. ಇವತ್ತು ಬೆಳಿಗ್ಗೆ ಇನ್ನೂ ಬೇಗ ಡಿಕ್ಲೇರ್ ಮಾಡಬಹುದಿತ್ತು' ಎಂದು ಕರ್ನಾಟಕದ ಬ್ಯಾಟರ್ ಸಮರ್ಥ್ ಹೇಳಿದರು.

ಕರ್ನಾಟಕದ ಎರಡನೇ ಇನಿಂಗ್ಸ್ ನಡೆದ ಸಂದರ್ಭದಲ್ಲಿ ಸಂಜೆ 4ರ ನಂತರ ಸೂರ್ಯ ಪಶ್ಚಿಮಕ್ಕೆ ಸರಿಯುತ್ತಿದ್ದಂತೆಯೇ ಕಟ್ಟಡದ ನೆರಳು ಪಿಚ್ ಅನ್ನೂ ಆವರಿಸಿತು. ಇದರಿಂದಾಗಿ ಬೆಳಕು ಕಡಿಮೆಯಾಯಿತು. ಕ್ರೀಡಾಂಗಣದ ಇನ್ನರ್ಧ ಭಾಗದಲ್ಲಿ ಎಳೆಬಿಸಿಲು ಇತ್ತು. ಆಗಸ ಕೂಡ ಶುಭ್ರವಾಗಿತ್ತು. ಆದರೆ, ನೆರಳನ್ನು ಮಂದಬೆಳಕು ಎಂದೇ ಪರಿಗಣಿಸಿ ಲೈಟ್ ಮೀಟರ್ ಸಾಧನದ ಮೂಲಕ ಪರೀಕ್ಷೆ ಮಾಡಿದ ಅಂಪೈರ್‌ಗಳಾದ ಸಿ. ಶಂಸುದ್ದೀನ್ ಮತ್ತು ರಾಜೀವ್ ಗೊದರಾ ದಿನದಾಟಕ್ಕೆ ತೆರೆ ಎಳೆದಿದ್ದರು.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,415
ಇಂದಿನ ಅಂತ್ಯ	18,269
▼	146
ದಿನದ ಕನಿಷ್ಠ	18,255

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು
100 ಮೊಟ್ಟೆಗೆ ₹540
12 ಮೊಟ್ಟೆಗೆ ₹70
ಮೈಸೂರು
100 ಮೊಟ್ಟೆಗೆ ₹540

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1560 (1560)
ಸೋಯಾ (ರಿಫೈನ್ಡ್)	₹1232 (1230)
ಸೂರ್ಯಕಾಂತಿ (ರಿಫೈನ್ಡ್)	₹1320 (1320)
ಪಾಮೋಲಿನ್	₹935 (935)

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹137
ಆರ್‌ಎಸ್‌ಎಸ್-5 ₹129
ಗುಡ್ ಲಾಟ್ ₹122
(ಪ್ರತಿ ಕೆ.ಜಿಗೆ)

₹30 ಸಾವಿರದವರೆಗೆ ಬೆಲೆ ಏರಿಕೆಗೆ ಹೋಂಡಾ ನಿರ್ಧಾರ

ನವದೆಹಲಿ (ಪಿಟಿಐ): ಹೋಂಡಾ ಕಾರ್ಸ್ ಇಂಡಿಯಾ ಕಂಪನಿಯು ಜನವರಿ 23ರಿಂದ ಜಾರಿಗೆ ಬರುವಂತೆ ತನ್ನೆಲ್ಲಾ ಮಾದರಿಗಳ ಬೆಲೆಯನ್ನು ಹೆಚ್ಚಿಸಲು ಮುಂದಾಗಿದೆ. ಬೆಲೆ ಏರಿಕೆಯು ಗರಿಷ್ಠ ₹30 ಸಾವಿರದವರೆಗೆ ಇರಲಿದ್ದು, ಮಾದರಿಯಿಂದ ಮಾದರಿಗೆ ವ್ಯತ್ಯಾಸ ಆಗಲಿದೆ ಎಂದು ಅದು ಶುಕ್ರವಾರ ಹೇಳಿದೆ.

ಕಚ್ಚಾ ಸಾಮಗ್ರಿಗಳ ದರವು ನಿರಂತರವಾಗಿ ಹೆಚ್ಚಾಗುತ್ತಿರುವುದು ಹಾಗೂ ಹೊಸ ಮಾನದಂಡಗಳಿಗೆ ಅನುಗುಣವಾಗಿ ವಾಹನಗಳ ಬೆಲೆಯನ್ನು ಪರಿಷ್ಕರಣೆ ಮಾಡಲು ನಿರ್ಧರಿಸಲಾಗಿದೆ ಎಂದು ಹೋಂಡಾ ಕಾರ್ಸ್ ಇಂಡಿಯಾದ ಮಾರುಕಟ್ಟೆ ವಿಭಾಗದ ಉಪಾಧ್ಯಕ್ಷ ಕುನಾಲ್ ಬೆಹ್ಲಾ ತಿಳಿಸಿದ್ದಾರೆ.

ದೇಶಿ ಕಚ್ಚಾ ತೈಲ: ಆಕಸ್ಮಿಕ ಲಾಭ ತೆರಿಗೆ ತಗ್ಗಿಸಿದ ಕೇಂದ್ರ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರವು ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ 'ಆಕಸ್ಮಿಕ ಲಾಭ ತೆರಿಗೆ'ಯನ್ನು ತಗ್ಗಿಸಿದೆ. ಇದೇ ವೇಳೆ, ಡೀಸೆಲ್ ಮತ್ತು ವಿಮಾನ ಇಂಧನ (ಎಟಿಎಫ್) ರಫ್ತು ಮೇಲಿನ ತೆರಿಗೆಯನ್ನೂ ಕಡಿಮೆ ಮಾಡಿದೆ.

ತೈಲ ಮತ್ತು ನೈಸರ್ಗಿಕ ಅನಿಲ ನಿಗಮದಂತಹ (ಒಎನ್‌ಜಿಸಿ) ಕಂಪನಿಗಳು ದೇಶದಲ್ಲಿ ಉತ್ಪಾದನೆ ಮಾಡುವ ಕಚ್ಚಾ ತೈಲದ ಮೇಲೆ ಪ್ರತಿ ಟನ್‌ಗೆ ₹4,900 ಇದ್ದ ಆಕಸ್ಮಿಕ ಲಾಭ ತೆರಿಗೆಯನ್ನು ₹ 1,700ಕ್ಕೆ ಇಳಿಕೆ ಮಾಡಲಾಗಿದೆ.

ಡೀಸೆಲ್ ಮೇಲಿನ ರಫ್ತು ತೆರಿಗೆಯನ್ನು ಲೀಟರಿಗೆ ₹ 8 ರಷ್ಟು ಇದ್ದಿದ್ದು ₹5ಕ್ಕೆ ಹಾಗೂ ವಿಮಾನ ಇಂಧನದ ರಫ್ತು ಮೇಲಿನ ತೆರಿಗೆಯನ್ನು ಲೀಟರಿಗೆ ₹ 5ರಷ್ಟು ಇದ್ದಿದ್ದು ₹1.5ಕ್ಕೆ ಇಳಿಕೆ ಮಾಡಲಾಗಿದೆ. ಪರಿಷ್ಕೃತ ತೆರಿಗೆ ದರಗಳು ಶುಕ್ರವಾರದಿಂದಲೇ ಜಾರಿಗೆ ಬರಲಿವೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ದರವು ನವೆಂಬರ್‌ನಿಂದ ಈವರೆಗೆ ಶೇ 14ರಷ್ಟು ಇಳಿಕೆ ಕಂಡಿದೆ. ಇದಕ್ಕೆ ಅನುಗುಣವಾಗಿ ತೆರಿಗೆ ದರಗಳನ್ನು ಕಡಿಮೆ ಮಾಡಲಾಗಿದೆ.

ವಿವಿಧ ಕೇಂದ್ರೀಯ ಬ್ಯಾಂಕ್‌ಗಳಿಂದ ಬಡ್ಡಿದರ ಹೆಚ್ಚಳ ಪರಿಣಾಮ

ಷೇರುಪೇಟೆಯಲ್ಲಿ ನಿಲ್ಲದ ಕರಡಿ ಕುಣಿತ

ನವದೆಹಲಿ (ಪಿಟಿಐ): ಅಮೆರಿಕದ ಫೆಡರಲ್ ರಿಸರ್ವ್‌ನ ಬಡ್ಡಿದರ ಹೆಚ್ಚಳದ ನಿರ್ಧಾರವು ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ನಕಾರಾತ್ಮಕ ವಹಿವಾಟು ನಡೆಯುವಂತೆ ಮಾಡಿತು.

ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ ಇಳಿಕೆ ಮತ್ತು ವಿದೇಶಿ ಬಂಡವಾಳ ಹೊರಹರಿವು ಸೂಚ್ಯಂಕಗಳು ಇನ್ನಷ್ಟು ಇಳಿಕೆ ಕಾಣುವಂತೆ ಮಾಡಿದವು.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ ಶುಕ್ರವಾರ 461 ಅಂಶ ಇಳಿಕೆ ಕಂಡು 61,338 ಅಂಶಗಳಿಗೆ ತಲುಪಿತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 146 ಅಂಶ ಇಳಿಕೆಯಾಗಿ 18,269ರಲ್ಲಿ ವಹಿವಾಟು ಅಂತ್ಯಗೊಂಡಿತು.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 1.44ರಷ್ಟು ಇಳಿಕೆ ಕಂಡಿದೆ. ದಿನದ ವಹಿವಾಟಿನಲ್ಲಿ ಡಾ. ರೆಡ್ಡೀಸ್ ಷೇರು

ಶೇ 3.62ರಷ್ಟು ಗರಿಷ್ಠ ನಷ್ಟ ಕಂಡಿತು. ಎರಡು ದಿನಗಳಲ್ಲಿ ಸೆನ್ಸೆಕ್ಸ್ 1,340 ಅಂಶ ಇಳಿಕೆ ಆಗಿದೆ.

ಏಷ್ಯಾದಲ್ಲಿ ಸೋಲ್, ಟೋಕಿಯೊ ಮತ್ತು ಶಾಂಘೈ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಹಾಂಗ್‌ಕಾಂಗ್ ಷೇರುಪೇಟೆ ಮಾತ್ರವೇ ಗಳಿಕೆ ಕಂಡುಕೊಂಡಿತು.

ಅಮೆರಿಕದ ಫೆಡರಲ್ ರಿಸರ್ವ್ ಜೊತೆಗೆ ಯುರೋಪಿನ್ ಕೇಂದ್ರೀಯ ಬ್ಯಾಂಕ್, ಬ್ಯಾಂಕ್ ಆಫ್ ಇಂಗ್ಲೆಂಡ್ ಸಹ ಬಡ್ಡಿದರ ಹೆಚ್ಚಳ ಮಾಡಿದೆ. ಹಣದುಬ್ಬರ ನಿಯಂತ್ರಿಸಲು ಬಡ್ಡಿದರ ಏರಿಕೆಯು ಮುಂದುವರಿಯಲಿದೆ ಎಂದು ಕೇಂದ್ರೀಯ ಬ್ಯಾಂಕ್‌ಗಳು ಹೇಳಿರುವುದರಿಂದ ಜಾಗತಿಕವಾಗಿ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಾಣುತ್ತಿದೆ ಎಂದು ಮಾರುಕಟ್ಟೆ ತಜ್ಞರು ಹೇಳಿದ್ದಾರೆ.

ವರ್ಷಾಂತ್ಯದ ರಜೆಗಳು ಇರುವುದರಿಂದ ಸಾಂಸ್ಥಿಕ ಹೂಡಿಕೆದಾರರು ವಹಿವಾಟಿನಲ್ಲಿ ಅಷ್ಟಾಗಿ ಭಾಗವಹಿಸುವುದಿಲ್ಲ. ಹೀಗಾಗಿ ಮಾರುಕಟ್ಟೆಯುಲ್ಲಿ ಅಸ್ಥಿರತೆ ಮುಂದುವರಿಯಲಿದೆ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವೀಸಸ್ ಲಿಮಿಟೆಡ್‌ನ ರಿಟೇಲ್ ರಿಸರ್ಚ್‌ನ ಮುಖ್ಯಸ್ಥ ಸಿದ್ಧಾರ್ಥ್ ಖೇಮ್ಕಾ ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಶೇ 2.25ರಷ್ಟು ಇಳಿಕೆ ಕಂಡು ಬ್ಯಾರಲ್‌ಗೆ 79.38 ಡಾಲರ್‌ಗೆ ತಲುಪಿತು.

ಕರಗಿತು ₹5.78 ಲಕ್ಷ ಕೋಟಿ

ಮುಂಬೈ ಷೇರುಪೇಟೆಯಲ್ಲಿ ಎರಡು ದಿನಗಳಲ್ಲಿ ನಡೆದ ನಕಾರಾತ್ಮಕ ವಹಿವಾಟಿನಿಂದ ಹೂಡಿಕೆದಾರರ ಸಂಪತ್ತು ಮೌಲ್ಯವು ₹ 5.78 ಲಕ್ಷ ಕೋಟಿಯಷ್ಟು ಕರಗಿದೆ. ಇದರಿಂದಾಗಿ ಮುಂಬೈ ಷೇರುಪೇಟೆಯ ಒಟ್ಟು ಬಂಡವಾಳ ಮೌಲ್ಯವು ₹285.46 ಲಕ್ಷ ಕೋಟಿಗೆ ಇಳಿಕೆ ಆಗಿದೆ.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಶುಕ್ರವಾರದ ವಹಿವಾಟಿನಲ್ಲಿ ₹1,975 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ		ರಾಶಿ	43100-45226	ರಾಶಿ	41219-42959
ಸಕಲೇಶಪುರ		**ಕುಮಟ**		ತಟ್ಟಿಬೆಟ್ಟೆ	33699-36109
ಕೂಳೆ	250-300	ಚಿಪ್ಪು	25019-30099	**ಶಿರಸಿ**	
ನಡುಗೋಲು	450-480	ಕೋಕ	16019-28019	ಬೆಟ್ಟೆ	34679-41469
ರಾಶಿ	480-500	ಹಳೆಚಾಲಿ	35089-40099	ಬಿಳಿಗೋಟು	19899-34259
ರಾಶಿ ಉತ್ತಮ	550-600	ಹೊಸಚಾಲಿ	29000-32899	ಚಾಲಿ	31739-41000
ಜರಡಿ	700-750	**ಶಿವಮೊಗ್ಗ**		ಕೆಂಪುಗೋಟು	20899-31699
ಹೆರಕಿದ್ದು	1000-1100	ಗೊರಬಲು	17000-33199	ರಾಶಿ	38099-43699
ಹಸಿರು ಸಾಧಾರಣ	600-700	ರಾಶಿ	41001-45199	**ಯಲ್ಲಾಪುರ**	
ಹಸಿರು ಉತ್ತಮ	900-1000	ಸರಕು	55069-73996	ಬಿಳಿಗೋಟು	24899-34009
ಹಸಿರು ಅತಿ ಉತ್ತಮ	1250-1350	**ಸಿದ್ದಾಪುರ**		ಚಾಲಿ	35599-40169
ಕಾಳು ಮೆಣಸು	490	ಬಿಳಿಗೋಟು	29109-33099	ಕೋಕ	14899-29312
ಬಂಟ್ವಾಳ		ಚಾಲಿ	35099-39100	ಕೆಂಪುಗೋಟು	25019-34319
ಕೋಕ	12500-25000	ಕೋಕ	24299-31219	ರಾಶಿ	41819-50379
ಹೊಸತು	27500-38000				
ಹಳತು	48000-54500				
ಕಾರ್ಕಳ					
ಹೊಸತು	25000-37500				
ಹಳತು	40000-54500				
ಹೊಸನಗರ					
ಬಿಳಿಗೋಟು	26299-32599				
ಚಾಲಿ	32909-36699				
ಕೆಂಪುಗೋಟು	28899-34899				

ಕಾಫಿ

(50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	13100	13200	168.15 ಸೆಂಟ್ಸ್
ಎಸಿ	6580	6700	6200	
ಆರ್‌ಪಿ	8500	8500	8500	ಲಂಡನ್
ಆರ್‌ಸಿ	4530	4200	4200	1915 ಡಾಲರ್ಸ್

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ) ₹250-675
ದ್ವಿತಳಿ (ಬಿ.ವಿ) ₹541-841

ಮುಂಬೈ ಧಾರಣೆ

ಶೇಂಗಾ

16–12-2022

ಜಾವಾ 70/80(ಹೊಸ)	11850-11900
ಜಾವಾ 80/90(ಹೊಸ)	11550-11600
ದಪ್ಪ ಮಧ್ಯಪ್ರದೇಶ(ಹೊಸ)	10100-10200
ದಪ್ಪ ಗುಜರಾತ್(ಹೊಸ)	10700-10800

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1570 (1570)
ಒಂದು ವಾರದ ಡೆಲಿವರಿ	1565 (1565)
ಸೋಯಾ ಕಚ್ಚಾ	1155 (1140)
ಪಾಮ್ ವಾರದ ಡೆಲಿವರಿ	933 (940)
ಸೂರ್ಯಕಾಂತಿ ಎಣ್ಣೆ ಕಚ್ಚಾ	--- (---)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
53,800 (53,600)
ಬೆಳ್ಳಿ ಕೆ.ಜಿ 66,150 (66,600)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹಳೆಯ ವಾಹನಕ್ಕೂ ಬಿಎಚ್ ನೋಂದಣಿಗೆ ಅವಕಾಶ

ನವದೆಹಲಿ (ಪಿಟಿಐ): ಸಾಮಾನ್ಯ ನೋಂದಣಿ ಸಂಖ್ಯೆ ಹೊಂದಿರುವ ಹಳೆಯ ವಾಹನಗಳನ್ನೂ ಭಾರತ್ ಸರಣಿಗೆ (ಬಿಎಚ್-ಸಿರೀಸ್) ಪರಿವರ್ತಿಸಲು ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಅವಕಾಶ ಕಲ್ಪಿಸಿದೆ.

ದೇಶದಲ್ಲಿ ಬಿಎಚ್-ಸಿರೀಸ್ ವ್ಯಾಪ್ತಿಯನ್ನು ಇನ್ನಷ್ಟು ವಿಸ್ತರಿಸುವ ಭಾಗವಾಗಿ ಸಚಿವಾಲಯವು ಈ ಕ್ರಮ ತೆಗೆದುಕೊಂಡಿದೆ. ಈ ಮೊದಲು ಹೊಸ ವಾಹನಗಳಿಗೆ ಮಾತ್ರವೇ ಬಿಎಚ್-ಸಿರೀಸ್ ನೋಂದಣಿ ವ್ಯವಸ್ಥೆ ನೀಡಲಾಗಿತ್ತು.

ವಸತಿ ವಿಳಾಸ ಅಥವಾ ಕೆಲಸ ಮಾಡುವ ವಿಳಾಸ ಎರಡರಿಂದಲೂ ಅರ್ಜಿ ಸಲ್ಲಿಸಲು ಅನುಕೂಲ ಆಗುವಂತೆ ಕಾಯ್ದೆಯಲ್ಲಿ ತಿದ್ದುಪಡಿ ತರಲು ಸಚಿವಾಲಯ ಮುಂದಾಗಿದೆ.

ವಾಹನ ಮಾಲೀಕರು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಸ್ಥಳಾಂತರಗೊಂಡಾಗ ಅಲ್ಲಿ ಮರು ನೋಂದಣಿ ಮಾಡುವುದನ್ನು ತಪ್ಪಿಸಲು ಕೇಂದ್ರ ಮೋಟಾರು ವಾಹನಗಳ (12ನೇ ತಿದ್ದುಪಡಿ) ನಿಯಮವು 2021ರ ಸೆಪ್ಟೆಂಬರ್ 15ರಿಂದ ಜಾರಿಗೆ ಬಂದಿದೆ.

ರಕ್ಷಣಾ ಸಿಬ್ಬಂದಿ, ಕೇಂದ್ರ ಮತ್ತು ರಾಜ್ಯ ಸರ್ಕಾರಿ ಉದ್ಯೋಗಿಗಳು, ಸರ್ಕಾರಿ ಸ್ವಾಮ್ಯದ ಕಂಪನಿಗಳು ಹಾಗೂ ನಾಲ್ಕು ಅಥವಾ ಅದಕ್ಕಿಂತ ಹೆಚ್ಚಿನ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿ ಕಚೇರಿಗಳನ್ನು ಹೊಂದಿರುವ ಖಾಸಗಿ ಕಂಪನಿಗಳ ಉದ್ಯೋಗಿಗಳಿಗೆ ಈ ವ್ಯವಸ್ಥೆಯನ್ನು ಪರಿಚಯಿಸಲಾಗಿದೆ. ಸ್ವಯಂ ಪ್ರೇರಿತವಾಗಿ ಈ ಸೌಲಭ್ಯ ಬಳಸಿಕೊಳ್ಳಬಹುದು ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಕೇಂದ್ರ ಸರ್ಕಾರದ ಈಚಿನ ಮಾಹಿತಿಯ ಪ್ರಕಾರ, ಭಾರತ್ ಸರಣಿಯ ಅಡಿಯಲ್ಲಿ 49,600 ವಾಹನಗಳು ನೋಂದಾಯಿಸಿಕೊಂಡಿವೆ.

ಇಂದು ಜಿಎಸ್‌ಟಿ ಮಂಡಳಿ ಸಭೆ

ನವದೆಹಲಿ (ಪಿಟಿಐ): ಜಿಎಸ್‌ಟಿ ಮಂಡಳಿಯ ವಿಡಿಯೊ ಕಾನ್ಫರೆನ್ಸ್ ಮೂಲಕ ಶನಿವಾರ ಸಭೆ ನಡೆಸಲಿದ್ದು, ಪಾನ್ ಮಸಾಲಾ ಮತ್ತು ಗುಟ್ಕಾ ವಹಿವಾಟಿನಲ್ಲಿ ತೆರಿಗೆ ವಂಚಿಸುವುದನ್ನು ತಡೆಯಲು ವ್ಯವಸ್ಥೆಯೊಂದನ್ನು ರೂಪಿಸುವ ಕುರಿತು ಚರ್ಚೆ ನಡೆಸುವ ಸಾಧ್ಯತೆ ಇದೆ.

ಕ್ಯಾಸಿನೊ, ಆನ್‌ಲೈನ್ ಆಟಗಳು ಹಾಗೂ ಕುದುರೆ ರೇಸ್‌ಗೆ ಎಷ್ಟು ಪ್ರಮಾಣದ ಜಿಎಸ್‌ಟಿ ವಿಧಿಸಬೇಕು ಹಾಗೂ ಜಿಎಸ್‌ಟಿ ಮೇಲ್ಮನವಿ ನ್ಯಾಯಮಂಡಳಿ ರಚನೆ ಮಾಡುವ ಕುರಿತು ರಾಜ್ಯ ಹಣಕಾಸು ಸಚಿವರ ಸಮಿತಿ ಸಲ್ಲಿಸಿರುವ ವರದಿಗಳ ಬಗ್ಗೆಯೂ ಸಭೆಯಲ್ಲಿ ಚರ್ಚೆ ನಡೆಯಲಿದೆ.

ಭಾರತೀಯ ದಂಡ ಸಂಹಿತೆಯಲ್ಲಿ (ಐಪಿಸಿ) ಅಡಕವಾಗಿರುವ ಶಿಕ್ಷಾರ್ಹ ಅಪರಾಧಗಳ ಉಲ್ಲೇಖವನ್ನು ಜಿಎಸ್‌ಟಿ ಕಾಯ್ದೆಯಿಂದ ತೆಗೆಯುವ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇದೆ.

ಕೆಲವು ಸರಕು ಮತ್ತು ಸೇವೆಗಳಿಗೆ ಯಾವ ಪ್ರಮಾಣದ ತೆರಿಗೆ ದರ ಅನ್ವಯಿಸಲಿದೆ ಎನ್ನುವ ಕುರಿತು ಮಂಡಳಿಯು ಸ್ಪಷ್ಟನೆ ನೀಡಲಿದೆ.

ಗಡಿ: 14 ಗ್ರಾಮಗಳ ಜನರಿಗೆ ಉಭಯ ಸವಲತ್ತು

ಚಂದ್ರಾಪುರ (ಪಿಟಿಐ): ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯಗಳ ನಡುವಿನ ಗಡಿ ವಿಚಾರ ತಾರಕಕ್ಕೇರಿದರೂ, ಮಹಾರಾಷ್ಟ್ರ ಮತ್ತು ತೆಲಂಗಾಣ ಗಡಿಯ 14 ವಿವಾದಿತ ಗ್ರಾಮಗಳಲ್ಲಿ ವಾಸಿಸುವ ಜನರು ಮಾತ್ರ ಯಾವುದೇ ತಕರಾರಿಲ್ಲದೆ ಎರಡೂ ರಾಜ್ಯಗಳು ಜಾರಿಗೊಳಿಸುವ ಯೋಜನೆಗಳ ಫಲಾನುಭವಿಗಳಾಗಿದ್ದಾರೆ.

ಈ 14 ಗ್ರಾಮಗಳೂ ಮಹಾರಾಷ್ಟ್ರದ ಚಂದ್ರಾಪುರ ಜಿಲ್ಲೆಯ ಜಿವಾಟಿ ತಾಲ್ಲೂಕಿನಲ್ಲಿವೆ (ಮಹಾರಾಷ್ಟ್ರದ ನಕ್ಷೆಯ ಪ್ರಕಾರ). ರಾಜಕೀಯ ಸ್ಥಾನಮಾನ, ಮೂಲಸೌಕರ್ಯ ಸೇರಿದಂತೆ ಎಲ್ಲಾ ಪ್ರಯೋಜನಗಳನ್ನು ಇಲ್ಲಿನ ಗ್ರಾಮಸ್ಥರು ಎರಡೂ ರಾಜ್ಯಗಳಿಂದಲೂ ಪಡೆಯುತ್ತಿದ್ದಾರೆ.

'ಈ ಗ್ರಾಮಗಳು ತಮ್ಮ ಪ್ರದೇಶದಲ್ಲಿವೆ ಎಂದು ಹಿಂದೆ ಆಂಧ್ರಪ್ರದೇಶ ಮತ್ತು ಈಗ ತೆಲಂಗಾಣವು (ವಿಭಜನೆಯ ನಂತರ) ಪ್ರತಿಪಾದಿಸುತ್ತಿದೆ. ಈ ವಿವಾದವು ಇನ್ನೂ ಬಗೆಹರಿದಿಲ್ಲ' ಎಂದು ಪರಮ್‌ದೋಳಿ ಗ್ರಾಮ ಪಂಚಾಯಿತಿಯ ಮಾಜಿ ಸರಪಂಚ ವಾಮನ ಪವಾರ್ ಹೇಳುತ್ತಾರೆ.

'ನಾವು ಎರಡೂ ರಾಜ್ಯಗಳ ಯೋಜನೆಗಳ ಸದುಪಯೋಗ ಪಡೆಯುತ್ತಿದ್ದೇವೆ. 14 ಗ್ರಾಮಗಳಲ್ಲಿ 300ರಿಂದ 400 ಮಂದಿ ಕೃಷಿಕರಿದ್ದಾರೆ. ತಮ್ಮ ಕೃಷಿ ಭೂಮಿಗೆ ಪಟ್ಟಾ ನೀಡುವ ಸರ್ಕಾರದ ಜೊತೆಗಿರಲು ಅವರು ಬಯಸುತ್ತಾರೆ' ಎಂದೂ ತಿಳಿಸಿದ್ದಾರೆ.

ಉಕ್ರೇನ್: 60 ಕ್ಷಿಪಣಿ ದಾಳಿ, 2 ಸಾವು

ಕ್ಷಿಪಣಿ ದಾಳಿ ನಂತರ ಹಾರ್ಕಿವ್‌ನ ಆಸ್ಪತ್ರೆಯೊಂದರ ಚಿತ್ರಣ –ಎಎಫ್‌ಪಿ ಚಿತ್ರ

ಕೀವ್ (ಎ.ಪಿ): ಕೀವ್ ಸೇರಿ ಉಕ್ರೇನ್‌ನ ಪ್ರಮುಖ ನಗರಗಳ ಮೇಲೆ ರಷ್ಯಾ ಪಡೆಗಳು ಕ್ಷಿಪಣಿ ದಾಳಿ ಮುಂದುವರಿಸಿವೆ. ಶುಕ್ರವಾರ ಕನಿಷ್ಠ 60 ಕ್ಷಿಪಣಿಗಳನ್ನು ಪ್ರಯೋಗಿಸಲಾಗಿದೆ. ವಸತಿ ಕಟ್ಟಡದ ಮೇಲಿನ ದಾಳಿಯಿಂದಾಗಿ ಕನಿಷ್ಠ ಇಬ್ಬರು ಮೃತಪಟ್ಟಿದ್ದಾರೆ.

ಕೀವ್ ಮತ್ತು ಹಾರ್ಕಿವ್‌ನಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆ ಬಹುತೇಕ ಸ್ಥಗಿತವಾಗಿದೆ. ಕೀವ್, ಕ್ರಿವಿ ರಿಹ್, ಝಪೋರಿಝಿಯಾಗಳಲ್ಲಿ ಸ್ಫೋಟದ ಶಬ್ದಗಳು ನಿರಂತರವಾಗಿ ನಾಗರಿಕರನ್ನು ಬಾಧಿಸಿವೆ.

ಉಕ್ರೇನ್‌ನ ವಾಯುಪಡೆಯ ವಕ್ತಾರ ಯೂರಿ ಇನ್ಹಾತ್ ಅವರು, ಕನಿಷ್ಠ 60 ಕ್ಷಿಪಣಿಗಳನ್ನು ಪ್ರಯೋಗಿಸಲಾಗಿದೆ. ಉಕ್ರೇನ್ ಸೇನೆ ಈ ಪೈಕಿ ಎಷ್ಟು ಕ್ಷಿಪಣಿಗಳಿಗೆ ಪ್ರತಿರೋಧ ತೋರಿದೆ ಎಂಬುದು ತಿಳಿದುಬಂದಿಲ್ಲ ಎಂದರು.

ಸಂಕ್ಷಿಪ್ತ ಸುದ್ದಿ

ಮಲೇಷ್ಯಾದಲ್ಲಿ ಭೂಕುಸಿತ 18 ಸಾವು

ಬತಂಗ್ ಕಲಿ (ಎ.ಪಿ): ಮಲೇಷ್ಯಾದಲ್ಲಿ ಶುಕ್ರವಾರ ಭೂಕುಸಿತದಿಂದಾಗಿ 18 ಮಂದಿ ಮೃತಪಟ್ಟಿದ್ದು, 15 ಮಂದಿ ನಾಪತ್ತೆಯಾಗಿದ್ದಾರೆ. ಮಣ್ಣಿನಡಿ ಸಿಕ್ಕಿಬಿದ್ದವರ ರಕ್ಷಣೆಗಾಗಿ ಶೋಧ ಕಾರ್ಯ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಸಾವಯವ ಫಾರ್ಮ್ ತೋಟದಲ್ಲಿ ಸುಮಾರು 90 ಮಂದಿ ಕಾರ್ಮಿಕರು ನಿದ್ರಿಸುತ್ತಿದ್ದರು. ಆಗ ಸುಮಾರು 30 ಮೀಟರ್ ಎತ್ತರದಿಂದ ಭೂಮಿ ಕುಸಿದಿದೆ. ಸುಮಾರು ಮೂರು ಎಕರೆ ವ್ಯಾಪ್ತಿಯಲ್ಲಿ ಕುಸಿತ ಉಂಟಾಗಿದೆ. ಗಂಭೀರಗಾಯಗೊಂಡಿದ್ದ ಏಳು ಜನರನ್ನು ಆಸ್ಪತ್ರೆಗೆ ಸೇರಿಸಲಾಗಿದೆ.

ಕೋವಿಡ್ ತಪಾಸಣೆ: ಆಸ್ಪತ್ರೆಗಳಿಗೆ ಸೂಚನೆ

ಬೀಜಿಂಗ್ (ಎ.ಪಿ): ಕೊರೊನಾ ಸೋಂಕು ತಡೆಯುವ ಕ್ರಮವಾಗಿ ರಜೆಯ ಋತುವಿನಲ್ಲಿ ಬರುವ ವಲಸಿಗರ ತಪಾಸಣೆಗೆ ಸಜ್ಜಾಗಿರಬೇಕು ಎಂದು ಚೀನಾದ ಸರ್ಕಾರ ಗ್ರಾಮೀಣ ಭಾಗದ ಆಸ್ಪತ್ರೆಗಳಿಗೆ ಆದೇಶಿಸಿದೆ.

ರಜೆ ಋತುವಿನಲ್ಲಿ ದೇಶಕ್ಕೆ ಮರಳುವವರು ಕಡ್ಡಾಯವಾಗಿ ಮಾಸ್ಕ್ ಧರಿಸಿರಬೇಕು, ಅಂತರ ಕಾಯ್ದುಕೊಳ್ಳಬೇಕು ಹಾಗೂ ವಯಸ್ಕರ ಚಲನವಲನಗಳನ್ನು ಕಡ್ಡಾಯವಾಗಿ ಗಮನಿಸಬೇಕು ಎಂದು ಮಾರ್ಗಸೂಚಿ ಹೊರಡಿಸಲಾಗಿದೆ. ಆದರೆ, ಕ್ವಾರಂಟೈನ್ ಕುರಿತು ಉಲ್ಲೇಖಿಸಿಲ್ಲ.

ಅಗ್ನಿ ಅವಘಡ– 10 ಸಾವು

ವಾಕ್ಸ್ ಎನ್ ವೆಲಿನ್, ಫ್ರಾನ್ಸ್ (ಎ.ಪಿ): ಫ್ರಾನ್ಸ್‌ನ ಲಿಯೊನ್ ನಗರದ ಎಂಟು ಮಹಡಿಗಳ ಕಟ್ಟಡದಲ್ಲಿ ಗುರುವಾರ ರಾತ್ರಿ ಸಂಭವಿಸಿದ ಅಗ್ನಿ ಅವಘಡದಲ್ಲಿ ಐವರು ಮಕ್ಕಳು ಸೇರಿ 10 ಜನರು ಮೃತಪಟ್ಟರು. ಇತರೆ 14 ಜನರು ಗಾಯಗೊಂಡಿದ್ದು, ನಾಲ್ವರ ಸ್ಥಿತಿ ಗಂಭೀರವಾಗಿದೆ.

ಅಗ್ನಿಶಾಮಕ ದಳದ 170 ವಾಹನಗಳು ಧಾವಿಸಿದ್ದವು. ಅಗ್ನಿ ಅವಘಡಕ್ಕೆ ಕಾರಣ ತಿಳಿದುಬಂದಿಲ್ಲ.

ಶುಭಮನ್, ಪೂಜಾರ ಶತಕ ಸಡಗರ

ಟೆಸ್ಟ್ ಕ್ರಿಕೆಟ್: ಆತಿಥೇಯ ಬಾಂಗ್ಲಾದೇಶಕ್ಕೆ ಬೃಹತ್ ಗುರಿ ನೀಡಿದ ಭಾರತ

ಚಟ್ಟೊಗ್ರಾಮ್ (ಪಿಟಿಐ): ಯುವ ಬ್ಯಾಟರ್ ಶುಭಮನ್ ಗಿಲ್ ಮತ್ತು ಟೆಸ್ಟ್ ಪರಿಣತ ಚೇತೇಶ್ವರ್ ಪೂಜಾರ ಗಳಿಸಿದ ಶತಕಗಳ ಭರಾಟೆಯಲ್ಲಿ ಬಾಂಗ್ಲಾದೇಶದ ಬೌಲರ್‌ಗಳು ಸುಸ್ತಾದರು.

ಇಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ಬಾಂಗ್ಲಾದೇಕ್ಕೆ 513 ರನ್‌ಗಳ ಗೆಲುವಿನ ಗುರಿ ನೀಡಿದೆ.

13ನೇ ಪಂದ್ಯವನ್ನಾಡಿದ ಶುಭಮನ್ (110;152ಎ, 4X10, 6X3) ತಮ್ಮ ವೃತ್ತಿಜೀವನದ ಮೊದಲ ಶತಕ ದಾಖಲಿಸಿದರು. ಪೂಜಾರ (ಅಜೇಯ 102) ನಾಲ್ಕು ವರ್ಷಗಳ ನಂತರ ಶತಕ ದಾಖಲಿಸಿದರು. ಟೆಸ್ಟ್ ಕ್ರಿಕೆಟ್‌ನಲ್ಲಿ ಇದು ಅವರ 19ನೇ ಶತಕವಾಗಿದೆ. ಈ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಪೂಜಾರ 90 ರನ್ ಗಳಿಸಿದ್ದರು. ಇವರಿಬ್ಬರೂ ಎರಡನೇ ವಿಕೆಟ್ ಜೊತೆಯಾಟದಲ್ಲಿ ಪೇರಿಸಿದ 113 ರನ್‌ಗಳ ಬಲದಿಂದ ಭಾರತ ತಂಡವು ಎರಡನೇ ಇನಿಂಗ್ಸ್‌ನಲ್ಲಿ 61.4 ಓವರ್‌ಗಳಲ್ಲಿ 2 ವಿಕೆಟ್‌ಗಳಿಗೆ 258 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಶತಕ ಸಾಧನೆ ಮಾಡಿದ ಚೇತೇಶ್ವರ್ ಪೂಜಾರ (ಎಡ) ಹಾಗೂ ಶುಭಮನ್ ಗಿಲ್ ರನ್ ಗಳಿಸಿದ ಕ್ಷಣ –ಎಎಫ್‌ಪಿ ಚಿತ್ರ

ಗುರಿ ಬೆನ್ನಟ್ಟಿದ ಬಾಂಗ್ಲಾದೇಶ ಮೂರನೇ ದಿನದಾಟದ ಅಂತ್ಯಕ್ಕೆ 12 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 42 ರನ್ ಗಳಿಸಿದೆ. ನಜ್ಮುಲ್ ಹಸನ್ ಶಾಂತೊ (ಬ್ಯಾಟಿಂಗ್ 25) ಹಾಗೂ ಝಾಕೀರ್ ಹಸನ್ (ಬ್ಯಾಟಿಂಗ್ 17) ಕ್ರೀಸ್‌ನಲ್ಲಿದ್ದಾರೆ.

ಎರಡನೇ ದಿನವಾದ ಗುರುವಾರ ಬಾಂಗ್ಲಾ ತಂಡವು 44 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 133 ರನ್ ಗಳಿಸಿತ್ತು. ಕುಲದೀಪ್ ನಾಲ್ಕು ವಿಕೆಟ್ ಗಳಿಸಿದ್ದರು. ಮೂರನೇ ದಿನ ಬೆಳಿಗ್ಗೆ ಈ ಮೊತ್ತಕ್ಕೆ 17 ರನ್‌ಗಳು ಸೇರುವಷ್ಟರಲ್ಲಿ ಎರಡು ವಿಕೆಟ್‌ಗಳು ಪತನವಾದವು. ಮತ್ತೊಂದು ವಿಕೆಟ್ ಗಳಿಸಿದ ಕುಲದೀಪ್ ಐದರ ಗೊಂಚಲು ಪೂರೈಸಿದರು. ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆ.

254 ರನ್‌ಗಳ ಮುನ್ನಡೆ ಸಾಧಿಸಿದ ಭಾರತಕ್ಕೆ ಎದುರಾಳಿ ತಂಡದ ಮೇಲೆ ಫಾಲೋ ಆನ್ ಹೇರುವ ಅವಕಾಶ ಇತ್ತು. ಆದರೆ ನಾಯಕ ರಾಹುಲ್ ಎರಡನೇ ಇನಿಂಗ್ಸ್ ಬ್ಯಾಟಿಂಗ್ ಮಾಡಲು ಒಲವು ತೋರಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ: 133.5 ಓವರ್‌ಗಳಲ್ಲಿ 404. ಬಾಂಗ್ಲಾದೇಶ: 55.5 ಓವರ್‌ಗಳಲ್ಲಿ 150. ಎರಡನೇ ಇನಿಂಗ್ಸ್:ಭಾರತ: 61.4 ಓವರ್‌ಗಳಲ್ಲಿ 2ಕ್ಕೆ258 ಡಿಕ್ಲೇರ್ಡ್ (ರಾಹುಲ್ 23, ಶುಭಮನ್ ಗಿಲ್ 110, ಚೇತೇಶ್ವರ್ ಪೂಜಾರ ಔಟಾಗದೆ 102, ವಿರಾಟ್ ಕೊಹ್ಲಿ ಔಟಾಗದೆ 19, ಖಾಲೀದ್ ಅಹಮದ್ 51ಕ್ಕೆ1, ಮೆಹದಿ ಹಸನ್ ಮಿರಾಜ್ 82ಕ್ಕೆ1) ಬಾಂಗ್ಲಾದೇಶ: 12 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 42 (ನಜ್ಮುಲ್ ಬ್ಯಾಟಿಂಗ್ 25, ಝಾಕೀರ್ ಹಸನ್ ಬ್ಯಾಟಿಂಗ್ 17)

ದಕ್ಷಿಣ ವಲಯ ಹಾಕಿ: ಬೆಂಗಳೂರು ನಗರ ವಿವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯ ತಂಡವು ದಕ್ಷಿಣ ವಲಯ ಅಂತರ ವಿವಿ ಪುರುಷರ ಹಾಕಿ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿತು.

ಶಾಂತಿನಗರದ ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ ಹಾಕಿ ಅರೆನಾದಲ್ಲಿ ಶುಕ್ರವಾರ ನಡೆದ ಚಾಂಪಿಯನ್‌ಷಿಪ್‌ನಲ್ಲಿ ಅಗ್ರಸ್ಥಾನ ಗಳಿಸುವುದೊಂದಿಗೆ ಚಾಂಪಿಯನ್ ಆಗಿ ಹೊರಹೊಮ್ಮಿತು.

ಸೆಮಿಫೈನಲ್ ಲೀಗ್‌ನ ಮೂರನೇ ಪಂದ್ಯದಲ್ಲಿ ಬೆಂಗಳೂರು ನಗರ 8–0ಯಿಂದ ಎಸ್‌ಆರ್‌ಎಂ ವಿವಿ ಎದುರು ಗೆದ್ದಿತು. ವಿಜೇತ ತಂಡದ ಪರ ಲಿಖಿತ್ ಬಿ.ಎಂ. (6, 29ನೇ ನಿ.), ಪ್ರಜ್ವಲ್ ಬಿಜವಾಡ (9, 25ನೇ ನಿ.) ಎರಡು ಗೋಲು ದಾಖಲಿಸಿದರು. ಮಜಿ ಗಣೇಶ್ (1ನೇ ನಿ.), ಪ್ರಣಾಮ್ ಗೌಡ (4ನೇ ನಿ.), ಚಿರಣ್ ಮೇದಪ್ಪ (21ನೇ ನಿ.) ಮತ್ತು ರಾಹುಲ್ (42ನೇ ನಿ.) ಗೋಲು ಹೊಡೆದರು.

ಎಂಎಸ್ ವಿವಿ ಎರಡನೇ ಸ್ಥಾನ ಗಳಿಸಿತು. ಬೆಂಗಳೂರು ವಿಶ್ವವಿದ್ಯಾಲಯ ಮತ್ತು ಎಸ್‌ಆರ್‌ಎಂ ವಿಶ್ವವಿದ್ಯಾಲಯ ತಂಡಗಳು ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ತಮ್ಮದಾಗಿಸಿಕೊಂಡವು.

ಬೋಲ್ಟ್ ಹಿಂದಿಕ್ಕಿದ ನೀರಜ್

ಪ್ಯಾರಿಸ್ (ಎಎಫ್‌ಪಿ): ಈ ವರ್ಷ ಜಾಗತಿಕ ಮಾಧ್ಯಮಗಳಲ್ಲಿ ಅತಿಹೆಚ್ಚು ಲೇಖನಗಳು ಪ್ರಕಟಗೊಂಡ ಅಥ್ಲೀಟ್‌ಗಳ ಪಟ್ಟಿಯಲ್ಲಿ ಭಾರತದ ಜಾವೆಲಿನ್ ಥ್ರೋ ಸ್ಪರ್ಧಿ ನೀರಜ್ ಚೋಪ್ರಾ ಅವರು ಅಗ್ರಸ್ಥಾನ ಪಡೆದುಕೊಂಡಿದ್ದಾರೆ.

ಈ ಪಟ್ಟಿಯಲ್ಲಿ ಕಳೆದ ಹಲವು ವರ್ಷಗಳಿಂದ ಅಗ್ರಸ್ಥಾನದಲ್ಲಿದ್ದ ಜಮೈಕದ ಸ್ಪ್ರಿಂಟರ್ ಉಸೇನ್ ಬೋಲ್ಟ್ ಅವರನ್ನು ಹಿಂದಿಕ್ಕಿದ್ದಾರೆ. ಜಾಗತಿಕ ಮಾಧ್ಯಮಗಳಲ್ಲಿ ಯಾವ ಟ್ರ್ಯಾಕ್ ಮತ್ತು ಫೀಲ್ಡ್ ಅಥ್ಲೀಟ್ ಬಗ್ಗೆ ಅತಿಹೆಚ್ಚು ಲೇಖನಗಳು ಪ್ರಕಟವಾಗಿವೆ ಎಂಬುದನ್ನು ಆಧರಿಸಿ ವಿಶ್ವ ಅಥ್ಲೆಟಿಕ್ ಫೆಡರೇಷನ್ ಪ್ರತಿವರ್ಷವೂ ಪಟ್ಟಿ ಬಿಡುಗಡೆ ಮಾಡುತ್ತದೆ.

ಮಾಧ್ಯಮ ವಿಶ್ಲೇಷಕ ಕಂಪೆನಿ ಯುನಿಸೆಪ್ಟಾ ಪ್ರಕಾರ, ಚೋಪ್ರಾ ಬಗ್ಗೆ 2022 ರಲ್ಲಿ ಒಟ್ಟು 812 ಲೇಖನಗಳು ಪ್ರಕಟವಾಗಿವೆ. ಬೋಲ್ಟ್ ಕುರಿತು ಪ್ರಕಟವಾಗಿರುವ ಲೇಖನಗಳು 574 ಮಾತ್ರ. 2017 ರಲ್ಲಿ ನಿವೃತ್ತಿಯಾಗಿದ್ದರೂ ಬೋಲ್ಟ್ ಹಲವು ವರ್ಷಗಳಿಂದ ಪಟ್ಟಿಯಲ್ಲಿ ಅಗ್ರಸ್ಥಾನ ಕಾಯ್ದುಕೊಂಡಿದ್ದರು. ಜಮೈಕದ ಓಟಗಾರ್ತಿಯರಾದ ಎಲೈನ್ ಥಾಂಪ್ಸನ್ ಹೆರಾ (751 ಲೇಖನ), ಶೆಲ್ಲಿ ಆ್ಯನ್ ಫ್ರೇಸರ್ ಪ್ರೈಸ್ (698) ಮತ್ತು ಶೆರಿಕಾ ಜಾಕ್ಸನ್ (679) ಅವರು ಚೋಪ್ರಾ ಬಳಿಕದ ಸ್ಥಾನಗಳಲ್ಲಿದ್ದಾರೆ.

ಅಂಧರ ಟಿ20 ವಿಶ್ವಕಪ್ ಕ್ರಿಕೆಟ್ ಫೈನಲ್ ಇಂದು

ಹ್ಯಾಟ್ರಿಕ್ ಪ್ರಶಸ್ತಿ ಮೇಲೆ ಭಾರತ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೂರನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಭಾರತ ತಂಡದವರು ಅಂಧರ ಟಿ20 ವಿಶ್ವಕಪ್ ಟೂರ್ನಿಯ ಫೈನಲ್‌ನಲ್ಲಿ ಶನಿವಾರ ಬಾಂಗ್ಲಾದೇಶದ ಸವಾಲು ಎದುರಿಸಲಿದ್ದಾರೆ.

ಎಂ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಉಭಯ ತಂಡಗಳು ಪ್ರಶಸ್ತಿಗಾಗಿ ಸೆಣಸಲಿವೆ.

ಈ ಹಿಂದೆ ನಡೆದ ಎರಡೂ ಆವೃತ್ತಿಗಳಲ್ಲಿ ಭಾರತ ತಂಡ ಪ್ರಶಸ್ತಿ ತನ್ನದಾಗಿಸಿಕೊಂಡಿತ್ತು. 2012ರ ಟೂರ್ನಿಯ ಫೈನಲ್‌ನಲ್ಲಿ ಪಾಕಿಸ್ತಾನ ತಂಡವನ್ನು 29 ರನ್‌ಗಳಿಂದ ಮಣಿಸಿತ್ತು. 2017ರಲ್ಲಿ ನಡೆದ ಎರಡನೇ ಆವೃತ್ತಿಯ ಪ್ರಶಸ್ತಿ ಸುತ್ತಿನ ಸೆಣಸಾಟದಲ್ಲಿ ಪಾಕಿಸ್ತಾನದ ವಿರುದ್ಧವೇ ಒಂಬತ್ತು ವಿಕೆಟ್‌ಗಳಿಂದ ಗೆಲುವು ಸಾಧಿಸಿತ್ತು. ಇವೆರಡೂ ಪಂದ್ಯಗಳು ಬೆಂಗಳೂರಿನಲ್ಲಿ ನಡೆದಿದ್ದವು.

ಈ ಟೂರ್ನಿಯ ಸೆಮಿಫೈನಲ್‌ನಲ್ಲಿ ಭಾರತ ತಂಡವು 207 ರನ್‌ಗಳಿಂದ ದಕ್ಷಿಣ ಆಫ್ರಿಕಾ ತಂಡಕ್ಕೆ ಸೋಲುಣಿಸಿತ್ತು. ನಾಲ್ಕರ ಘಟ್ಟದ ಮತ್ತೊಂದು ಪಂದ್ಯದಲ್ಲಿ ಬಾಂಗ್ಲಾ ತಂಡವು 64 ರನ್‌ಗಳಿಂದ ಶ್ರೀಲಂಕಾ ತಂಡದ ಸವಾಲು ಮೀರಿತ್ತು.

ಭಾರತ ತಂಡದ ನಾಯಕ ಅಜಯ್‌ಕುಮಾರ್ ರೆಡ್ಡಿ, ಕನ್ನಡಿಗರಾದ ಸುನಿಲ್ ರಮೇಶ್, ಪ್ರಕಾಶ್ ಜಯರಾಮಯ್ಯ ಉತ್ತಮ ಲಯದಲ್ಲಿದ್ದು ಫೈನಲ್‌ನಲ್ಲಿ ಮಿಂಚುವ ನಿರೀಕ್ಷೆಯಿದೆ. ಇದೇ ಮೊದಲ ಬಾರಿ ಫೈನಲ್ ಪ್ರವೇಶಿಸಿರುವ ಬಾಂಗ್ಲಾ ಕೂಡ ಗೆಲುವಿನ ನಿರೀಕ್ಷೆಯಲ್ಲಿದೆ. ಸಲ್ಮಾನ್ ಮತ್ತು ಮೊಹಮ್ಮದ್ ಆಶಿಕುರ್ ರೆಹಮಾನ್ ಆ ತಂಡದ ಪ್ರಮುಖ ಬ್ಯಾಟರ್‌ಗಳಾಗಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 10.30
ನೇರ ಪ್ರಸಾರ: ಡಿಡಿ ಸ್ಪೋರ್ಟ್ಸ್

ಟಿ20: 15 ರನ್‌ಗಳಿಗೆ ಆಲೌಟ್!

ಮೆಲ್ಬರ್ನ್ (ಪಿಟಿಐ): ಆಸ್ಟ್ರೇಲಿಯಾದ ಬಿಗ್ ಬ್ಯಾಷ್ ಟಿ20 ಕ್ರಿಕೆಟ್ ಲೀಗ್‌ನಲ್ಲಿ ಸಿಡ್ನಿ ಥಂಡರ್ಸ್ ತಂಡ ಅಡಿಲೇಡ್ ಸ್ಟ್ರೈಕರ್ಸ್ ವಿರುದ್ಧ 15 ರನ್‌ಗಳಿಗೆ ಆಲೌಟಾಯಿತು. ಟಿ20 ಕ್ರಿಕೆಟ್‌ನಲ್ಲಿ ದಾಖಲಾದ ಕನಿಷ್ಠ ಸ್ಕೋರ್ ಇದು.

ಶುಕ್ರವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಸ್ಟ್ರೈಕರ್ಸ್ 139 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಥಂಡರ್ಸ್ 5.5 ಓವರ್‌ಗಳಲ್ಲಿ 15 ರನ್‌ಗಳಿಗೆ ಆಲೌಟಾಗಿ, 124 ರನ್‌ಗಳಿಂದ ಸೋತಿತು. ಹೆನ್ರಿ ಥಾರ್ಟನ್ (3ಕ್ಕೆ 5) ಮತ್ತು ವೆಸ್ ಅಗರ್ (6ಕ್ಕೆ 4) ಅವರ ದಾಳಿಗೆ ಎದುರಾಳಿ ತಂಡ ನಲುಗಿತು.

2019 ರಲ್ಲಿ ನಡೆದ ಕಾಂಟಿನೆಂಟಲ್ ಕಪ್ ಪಂದ್ಯದಲ್ಲಿ ಟರ್ಕಿ ತಂಡ, ಜೆಕ್ ರಿಪಬ್ಲಿಕ್ ಎದುರು 21 ರನ್‌ಗಳಿಗೆ ಆಲೌಟಾಗಿದ್ದು, ಟಿ20 ಕ್ರಿಕೆಟ್‌ನಲ್ಲಿ ಈ ಹಿಂದಿನ ಕನಿಷ್ಠ ಮೊತ್ತ ಆಗಿತ್ತು.

ಕಬಡ್ಡಿ: ಜೈಪುರ –ಪುಣೇರಿ ಹಣಾಹಣಿ

ಮುಂಬೈ: ಎರಡನೇ ಪ್ರಶಸ್ತಿ ನಿರೀಕ್ಷೆಯಲ್ಲಿರುವ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವು ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಒಂಬತ್ತನೇ ಆವೃತ್ತಿಯ ಫೈನಲ್ ಪಂದ್ಯದಲ್ಲಿ ಶನಿವಾರ ಪುಣೇರಿ ಪಲ್ಟನ್ ತಂಡವನ್ನು ಎದುರಿಸಲಿದೆ.

ಇಲ್ಲಿಯ ಸರ್ದಾರ್ ವಲ್ಲಭಭಾಯ್ ಪಟೇಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯದಲ್ಲಿ ಮೊದಲ ಬಾರಿ ಟ್ರೋಫಿ ಗೆಲ್ಲುವ ನಿರೀಕ್ಷೆಯೊಂದಿಗೆ ಪುಣೇರಿ ಕಣಕ್ಕಿಳಿಯಲಿದೆ. ಇದೇ ಮೊದಲ ಬಾರಿ ತಂಡವು ಫೈನಲ್ ಪ್ರವೇಶಿಸಿದೆ.

ರೇಡಿಂಗ್‌ನಲ್ಲಿ ಅದ್ಭುತ ಲಯದಲ್ಲಿರುವ ಅರ್ಜುನ್ ದೇಸ್ವಾಲ್ ಅವರು ಜೈಪುರ ತಂಡದ ಶಕ್ತಿಯಾಗಿದ್ದಾರೆ. ಪುಣೇರಿಗೆ ಆಕಾಶ್ ಶಿಂಧೆ, ಮೋಹಿತ್ ಗೋಯತ್ ಬಲ ತುಂಬಲಿದ್ದಾರೆ.

ಸೆಮಿ ಫೈನಲ್‌ನಲ್ಲಿ ಪ್ಯಾಂಥರ್ಸ್ ತಂಡ ಬೆಂಗಳೂರು ಬುಲ್ಸ್ ತಂಡವನ್ನು ಮಣಿಸಿತ್ತು.

ಪಂದ್ಯ ಆರಂಭ: ರಾತ್ರಿ 7.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಸೈಕ್ಲಿಂಗ್: ಸಂಪತ್‌ಗೆ ನಾಲ್ಕು ಪದಕ

ಸಂಪತ್

ಬೆಂಗಳೂರು: ಕರ್ನಾಟಕದ ಸಂಪತ್ ಪಾಸ್ಮೇಲ್ ಅವರು ಅಸ್ಸಾಂನಲ್ಲಿ ನಡೆದ ರಾಷ್ಟ್ರೀಯ ಟ್ರ್ಯಾಕ್ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಪದಕಗಳನ್ನು ಗೆದ್ದುಕೊಂಡಿದ್ದಾರೆ. ಗುರುವಾರ ಮುಕ್ತಾಯವಾದ ಕೂಟದಲ್ಲಿ ರಾಜ್ಯದ ಸೈಕ್ಲಿಸ್ಟ್‌ಗಳು ಒಟ್ಟು 1 ಚಿನ್ನ, ಎರಡು ಬೆಳ್ಳಿ ಮತ್ತು ನಾಲ್ಕು ಕಂಚಿನ ಪದಕಗಳನ್ನು ತಮ್ಮದಾಗಿಸಿಕೊಂಡರು.

18 ವರ್ಷದೊಳಗಿನ ಬಾಲಕರ ವಿಭಾಗದ 200 ಮೀ. ಸ್ಪ್ರಿಂಟ್ ರೇಸ್‌ನಲ್ಲಿ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲ್ಲೂಕಿನ ಅಮರಾವತಿಯ ಸಂಪತ್ ಕಂಚು, 1 ಕಿಲೊ ಮೀಟರ್ ವೈಯಕ್ತಿಕ ಪರ್ಸ್ಯೂಟ್ ರೇಸ್‌ನಲ್ಲಿ ಬೆಳ್ಳಿ ಮತ್ತು ಕೆರಿನ್ ವಿಭಾಗದಲ್ಲಿ ಚಿನ್ನದ ಪದಕ ಜಯಿಸಿದರು.

ಮಹಿಳಾ ಹಾಕಿ: ಫೈನಲ್‌ಗೆ ಭಾರತ

ವೆಲೆನ್ಸಿಯಾ, ಸ್ಪೇನ್: ಭಾರತ ಮಹಿಳಾ ಹಾಕಿ ತಂಡದವರು ಶೂಟೌಟ್‌ನಲ್ಲಿ 2–1ರಿಂದ ಐರ್ಲೆಂಡ್ ತಂಡವನ್ನು ಸೋಲಿಸಿ ನೇಷನ್ಸ್ ಕಪ್ ಟೂರ್ನಿಯ ಫೈನಲ್ ಪ್ರವೇಶಿಸಿದರು.

ಇಲ್ಲಿ ನಡೆದ ಪಂದ್ಯದ ನಿಗದಿತ ಅವಧಿಯಲ್ಲಿ ಉಭಯ ತಂಡಗಳು 1–1ರಿಂದ ಸಮಬಲ ಸಾಧಿಸಿದ್ದವು. ಹೀಗಾಗಿ ಶೂಟೌಟ್ ಮೊರೆ ಹೋಗಲಾಗಿತ್ತು. ಭಾರತ ತಂಡಕ್ಕಾಗಿ ಉದಿತಾ (45ನೇ ನಿ.) ಮತ್ತು ಐರ್ಲೆಂಡ್ ತಂಡದ ಪರ ನವೊಮಿ ಕ್ಯಾರೊಲ್ (13ನೇ ನಿ.) ಗೋಲು ಗಳಿಸಿದ್ದರು.

ಭಾರತವು ಫೈನಲ್‌ನಲ್ಲಿ ಆತಿಥೇಯ ಸ್ಪೇನ್ ತಂಡವನ್ನು ಎದುರಿಸಲಿದೆ.

ಸ್ಯಾಫ್: ಭಾರತಕ್ಕೆ ಭೂತಾನ್ ಸವಾಲು

ನವದೆಹಲಿ (ಪಿಟಿಐ): ಭಾರತ ಮಹಿಳಾ ತಂಡದವರು ಸ್ಯಾಫ್ 20 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯಲ್ಲಿ ಭೂತಾನ್ ವಿರುದ್ಧದ ಪಂದ್ಯದೊಂದಿಗೆ ಪ್ರಶಸ್ತಿಯೆಡೆಗಿನ ಅಭಿಯಾನ ಆರಂಭಿಸಲಿದ್ದಾರೆ.

ಸ್ಯಾಫ್ ಟೂರ್ನಿ ಢಾಕಾದಲ್ಲಿ ಮುಂದಿನ ವರ್ಷ ಫೆ.3 ರಿಂದ 9ರ ವರೆಗೆ ನಡೆಯಲಿದೆ. ಭಾರತ– ಭೂತಾನ್ ಪಂದ್ಯ ಫೆ.3 ರಂದು ನಡೆಯಲಿದೆ.

ಭಾರತ ತಂಡ ಆ ಬಳಿಕ ಫೆ.5 ರಂದು ಬಾಂಗ್ಲಾದೇಶ ಹಾಗೂ ಫೆ.7 ರಂದು ನೇಪಾಳ ವಿರುದ್ಧ ಪೈಪೋಟಿ ನಡೆಸಲಿದೆ. ಫೆ.9 ರಂದು ಫೈನಲ್ ನಡೆಯಲಿದೆ. ರೌಂಡ್ ರಾಬಿನ್ ಲೀಗ್ ಬಳಿಕ ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಪ್ರಶಸ್ತಿಗೆ ಪೈಪೋಟಿ ನಡೆಸಲಿವೆ.

ರಾಗಿ ಬಳಕೆಯಿಂದ
ಸದೃಢ ಆರೋಗ್ಯ

ಶನಿವಾರ, 17 ಡಿಸೆಂಬರ್ 2022
ಪ್ರಜಾವಾಣಿ
ಪ್ರಜಾ ಪ್ಲಸ್+
ಮನರಂಜನೆ | ಜಾಹೀರಾತು ಪ್ರೋತ್ಸಾಹ | ಉದ್ಯಮ ಅಭಿವೃದ್ಧಿ

ಫ್ಯಾಷನ್

ಗ್ರ್ಯಾಂಡ್ ಲುಕ್‌ನ ಆರ್ಟಿಫಿಶಿಯಲ್ ಆಭರಣ

ನೆಕ್ಲೇಸ್

ಹಿಂದೆಲ್ಲ ಸಾಲಂಕೃತ ವಧು ಎಂದರೆ ಚಿನ್ನದ ಒಡವೆಗಳಿಂದ ಭೂಷಿತಳಾದವಳೆಂದು ಅರ್ಥೈಸಲಾಗುತ್ತಿತ್ತು. ಈಗ ಬಡವ, ಬಲ್ಲಿದ ಎಂಬ ಭೇದವಿಲ್ಲದೇ ಚಿನ್ನವನ್ನು ಹೋಲುವ ಆರ್ಟಿಫಿಶಿಯಲ್ ಆಭರಣಗಳನ್ನೇ ಧರಿಸಿ, ಮದುವಣಗಿತ್ತಿಯರು ಝುಗಮಗಿಸುತ್ತಾರೆ.

ಜ್ಯೋತಿ ಸಂತೋಷ, ಜಿತೂರಿ

ಇತ್ತೀಚಿನ ದಿನಗಳಲ್ಲಿ ಚಿನ್ನದ ಬೆಲೆ ಗಗನಕ್ಕೇರಿದೆ. ಎಲ್ಲ ವರ್ಗದವರಿಗೂ ಚಿನ್ನಾಭರಣವೆಂಬುದು ತುಟ್ಟಿಯಾಗಿದೆ. ಚಿನ್ನಾಭರಣವನ್ನೇ ಹೋಲುವ ಕೃತಕ ಆಭರಣಗಳು ಈಗೀಗ ಹೆಚ್ಚು ಟ್ರೆಂಡ್‌ನಲ್ಲಿವೆ. ಅಸಲಿ –ನಕಲಿಗಳ ನಡುವೆ ವ್ಯತ್ಯಾಸ ತಿಳಿಯದಷ್ಟು ನಾಜೂಕಾಗಿ ಈ ಆಭರಣಗಳ ಕುಸುರಿ ಕೆಲಸ ಆಕರ್ಷಕವಾಗಿರುತ್ತದೆ.

ಕೈಗೆಟುಕುವ ಬೆಲೆಯಲ್ಲಿ ಲಭ್ಯವಿರುವ ಈ ಆರ್ಟಿಫಿಶಿಯಲ್ ಆಭರಣಗಳು ಅವರವರ ಬಜೆಟ್‌ಗೆ ಅನುಗುಣವಾಗಿ ವಿವಿಧ ವಿನೂತನ ವಿನ್ಯಾಸಗಳಲ್ಲಿ ಲಭ್ಯವಿದೆ. ಅದ್ದೂರಿ ಮದುವೆ, ಮುಂಜಿ, ಸೀಮಂತ ಯಾವುದೇ ಕಾರ್ಯಕ್ರಮಗಳಿಗೂ ಸೂಕ್ತವೆನಿಸುತ್ತದೆ.

ಮ್ಯಾಟ್ ಫಿನಿಶ್, ಸ್ಟೋನ್, ಆ್ಯಂಟಿಕ್, ಬ್ಲಾಕ್ ಮೆಟಲ್‌ನಲ್ಲಿಯೂ ಲಭ್ಯವಿದೆ. ಆರ್ಟಿಫಿಶಿಯಲ್ ಆಭರಣಗಳಲ್ಲಿ ಶಾರ್ಟ್ ನೆಕ್ಲೇಸ್, ಲಾಂಗ್ ಚೈನ್, ಕಿವಿಯೋಲೆ, ಬಳೆ, ಚೋಕರ್, ರಾಣಿಹಾರ, ಸ್ಟೆಪ್ ಚೈನ್, ಹಿಪ್ ಬೆಲ್ಟ್, ಕಾಲ್ಗೆಜ್ಜೆ ಲಭ್ಯವಿದೆ.

ಆರ್ಟಿಫಿಶಿಯಲ್ ಆಭರಣ ಬಳಕೆ ಹೇಗೆ?

- ಯಾವುದೇ ಅದ್ದೂರಿ ಸೀರೆಗೆ ದೊಡ್ಡ ನೆಕ್ಲೇಸ್ ಅಥವಾ ಚೋಕರ್ ಆಭರಣ ಒಪ್ಪುತ್ತದೆ.
- ಆಭರಣದ ಬಣ್ಣ, ಲುಕ್ ಸ್ಟೈಲ್ ಇತ್ಯಾದಿಗಳ ಕಡೆಗೆ ಗಮನ ಕೊಡಿ. ಅದರ ಕುಸುರಿ ಮುಕ್ಕಾಗದಂತೆ ಜಾಗ್ರತೆ ವಹಿಸಿ.
- ಸಂದರ್ಭಕ್ಕೆ ಅನುಗುಣವಾಗಿ ನೆಕ್‌ಪೀಸ್ ಆಯ್ಕೆ ಮಾಡಿಕೊಳ್ಳಿ. ಬಹಳ ಸರಳ ಕಾರ್ಯಕ್ರಮಗಳಿಗೆ ಅದ್ದೂರಿ ಎನಿಸುವ ಆರ್ಟಿಫಿಶಿಯಲ್ ಆಭರಣ ಬೇಡ.

ದೀರ್ಘ ಬಾಳಿಕೆಗೆ ಸಲಹೆ

- ನಾಜೂಕಿನಿಂದ ಬಳಸಿ. ಬಿಸಿ ನೀರಿನಲ್ಲಿ ತೊಳೆಯಬೇಡಿ. ಬೇಗನೆ ಹೊಳಪು ಕಳೆದುಕೊಳ್ಳುವ ಸಾಧ್ಯತೆ ಹೆಚ್ಚು.
- ಸೋಪ್ ಹಾಗೂ ಪರ್ಫ್ಯೂಮ್‌ಗಳಿಂದ ದೂರವಿರಿ.
- ಬೇರೆ ಆಭರಣದೊಂದಿಗೆ ಸೇರಿಸದೆ, ಪ್ರತ್ಯೇಕ ಬಾಕ್ಸ್‌ನಲ್ಲಿ ಇರಿಸಿ. ಜಿಪ್‌ಲಾಕ್ ಬ್ಯಾಗ್ ಅಥವಾ ಪೌಚ್‌ಗಳನ್ನು ಬಳಸಿ ಈ ಆಭರಣಗಳನ್ನು ಸ್ವಚ್ಛಗೊಳಿಸಲು ಮೃದು ಹತ್ತಿ ಬಳಸಿ. ಒದ್ದೆಯಾದರೆ ಆಭರಣಗಳನ್ನು ಒಣಗಿಸಿ.

ರಾಗಿ ಉತ್ಪನ್ನಗಳ ಮಹತ್ವ ಅರಿಯಿರಿ..

ಕಾಳಜಿ

ಡಾ. ಭಾವನಾ ಶರ್ಮಾ

ರಾಗಿ.. ಪೌಷ್ಟಿಕ ಆಹಾರದ ಅಧಿಪತಿ. ನಮ್ಮ ಸಾಂಪ್ರದಾಯಿಕ ಆಹಾರದ ಪಟ್ಟಿಯಲ್ಲಿ ಪ್ರಧಾನ ಸ್ಥಾನದಲ್ಲಿದೆ. ಗಾತ್ರದಲ್ಲಿ ಕಿರಿದಾದರೂ ಗುಣದಲ್ಲಿ ಹಿರಿದಾದ ಈ ಧಾನ್ಯದಲ್ಲಿ ಅಧಿಕ ಪೋಷಕಾಂಶಗಳಿವೆ. ನಾರಿನಂಶ, ಪ್ರೋಟಿನ್, ಕಬ್ಬಿಣ ಮತ್ತು ಕ್ಯಾಲ್ಸಿಯಂ ಅಂಶಗಳಿವೆ. ಅಷ್ಟೇ ಅಲ್ಲದೆ, ವಿಟಮಿನ್ ಬಿ, ವಿಟಮಿನ್ ಡಿ, ಮೆಗ್ನೀಶಿಯಂ, ಬಿ ಜೀವಸತ್ವಗಳಿವೆ. ದೇಶದಾದ್ಯಂತ ವೈವಿಧ್ಯಮಯ ರಾಗಿ ತಳಿಗಳಿವೆ. ಒಂದೊಂದು ಪ್ರದೇಶದಲ್ಲಿ ಒಂದು ವಿಶಿಷ್ಟ ತಳಿಗಳು ಕಾಣಸಿಗುತ್ತವೆ. ಅವುಗಳಿಂದ ವಿಭಿನ್ನ ಖಾದ್ಯ ತಯಾರಿಸಬಹುದು.

ಮಕ್ಕಳಿಗೆ ರಾಗಿ ಅಭ್ಯಾಸ ಮಾಡಿಸಿ: ರಾಗಿಯಿಂದ ಮಾಡಿದ ಖಾದ್ಯಗಳನ್ನು ಸೇವಿಸುವ ಅಭ್ಯಾಸ ಇತ್ತೀಚೆಗೆ ಕಡಿಮೆಯಾಗುತ್ತಿದೆ. ಅದರಲ್ಲೂ ರಾಗಿಯಿಂದ ಮುದ್ದೆ, ಮಾಲ್ಟ್‌ನಂತಹ ಖಾದ್ಯಗಳನ್ನಷ್ಟೇ ತಯಾರಿಸಲಾಗುತ್ತಿದೆ.

ಹೀಗಾಗಿ ಮಕ್ಕಳು ರಾಗಿ ಉತ್ಪನ್ನಗಳನ್ನು ತಿನ್ನಲು ಆಸಕ್ತಿ ತೋರದಿರಬಹುದು ಆದರೆ, ರಾಗಿ ಸೇವನೆಯು ಮಕ್ಕಳ ಆರೋಗ್ಯದ ಬೆಳವಣಿಗೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಇದು ಮಕ್ಕಳಿಗೆ ಸಾಕಷ್ಟು ಪೌಷ್ಟಿಕಾಂಶವನ್ನು ಒದಗಿಸುವ ಅತ್ಯುತ್ತಮ ಧಾನ್ಯ. ಸುಲಭವಾಗಿ ಜೀರ್ಣವಾಗುವ, ಅಲರ್ಜಿರಹಿತ ಆಹಾರವಾಗಿದೆ. ಮಕ್ಕಳಲ್ಲಿ ರಾಗಿ ಸೇವನೆ ಬಗ್ಗೆ ಆಸಕ್ತಿ ಉಂಟು ಮಾಡಲು, ರಾಗಿಯಲ್ಲಿ ಸಿದ್ಧಪಡಿಸಬಹುದಾದ ವಿವಿಧ ಬಗೆಯ ಆಹಾರ ಪದಾರ್ಥಗಳಿವೆ.

ರಾಗಿ ಮಾಲ್ಟ್: ಆರು ತಿಂಗಳು ತುಂಬಿದ ಮಗುವಿಗೆ ರಾಗಿಯಿಂದ ತಯಾರಿಸುವ ಮಾಲ್ಟ್ ನೀಡಲು ವೈದ್ಯರು ಸಲಹೆ ನೀಡುತ್ತಾರೆ. ಈಗಿನ ಕಾಲದವರು ಮಾರುಕಟ್ಟೆಯಲ್ಲಿ ಲಭ್ಯವಿರುವ ಇನ್‌ಸ್ಟಂಟ್ ಫುಡ್‌ಗಳಿಂದ ಮಾಡಿದ ಮಾಲ್ಟ್‌ಗಳನ್ನು ಮಕ್ಕಳಿಗೆ ನೀಡುತ್ತಾರೆ. ಇದರ ಬದಲಿಗೆ ರಾಗಿ ಮಾಲ್ಟ್ ಮಾಡಿ ಮಗುವಿಗೆ ತಿನ್ನಿಸುವುದರಿಂದ ಮಗುವಿನ ಆರೋಗ್ಯ ಹೆಚ್ಚಲಿದೆ. ಈ ಮಾಲ್ಟ್‌ನಿಂದ ಸ್ನಾಯುಗಳ ಬೆಳವಣಿಗೆ, ರೋಗನಿರೋಧಕ ಶಕ್ತಿ ಹೆಚ್ಚುತ್ತದೆ. ಮೂಳೆ ಬಲಗೊಳ್ಳುತ್ತದೆ ಮತ್ತು ಅಗತ್ಯ ಪೋಷಕಾಂಶ ದೊರೆಯಲಿದೆ.

ರಾಗಿ ಮಾಲ್ಟ್ ತಯಾರಿಕೆ :

ನುಣ್ಣಗೆ ಸೋಸಿದ ರಾಗಿ ಹಿಟ್ಟನ್ನು ತೆಗೆದುಕೊಳ್ಳಿ, ಸಣ್ಣ ಕಪ್‌ನಲ್ಲಿ ರಾಗಿ ಹಿಟ್ಟು ನೀರನ್ನು ಹಾಕಿ ಯಾವುದೇ ಗಂಟು ಕಟ್ಟದಂತೆ ಉಂಡೆಗಳಾಗದಂತೆ ಮಿಶ್ರ ಮಾಡಿಟ್ಟರಿ. ಪಾತ್ರೆಗೆ ನೀರನ್ನು ಹಾಕಿ, ನೀರು ಕುದಿಯಲು ಬಂದ ನಂತರ ಕರಗಿದ ರಾಗಿ ಹಿಟ್ಟಿನಲ್ಲಿ ಸೇರಿಸಿ, ಈ ಮಿಶ್ರಣವು 5 ನಿಮಿಷಗಳ ನಂತರ ಗಟ್ಟಿಯಾಗುತ್ತಾ ಹೋಗುತ್ತದೆ. ಆ ವೇಳೆ ಬೆಲ್ಲ ಮತ್ತು ಉಪ್ಪನ್ನು ಸೇರಿಸಿ ಚೆನ್ನಾಗಿ ಕುದಿಸಿ. ನಂತರ ಹಾಲು, ಏಲಕ್ಕಿ ಪುಡಿಯನ್ನು ಸೇರಿಸಬೇಕು. ಕನಿಷ್ಠ 5 ರಿಂದ 10 ನಿಮಿಷಗಳ ಕಾಲ ಕುದಿಸಬೇಕು. ಮಕ್ಕಳಿಗೆ ಸ್ವಲ್ಪ ಗಟ್ಟಿಯಾದ ಮಾಲ್ಟ್ ತಯಾರಿಸಬಹುದು. ವಯಸ್ಕರಿಗೆ ಅಥವಾ ಹಿರಿಯರಿಗೆ ತೆಳ್ಳಗಿನ ಮಾಲ್ಟ್ ಸಿದ್ಧಪಡಿಸಬೇಕು. ಹೀಗೆ ಸೇವಿಸುವುದರಿಂದ ದೇಹವು ತಂಪಾಗುವುದರ ಜೊತೆಗೆ, ಹೆಚ್ಚು ಆರೋಗ್ಯಕರವಾಗಿರಲಿದೆ. ಮಕ್ಕಳ ಬೆಳವಣಿಗೆಗೆ ಇದು ಪೂರಕ.

ಕರುಳಿನ ಆರೋಗ್ಯಕ್ಕೆ ರಾಗಿ ಸಂಜೀವಿನಿ: ರಾಗಿಯ ಖಾದ್ಯಗಳು ಮಕ್ಕಳಲ್ಲಿ ಜೀರ್ಣಕ್ರಿಯೆಗೆ ಉತ್ತಮ ಆಹಾರವಾಗುತ್ತದೆ. ರಾಗಿಯು ಶೇ 20ರಷ್ಟು ಪ್ರಮಾಣ ಫೈಬರ್ ಹೊಂದಿದ್ದು, ಸುಲಭವಾಗಿ ಜೀರ್ಣಕ್ರಿಯೆಗೆ ಸಹಕರಿಸಲಿದೆ. ಮಕ್ಕಳಲ್ಲಿ ಸರ್ವೇಸಾಮಾನ್ಯವಾಗಿ ಕಾಣಿಸಿಕೊಳ್ಳುವ ಕರುಳಿನ ಆರೋಗ್ಯಕರ ಬ್ಯಾಕ್ಟೀರಿಯಾದ ಬೆಳವಣಿಗೆಗೂ ಸಹಕಾರಿಯಾಗಿದೆ. ಹೀಗಾಗಿ ಪ್ರತಿಯೊಬ್ಬರೂ ಸೇವಿಸಬಹುದಾದ ಆಹಾರಧಾನ್ಯ ರಾಗಿ.

ಅಪೌಷ್ಟಿಕತೆ ನಿವಾರಣೆ

ಅರೆ-ಶುಷ್ಕ ಉಷ್ಣವಲಯದ ಅಂತರರಾಷ್ಟ್ರೀಯ ಬೆಳೆಗಳ ಸಂಶೋಧನಾ ಸಂಸ್ಥೆಯ ಹಿರಿಯ ವಿಜ್ಞಾನಿ, ಪೌಷ್ಟಿಕಾಂಶ ತಜ್ಞೆ ಡಾ. ಎಸ್. ಅನಿತಾ ನೇತೃತ್ವದಲ್ಲಿ, ನಾಲ್ಕು ದೇಶಗಳಲ್ಲಿ ಏಳು ಸಂಸ್ಥೆಗಳು ನಡೆಸಿದ ಇತ್ತೀಚಿನ ಅಧ್ಯಯನ ವರದಿಯ ಪ್ರಕಾರ, ರಾಗಿ ಧಾನ್ಯ ಮಕ್ಕಳು ಮತ್ತು ಹದಿಹರೆಯದವರಲ್ಲಿ ಶೇ 26 ರಿಂದ 39ರಷ್ಟು ಬೆಳವಣಿಗೆಯನ್ನು ಹೆಚ್ಚಿಸಬಹುದು. ರಾಗಿಯ ಸೇವನೆಯು ಅಪೌಷ್ಟಿಕತೆಯನ್ನು ಹೋಗಲಾಡಿಸುತ್ತದೆ.

(ಲೇಖಕರು: ಹೆಡ್, ನ್ಯೂಟ್ರಿಷನ್ ಸೈನ್ಸಸ್, ಐಟಿಸಿ)

ಒನ್‌ಪ್ಲಸ್ ಕಂಪ್ಯೂಟರ್ ಮಾನಿಟರ್

ತಂತ್ರಜ್ಞಾನ

ದೇಶದ ಗ್ಯಾಜೆಟ್ ಮಾರುಕಟ್ಟೆಗೆ ಒನ್‌ಪ್ಲಸ್ ನೂತನ ಕಂಪ್ಯೂಟರ್ ಮಾನಿಟರ್ ಪರಿಚಯಿಸಿದೆ.

ಒನ್‌ಪ್ಲಸ್ ಎಕ್ಸ್ ಮತ್ತು ಇ ಸರಣಿಯಲ್ಲಿ ನೂತನ ಮಾನಿಟರ್ ಮಾರುಕಟ್ಟೆಗೆ ಲಗ್ಗೆ ಇರಿಸಿದೆ.

ಒನ್‌ಪ್ಲಸ್ X27 ಎನ್ನುವುದು 27 ಇಂಚಿನ ಗೇಮಿಂಗ್ ಮಾನಿಟರ್ ಆಗಿದೆ.

ಮತ್ತೊಂದು ಇ ಸರಣಿಯಲ್ಲಿ ಹೊಸದಾಗಿ E24 ಮಾದರಿ ಬಿಡುಗಡೆಯಾಗಿದೆ.

ಒನ್‌ಪ್ಲಸ್ X27 ಮಾನಿಟರ್ ದರ ದೇಶದಲ್ಲಿ ₹27,999 ಇದ್ದು, ಡಿ. 15ರಿಂದ ಒನ್‌ಪ್ಲಸ್ ಆನ್‌ಲೈನ್ ಸ್ಟೋರ್ ಮೂಲಕ ಲಭ್ಯವಾಗಲಿದೆ. ಅಲ್ಲದೆ, ಆರಂಭಿಕ ಕೊಡುಗೆಯಾಗಿ ಐಸಿಐಸಿಐ ಬ್ಯಾಂಕ್ ಕಾರ್ಡ್ ಮೂಲಕ ಖರೀದಿಗೆ ₹1,000 ಡಿಸ್ಕೌಂಟ್ ಕೂಡ ಇರಲಿದೆ.

ಒನ್‌ಪ್ಲಸ್ E24 ಮಾನಿಟರ್ ಬೆಲೆ ಮತ್ತು ಲಭ್ಯತೆಯನ್ನು ಕಂಪನಿ ಬಹಿರಂಗಪಡಿಸಿಲ್ಲ.

ಬಳಕೆದಾರರ ವಿವಿಧ ಅವಶ್ಯಕತೆಗಳಿಗೆ ಅನುಗುಣವಾಗಿ ನೂತನ ಮಾನಿಟರ್ ಸಿದ್ಧಪಡಿಸಲಾಗಿದೆ ಎಂದು ಕಂಪನಿ ಹೇಳಿದೆ.

ಇದೇ ಸಿನಿಮಾ ಸಂಭಾವನೆಯಿಂದ ಆಗಿದ್ದು ‘ಲವ್ ಮಾಕ್ಟೇಲ್’

2020ರಲ್ಲಿ ತೆರೆಕಂಡ ‘ಲವ್ ಮಾಕ್ಟೇಲ್’ ನಟ ಡಾರ್ಲಿಂಗ್ ಕೃಷ್ಣ ಹಾಗೂ ನಟಿ ಮಿಲನ ನಾಗರಾಜ್ ಸಿನಿಪಯಣಕ್ಕೆ ದೊಡ್ಡ ತಿರುವು ನೀಡಿದ ಚಿತ್ರ. ಡಾರ್ಲಿಂಗ್ ಕೃಷ್ಣ ಸ್ವತಃ ನಿರ್ದೇಶನಕ್ಕಿಳಿದು, ಈ ಚಿತ್ರವನ್ನು ನಿರ್ಮಾಣ ಮಾಡಿದ್ದರ ಹಿಂದೆ ಕಥೆಯೊಂದಿದೆ. ಅದನ್ನು ಇದೀಗ ‘. ಬ್ಯಾಚುಲರ್’ ಆಗಿ ಕೃಷ್ಣ ತೆರೆದಿಟ್ಟಿದ್ದಾರೆ.

‘ಲವ್ ಮಾಕ್ಟೇಲ್–2’, ‘ಲೋಕಲ್ ಟ್ರೈನ್’, ‘ಲಕ್ಕಿಮ್ಯಾನ್’, ‘ದಿಲ್‌ಪಸಂದ್’ ಹೀಗೆ ಈ ವರ್ಷ ನಟ ಡಾರ್ಲಿಂಗ್ ಕೃಷ್ಣ ಅವರ ಸಾಲು ಸಾಲು ಸಿನಿಮಾಗಳು ತೆರೆಕಂಡಿವೆ. ಇವುಗಳ ಬೆನ್ನಲ್ಲೇ ‘Mr. ಬ್ಯಾಚುಲರ್’ ಆಗಿ ತೆರೆ ಮೇಲೆ ಬರಲು ಕೃಷ್ಣ ಸಜ್ಜಾಗಿದ್ದಾರೆ. ಹೊಸ ವರ್ಷದ ಆರಂಭದಲ್ಲೇ, ಅಂದರೆ 2023ರ ಜ.6ರಂದು ಈ ಸಿನಿಮಾ ರಿಲೀಸ್ ಆಗಲಿದೆ. ಈ ಚಿತ್ರದ ‘ಮದುವೆ ಯಾವಾಗ’ ಹಾಡಿನ ಬಿಡುಗಡೆ ಸಮಾರಂಭದಲ್ಲಿ ಲವ್ ಮಾಕ್ಟೇಲ್ ಕಥೆಯನ್ನು ಕೃಷ್ಣ ಬಿಚ್ಚಿಟ್ಟರು.

‘ನಾನು ‘ಲವ್ ಮಾಕ್ಟೇಲ್’ ಚಿತ್ರ ಆರಂಭಿಸುವುದಕ್ಕೂ ಮುನ್ನ ಆರಂಭವಾದ ಚಿತ್ರವಿದು. ಈ ಚಿತ್ರದ ಸಂಭಾವನೆಯಿಂದಲೇ ನಾನು ‘ಲವ್ ಮಾಕ್ಟೇಲ್’ ಪ್ರಾರಂಭಿಸಿದ್ದು. ಹಾಗಾಗಿ ನನಗೆ ಈ ಚಿತ್ರದ ಮೇಲೆ ವಿಶೇಷ ಪ್ರೀತಿ. ಈ ಚಿತ್ರದಲ್ಲಿ ಮನರಂಜನೆಯ ಜೊತೆಗೆ ಆ್ಯಕ್ಷನ್, ಭಾವನಾತ್ಮಕ ಸನ್ನಿವೇಶಗಳೂ ಇವೆ. ನಿಮಿಕಾ ರತ್ನಾಕರ್ ಅವರು ನಾಯಕಿಯಾಗಿ ಅಭಿನಯಿಸಿದ್ದಾರೆ. ವಿಶೇಷ ಪಾತ್ರದಲ್ಲಿ ಮಿಲನ ನಾಗರಾಜ್ ಕೂಡಾ ಇದ್ದಾರೆ’ ಎನ್ನುತ್ತಾರೆ ಡಾರ್ಲಿಂಗ್ ಕೃಷ್ಣ.

ನಿಮಿಕಾ ರತ್ನಾಕರ್ ಹಾಗೂ ಡಾರ್ಲಿಂಗ್ ಕೃಷ್ಣ

‘ಪುರಿ ಜಗನ್ನಾಥ್ ಅವರ ಬಳಿ ಕೆಲಸ ಮಾಡುತ್ತಿದ್ದೆ. ಇದು ನನ್ನ ನಿರ್ದೇಶನದ ಮೊದಲ ಚಿತ್ರ. ಮದುವೆ ವಯಸ್ಸಿಗೆ ಬಂದ ಹುಡುಗನನ್ನು ಸಾಮಾನ್ಯವಾಗಿ ಎಲ್ಲರು ಮದುವೆ ಯಾವಾಗ? ಅಂತ ಕೇಳುತ್ತಾರೆ. ಚಿತ್ರದ ಕಥಾಹಂದರವೂ ಇದೇ ಎಳೆಯನ್ನು ಹೊಂದಿದೆ’ ಎಂದರು ನಿರ್ದೇಶಕ ನಾಯ್ಡು.

ಶ್ರೀನಿವಾಸ್, ಹನುಮಂತ ರಾವ್ ಹಾಗೂ ಸ್ವರ್ಣಲತ ಅವರು ಈ ಚಿತ್ರವನ್ನು ನಿರ್ಮಾಣ ಮಾಡಿದ್ದು, ಸಾಧುಕೋಕಿಲ, ಅಯ್ಯಪ್ಪ ಶರ್ಮ, ಚಿಕ್ಕಣ್ಣ, ಪವಿತ್ರ ಲೋಕೇಶ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಮಣಿಕಾಂತ್ ಕದ್ರಿ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

‘ಲವ್ ಮಾಕ್ಟೇಲ್’ ಸಿನಿಮಾ ಬಳಿಕ ಚಂದನವನದಲ್ಲಿ ಹಲವು ಅವಕಾಶಗಳನ್ನು ಗಿಟ್ಟಿಕೊಂಡಿರುವ ಕೃಷ್ಣ ಅವರ ಕೈಯಲ್ಲಿ ಸದ್ಯ ‘ಲವ್ ಮಿ OR ಹೇಟ್ ಮಿ’ ಸಿನಿಮಾ ಹಾಗೂ ‘ಮೊಗ್ಗಿನ ಮನಸು’ ಖ್ಯಾತಿಯ ನಿರ್ದೇಶಕ ಶಶಾಂಕ್ ಅವರ ನಿರ್ದೇಶನದ ‘ಕೌಸಲ್ಯಾ ಸುಪ್ರಜಾ ರಾಮ’ ಸಿನಿಮಾವಿದೆ.

‘ಕನ್ನಡತಿ’ ಮುಕ್ತಾಯ?

ಕಲರ್ಸ್ ಕನ್ನಡ ಮನರಂಜನಾ ವಾಹಿನಿಯ ಅತ್ಯಂತ ಜನಪ್ರಿಯ ಧಾರಾವಾಹಿ ‘ಕನ್ನಡತಿ’ ಜನವರಿ ಅಂತ್ಯಕ್ಕೆ ಮುಕ್ತಾಯವಾಗುತ್ತಿದೆ. ಆ ಜಾಗದಲ್ಲಿ ಹೊಸ ಧಾರಾವಾಹಿ ‘ಪುಣ್ಯವತಿ’ ಅಥವಾ ‘ತ್ರಿಪುರ ಸುಂದರಿ’ ಪ್ರಸಾರಗೊಳ್ಳಲಿದ್ದು, ಈ ನಿಟ್ಟಿನಲ್ಲಿ ಸಿದ್ಧತೆ ನಡೆಯುತ್ತಿದೆ ಎಂದು ವಾಹಿನಿಯ ಮೂಲಗಳು ಖಚಿತಪಡಿಸಿವೆ.

‘ಪುಟ್ಟಗೌರಿ ಮದುವೆ’ ಖ್ಯಾತಿಯ ರಂಜನಿ ರಾಘವನ್ ಹಾಗೂ ನಟ ಕಿರಣ್ ರಾಜ್ ಅಭಿನಯದ ಈ ಧಾರಾವಾಹಿ ಕಲರ್ಸ್ ಕನ್ನಡದ ಮಟ್ಟಿಗೆ ಹೊಸದೊಂದು ಬ್ರ್ಯಾಂಡ್ ಸೃಷ್ಟಿಸಿತ್ತು ಎಂದರೆ ತಪ್ಪಾಗಲಾರದು. 2020 ಜನವರಿ 27ರಂದು ಆರಂಭವಾದ ಕನ್ನಡತಿಗೆ ವಾಹಿನಿ ಮುಖ್ಯಸ್ಥರಾದ ಪರಮೇಶ್ವರ್ ಗುಂಡ್ಕಲ್ ಸ್ವತಃ ಕಥೆ ರಚಿಸಿದ್ದರು. ಕಥೆಗಾರ, ಪತ್ರಕರ್ತ ವಿಕಾಸ್ ನೇಗಿಲೋಣಿ ಅವರ ಚಿತ್ರಕಥೆಯಿತ್ತು. ಜೈಮಾತಾ ಕಂಬೈನ್ಸ್ ನಿರ್ಮಾಣದ ಈ ಧಾರಾವಾಹಿ ಒಟ್ಟಾರೆ ವಾಹಿನಿಯ ಟಿಆರ್‌ಪಿ ಕುಸಿದ ಸಮಯದಲ್ಲಿ ಅತ್ಯುತ್ತಮ ರೇಟಿಂಗ್ ನೀಡಿತ್ತು. ಜೊತೆಗೆ ಟಿ.ಎನ್.ಸೀತಾರಾಂ ಧಾರಾವಾಹಿಗಳ ಬಳಿಕ ವಾಹಿನಿಗೆ ದೊಡ್ಡ ಮಟ್ಟದಲ್ಲಿ ಬ್ರ್ಯಾಂಡ್ ಮೌಲ್ಯ ಹೆಚ್ಚಿಸಿತ್ತು. ಸಂಚಿಕೆಯ ಕೊನೆಗೊಂದು ಕನ್ನಡ ಪದ ಕಲಿಸುವ ಕನ್ನಡ ಕ್ಲಾಸ್ ಕೂಡ ಜನಮನ್ನಣೆ ಗಳಿಸಿತ್ತು.

ನಿಲ್ಲುತ್ತಿರುವುದು ಏಕೆ?

ಈಗಾಗಲೇ 700 ಕಂತುಗಳನ್ನು ಪೂರೈಸಿದ್ದು ನಡೆಯುತ್ತಿರುವ ಕಥೆ ಸತ್ವ ಕಳೆದುಕೊಂಡಿತ್ತು. ಒಂದು ಧಾರಾವಾಹಿ 600–700 ಸಂಚಿಕೆ ದಾಟಿದ ಮೇಲೆ ಜನಪ್ರಿಯತೆ, ರೇಟಿಂಗ್ ಉಳಿಸಿಕೊಳ್ಳುವುದು ಬಹಳ ಕಷ್ಟ. ಅಮ್ಮಮ್ಮನ ಪಾತ್ರದ ಸಾವಿನ ನಂತರ ಕಥೆ ಎಲ್ಲಿಗೋ ಸಾಗುತ್ತಿದೆ, ಜಾಳಾಗಿದೆ ಎಂಬ ಆರೋಪ ಹೊತ್ತ ಪ್ರತಿಕ್ರಿಯೆಗಳು ವಾಹಿನಿಯ ಸಾಮಾಜಿಕ ಜಾಲತಾಣ ಪುಟಗಳಲ್ಲೇ ಕಾಣಸಿಗುತ್ತಿತ್ತು. ವಾಹಿನಿಗಳ ವೀಕ್ಷಣೆ ಅಳತೆಗೋಲಾಗಿರುವ ಬಾರ್ಕ್ 48ನೇ ವಾರದ ರೇಟಿಂಗ್ ವರದಿಯಂತೆ ಕನ್ನಡತಿ 4.5 ಟಿಆರ್‌ಪಿ(ವಾಹಿನಿಯ ಒಂದು ನಿರ್ದಿಷ್ಟ ಕಾರ್ಯಕ್ರಮ/ಸ್ಲಾಟ್‌ನ ರೇಟಿಂಗ್) ಹೊಂದಿದ್ದರೆ, ಜೀ ಕನ್ನಡದಲ್ಲಿ ಪ್ರಸಾರವಾಗುತ್ತಿರುವ ‘ಪುಟ್ಟಕ್ಕನ ಮಕ್ಕಳು’ ಇದರ ದುಪ್ಪಟ್ಟು ಅಂದರೆ, 9.6 ರೇಟಿಂಗ್ ನೀಡಿದೆ. ಹೊಸ ಧಾರಾವಾಹಿಗಳಾದ ಭಾಗ್ಯಲಕ್ಷ್ಮಿ, ಕೆಂಡಸಂಪಿಗೆ, ರಾಮಾಚಾರಿಗಳಿಗೆ ಹೋಲಿಸಿದರೂ ಟಿಆರ್‌ಪಿ ಕಡಿಮೆ ಇದೆ.

ಪ್ರಸ್ತುತ ನಂಬರ್ ಒನ್ ಸ್ಥಾನದಲ್ಲಿರುವ ಜೀ ಕನ್ನಡ ಸರಾಸರಿ 691 ಜಿಆರ್‌ಪಿ(ವಾಹಿನಿಯ ಎಲ್ಲ ಕಾರ್ಯಕ್ರಮ/ಸ್ಲಾಟ್‌ಗಳನ್ನು ಸೇರಿಸಿ ಒಟ್ಟೂ ರೇಟಿಂಗ್) ಹೊಂದಿದ್ದರೆ, ಒಂದು ಕಾಲದಲ್ಲಿ ನಂಬರ್ ಒನ್ ಆಗಿದ್ದ ಕಲರ್ಸ್ ಜಿಆರ್‌ಪಿ 435ರ ಗಡಿಯಲ್ಲಿದೆ. ಜೀ ಕನ್ನಡದ ಗಟ್ಟಿಮೇಳ, ಶ್ರೀರಸ್ತು, ಸತ್ಯ ಧಾರಾವಾಹಿಗಳ ಎದುರು ‘ಬಿಗ್‌ಬಾಸ್’ ಕೂಡ ಮಂಕಾಗಿದೆ. ವಾರದ ದಿನಗಳಲ್ಲಿ ಬಿಗ್‌ಬಾಸ್ ಟಿಆರ್‌ಪಿ 4ರ ಗೆರೆ ದಾಟಿಲ್ಲ. ಆದರೆ ಜೀ ಕನ್ನಡದ ಅರ್ಧ ಗಂಟೆ ಧಾರಾವಾಹಿಗಳು 7–10 ಟಿಆರ್‌ಪಿ ನೀಡುತ್ತಿವೆ. ಸ್ಪರ್ಧೆಯಲ್ಲಿ ಉಳಿಯಲು ಕಲರ್ಸ್ ಕನ್ನಡ ಹೊಸ ಕಥೆಗಳನ್ನು ಪ್ರಯತ್ನಿಸುವುದು ಅನಿವಾರ್ಯ ಎಂಬಂತಾಗಿದೆ.

ಮನರಂಜನೆ ವಾಹಿನಿಯ ಟ್ರೆಂಡ್ ನೋಡಿದರೆ ಈ ಏರಿಳಿತ ಸಾಮಾನ್ಯ. ಒಂದು ದಶಕದ ಕಾಲ ನಂಬರ್ ಒನ್ ಆಗಿದ್ದ ಉದಯ ವಾಹಿನಿಯನ್ನು ಏಷ್ಯಾನೆಟ್ ಸುವರ್ಣ ಹಿಂದಿಕ್ಕಿತ್ತು. 4–5 ವರ್ಷ ನಂಬರ್ ಒನ್ ಆಗಿದ್ದ ಸುವರ್ಣವನ್ನು ಕಲರ್ಸ್ ಕನ್ನಡ ಮೀರಿಸಿತ್ತು. ಇದೀಗ ಜೀ ಕನ್ನಡ ಅಗ್ರಸ್ಥಾನಕ್ಕೆ ಏರಿದೆ. ಮನರಂಜನೆ ಜಗತ್ತಿನಲ್ಲಿ ಒಂದಷ್ಟು ವರ್ಷಕ್ಕೊಮ್ಮೆ ಈ ಟ್ರೆಂಡ್ ಬದಲಾಗುವುದು, ಪ್ರೇಕ್ಷಕರು ವರ್ಗಾಂತರಗೊಳ್ಳುವುದು ಸಾಮಾನ್ಯ ಪ್ರಕ್ರಿಯೆ.

ಕಥೆ ಏನು?

ಕಥೆಯ ನಾಯಕಿ ಮಲೆನಾಡಿನ ಹಸಿರುಪೇಟೆಯ ಭುವನೇಶ್ವರಿ. ಅಪ್ಪನಿಲ್ಲದ ಈಕೆ ವೃತ್ತಿಯಿಂದ ಕನ್ನಡ ಶಿಕ್ಷಕಿ. ಮನೆಯ ಜವಾಬ್ದಾರಿ ಹೊತ್ತು, ಹರ್ಷನನ್ನು ಪ್ರೀತಿಸಿ ಮದುವೆಯಾಗುತ್ತಾಳೆ. ಹರ್ಷನನ್ನೇ ಪಡೆಯಬೇಕು ಎಂಬ ಹಠಕ್ಕೆ ಬೀಳುವ ಕಥೆಯ ವಿಲನ್ ವರೂಧಿನಿ, ಆಸ್ತಿ ಬೇಕು ಎನ್ನುವ ಸಾನಿಯಾರ ನಡುವೆ ಭುವಿಯ ಬದುಕು. ಮನೆಯಲ್ಲಿ ಅಮ್ಮಮ್ಮನ ಸ್ಥಾನ ತುಂಬಿಕೊಂಡು ಈಕೆ ಹೇಗೆ ಕಾರ್ಯ ನಿರ್ವಹಿಸುತ್ತಾಳೆ ಎಂಬುದೇ ಕಥೆ. ಕಥೆಯನ್ನು ಪ್ರಾರಂಭದಲ್ಲಿ ಶಿವಮೊಗ್ಗ, ಸಾಗರದ ಸುತ್ತಮುತ್ತ ಚಿತ್ರಿಸಲಾಗಿತ್ತು.

ಶ್ರೀಗೆ ನಾಯಕಿಯಾಗಿ ಸಿಕ್ಕಳು ಪ್ರಣತಿ

ಸಿನಿ ಹನಿ

‘ಗಜಾನನ ಆ್ಯಂಡ್ ಗ್ಯಾಂಗ್’ ಖ್ಯಾತಿಯ ನಟ ಶ್ರೀ ಮಹಾದೇವ್ ಹೊಸ ಪ್ರಾಜೆಕ್ಟ್ ‘ಜಸ್ಟ್ ಪಾಸ್’ ಶೀಘ್ರದಲ್ಲೇ ಸೆಟ್ಟೇರಲಿದ್ದು, ಶ್ರೀಗೆ ನಾಯಕಿಯಾಗುವ ಮೂಲಕ ಪ್ರಣತಿ ಚಂದನವನಕ್ಕೆ ಹೆಜ್ಜೆ ಇಡಲಿದ್ದಾರೆ. ‘ಡ್ಯಾನ್ಸ್ ಕರ್ನಾಟಕ ಡ್ಯಾನ್ಸ್’, ‘ಫ್ಯಾಮಿಲಿ ವಾರ್ ಸೀಸನ್–2’ ರನ್ನರ್ ಅಪ್ ಆಗಿರುವ ಪ್ರಣತಿ, ‘ಬ್ರಹ್ಮಗಂಟು’ ಧಾರಾವಾಹಿಯಲ್ಲೂ ನಟಿಸಿದ್ದಾರೆ. ಇದೀಗ ‘ಜಸ್ಟ್ ಪಾಸ್’ ಮೂಲಕ ನಾಯಕಿಯಾಗಿ ಬೆಳ್ಳಿತೆರೆಗೆ ಪ್ರವೇಶಿಸುತ್ತಿದ್ದಾರೆ.‘ತರ್ಲೆ ವಿಲೇಜ್’, ‘ಪರಸಂಗ’, ‘ದೊಡ್ಡಹಟ್ಟಿ ಬೋರೇಗೌಡ’ ಸಿನಿಮಾ ಮೂಲಕ ಗುರುತಿಸಿಕೊಂಡಿರುವ ನಿರ್ದೇಶಕ ಕೆ.ಎಂ. ರಘು, ಈ ಬಾರಿ ಯೂತ್ ಫುಲ್ ಸಬ್ಜೆಕ್ಟ್‌ನೊಂದಿಗೆ ತೆರೆಗೆ ಬರುತ್ತಿದ್ದಾರೆ. ಡಿಸೆಂಬರ್ 14ರಂದು ಈ ಸಿನಿಮಾ ಸೆಟ್ಟೇರಲಿದೆ. ಸ್ಕ್ರಿಪ್ಟ್ ಕೆಲಸಗಳನ್ನೆಲ್ಲ ಪೂರ್ಣಗೊಳಿಸಿ, ಚಿತ್ರೀಕರಣಕ್ಕೆ ಇಳಿಯಲು ತಂಡ ಸಕಲ ಸಿದ್ಧತೆ ನಡೆಸಿದೆ. ಕೆ. ಎಂ. ರಘು. ನಿರ್ದೇಶನದ ‘ದೊಡ್ಡಹಟ್ಟಿ ಬೋರೇಗೌಡ’ ಸಿನಿಮಾ ಬೆಂಗಳೂರು ಅಂತರರಾಷ್ಟ್ರೀಯ ಸಿನಿಮೋತ್ಸವದಲ್ಲಿ ಕನ್ನಡದ ಅತ್ಯುತ್ತಮ ಚೊಚ್ಚಲ ಸಿನಿಮಾ ಎಂಬ ಪ್ರಶಸ್ತಿ ಪಡೆದುಕೊಂಡಿತ್ತು. ರಾಯ್ಸ್ ಎಂಟರ್‌ಟೈನ್ಮೆಂಟ್ ಬ್ಯಾನರ್‌ನಡಿ ಶಶಿಧರ್.ಕೆ.ವಿ, ಶ್ರೀಧರ್ ಕೆ.ವಿ ‘ಜಸ್ಟ್ ಪಾಸ್’ ನಿರ್ಮಾಣ ಮಾಡುತ್ತಿದ್ದಾರೆ. ರಂಗಾಯಣ ರಘು, ಸಾಧುಕೋಕಿಲ, ಸುಚೇಂದ್ರ ಪ್ರಸಾದ್, ನವೀನ್ ಡಿ.ಪಡೀಲ್, ಪ್ರಕಾಶ್ ತುಮಿನಾಡ್, ದೀಪಕ್ ರೈ ಪಾಣಾಜೆ, ತಾರಾಬಳಗದಲ್ಲಿದ್ದಾರೆ.

ಪ್ರಣತಿ

ಜನವರಿಗೆ ತೆರೆಯುತ್ತೆ 'ಬಾಲಾಜಿ ಸ್ಟುಡಿಯೋ'

ವಿಭಿನ್ನ ಶೀರ್ಷಿಕೆ ಹೊತ್ತ ಸಿನಿಮಾಗಳು ಗಾಂಧಿನಗರಕ್ಕೆ ಲಗ್ಗೆ ಇಡುವುದು ಹೊಸದೇನಲ್ಲ. ಈ ಸಾಲಿಗೀಗ ಹೊಸ ಸೇರ್ಪಡೆ 'ಶ್ರೀ ಬಾಲಾಜಿ ಫೋಟೊ ಸ್ಟುಡಿಯೊ'. ಚಿತ್ರೀಕರಣ ಪೂರ್ಣಗೊಳಿಸಿ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿ ಈ ಸಿನಿಮಾವಿದ್ದು, ನಟ ವಿಜಯ್ ರಾಘವೇಂದ್ರ ಹಾಗೂ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಅಶೋಕ್ ಕಶ್ಯಪ್ ಚಿತ್ರದ ಹಾಡುಗಳನ್ನು ಇತ್ತೀಚೆಗೆ ಬಿಡುಗಡೆ ಮಾಡಿದರು.

ಪ್ರಸ್ತುತ ಕನ್ನಡ ಚಿತ್ರರಂಗ ಪ್ರಯೋಗಾತ್ಮಕ ಚಿತ್ರಗಳತ್ತ ಮುಖ ಮಾಡಿದೆ. ಹಳ್ಳಿ ಸೊಗಡಿನ ಚಿತ್ರಗಳ ಸಂಖ್ಯೆ ಜಾಸ್ತಿಯಾಗುತ್ತಿತ್ತು. ಈ ಸಿನಿಮಾವೂ ಅದೇ ಸಾಲಿಗೆ ಸೇರಿದೆ. ಇಡೀ ಚಿತ್ರದ ಚಿತ್ರೀಕರಣ ಶಿರಸಿ, ಯಲ್ಲಾಪುರ, ಹೊನ್ನಾವರ ಸುತ್ತಮುತ್ತ ನಡೆದಿದೆ. ಅಲ್ಲಿಯ ಸ್ಥಳೀಯ ಪ್ರತಿಭೆಗಳೂ ಇಲ್ಲಿ ನಟಿಸಿದ್ದಾರೆ. ಚಿತ್ರದ ವಿಶೇಷವೆಂದರೆ ಅಲ್ಲಿ ಉತ್ತರ ಕನ್ನಡ ಭಾಷೆಯನ್ನು ಬಳಸಲಾಗಿದೆ. ಒಬ್ಬ ಫೋಟೊಗ್ರಾಫರ್ ಹಾಗೂ ಫೋಟೊ ಸ್ಟುಡಿಯೋ ನಡುವಿನ ಭಾವನಾತ್ಮಕ ಸಂಬಂಧ ಚಿತ್ರದ ಕಥೆಯ ಎಳೆ. ಜೊತೆಗೊಂದು ಪ್ರೇಮಕಥೆಯಿದೆ ಎಂದಿದೆ ಚಿತ್ರತಂಡ.

ಕಿರುತೆರೆಯಲ್ಲಿ ಮಿಂಚಿರುವ ನಟ ರಾಜೇಶ್ ಧ್ರುವ ಇಲ್ಲಿ ಮುಖ್ಯಪಾತ್ರದಲ್ಲಿದ್ದಾರೆ. ಅವರೇ ಚಿತ್ರಕ್ಕೆ ಆ್ಯಕ್ಷನ್ ಕಟ್ ಕೂಡಾ ಹೇಳಿದ್ದಾರೆ. ಉಳಿದಂತೆ ರವಿ ಸಾಲ್ಯಾನ್, ರಾಧಿಕಾ ಅಚ್ಯುತ್ ರಾವ್, ಸಂಪತ್ ಜೆ. ರಾಮ್, ಕಾಮಿಡಿ ಕಿಲಾಡಿಗಳು ಖ್ಯಾತಿಯ ಶುಭಲಕ್ಷ್ಮಿ, ಕನ್ಯಾಕುಮಾರಿ ಧಾರವಾಹಿ ಖ್ಯಾತಿಯ ನಕುಲ್ ಶರ್ಮ, ರಕ್ಷಿತ್, ರವಿ ಮೂರೂರು ಹಾಗೂ ವಿಶೇಷ ಪಾತ್ರದಲ್ಲಿ ಕಿರುತೆರೆ ನಟ ಶಿಶಿರ್ ಕಾಣಿಸಿಕೊಂಡಿದ್ದಾರೆ. ಕಥೆ, ಚಿತ್ರಕಥೆ ಅಭಿಷೇಕ್ ಶಿರಸಿ ಹಾಗೂ ಪೃಥ್ವಿಕಾಂತ್ ಅವರದ್ದು. ಅಜಿತ್ ಬೊಪ್ಪನಳ್ಳಿ ಸಂಭಾಷಣೆ ಬರೆದಿದ್ದಾರೆ. ಈ ಚಿತ್ರವನ್ನು ತಮ್ಮ ಸೃಜನ್ ಪ್ರೊಡಕ್ಷನ್‌ನಡಿ ವೆಂಕಟೇಶ್ವರ ರಾವ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ.

'ಕೇವಲ ಐದು ತಿಂಗಳಲ್ಲಿ ಈ ಸಿನಿಮಾವನ್ನು ತೆರೆಗೆ ತರಲು ಸಜ್ಜು ಮಾಡಿದ್ದೇವೆ. ನನ್ನ ಊರಿನಲ್ಲಿ ಅನುಭವಕ್ಕೆ ಬಂದ ಹಲವು ಅನುಭವಗಳನ್ನು, ಭಾಷೆಯನ್ನು ಈ ಸಿನಿಮಾದಲ್ಲಿ ಬಳಸಿಕೊಂಡು, ಎಲ್ಲ ಕಲಾವಿದರಿಗೆ 30 ದಿನಗಳ ಕಾಲ ಅಲ್ಲಿಯ ಭಾಷೆಯ ಅರಿವು ಮಾಡಿಸಿ ಪಾತ್ರಕ್ಕೆ ತಕ್ಕ ಹಾಗೆ ತಯಾರು ಮಾಡಲಾಗಿತ್ತು' ಎನ್ನುತ್ತಾರೆ ರಾಜೇಶ್ ಧ್ರುವ.

ರಾಜೇಶ್ ಧ್ರುವ

ಪ್ರತೀಕ್ಷಾ ಮತ್ತು ಸುಪ್ರೀತ್

'ರಾಘವೇಂದ್ರ' ಟೀಸರ್ ಬಿಡುಗಡೆ

'ಹುಲಿದುರ್ಗ' ಎಂಬ ಚಿತ್ರದ ಮುಖೇನ ಗಾಂಧಿನಗರದಲ್ಲಿ ಹೆಜ್ಜೆ ಇಟ್ಟಿದ್ದ ನಟ ಸುಪ್ರೀತ್ ಮತ್ತೆ ತೆರೆ ಮೇಲೆ ಬರಲು ಸಜ್ಜಾಗಿದ್ದಾರೆ. ವಿಕ್ರಮ್ ಯಶೋಧರ್ ಎನ್. ಆ್ಯಕ್ಷನ್ ಕಟ್ ಹೇಳಿರುವ 'ರಾಘವೇಂದ್ರ' ಸಿನಿಮಾ ಬಿಡುಗಡೆಗೆ ಸಜ್ಜಾಗಿದ್ದು, ಚಿತ್ರದ ಟೀಸರ್ ಅನ್ನು ಇತ್ತೀಚೆಗೆ ನಟ ಧೀರನ್ ರಾಮ್‌ಕುಮಾರ್ ಬಿಡುಗಡೆ ಮಾಡಿದರು.

ಸುಪ್ರೀತ್‌ಗೆ ಜೋಡಿಯಾಗಿ ಈ ಚಿತ್ರದಲ್ಲಿ ಪ್ರತೀಕ್ಷಾ ನಟಿಸಿದ್ದಾರೆ. ನಿರ್ದೇಶಕ ವಿಕ್ರಮ್ ಮಾತನಾಡಿ, 'ಇದು ನನ್ನ ಹಾಗೂ ಸುಪ್ರೀತ್ ಅವರ ಕಾಂಬಿನೇಷನ್‌ನ ಎರಡನೇ ಸಿನಿಮಾ. ಇದೊಂದು ವಿಷಯಾಧಾರಿತ ಚಿತ್ರ. ಒಬ್ಬ ಬಾರ್ ಸಪ್ಲೈಯರ್ ಹಾಗೂ ಅನಕ್ಷರಸ್ಥ ಹುಡುಗಿ ಇಬ್ಬರೂ ಸೇರಿ ಹಳ್ಳಿಯ ಅಭಿವೃದ್ಧಿಗೆ ಪಣತೊಡುತ್ತಾರೆ. ಊರಿಗೆ ಬೇಕಾದ ಮೂಲಸೌಕರ್ಯಗಳನ್ನು ಹಳ್ಳಿಯ ಜನರ ಜೊತೆಗೂಡಿ ಅನುಷ್ಠಾನ ಮಾಡುತ್ತಾರೆ. ಅರಕೆರೆ, ಮಂಡ್ಯ, ಮೈಸೂರು ಹಾಗೂ ಬೆಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ. ಸದ್ಯ ರೀರೆಕಾರ್ಡಿಂಗ್ ನಡೆಯುತ್ತಿದ್ದು, ಫೆಬ್ರುವರಿ ಮೊದಲ ವಾರ ಚಿತ್ರ ಬಿಡುಗಡೆ ಮಾಡುವ ಯೋಜನೆಯಿದೆ' ಎಂದರು.

'ನನಗೆ ಮೊದಲಿಂದಲೂ ಸಿನಿಮಾ ಹುಚ್ಚು. ಇದು ನನ್ನ ಎರಡನೇ ಚಿತ್ರ. ಹುಲಿದುರ್ಗ ನಂತರ ಒಂದೊಳ್ಳೆಯ ಸಿನಿಮಾ ಮಾಡಿದ್ದೇವೆ. ಸಿನಿಮಾ ಕಮರ್ಷಿಯಲ್ ಅಂಶಗಳಿಂದ ಕೂಡಿದ್ದರೂ, ಒಂದೊಳ್ಳೆಯ ಸಂದೇಶ ಚಿತ್ರದಲ್ಲಿದೆ' ಎನ್ನುತ್ತಾರೆ ಸುಪ್ರೀತ್. ರಂಗಭೂಮಿಯಿಂದ ಬೆಳ್ಳಿತೆರೆಗೆ ಹೆಜ್ಜೆ ಇಡುತ್ತಿರುವ ಪ್ರತೀಕ್ಷಾ ಅವರಿಗೆ ಇದು ಚೊಚ್ಚಲ ಚಿತ್ರ. ಚಿತ್ರಕ್ಕೆ ಅಲೆಕ್ಸ್ ಸಂಗೀತ ನಿರ್ದೇಶನವಿದ್ದು, ಎನ್.ಉಮೇಶ್ ಕ್ಯಾಮೆರಾ ಹಿಡಿದಿದ್ದಾರೆ. ದೀಪಕ್ ಸಿ.ಎಸ್. ಸಂಕಲನ ಚಿತ್ರಕ್ಕಿದೆ. ❖

ಡಿ.20ರವರೆಗೆ ಇಂಡಿಯನ್ ಸಿಲ್ಕ್ ಗ್ಯಾಲರಿ ಎಕ್ಸ್‌ಪೊ

ನಗರದ ಇನ್‌ಫೆಂಟ್ರಿ ರಸ್ತೆಯ ಸಫೀನಾ ಪ್ಲಾಜಾದಲ್ಲಿ ಡಿಸೆಂಬರ್ 14 ರಿಂದ ಭಾರತೀಯ ರೇಷ್ಮೆ ಕೈಮಗ್ಗದ ರೇಷ್ಮೆ ಸೀರೆಗಳ ಪ್ರದರ್ಶನ ಆರಂಭವಾಗಿದೆ. ಈ ಪ್ರದರ್ಶನ ಡಿ.20ರವರೆಗೆ ಮುಂದುವರಿಯಲಿದೆ.

ಇತ್ತೀಚೆಗೆ ನಟಿ, ನಮಿತಾ ರಾವ್ ಈ ಪ್ರದರ್ಶನ ಮೇಳವನ್ನು ಉದ್ಘಾಟಿಸಿದರು. ಕೈಮಗ್ಗ ಉತ್ಪನ್ನಗಳಿಗೆ ಉತ್ತೇಜನ ನೀಡುವ ಹಿನ್ನೆಲೆಯಲ್ಲಿ ಈ ಮೇಳವನ್ನು ಆಯೋಜಿಸಲಾಗಿದೆ.

ಸಿಲ್ಕ್ ಮಾರ್ಕ್ ಆಫ್ ಇಂಡಿಯಾದಿಂದ ಪುರಸ್ಕೃತಗೊಂಡಿರುವ ಕಾಟನ್ ಸಿಲ್ಕ್, ಆರ್ಟ್ ಸಿಲ್ಕ್, ಕೈಮಗ್ಗದ ಸಿಲ್ಕ್ ಸೀರೆ ಎಲ್ಲ ಬಗೆಯ ಸೀರೆಗಳು ಲಭ್ಯವಿರುತ್ತದೆ. ❖

ಮೂರೇ ಪಾತ್ರಗಳ 'ಗೌರಿ'!

ಕ್ರೇಜಿಸ್ಟಾರ್ ರವಿಚಂದ್ರ ವಿ. ಇತ್ತೀಚೆಗೆ ಭಿನ್ನ ಕಥಾಹಂದರದ ಸಿನಿಮಾಗಳಿಗೆ ಆದ್ಯತೆ ನೀಡುತ್ತಿದ್ದಾರೆ. 'ದೃಶ್ಯ' ಸಿನಿಮಾ ಬಳಿಕ ಅವರು ಸಸ್ಪೆನ್ಸ್ ಥ್ರಿಲ್ಲರ್ ಕಥೆಗಳತ್ತ ಹೊರಳುತ್ತಿದ್ದಾರೆ. ಈ ನಡುವೆ ಎನ್. ಎಸ್.ರಾಜಕುಮಾರ್ ಮತ್ತು ವಿ.ಎಸ್ ರಾಜಕುಮಾರ್ ನಿರ್ಮಾಣದ ಹೊಸ ಸಿನಿಮಾ 'ಗೌರಿ' ಚಿತ್ರಕ್ಕೆ ಕ್ರೇಜಿಸ್ಟಾರ್ ಕಾಲ್‌ಶೀಟ್ ನೀಡಿದ್ದು, ಇತ್ತೀಚೆಗೆ ಆ ಚಿತ್ರದ ಮುಹೂರ್ತ ನಡೆಯಿತು.

ನಟ ಶಿವರಾಜ್‌ಕುಮಾರ್ ಚಿತ್ರದ ಮೊದಲ ಸನ್ನಿವೇಶಕ್ಕೆ ಕ್ಲ್ಯಾಪ್ ಮಾಡಿದರು. ಬಳಿಕ ಮಾತನಾಡಿದ ರವಿಚಂದ್ರ ಅವರು, 'ಕನ್ನಡ ಚಿತ್ರರಂಗಕ್ಕೆ ಈಗ ಒಳ್ಳೆಯ ಕಾಲ. ವಿಭಿನ್ನ ಕಥೆಯಿರುವ ಚಿತ್ರಗಳನ್ನು ಪ್ರೇಕ್ಷಕ ಮೆಚ್ಚಿಕೊಳ್ಳುತ್ತಿದ್ದಾನೆ. 'ಗೌರಿ'ಯೂ ವಿಭಿನ್ನ ಕಥೆಯ ಚಿತ್ರ. ಸಿನಿಮಾ ಪೂರ್ತಿ ಕೇವಲ ಮೂರೇ ಪಾತ್ರಗಳಿರುತ್ತವೆ. ದಾಂಡೇಲಿಯಲ್ಲಿ ಬಹುಭಾಗದ ಚಿತ್ರೀಕರಣ ನಡೆಯಲಿದೆ. ಹೊಸವರ್ಷಕ್ಕೆ ಹೊಸತರಹದ ಸಿನಿಮಾವೊಂದರಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ' ಎಂದರು.

ಇದು ನಿರ್ದೇಶಕ ಅನೀಸ್ ಅವರಿಗೆ ಚೊಚ್ಚಲ ಸಿನಿಮಾ. ಸಿನಿಮಾದ ಕಥಾಹಂದರದ ಬಗ್ಗೆ ಮಾತನಾಡುತ್ತಾ, 'ಒಟ್ಟು ಮೂರೇ ಪಾತ್ರಗಳು ಸಿನಿಮಾದಲ್ಲಿರಲಿವೆ. ಇದೊಂದು ಕೌಟುಂಬಿಕ ಚಿತ್ರ. ಈ ಚಿತ್ರದಲ್ಲಿ ಗಂಡ ಮತ್ತು ಹೆಂಡತಿಯ ನಡುವೆ ಸಮಸ್ಯೆಗಳು ಯಾಕೆ ಬರುತ್ತವೆ ಎಂಬುದನ್ನು ತೋರಿಸುತ್ತಿದ್ದೇವೆ. ಅವರಿಬ್ಬರ ನಡುವಿನ ಪ್ರೀತಿಗೆ ಯಾಕೆ ಸಮಸ್ಯೆ ಎದುರಾಗುತ್ತದೆ ಮತ್ತು ಅವರು ಅದನ್ನು ಹೇಗೆ ಪರಿಹರಿಸಿಕೊಳ್ಳುತ್ತಾರೆ ಎನ್ನುವುದು ಕಥೆಯ ಎಳೆ. ಕೌಟುಂಬಿಕ ಚಿತ್ರವಾದರೂ, ಕಥೆ ಕಾಡಿನಲ್ಲಿ ನಡೆಯುತ್ತದೆ. ದಾಂಡೇಲಿ, ಯಲ್ಲಾಪುರದಲ್ಲಿ ಚಿತ್ರೀಕರಣ ನಡೆಯಲಿದೆ' ಎಂದರು ಅನೀಸ್.

ರವಿಚಂದ್ರ ಅವರಿಗೆ ಜೋಡಿಯಾಗಿ ಇಲ್ಲಿ ಮುಂಬೈನ ಬರ್ಖಾ ಬಿಷ್ಟ್ ನಟಿಸಲಿದ್ದಾರೆ. ಗ್ರೀಷ್ಮಾ ಎಂಬ ಬಾಲ ಕಲಾವಿದೆ ಚಿತ್ರದಲ್ಲಿರಲಿದ್ದಾರೆ. ಚಿತ್ರಕ್ಕೆ ಸತೀಶ್ ಛಾಯಾಗ್ರಹಣವಿದೆ. ❖

ಬರ್ಖಾ ಬಿಷ್ಟ್

ದೇಶದ ಮಾರುಕಟ್ಟೆಗೆ ನೋಕಿಯಾ ಸಿ 31 ಹೊಸ ಸ್ಮಾರ್ಟ್‌ಫೋನ್

ತಂತ್ರಜ್ಞಾನ

ಎಚ್‌ಎಂಡಿ ಗ್ಲೋಬಲ್ ಒಡೆತನದ ನೋಕಿಯಾ, ದೇಶದ ಗ್ಯಾಜೆಟ್ ಮಾರುಕಟ್ಟೆಗೆ ನೂತನ ಸ್ಮಾರ್ಟ್‌ಫೋನ್ ಪರಿಚಯಿಸಿದೆ.

ನೋಕಿಯಾ 'ಸಿ' ಸ್ಮಾರ್ಟ್‌ಫೋನ್ ಸರಣಿಯಲ್ಲಿ ಹೊಸದಾಗಿ ನೋಕಿಯಾ C31 ಬಿಡುಗಡೆಯಾಗಿದೆ.

ಹೊಸ ನೋಕಿಯಾ Nokia C31

ನೋಕಿಯಾ ನೂತನ ಸ್ಮಾರ್ಟ್‌ಫೋನ್ 6.7 ಇಂಚಿನ ಎಚ್‌ಡಿ + ಡಿಸ್‌ಪ್ಲೇ ಹೊಂದಿದೆ. ಹಾಗೆಯೇ 3GB RAM ಮತ್ತು 32GB ಹಾಗೂ 4GB RAM ಮತ್ತು 64GB ಇಂಟರ್ ಸ್ಟೋರೇಜ್ ಸಾಮರ್ಥ್ಯ ಇದರಲ್ಲಿದೆ. ಜತೆಗೆ ಒಂದು ಬಾರಿ ಚಾರ್ಜಿಂಗ್ ಮಾಡಿದರೆ 3 ದಿನದವರೆಗೂ ಬ್ಯಾಟರಿ ಬಾಳಿಕೆ ಬರುತ್ತದೆ.

ಈ ಸ್ಮಾರ್ಟ್‌ಫೋನ್ ಕೂಡ ಟ್ರಿಪಲ್ ರಿಯರ್ ಕ್ಯಾಮೆರಾ ಸೆಟ್‌ಅಪ್ ಅನ್ನು ಹೊಂದಿದೆ. ಇದರಲ್ಲಿ ಮುಖ್ಯ ಕ್ಯಾಮೆರಾ 13 ಮೆಗಾಪಿಕ್ಸೆಲ್ ಸೆನ್ಸಾರ್ ಅನ್ನು ಹೊಂದಿದೆ ಎಂದು ಕಂಪನಿ ತಿಳಿಸಿದೆ.

ಬೆಲೆ ಮತ್ತು ಲಭ್ಯತೆ

ಡಿ.15ರಿಂದ Charcoal, Mint ಹಾಗೂ Cyan ಬಣ್ಣದಲ್ಲಿ ಹೊಸ ನೋಕಿಯಾ ಸ್ಮಾರ್ಟ್‌ಫೋನ್ ದೊರೆಯಲಿದ್ದು, 3GB RAM ಮತ್ತು 32GB ಸ್ಮಾರ್ಟ್‌ಫೋನ್‌ಗೆ ₹9,999 ಹಾಗೂ 4GB RAM ಮತ್ತು 64GB ಇಂಟರ್ ಸ್ಟೋರೇಜ್ ಸಾಮರ್ಥ್ಯ ಸ್ಮಾರ್ಟ್‌ಫೋನ್‌ಗೆ ₹10,999 ರಷ್ಟಿದೆ ❖

ನಾವು ಶೋರೂಮ್‌ಗಳ ಬಾಡಿಗೆಯನ್ನು ಪಾವತಿಸಲು ಸಾಧ್ಯವಾಗದ ಕಾರಣ
ನಾವು ಕರ್ನಾಟಕದಾದ್ಯಂತ ನಮ್ಮ ಶೋರೂಮ್‌ಗಳನ್ನು ಮುಚ್ಚುತ್ತಿದ್ದೇವೆ
ಆದ್ದರಿಂದ ನಾವು ನಮ್ಮ ಗಾರ್ಮೆಂಟ್ಸ್ ವ್ಯವಹಾರವನ್ನು ನಿಲ್ಲಿಸಿ ಮತ್ತು ದಾಸ್ತಾನುಗಳನ್ನು ತೆರವುಗೊಳಿಸಲು ನಿರ್ಧರಿಸಿದ್ದೇವೆ ಕೇವಲ 3 ದಿನಗಳವರೆಗೆ ದೊಡ್ಡ ರಿಯಾಯಿತಿ ದರದಲ್ಲಿ ಮಾರಾಟ ಮಾಡುತ್ತಿದ್ದೇವೆ
ವಿಶೇಷ ಮಕ್ಕಳು, ಮಹಿಳೆಯರು ಮತ್ತು ಪುರುಷರ ಉಡುಪುಗಳ ಮಾರಾಟ

Exclusive Grand SALE UPTO 80% OFF

THE BEAR HOUSE | rocstor | INDIGO NATION | JOHN MILLER | FLYING MACHINE | NUMERO UNO THE REAL DENIM

SPECIAL COUNTER | PRETTYSECRETS | ರೂ.1750 ರಿಂದ 3500 ಬೆಲೆಯ ನೈಟ್ ಸೂಟ್‌ಗಳು, ಒಳ ಉಡುಪುಗಳು ಈಗ ಕೇವಲ ರೂ.250 ರಿಂದ 350ಕ್ಕೆ ಮಾರಾಟ

ರೂ.2100 ರಿಂದ 4750 ಬೆಲೆಯ ಕಾಟನ್ ಹೋಸರಿ ಅಂತಾರಾಷ್ಟ್ರೀಯ ಬ್ರ್ಯಾಂಡೆಡ್ ಗಾರ್ಮೆಂಟ್ಸ್ ಈಗ ಕೇವಲ ರೂ.1000 ರಿಂದ 200 ಕ್ಕೆ ಮಾತ್ರ

ರೂ.999 ರಿಂದ 1990 ಬೆಲೆಯ ಟಾಪ್ಸ್, ಜೀನ್ಸ್, ಪ್ಯಾಂಟ್, ವಿವಿಧ ಬಣ್ಣಗಳ ಕುರ್ತೀಸ್, ವೆಸ್ಟರ್ನ್ ಟಾಪ್ಸ್, ಲೆಗ್ಗಿನ್ಸ್, ಪ್ಲಾಜೊ Rs. 99 to Rs. 199
ರೂ.2500 ರಿಂದ 3999ಬೆಲೆಯ ಶರ್ಟ್, ಪ್ಯಾಂಟ್, ಪೂರ್ರ್ ವುಲೆನ್ ಸ್ವಟರ್ಸ್ , ಟಿ ಶರ್ಟ್ ಇತ್ಯಾದಿ. Rs 250 to Rs. 450
ರೂ. 2100 ದಿಂದ 6500 ಮೌಲ್ಯದ ಪ್ರೀಮಿಯಂ ಪ್ಯೂರ್ 100% ಕಾಟನ್ ಶರ್ಟ್, ಪ್ಯಾಂಟ್, ಜೀನ್ಸ್, Rs. 450 to Rs. 590

FORMAL & CASUAL WEAR
JOHN MILLER | NUMERO UNO | INDIGO NATION
Rs. 3000-7000 Getns- Jeans, Pants, Linen Shirt, Trousers, T-shirts will be sold from Rs. 450 to Rs. 1250

PARTY WEAR
JOHN MILLER | NUMERO UNO | INDIGO NATION
Rs. 4000 to 6500/- Worth Product will be sold only Rs. 599 to Rs. 999

WINTER WEAR
JOHN MILLER | FLYING MACHINE | INDIGO NATION
Rs. 2600/- to Rs. 7000 worth Winter Wear Ladies & Gents : Sweat Shirts, Sweaters, Lowers, Huddies, Jackets only Rs. 1250

Garments are sold here at such low prices which the people of Bengaluru could never imagine.
This sale is open only to retail customers, Wholesalers need not contact.

ರೂ.900 ರಿಂದ 1750 ಬೆಲೆಯ ಪಾರ್ಕ್ ಅವೆನ್ಯೂ ಇಂಪೋರ್ಟೆಡ್ ಪ್ಯೂರ್ ಲೇದರ್ ಬೆಲ್ಟ್ ಈಗ ಕೇವಲ ರೂ.150 ರಿಂದ 250 ಕ್ಕೆ ಮಾತ್ರ
Note : 1. Don's compare this sale with other sales 2. Counters will be closed as soon as the garments are sold.
ಆಫರ್ 3 ದಿನಗಳು ಮಾತ್ರ 17ನೇ, 18ನೇ ಮತ್ತು 19ನೇ ಡಿಸೆಂಬರ್ 2022 (ಶನಿವಾರ, ಭಾನುವಾರ ಮತ್ತು ಸೋಮವಾರ)
All Cards / Digital Payments Accepted | Entry & Parking Free | Sale Time : 10 am to 9 pm

ಶ್ರೀ ಹರಿ ಕಲ್ಯಾಣ ಮಂಟಪ
ನಂ.136/7, 30ನೇ ಮುಖ್ಯ ರಸ್ತೆ, ಬನಶಂಕರಿ 3ನೇ ಹಂತ, ಬನಶಂಕರಿ, ಬೆಂಗಳೂರು- 560 085
Scan for location